ಬೆಳಗಾವಿ ಜಿಲ್ಲೆಯ ಚೆನ್ನದಾಸರು : ಸಮುದಾಯ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬುಡಕಟ್ಟು ಅಧ್ಯಯನ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ
ಸಾದರಪಡಿಸಿದ ಪರಿಷ್ಕೃತ ಸಂಶೋಧನ

ಮಹಾಪ್ರಬಂಧ

ಸಂಶೋಧಕರು

ಈರಪ್ಪ ರಾಮಪ್ಪ ಕೊಕಟನೂರ

ಸಹ ಪ್ರಾಧ್ಯಾಪಕರು (ಸಮಾಜಶಾಸ್ತ್ರ)

ಎಸ್.ವಿ.ಇ.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾರೂಗೇರಿ

ಮಾರ್ಗದರ್ಶಕರು

ಡಾ. ಅಶೋಕ ನರೋಡೆ

ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರ, ಹಾರೂಗೇರಿ

ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರ, ಹಾರೂಗೇರಿ

ತಾಲ್ಲೂಕು : ರಾಯಬಾಗ ಜಿಲ್ಲೆ : ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೧೨

ಬೆಳಗಾವಿ ಜಿಲ್ಲೆಯ ಚೆನ್ನದಾಸರು : ಸಮುದಾಯ ಅಧ್ಯಯನ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬುಡಕಟ್ಟು ಅಧ್ಯಯನ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ
ಸಾದರಪಡಿಸಿದ ಪರಿಷ್ಕೃತ ಸಂಶೋಧನ

ಮಹಾಪ್ರಬಂಧ

ಸಂಶೋಧಕರು

ಈರಪ್ಪ ರಾಮಪ್ಪ ಕೊಕಟನೂರ

ಸಹ ಪ್ರಾಧ್ಯಾಪಕರು (ಸಮಾಜಶಾಸ್ತ್ರ)

ಎಸ್.ವಿ.ಇ.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಹಾರೂಗೇರಿ

ಮಾರ್ಗದರ್ಶಕರು

ಡಾ. ಅಶೋಕ ನರೋಡೆ

ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರ, ಹಾರೂಗೇರಿ

ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರ, ಹಾರೂಗೇರಿ

ತಾಲ್ಲೂಕು : ರಾಯಬಾಗ ಜಿಲ್ಲೆ : ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೧೨

ಪ್ರಮಾಣ ಪತ್ರ

"ಬೆಳಗಾವಿ ಜಿಲ್ಲೆಯ ಚೆನ್ನದಾಸರು: ಸಮುದಾಯ ಅಧ್ಯಯನ"

ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು **ಡಾ. ಅಶೋಕ ನರೋಡೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಬುಡಕಟ್ಟು ಅಧ್ಯಯನ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ಮುಖಾಂತರ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ನಾನು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ.

ದಿನಾಂಕ : 14/01/2015

ಈರಪ್ಪ ರಾಮಪ್ಪ ಕೊಕಟನೂರ
ಸಹ ಪ್ರಾಧ್ಯಾಪಕರು (ಸಮಾಜಶಾಸ್ತ್ರ)
ಎಸ್.ವ್ಹಿ.ಇ.ಎಸ್.ಕಲಾ ಹಾಗೂ ವಾಣಿಜ್ಯ
ಮಹಾವಿದ್ಯಾಲಯ, ಹಾರೂಗೇರಿ.

ದೃಢೀಕರಣ ಪತ್ರ

ಈರಪ್ಪ ರಾಮಪ್ಪ ಕೊಕಟನೂರ ಅವರು **"ಬೆಳಗಾವಿ ಜಿಲ್ಲೆಯ ಚೆನ್ನದಾಸರು: ಸಮುದಾಯ ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಬುಡಕಟ್ಟು ಅಧ್ಯಯನ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ಮುಖಾಂತರ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿ ಇಲ್ಲವೇ ಬಿಡಿಯಾಗಿ ಎಲ್ಲಿಯೂ ಪ್ರಕಟಿಸಿರುವುದಿಲ್ಲವೆಂದೂ, ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : 14/01/2015

ಡಾ. ಅಶೋಕ ನರೋಡೆ

ಡಾ. ಅಶೋಕ ನರೋಡೆ
ಮಾರ್ಗದರ್ಶಕರು, ಕನ್ನಡ ಬುಡಕಟ್ಟು ಅಧ್ಯಯನ ವಿಭಾಗ
ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ

ಮಾರ್ಗದರ್ಶಕರು
ಶ್ರೀ ಬಿ.ಆರ್. ದರೂರ ಸಂಶೋಧನಾ
ಕೇಂದ್ರ, ಹಾರೂಗೇರಿ, ಜಿ. ಬೆಳಗಾವಿ

ಪರಿವಿಡಿ

ಅನುಬಂಧಗಳು

ಕೋಷ್ಟಕಗಳ ವಿವರ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

೧.೧. ಅಧ್ಯಯನದ ಉದ್ದೇಶ

೧.೨. ವ್ಯಾಪ್ತಿ

೧.೩. ವಿಧಾನ

೧.೪. ಚೆನ್ನದಾಸರು : ಅಧ್ಯಯನ ಸಾಗಿ ಬಂದ ದಾರಿ

೧.೫. ಅಧ್ಯಾಯಗಳ ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಭಾರತವು ಹಲವು ಸಮುದಾಯಗಳ ವರ್ಣವ್ಯವಸ್ಥೆಯಿಂದ ಕೂಡಿದ ಸಮಾಜವಾಗಿದೆ. ಭಾರತದಲ್ಲಿ ಶತಮಾನಗಳಿಂದಲೂ ಚಾತುರವರ್ಣವೆಂಬ ಅನಿಷ್ಟ ಪದ್ಧತಿಯನ್ನು ಅನುಸರಿಸಿಕೊಂಡು ಬರಲಾಗಿದೆ. ಶ್ರೇಣಿಕೃತ ವ್ಯವಸ್ಥೆಯಲ್ಲಿ ಕೆಳಸಮುದಾಯಗಳು ನಿರಂತರ ಶೋಷಣೆಗೆ ಒಳಗಾಗುತ್ತ ಬಂದಿವೆ. ವರ್ಣ ವ್ಯವಸ್ಥೆಯ ವಿಷಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿಕ್ಷಿಪ್ತ ಆಳ್ವಿಕೆ, ಅಸಹಾಯಕ ಶರಣಾಗತಿಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ಆಳುವ ವರ್ಗಗಳು ತಳಸಮುದಾಯಗಳನ್ನು ಅತ್ಯಂತ ಹೀನಾಯವಾಗಿ ನಡೆಸಿಕೊಂಡಿವೆ. ಪುರೋಹಿತಶಾಹಿಗಳ ಕುತಂತ್ರದಿಂದ ಶ್ರಮಿಕ ಸಮಾಜ ನಲುಗಿದೆ. ಶ್ರಮಿಕರ ಬೆವರಿನ ಉತ್ಪಾದನೆಯ ಮೇಲೆಯೇ ಅರಸರು ಮತ್ತು ಪುರೋಹಿತರು ಅವಲಂಭಿತರಾಗಿದ್ದಾರೆ. ಹೀಗಿದ್ದರೂ ವ್ಯವಸ್ಥಿತ ಒಳಸಂಚಿನಿಂದ ಶ್ರಮಿಕ ಸಮುದಾಯದ ಮೇಲೆ ತಮ್ಮ ಹತೋಟಿ ಸಾಧಿಸಿದ್ದಾರೆ. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಪುರೋಹಿತರು ವಿಜೃಂಭಿಸುತ್ತ ತಳಸಮುದಾಯದ ಭಾವನೆಗಳನ್ನು ಅವಮಾನಿಸುತ್ತ ಬಂದಿದ್ದಾರೆ. ತಳಸಮುದಾಯ ಹಾಗೂ ಶ್ರಮಿಕ ವರ್ಗದ ಸ್ವಾಭಿಮಾನ, ಸ್ವಾವಲಂಬನೆ ಆರ್ಥಿಕ ಸ್ವಾತಂತ್ರ್ಯವನ್ನು ಪ್ರಭುತ್ವ ಮತ್ತು ಪುರೋಹಿತಶಾಹಿಗಳು ಕಿತ್ತುಕೊಂಡರು. ಬಹುಸಂಖ್ಯಾತರಾದ ಶ್ರಮಿಕರು ಆರ್ಥಿಕವಾಗಿ ಹಿನ್ನಡೆ ಅನುಭವಿಸಿ ತಲೆಯೆತ್ತಲಾರದ ದುಸ್ಥಿತಿಯಲ್ಲಿದ್ದಾರೆ. ವೃತ್ತಿಗೆ ಅನುಗುಣವಾಗಿ ಜಾತಿಗಳನ್ನು ವಿಭಜಿಸಿದರು. ಉತ್ಪಾದನೆಯ ಅಂತಿಮ ಫಲವನ್ನು ಆಳುವ ವರ್ಗವೇ ದಕ್ಕಿಸಿಕೊಂಡಿತು. ಯಾವ ದುಡಿಮೆಯನ್ನು ಮಾಡದಿರುವ ಪುರೋಹಿತಶಾಹಿಗಳು ಎಲ್ಲ ಸೌಲಭ್ಯಗಳನ್ನು ಅನುಭವಿಸುತ್ತ ಬಂದಿದ್ದಾರೆ.

ಆಳುವ ವರ್ಗ ಮತ್ತು ಪುರೋಹಿತಶಾಹಿಗಳು ಪರಸ್ಪರ ಕೈ ಜೋಡಿಸಿರುವುದರಿಂದ ಸಾವಿರಾರು ವರ್ಷಗಳ ತಳಸಮುದಾಯಗಳು ಕತ್ತಲೆಯ ಕೂಪದಲ್ಲಿ ತೆವಳುತ್ತಿವೆ. ಅಜ್ಞಾನ, ಅನಕ್ಷರತೆ ಹಾಗೂ ಅಂಧಾನುಕರಣೆಯ ಕಾರಣಗಳಿಂದ, ಜಾತಿಯ ಅಪಮಾನ ನಿಂದನೆಗಳಿಂದಾಗಿ ಈ ಸಮುದಾಯಗಳು ತಮ್ಮ ಆತ್ಮಸ್ಥೈರ್ಯವನ್ನು ಕಳೆದುಕೊಂಡಿವೆ. ಆಳುವ ವರ್ಗ, ಮಧ್ಯಮ ವರ್ಗ, ಪುರೋಹಿತಶಾಹಿಯನ್ನು ಬಿಟ್ಟರೆ ಉಳಿದ ಬಹುಸಂಖ್ಯಾತ ಶ್ರಮಿಕವರ್ಗ ಚರಿತ್ರೆಯುದ್ದಕ್ಕೂ ಈ

ಸಮುದಾಯದವರು ತೀರಾ ದಯನೀಯ ಸ್ಥಿತಿಯಲ್ಲಿ ಅಸಹಾಯಕರಾಗಿ ಬದುಕನ್ನು ನಡೆಸಿದ್ದಾರೆ. ಅವರ ಕೀಳರಿಮೆ, ಆತ್ಮವಿಶ್ವಾಸವಿಲ್ಲದ ನಿಸ್ಸಾಹಾಯಕತೆ ಈ ಸಮುದಾಯವನ್ನು ಕಾಡುತ್ತ ಬಂದಿದೆ. ಮೂಢನಂಬಿಕೆಗಳು ಹಾಗೂ ಅಕ್ಷರವಂಚಿತ ಈ ಸಮುದಾಯದ ಪ್ರಗತಿಗೆ ಮಾರಕವಾಗಿದೆ. ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಸಮಾಜದ ಎಲ್ಲ ಕ್ಷೇತ್ರಗಳಲ್ಲಿಯೂ ಅಂಚಿಗೆ ತಳ್ಳಲ್ಪಟ್ಟಿರುವ ಈ ಸಮುದಾಯಗಳು ಹೊಸ ಬೆಳಕನ್ನು ಕಂಡುಕೊಳ್ಳಬೇಕಾಗಿದೆ.

ವಸಾಹತುಶಾಹಿ ವ್ಯವಸ್ಥೆಯಲ್ಲಿ ಆಳುವ ಬ್ರಿಟಿಷ್ ವರ್ಗ ಈ ಸಮುದಾಯಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಸುಧಾರಣೆಯ ಹೆಸರಿನಲ್ಲಿ ಜನಗಣತಿ ಕಾರ್ಯಕೈಕೊಂಡಿತು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ಶಿಕ್ಷಣ ಸುಧಾರಣೆಯ ಹೆಸರಿನಲ್ಲಿ ಈ ತಳಸಮುದಾಯಗಳ ಆತ್ಮವಿಶ್ವಾಸವನ್ನು ಕುಗ್ಗಿಸುತ್ತ ಬರಲಾಯಿತು. ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಸಮಾಜ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು ಮತ್ತು ಸುಧಾರಣಾವಾದಿಗಳು ಕೈಕೊಂಡ ಸಂಶೋಧನೆಗಳು ಸಮರ್ಪಕವಾಗಿಲ್ಲ. ಇವರೆಲ್ಲರೂ ಸಮುದಾಯದ ಹೊರಗಿನವರಾಗಿರುವುದರಿಂದ ತಳಸಮುದಾಯದ ಆಂತರ್ಯವನ್ನು ಅರಿತುಕೊಳ್ಳುವುದು ಸಾಧ್ಯವಾಗಿಲ್ಲ. ಹೀಗಿದ್ದರೂ ಈ ತಳಸಮುದಾಯಗಳು ಬದುಕಿನ ಪ್ರೀತಿ, ಜೀವನಶ್ರದ್ಧೆಯನ್ನು ಎಂದೂ ಕಳೆದುಕೊಂಡಿಲ್ಲ. ತಮ್ಮ ತಮ್ಮ ಸಮುದಾಯದ ಅಸ್ಮಿತೆ ಮತ್ತು ಅನನ್ಯತೆಯನ್ನು ಕಾಪಾಡಿಕೊಂಡು ಬಂದಿವೆ. ಇದರಲ್ಲಿ ಪ್ರಸ್ತುತ ಅಧ್ಯಯನದ ವಿಷಯ ವಸ್ತುವಾದ ಚೆನ್ನದಾಸರ ಸಮುದಾಯವೂ ಒಂದು.

ಚೆನ್ನದಾಸರ ಸಮುದಾಯವು ಪರಿಶಿಷ್ಟ ಜಾತಿಗೆ ಸೇರಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳಲ್ಲಿ ಒಂದಾಗಿದೆ. ಈ ಸಮುದಾಯಕ್ಕೆ ಕರ್ನಾಟಕದಲ್ಲಿ ಪ್ರಾದೇಶಿಕವಾಗಿ ಬೇರೆ ಬೇರೆ ಉಪನಾಮಗಳಿದ್ದರೂ ಸಮುದಾಯ ತನ್ನನ್ನು 'ಚೆನ್ನದಾಸರು' ಎಂದೇ ಗುರುತಿಸಿ ಕೊಂಡಿದೆ. ಶೈಕ್ಷಣಿಕವಾಗಿ ಮತ್ತು ಇತರ ದಾಖಲಾತಿಗಳಲ್ಲಿ 'ಚೆನ್ನದಾಸರ' ಎಂದೇ ತನ್ನ ಜಾತಿಯನ್ನು ದಾಖಲಿಸುತ್ತ ಬಂದಿದೆ. ಚೆನ್ನದಾಸರ ಪರ್ಯಾಯ ನಾಮಗಳಾದ ದಂಡಿಗೆದಾಸರ, ಜಂಬೂದಾಸರ, ಚಕ್ರವಾದ್ಯದಾಸರ, ಹರಿದಾಸರ, ಶಂಖದಾಸರ, ಗೋಪಾಳಬುಟ್ಟಿದಾಸರ, ನಾಮದದಾಸರ, ಹೊಲೆಯದಾಸರ, ಮಾಲದಾಸರಿ, ಆಟದದಾಸರ, ದಾಸರಿ ಮುಂತಾದ ಹೆಸರುಗಳಿವೆ. ಆದರೂ ಕರ್ನಾಟಕದಲ್ಲಿ ಈ ಸಮುದಾಯದವರು 'ಚೆನ್ನದಾಸರು' ಎಂದೇ ತನ್ನನ್ನು ಗುರುತಿಸಿಕೊಂಡು ಬಂದಿದೆ. ಸ್ಥಳೀಯವಾಗಿ ಪ್ರಾದೇಶಿಕ ನೆಲೆಯಲ್ಲಿ ಇವರನ್ನು ದಾಸರು, ದಾಸರ, ದಾಸರಿ ಎಂದು ಕರೆಯುವುದುಂಟು.

ಚೆನ್ನದಾಸರ ಸಮುದಾಯವು ಪಟ್ಟಣದ ಹೊರವಲಯವಿರಲಿ, ಹಳ್ಳಿಗಳಿರಲಿ, ಗುಂಪು ಗುಂಪಾಗಿ ಆದರೆ ಪ್ರತ್ಯೇಕವಾಗಿ ವಾಸಿಸುವುದು ಸಾಮಾನ್ಯ ಅಂಶವಾಗಿದೆ. ಮೂಲತಃ ಅಲೆಮಾರಿಗಳಾಗಿದ್ದ ಈ ಸಮುದಾಯಕ್ಕೆ ನಿಶ್ಚಿತವಾದ ಹಾಗೂ ತನ್ನದೇ ಒಂದು ನೆಲೆಯಿರಲಿಲ್ಲ. ಉಪಜೀವನಕ್ಕಾಗಿ ಅಲೆದಾಡುತ್ತ ಅನುಕೂಲವೆನಿಸಿದ ಪ್ರದೇಶಗಳಲ್ಲಿ ಬಿಡಾರ ಹೂಡುವರು. ಮುಂಚೆ ಊರ ಹೊರಗಿರುವ ಧರ್ಮಶಾಲೆಗಳು, ಹಾಳುಗುಡಿಗಳು, ಊರ ಹೊರಗಿರುವ ಬಯಲು, ಸಮಾಜಮಂದಿರ, ಕೆಳವರ್ಗದ ದೇವಸ್ಥಾನಗಳ ಮುಂಭಾಗದ ಬಯಲು, ನೀರಿಗೆ ಸಮೀಪವಾಗಿರುವ ಯಾವುದೇ ಸ್ಥಳಗಳಲ್ಲಿ ಗುಡಾರ ಹರವಿ ಬಿಡಾರ ಹೂಡಿ ಜೀವನ ನಡೆಸುತ್ತಿದ್ದರು.

ಮುಂದಿನ ಹಂತದಲ್ಲಿ ಕಾಡಿನ ಅಂಚು, ಸರಕಾರದ ಬರಖಾಸ್ತು ಪ್ರದೇಶಗಳಲ್ಲಿ ಬಹಳ ದಿನಗಳವರೆಗೆ ವಾಸ್ತವ್ಯ ಹೂಡಿದ್ದರು. ತಾವು ನೆಲಸಿದ್ದ ಪ್ರದೇಶದಿಂದ ತಿರುಪೆಗೆ ಹೋಗಿ ಅಥವಾ ಸುಗ್ಗಿ ಮುಗಿಸಿ ಬಂದು ಅದೇ ಸ್ಥಳದಲ್ಲಿ ನೆಲೆಸುವುದನ್ನು ರೂಢಿ ಮಾಡಿಕೊಂಡರು. ಬರಬರುತ್ತ ಅಲೆಮಾರಿತನವನ್ನು ತ್ಯಜಿಸಿ ಅರೆ ಅಲೆಮಾರಿಗಳಾದರು. ಮತ್ತೆ ಸ್ಥಳೀಯ ಕೂಲಿ ಕೆಲಸಗಳಿಗೆ, ಕೃಷಿಕೂಲಿಗಳಲ್ಲಿ ತೊಡಗಿಸಿಕೊಂಡರು. ಮೂಲ ಕಸಬು ಭಿಕ್ಷಾಟನೆ. ಭಿಕ್ಷಾಟನೆಯಿಂದ ಜೀವನ ನಡೆಸುವುದು ಅಸಾಧ್ಯವಾಯಿತು. ಭಿಕ್ಷಾ ವೃತ್ತಿಯಲ್ಲಿ ಭದ್ರತೆ ಇರಲಿಲ್ಲ. ಕುಟುಂಬ ನಿರ್ವಹಣೆ ಅಸಾಧ್ಯವಾದಾಗ, ಕೆಲಸದ ನಿಮಿತ್ಯ ಗುಳೆ ಹೋಗುವುದು, ಕೂಲಿಮಾಡುವುದು, ಕೃಷಿಕೂಲಿ ಮಾಡುವುದು, ಸೂಜಿ, ಕೇರು, ಪಿನ್ನು, ದಬ್ಬಣದಂತಹ ವಸ್ತುಗಳ ಮಾರಾಟ ಇತ್ಯಾದಿ ವೃತ್ತಿಗಳಲ್ಲಿ ಈ ಸಮುದಾಯ ನಿರತವಾಯಿತು.

ಸಾವಿರಾರು ವರ್ಷಗಳ ಇತಿಹಾಸವಿರುವ ಆದಿಮ ಜನಾಂಗಕ್ಕೆ ತನ್ನದೇ ಆದ ನಿಶ್ಚಿತ ನೆಲೆ ಇಲ್ಲ. ಶಿಕ್ಷಣ ಸಂಘಟನೆಗಳು ಇಲ್ಲ. ಸಾಮಾಜಿಕ ಮತ್ತು ರಾಜಕೀಯವಾಗಿ ನಿರ್ಣಾಯಕ ಪಾತ್ರ ವಹಿಸಲು ಸಾಧ್ಯವಾಗಿಲ್ಲ. ತನ್ನ ಸಮುದಾಯದ ಅಸ್ಮಿತೆ, ಜನಾಂಗದ ಅನನ್ಯತೆಗಳು ಇದ್ದಾಗ್ಯೂ, ಸಾಂಸ್ಕೃತಿಕ ಸಿರಿವಂತರಾಗಿದ್ದರೂ ಸಮಾಜದಲ್ಲಿ ಈ ಸಮುದಾಯ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಡಾ. ಯಲ್ಲಪ್ಪ ಹಿಮ್ಮಡಿ ಅವರ ಗ್ರಂಥ ಒಂದನ್ನು ಹೊರತುಪಡಿಸಿದರೆ ಈ ಸಮುದಾಯದ ಕುರಿತಾಗಿ ವಿಶೇಷ ಅಧ್ಯಯನಗಳು ಈವರೆಗೂ ನಡೆದಿಲ್ಲ. ಬೆಳಗಾವಿ ಜಿಲ್ಲೆಯ ತುಂಬ ಚೆನ್ನದಾಸರ ಸಮುದಾಯವು ಚೆದುರಿಹೋಗಿದೆ. ಚೆನ್ನದಾಸರ ಸಮುದಾಯದವರು ತಿರುಪತಿ ತಿಮ್ಮಪ್ಪನನ್ನು ಕುಲದೇವರಾಗಿ, ಹನುಮಂತ ಮತ್ತು ಮಸುಬಾರನ್ನು ತಮ್ಮ ಆರಾಧ್ಯದೈವವಾಗಿ ಮಾಡಿಕೊಂಡಿದೆ. ದುರುಗಮ್ಮ, ಉದ್ದಮ್ಮ, ಮಾರಮ್ಮ, ಯಲ್ಲಮ್ಮ ಮೊದಲಾದ ಶಕ್ತಿ ದೇವತೆಗಳನ್ನು ಮನೆದೇವರನ್ನಾಗಿ

ಆರಾಧಿಸುವ ಈ ಸಮುದಾಯ ತನ್ನದೆ ಆದ ಕೆಲವು ವಿಶೇಷತೆಗಳನ್ನು ಒಳಗೊಂಡಿದೆ. ಚೆನ್ನದಾಸರ ಸಮುದಾಯದ ತಲಸ್ಪರ್ಶಿ ಅಧ್ಯಯನವೇ ಪ್ರಸ್ತುತ ಮಹಾಪ್ರಬಂಧದ ವಸ್ತುವಾಗಿದೆ.

ಸಮುದಾಯ ಅಧ್ಯಯನ

ಸಮುದಾಯದ ಹಿನ್ನೆಲೆಯನ್ನು ನೋಡುವ ಮುಂಚೆ 'ಸಮುದಾಯ'ವೆಂದರೆ ಏನು ? ಅದರ ಅರ್ಥ, ವ್ಯಾಪ್ತಿ ಅರಿತುಕೊಳ್ಳಬೇಕು. ಜಾನಪದ ಕೈಪಿಡಿಯಲ್ಲಿ ಹೇಳಿದ್ದು ಹೀಗೆ "ತಮ್ಮ ಸಾರ್ವಜನಿಕ ಜೀವನಕ್ಕೆ ಅಗತ್ಯವಾದ ಬೇಡಿಕೆಗಳಿಗಾಗಿ ಪ್ರಮುಖ ಗಮನವನ್ನು ಕೊಟ್ಟು ಜೀವಿಸುವ ಸದಸ್ಯರ ಒಂದು ನಿರ್ದಿಷ್ಟ ಗುಂಪನ್ನು ಸಮುದಾಯ" ಎನ್ನುತ್ತಾರೆ. ಅದು ಇರುವುದು ಒಂದೆರಡು ಹಿತಗಳ ಸಾಧನೆಗೆ ಅಲ್ಲ. ಬದಲು ಅದು ಗುಂಪಿನ ಜನರ ಸರ್ವಹಿತವನ್ನು ಸಾಧಿಸುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಒಬ್ಬ ವ್ಯಕ್ತಿ ತನ್ನ ಜೀವನವನ್ನು ಸಂಪೂರ್ಣವಾಗಿ ಸಮುದಾಯದಲ್ಲಿ ಕಳೆಯುತ್ತಾನೆ. ಅದು ಒಂದು ಸಣ್ಣ ಹಳ್ಳಿಯಲ್ಲಾದರೂ ಇರಬಹುದು, ದೊಡ್ಡ ಗುಂಪಾಗಿಯಾದರೂ ಇರಬಹುದು. ಭಾರತದಲ್ಲಿ ವೇದಪೂರ್ವಕಾಲದಲ್ಲಿ ಇಂಥ ಅನೇಕ ಸ್ವಯಂ ಪೂರ್ಣವಾದ ಮತ್ತು ಶಕ್ತಿಶಾಲಿಯಾದ ಸಮುದಾಯಗಳು ಅಸ್ತಿತ್ವದಲ್ಲಿದ್ದವು ಎಂದು ಹೇಳಲಾಗಿದೆ. ಈ ಸಮುದಾಯಗಳು ಗುಡಿಸಲು, ಜಾನುವಾರು, ಬಳಕೆಯ ಪದಾರ್ಥ, ಗುದ್ದಲಿ ಮೊದಲಾದ ಎಲ್ಲ ಉತ್ಪಾದನ ಸಾಧನಗಳನ್ನು ಸಮಾನವಾಗಿ ಉಪಯೋಗಿಸಿಕೊಳ್ಳುತ್ತವೆ. ಭೂಮಿಯ ಮೇಲಿನ ಒಡೆತನ ಕೂಡ ಇಲ್ಲಿ ಸಮಾನವಾದದು. ಇಂಥ ಪ್ರಾಚೀನ ಸಮುದಾಯಗಳಲ್ಲಿ ಉತ್ಪಾದನೆಯ ಸಮಾನ ವಿತರಣೆ ಇತ್ತು. ಆದರೆ ಮಿಗತೆ ಉತ್ಪಾದನೆ ಇರಲಿಲ್ಲ. ಈ ಅರ್ಥದಲ್ಲಿ ಜಗತ್ತಿನ ಕೆಲವು ಬುಡಕಟ್ಟುಗಳನ್ನು 'ಸಮುದಾಯಗಳು' ಎಂದು ಕರೆಯಲಾಗುತ್ತಿದೆ. ಗೊತ್ತಾದ ಸ್ಥಳದಲ್ಲಿ ಜನರು "ಸಾಮೂಹಿಕವಾಗಿ ಬದುಕುವುದು ಸಮುದಾಯವೊಂದರ ಪ್ರಮುಖ ಲಕ್ಷಣವಾಗಿದೆ. ಅಲ್ಲಿರುವ ಜನರ ನಡುವೆ ಪರಸ್ಪರಾವಲಂಬನೆ ಇರುತ್ತದೆ."ಎಂಬುದು ಮಹತ್ತರವಾಗಿದೆ. ಇದು ಸಮುದಾಯದ ವ್ಯಾಖ್ಯಾನವಾಗಿದೆ.

"ಸಮುದಾಯ ಅಧ್ಯಯನ"ವೆಂಬ ಪ್ರತ್ಯೇಕ ಅಧ್ಯಯನ ವಿಧಾನವೊಂದಿಲ್ಲ. ಆದರೆ ನಾವೇ ಅದನ್ನು ರೂಪಿಸಿದ್ದೇವೆ. ಸಮುದಾಯ ಅಧ್ಯಯನದ ಸ್ವರೂಪವೆಂದರೆ– ಒಂದು ಜನಾಂಗದ ಮೂಲ, ಅದರ ವಲಸೆ, ಅದರ ವೈಶಿಷ್ಟ್ಯತೆ, ಧಾರ್ಮಿಕ ಮತ್ತು ಸಾಮಾಜಿಕ ಜೀವನ ವಿಧಾನ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳು, ಶಿಕ್ಷಣ, ಸಂಘಟನೆ, ವ್ಯಕ್ತಿ ಇವುಗಳನ್ನು ಸಮಗ್ರವಾಗಿ ಅಧ್ಯಯನಿಸುವುದು. ಚೆನ್ನದಾಸರ ಸಮುದಾಯದ ಕುರಿತು ತಲಸ್ಪರ್ಶಿಯಾಗಿ ಮಾಡುವ ಅಧ್ಯಯನ

ವಿಧಾನಕ್ಕೆ "ಸಮುದಾಯ ಅಧ್ಯಯನ ವಿಧಾನ" ವೆಂದು ಕರೆಯಲಾಗಿದೆ. ಈ ಮೇಲಿನ ಪರಿಕಲ್ಪನೆಯಲ್ಲಿಯೇ ಪ್ರಸ್ತುತ ಮಹಾಪ್ರಬಂಧವನ್ನು ರೂಪಿಸುವ ಪ್ರಯತ್ನ ಮಾಡಲಾಗಿದೆ.

೧.೧. ಅಧ್ಯಯನದ ಉದ್ದೇಶ

ಚೆನ್ನದಾಸರ ಸಮುದಾಯದಲ್ಲಿ ಅಲೆಮಾರಿ, ಅರೆ ಅಲೆಮಾರಿ ಮತ್ತು ಸ್ಥಿರವಾಸಿಗಳು ಹೀಗೆ ಮೂರು ರೀತಿಯ ಜೀವನ ವಿಧಾನವನ್ನು ಅನುಸರಿಸಿದವರಿದ್ದಾರೆ. ಮೂಲತಃ ಅಸಂಘಟಿತವಾದ, ಶಿಕ್ಷಣದಿಂದ ವಂಚಿತರಾದ, ಮೂಲ ಸೌಕರ್ಯಗಳು ಇಲ್ಲದ ಸಾಮಾಜಿಕ ನ್ಯಾಯ ಪಡೆಯದಿರುವ, ತನ್ನ ಹಕ್ಕುಗಳಿಗೆ ಹೋರಾಟ ಮಾಡದಿರುವ, ತೀರಾ ಹಿಂದುಳಿದಿರುವ ಈ ಸಮುದಾಯವನ್ನು ಅಧ್ಯಯನಿಸುವುದು ಮುಖ್ಯ ಉದ್ದೇಶವಾಗಿದೆ. ಚೆನ್ನದಾಸರು ಸಮುದಾಯದವರು ಬಡವರು, ಸರಳ ಸ್ವಭಾವದವರು, ಸಂಕೋಚ ಪ್ರವೃತ್ತಿಯವರು, ಮೋಸ ಮಾಡದವರು, ತಾವೇ ಮೋಸಕ್ಕೊಳಗಾದ ಮುಗ್ಧ ಜನಾಂಗ. ತನ್ನ ಮೂಲವನ್ನು ಮರೆತ ಜನಾಂಗವಿದು. ಯಾವುದೇ ಸ್ಥಳದಲ್ಲಿ ಬಿಡಾರ ಹೂಡಿ ಜೀವನ ನಡೆಸಿದವರು. ಅದರ ಮಾಲಿಕ ಬೇಡವೆಂದರೆ ಮತ್ತೆಲ್ಲಿಯೋ ಅಲೆದಾಡಿ ಸಿಕ್ಕ ಸ್ಥಳದಲ್ಲಿ ಬಿಡಾರ ಬಿಟ್ಟು ಬದುಕಿಗಾಗಿ ಪರದಾಟ ಮಾಡಿದವರು.

ಈ ಸಮುದಾಯಕ್ಕೆ ಆರ್ಥಿಕವಾಗಿ ಯಾವುದೇ ಭದ್ರತೆಯೂ ಇಲ್ಲ. ಭಿಕ್ಷಾ ವೃತ್ತಿಯನ್ನೇ ಅವಲಂಭಿಸಿದವರು. ಆದ್ದರಿಂದ ಜೀವನ ನಿರ್ವಹಣೆ ಕಷ್ಟವಾದಾಗ ಕೈಗೆ ಸಿಕ್ಕ ಕೂಲಿ ಕೆಲಸ ಮಾಡುತ್ತ ದಿನ ದೂಡಿದವರು. ಇವರು ಸ್ವಾಭಿಮಾನದಿಂದ ಬಾಳಲು ಸಾಧ್ಯವಾಗದೇ ಹೋಗಿದೆ. ಸಾಮಾಜಿಕ ನ್ಯಾಯವಂತೂ ಇವರಿಂದ ತುಂಬ ದೂರವಾಗಿದೆ. ಆದ್ದರಿಂದ ಚೆನ್ನದಾಸರ ಸಮುದಾಯದ ಅಧ್ಯಯನ ಕೈಕೊಳ್ಳುವುದು ಅವಶ್ಯಕವಾಗಿದೆ. ಚೆನ್ನದಾಸರ ಸಮುದಾಯದ ವ್ಯಕ್ತಿಗಳಿಂದಲೆ ಮಾಹಿತಿ ಸಂಗ್ರಹಿಸಿ, ಬೆಳಗಾವಿ ಜಿಲ್ಲೆಯಲ್ಲಿ ನೆಲೆಸಿರುವ ಈ ಸಮುದಾಯದ ಕ್ಷೇತ್ರಕಾರ್ಯ ಕೈಕೊಂಡು ಆಕರ ಸಾಮಗ್ರಿಯನ್ನು ಕಲೆಹಾಕುವುದು. ಕ್ಷೇತ್ರಕಾರ್ಯದಿಂದ ಲಭಿಸಿದ ಮಾಹಿತಿ, ಸಮೀಕ್ಷೆಯಿಂದ ಸಂಗ್ರಹಿಸಿರುವ ಸಂಗತಿಗಳು ಮತ್ತು ಮಾಹಿತಿದಾರರಿಂದ ತಿಳಿದಿರುವ ಅಂಶಗಳು, ಈ ಸಮುದಾಯದ ಕುರಿತಾಗಿ ಬಂದಿರುವ ಸಾಹಿತ್ಯ ಇವೆಲ್ಲವನ್ನು ಒಗ್ಗೂಡಿಸುವುದು ಮುಖ್ಯವಾಗಿದೆ. ತದನಂತರ ಚೆನ್ನದಾಸರ ಸಮುದಾಯದ ಅನನ್ಯತೆ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಸಂಘಟನಾತ್ಮಕ ಕ್ಷೇತ್ರಗಳ ವಸ್ತುಸ್ಥಿತಿಯನ್ನು ಅಧ್ಯಯನಿಸಿ ಸಮಾಜಶಾಸ್ತ್ರೀಯವಾಗಿ ದಾಖಲಿಸುವುದಾಗಿದೆ.

ಆ ಸಮುದಾಯದ ನಂಬಿಕೆ, ಆಚರಣೆ, ಸಂಪ್ರದಾಯ, ದೇವತಾರಾಧನೆ, ಕಲೆ, ಸಾಹಿತ್ಯ ಮುಂತಾದವುಗಳನ್ನು ಶೋಧಿಸುವುದಾಗಿದೆ. ಈ ಸಮುದಾಯದೊಳಗಿರುವ ಮಾನವೀಯ ಮೌಲ್ಯಗಳು ಪರಂಪರಾಗತವಾದ ಜ್ಞಾನಗಳ ಮೇಲೆ ಬೆಳಕು ಚೆಲ್ಲುವುದು, ಸಮಕಾಲೀನ ಸಮಸ್ಯೆಗಳು ಹಾಗೂ ಈ ಸಮುದಾಯ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳನ್ನು ಗುರುತಿಸಿ, ಅವುಗಳಿಗೆ ಸೂಕ್ತ ಪರಿಹಾರ ಸೂಚಿಸುವುದು ಪ್ರಮುಖ ಉದ್ದೇಶವಾಗಿದೆ. ಚೆನ್ನದಾಸರ ಸಮುದಾಯದ ಜೀವನ ವಿಧಾನವನ್ನು ಅಧ್ಯಯನಿಸಲು, ಸಾಂಸ್ಕೃತಿಕ ಸಂಗತಿಗಳನ್ನು ದಾಖಲಿಸಲು ಪ್ರಾಶಸ್ತ್ಯ ನೀಡಲಾಗಿದೆ. ಪ್ರಸ್ತುತ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

ಅಧ್ಯಯನದ ಉದ್ದೇಶಗಳು

೧. ಚೆನ್ನದಾಸರ ಸಮುದಾಯದ ಚಾರಿತ್ರಿಕತೆಯನ್ನು ಕುರಿತು ವಿವರಿಸುವುದು.

೨. ಚೆನ್ನದಾಸರ ಸಮುದಾಯದ ಸಾಮಾಜಿಕ ಮತ್ತು ಧಾರ್ಮಿಕ ಜೀವನ ವಿಧಾನ ಮತ್ತು ಸಮುದಾಯದ ಅನನ್ಯತೆಯನ್ನು ವಿವರಿಸುವುದು.

೩. ಚೆನ್ನದಾಸರ ಸಮುದಾಯದ ಆರ್ಥಿಕ ಬದುಕಿನ ರೂಪಾಂತರಗಳನ್ನು ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಕಂಡುಕೊಳ್ಳುವುದು.

೪. ಚೆನ್ನದಾಸರ ಸಮುದಾಯದ ಶಿಕ್ಷಣ, ಉದ್ಯೋಗ, ಸಂಘಟನೆ ಮತ್ತು ಸಮುದಾಯದ ಪ್ರಚಲಿತ ಸಮಸ್ಯೆಗಳನ್ನು ಅರಿತುಕೊಳ್ಳುವುದು.

೧.೨. ವ್ಯಾಪ್ತಿ

ಪ್ರಸ್ತುತ ಚೆನ್ನದಾಸರ ಸಮುದಾಯನ ಅಧ್ಯಯನವು ಬೆಳಗಾವಿ ಜಿಲ್ಲೆಯ ವ್ಯಾಪ್ತಿಗೆ ಸೀಮಿತವಾಗಿದೆ. ಈ ಜಿಲ್ಲೆಯಲ್ಲಿ ಹತ್ತು ತಾಲೂಕುಗಳಿವೆ. ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅಥಣಿ, ಬೆಳಗಾವಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ, ರಾಮದುರ್ಗ, ಸವದತ್ತಿ, ರಾಯಬಾಗ ಒಟ್ಟು ಎಂಟು ತಾಲೂಕುಗಳ ವ್ಯಾಪ್ತಿಯಲ್ಲಿ ಚೆನ್ನದಾಸರ ಸಮುದಾಯ ನೆಲೆಗೊಂಡಿದೆ. ಆದ್ದರಿಂದ ಈ ಎಂಟು ತಾಲೂಕುಗಳ ನೆಲೆಗಳು ನಮ್ಮ ಅಧ್ಯಯನಕ್ಕೆ ಒಳಪಡುತ್ತವೆ. ಬೆಳಗಾವಿ ಜಿಲ್ಲೆಯಲ್ಲಿ ಚದುರಿ ಹೋಗಿರುವ ಅಲೆಮಾರಿ, ಅರೆ ಅಲೆಮಾರಿ ಸಮುದಾಯದ ಅಧ್ಯಯನ, ತಾಲೂಕುವಾರು ಸಮೀಕ್ಷೆ, ಸಮುದಾಯದ ಅಧ್ಯಯನದ ಹಿನ್ನೆಲೆ ಅನುಸರಿಸಿ, ಭೌಗೋಳಿಕ ವ್ಯಾಪ್ತಿ, ಪ್ರಸಾರದ ನೆಲೆಗಳನ್ನು ಗುರುತಿಸುವುದಾಗಿದೆ. ಚೆನ್ನದಾಸರ ಸಮುದಾಯದ ಜೀವನದ ವಿಧಾನ, ಬದುಕಿನ ಪ್ರಮುಖ

ಸಂಗತಿಗಳು, ಸಾಂಸ್ಕೃತಿಕ ಚಟುವಟಿಕೆಗಳು, ಧಾರ್ಮಿಕ ನಂಬಿಕೆಗಳು, ಆರ್ಥಿಕ ಜೀವನ, ಸಾಮಾಜಿಕ ಜೀವನಗಳನ್ನು ಈ ಪ್ರಬಂಧದ ವ್ಯಾಪ್ತಿಗೆ ತರಲಾಗಿದೆ.

೧.೩. ವಿಧಾನ

ಪ್ರಸ್ತುತ ಸಂಶೋಧನೆಯು ಸಂಪೂರ್ಣವಾಗಿ ಕ್ಷೇತ್ರಕಾರ್ಯವನ್ನು ಅವಲಂಭಿಸಿದೆ. ಕ್ಷೇತ್ರ ಕಾರ್ಯಕೈಕೊಳ್ಳುವದಕ್ಕಿಂತ ಮುಂಚೆ ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಮಾದರಿ ಸಮೀಕ್ಷೆಯ ನಮೂನೆಯನ್ನು ಅಲ್ಪ ಬದಲಾವಣೆಯೊಂದಿಗೆ ಪ್ರಶ್ನಾವಳಿಗಳನ್ನು ಸಿದ್ಧಪಡಿಸಿ ಕ್ಷೇತ್ರಕಾರ್ಯ ಕೈಕೊಳ್ಳಲಾಯಿತು. ಚೆನ್ನದಾಸರ ಸಮುದಾಯದವರನ್ನು ಸಂಪರ್ಕಿಸಿ, ಅವರನ್ನು ಸಂದರ್ಶನ ಮಾಡಿ, ಲಭ್ಯವಾದ ಮಾಹಿತಿಗಳನ್ನು ಕ್ರೋಢೀಕರಿಸಲಾಗಿದೆ. ಕ್ರೋಢೀಕರಿಸಿದ ಮಾಹಿತಿಯನ್ನು ವ್ಯವಸ್ಥಿತವಾಗಿ ವಿಂಗಡಿಸಿ, ಅದನ್ನು ವಿವೇಚನೆಗೊಳಪಡಿಸಲಾಗಿದೆ. ಅವಶ್ಯವಿದ್ದೆಡೆಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ. 'ಕ್ಷೇತ್ರಕಾರ್ಯ ವಿಧಾನ'ವನ್ನು ಅನುಸರಿಸಿ ಈ ಮಹಾಪ್ರಬಂಧವನ್ನು ರೂಪಿಸಲಾಗಿದೆ. ಸಾಂದರ್ಭಿಕವಾಗಿ ಸಮುದಾಯ ಅಧ್ಯಯನದ ಮಾದರಿ ಮತ್ತು ಸಂಸ್ಕೃತಿನಿಷ್ಠ ಸಂಶೋಧನಾ ಅಧ್ಯಯನ ಮಾದರಿಯನ್ನು ಅಳವಡಿಸಲಾಗಿದೆ. ಮಹಾಪ್ರಬಂಧವನ್ನು ರೂಪಿಸಲು ಈ ಕೆಳಕಂಡ ಅಧ್ಯಯನ ವಿಧಾನಗಳನ್ನು ಅಳವಡಿಸಿಕೊಂಡಿದ್ದೇನೆ.

೧. ಉಪಲಬ್ಧ ಸಾಹಿತ್ಯಿಕ ಆಕರಗಳ ಅಧ್ಯಯನ

೨. ಚಾರಿತ್ರಿಕ ಅಧ್ಯಯನ

೩. ಕ್ಷೇತ್ರಕಾರ್ಯ ವಿಧಾನ

೪. ಸಂದರ್ಶನ ವಿಧಾನ

೫. ಪ್ರಶ್ನಾವಳಿ ವಿಧಾನ

೬. ಅವಲೋಕನ ವಿಧಾನ

೭. ಸಾಂಖೀಕ ವಿಧಾನ

೮. ಮಾದರಿ ವಿಧಾನ

೧.೩.೧. ಉಪಲಬ್ಧ ಸಾಹಿತ್ಯಿಕ ಆಕರಗಳ ಅಧ್ಯಯನ

ಚೆನ್ನದಾಸರ ಸಮುದಾಯದ ಕುರಿತಾಗಿ ಹೊರಬಂದಿರುವ ಬಿಡಿ ಲೇಖನಗಳು, ಕಿರುಹೊತ್ತಿಗೆಗಳು, ಬುಡಕಟ್ಟು ಅಧ್ಯಯನ ಮಾದರಿಗಳು, ಸಂಶೋಧನ ಲೇಖನಗಳು, ಗ್ರಂಥಗಳು, ನಿಘಂಟು, ಗೆಝೆಟೀಯರ್, ವಿಶ್ವಕೋಶಗಳು, ಪತ್ರಿಕೆಗಳು ಮತ್ತು ಹೆಳವರ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವುಗಳಲ್ಲಿನ ಮಾಹಿತಿಯನ್ನು ಸಂದರ್ಭೋಚಿತವಾಗಿ ಬಳಸಿಕೊಳ್ಳಲಾಗಿದೆ.

೧.೩.೨. ಚಾರಿತ್ರಿಕ ಅಧ್ಯಯನ

ಪ್ರಸ್ತುತ ಚೆನ್ನದಾಸರ ಸಮುದಾಯದ ಅಧ್ಯಯನಕ್ಕೆ ಮೂಲಾಧಾರವಾಗಿ ಚಾರಿತ್ರಿಕ ಹಿನ್ನಲೆಯ ಅಧ್ಯಯನವು ಅವಶ್ಯಕವಾಗಿದೆ. ಇಲ್ಲಿಯವರೆಗೆ ಈ ಸಮುದಾಯದ ಕುರಿತಾಗಿ ನಡೆದಿರುವ ಅಧ್ಯಯನಗಳಿಂದ ಉಪಲಬ್ಧ ಮಾಹಿತಿಗಳನ್ನು ಐತಿಹಾಸಿಕ ಆಧಾರಗಳಿಂದ ಪಡೆದುಕೊಳ್ಳಲಾಗಿದೆ. ಹೀಗೆ ಸಂಗ್ರಹಿಸಿದ ಮಾಹಿತಿಯ ಮೂಲಕ ಈ ಸಮುದಾಯದ ಚಾರಿತ್ರಿಕ ಹಿನ್ನಲೆಯನ್ನು ಅರಿತುಕೊಳ್ಳಲಾಗಿದೆ. ಚಾರಿತ್ರಿಕ ವಿಧಾನದ ಮೂಲಕ ಚೆನ್ನದಾಸರ ಸಮುದಾಯದ ಜೀವನ ವಿಧಾನ, ಸಾಮಾಜಿಕ ಹಾಗೂ ಧಾರ್ಮಿಕ ಆಚರಣೆಗಳು, ನಂಬಿಕೆ, ಪರಂಪರೆ, ಆರಾಧನಾ ಪದ್ಧತಿ ಮುಂತಾದ ಸಂಗತಿಗಳನ್ನು ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೧.೩.೩. ಕ್ಷೇತ್ರಕಾರ್ಯ ವಿಧಾನ

ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಬಾಗ, ಗೋಕಾಕ, ಹುಕ್ಕೇರಿ, ಬೈಲಹೊಂಗಲ, ಸವದತ್ತಿ, ರಾಮದುರ್ಗ, ಬೆಳಗಾವಿ ಹಾಗೂ ಖಾನಾಪೂರ ಈ ಹತ್ತು ತಾಲೂಕುಗಳಲ್ಲಿ ಕ್ಷೇತ್ರಕಾರ್ಯ ಕೈಕೊಳ್ಳಲಾಯಿತು. ಇದರಲ್ಲಿ ಬೈಲಹೊಂಗಲ ಹಾಗೂ ಖಾನಾಪೂರ ತಾಲೂಕುಗಳನ್ನು ಹೊರತುಪಡಿಸಿ ಉಳಿದ ಎಂಟು ತಾಲೂಕುಗಳಲ್ಲಿ ಈ ಸಮುದಾಯ ನೆಲೆಸಿರುವುದು ಸಮೀಕ್ಷೆಯಿಂದ ತಿಳಿದುಬಂದಿದೆ. ಮೇಲೆ ಪ್ರಸ್ತಾಪಿಸಿದ ಭೌಗೋಳಿಕ ಪ್ರದೇಶದಲ್ಲಿ ವಾಸಿಸುತ್ತಿರುವ ಈ ಸಮುದಾಯ ನೆಲೆ ನಿಂತಿರುವ ಪ್ರತಿ ತಾಲೂಕಿನ ಹತ್ತು(೧೦) ಪ್ರದೇಶಗಳನ್ನು ಆಯ್ದುಕೊಂಡು ತಲಾ ಐದು(೫) ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಪ್ರಸ್ತುತ ಕ್ಷೇತ್ರಕಾರ್ಯದಲ್ಲಿ ಕುಟುಂಬವಾರು ಸಮೀಕ್ಷೆ, ವ್ಯಕ್ತಿಗಳ ಸಂದರ್ಶನ, ಪೂರಕವಾದ ಪ್ರಶ್ನಾವಳಿ, ಟಿಪ್ಪಣಿ, ಛಾಯಾಚಿತ್ರ, ಟೇಪ್‌ರೆಕಾರ್ಡರ್, ಮೋಬಾಯಿಲ್ ರಿಕಾರ್ಡಿಂಗ, ವಿದ್ಯುನ್ಮಾನ ಮಾಧ್ಯಮ ಮುಂತಾದ ಮಾಧ್ಯಮಗಳನ್ನು ಬಳಸಿಕೊಂಡು ಕ್ಷೇತ್ರಕಾರ್ಯ ವಿಧಾನದಿಂದ ಉಪಲಬ್ಧವಾದ ಮಾಹಿತಿಯನ್ನು ಸಂಕಲಿಸಿ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಯಿತು.

೧.೩.೪. ಸಂದರ್ಶನ ವಿಧಾನ

ಸಂದರ್ಶನ ವಿಧಾನದಲ್ಲಿ ಚೆನ್ನದಾಸರ ಸಮುದಾಯ ಅಧ್ಯಯನಕ್ಕೆ ಸಂಬಂಧಿಸಿದಂತೆ, ಬೆಳಗಾವಿ ಜಿಲ್ಲೆಯ ವ್ಯಾಪ್ತಿಯಲ್ಲಿ ನೆಲೆಸಿರುವ ಚೆನ್ನದಾಸರ ಸಮುದಾಯದ ವಿವಿಧ ಗುಂಪುಗಳ ಆಯ್ದ ವ್ಯಕ್ತಿಗಳನ್ನು ಸಂದರ್ಶನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಚೆನ್ನದಾಸರ ಸಮುದಾಯದ ಆಯ್ದ ಪ್ರದೇಶದಲ್ಲಿರುವ ಕೆಲವು ಕುಟುಂಬಗಳ, ಹಲವು ವ್ಯಕ್ತಿಗಳ, ಅನೇಕ ಸಂಘ–ಸಂಸ್ಥೆಗಳ ಪದಾಧಿಕಾರಿಗಳ, ಸಮಾಜದ ಮುಖಂಡರುಗಳ, ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ಕೊಡಗಿಸಿಕೊಂಡಿರುವ ವ್ಯಕ್ತಿಗಳನ್ನು ಸಂಪರ್ಕಿಸಿ, ಅವರೊಡನೆ ಸಂವಾದ ನಡೆಸಿ, ಸಂದರ್ಶನ ವಿಧಾನವನ್ನು ರೂಪಿಸಲಾಗಿದೆ. ಹೀಗೆ ಕೈಕೊಂಡ ಸಂದರ್ಶನದಿಂದ ಉಪಲಬ್ಧವಾದ ಮಾಹಿತಿಯನ್ನು, ಅಂಕಿ–ಅಂಶಗಳನ್ನು, ದಂತಕತೆಗಳನ್ನು, ಸ್ಥಳಪುರಾಣಗಳನ್ನು, ಐತಿಹ್ಯಗಳನ್ನು ಬಳಸಿಕೊಂಡು ಪ್ರಸ್ತುತ ಮಹಾಪ್ರಬಂಧವನ್ನು ರೂಪಿಸಲಾಗಿದೆ.

೧.೩.೫. ಪ್ರಶ್ನಾವಳಿ ವಿಧಾನ

ಪ್ರಶ್ನಾವಳಿ ವಿಧಾನದಲ್ಲಿ ಪ್ರಸ್ತುತ ಚೆನ್ನದಾಸರ ಸಮುದಾಯದ ಅಧ್ಯಯನಕ್ಕೆ ಸಂಬಂಧಿಸಿದಂತೆ, ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ. ಪಡೆದ ಮಾಹಿತಿಯನ್ನು ಸಂಕಲಿಸಿ ನಂತರ ಸದರಿ ಮಾಹಿತಿಯನ್ನು ಪ್ರಶ್ನಾವಳಿ ವಿಧಾನದ ಮೂಲಕ ಈ ಪ್ರಬಂಧವನ್ನು ಕಟ್ಟಿಕೊಳ್ಳಲಾಗಿದೆ. ಈ ವಿಧಾನದಲ್ಲಿ ಚೆನ್ನದಾಸರ ಸಮುದಾಯದ ಆಯ್ದ ಎಂಬತ್ತು (೮೦) ಕುಟುಂಬಗಳನ್ನು ಮಾದರಿ ಸಮೀಕ್ಷೆಯಲ್ಲಿ ಬಳಸಿಕೊಳ್ಳಲಾಗಿದೆ. ಪ್ರಶ್ನಾವಳಿಯಿಂದ ಲಭ್ಯವಾದ ಮಾಹಿತಿಯನ್ನು ಬಳಸಿಕೊಂಡು ಪ್ರಸ್ತುತ ಮಹಾಪ್ರಬಂಧವನ್ನು ರೂಪಿಸಲಾಗಿದೆ.

೧.೩.೬. ಅವಲೋಕನ ವಿಧಾನ

ಅವಲೋಕನ ವಿಧಾನದಲ್ಲಿ ಪ್ರಸ್ತುತ ಚೆನ್ನದಾಸರ ಸಮುದಾಯದ ಅಧ್ಯಯನಕ್ಕೆ ಚೆನ್ನದಾಸರ ಸಮುದಾಯ ನೆಲೆಗೊಂಡಿರುವ ಆಯ್ದು ಮಾದರಿ ಗ್ರಾಮಗಳು, ಚೆನ್ನದಾಸರ ಸಮುದಾಯ ನೆಲೆಗೊಂಡಿರುವ ಪ್ರದೇಶದಲ್ಲಿ ಆಚರಿಸುವ ಹಬ್ಬ–ಹರಿದಿನಗಳು, ನಡೆಯುವ ಜಾತ್ರೆ–ಉತ್ಸವಗಳು, ಧಾರ್ಮಿಕ ಸಭೆ–ಸಮಾರಂಭಗಳು ಹಾಗೂ ಈ ಸಮುದಾಯದ ಸಂಪ್ರದಾಯಗಳು, ಆಚರಿಸುವ ಸಂಸ್ಕಾರಗಳು ಮುಂತಾದವುಗಳನ್ನು ಅವಲೋಕಿಸಿ ಅದರಿಂದ ದೊರಕಿರುವ ಮಾಹಿತಿಯನ್ನು ಸಂಗ್ರಹಿಸಿ, ಅವುಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ಪ್ರಸ್ತುತ ಮಹಾಪ್ರಬಂಧವನ್ನು ಕಟ್ಟಿಕೊಡಲಾಗಿದೆ.

೧.೩.೭. ಸಾಂಖ್ಯಿಕ ವಿಧಾನ

ಸಾಂಖ್ಯಿಕ ವಿಧಾನವು ಸಹ ಈ ಅಧ್ಯಯನದ ವಿಧಾನಗಳ್ಲಿ ಒಂದು. ಪ್ರಸ್ತುತ ಮಹಾಪ್ರಬಂಧದ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಯಲ್ಲಿ ಅಂಕಿ–ಅಂಶಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಈ ಅಂಕಿ ಅಂಶಗಳು ಪ್ರಸ್ತುತ ಪ್ರಬಂಧ ರಚನೆಯ ಮೂಲ ಆಕರಗಳಲ್ಲಿ ಒಂದಾಗಿವೆ. ಅಧ್ಯಯನದ ಪ್ರತಿ ಹಂತದ ವಿಧಾನಗಳಲ್ಲಿ ಪರಿಗಣಿಸಲಾದ ಅಂಕಿ–ಅಂಶಗಳನ್ನು ಸಾಂಖ್ಯಿಕ ವಿಧಾನ ಅವಲಂಬಿಸಿದೆ. ಕ್ಷೇತ್ರಕಾರ್ಯ, ಸಂದರ್ಶನ, ಪ್ರಶ್ನಾವಳಿಗಳು, ಜನಗಣತಿ, ಸಮೀಕ್ಷೆ, ವಿವಿಧ ಇಲಾಖೆಗಳಲ್ಲಿ ಉಪಲಬ್ಧವಾದ ಚೆನ್ನದಾಸರ ಸಮುದಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೧.೩.೮. ಮಾದರಿ ವಿಧಾನ

ರಾಜ್ಯದಲ್ಲಿಯೇ ಬೆಳಗಾವಿ ಜಿಲ್ಲೆ ಭೌಗೋಳಿಕವಾಗಿ ವಿಸ್ತಾರವಾದ ಪ್ರಾದೇಶಿಕ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಇದಕ್ಕೆ ತಾಲೂಕುಗಳು ಸಹ ಹೊರತಾಗಿಲ್ಲ. (ಉದಾ: ಅಥಣಿ ತಾಲೂಕು ಒಂದರಲ್ಲಿಯೇ ಸುಮಾರು ತೊಂಬತ್ತಾರು (೯೬) ಹಳ್ಳಿಗಳನ್ನು ಒಳಗೊಂಡಿದೆ.) ಈ ಜಿಲ್ಲೆಯ ಭೌಗೋಳಿಕ ವ್ಯಾಪಿಯಲ್ಲಿರುವ ಹತ್ತು ತಾಲೂಕುಗಳ ಪೈಕಿ ಎಂಟು ತಾಲೂಕುಗಳಲ್ಲಿ ವಾಸವಾಗಿರುವ ಚೆನ್ನದಾಸರ ಸಮುದಾಯದ ತಾಲೂಕುವಾರು ಶೇ. ೧೦ರ ಅನುಪಾತದಲ್ಲಿ ೮೦ ಕುಟುಂಬಗಳನ್ನು ಆಯ್ಕೆಮಾಡಿಕೊಳ್ಳಲಾಗಿದೆ.

ಮೇಲೆ ಪ್ರಸ್ತಾಪಿಸಿದ ವಿಧಾನಗಳು ಅಧ್ಯಯನಕ್ಕೆ ಬಳಸಿಕೊಂಡ ಕ್ಷೇತ್ರಕಾರ್ಯ ವಿಧಾನಗಳಾಗಿವೆ. ಈ ಕ್ಷೇತ್ರಕಾರ್ಯ ವಿಧಾನದಿಂದ ಪಡೆದ ಮಾಹಿತಿಯನ್ನು ಬಳಸಿಕೊಂಡು ಪ್ರಸ್ತುತ “ಬೆಳಗಾವಿ ಜಿಲ್ಲೆಯ ಚೆನ್ನದಾಸರು: ಸಮುದಾಯ ಅಧ್ಯಯನ” ಎಂಬ ಮಹಾಪ್ರಬಂಧವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಭಾರತದ ಅಸಂಖ್ಯಾತ ತಳಸಮುದಾಯಗಳು ಅನುಭವಿಸಿದ ಅಪಮಾನ, ಶ್ರೇಣಿಕೃತ ಸಮಾಜದಲ್ಲಿ ನಲುಗಿರುವ ಹಿನ್ನಲೆಯಲ್ಲಿ ಪರಿಶೀಲಿಸಲಾಗಿದೆ. ಈ ಪರದಿಯಲ್ಲಿ ಚೆನ್ನದಾಸರ ಸಮುದಾಯದ ಸ್ಥಿತಿಗತಿ, ಅದು ಸಾಗಿಬಂದ ದಾರಿಯನ್ನು ಪರಿಚಯಿಸಲಾಗಿದೆ. ಅಧ್ಯಯನಕ್ಕೆ ಸೂಕ್ತವಾದ ಪ್ರವೇಶ ಒದಗಿಸಿ, ಈ ಅಧ್ಯಯನದ ಸ್ಪಷ್ಟ ಉದ್ದೇಶಗಳನ್ನು ನೀಡಲಾಗಿದೆ. ಈ ಸಮುದಾಯದ ವ್ಯಾಖ್ಯೆ, ಪ್ರಸ್ತುತ ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ ಹಾಗೂ ಈ ಅಧ್ಯಯನಕ್ಕೆ ಅಳವಡಿಸಿಕೊಂಡ ಅಧ್ಯಯನದ ವೈಧಾನಿಕತೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವೇಚಿಸಲಾಗಿದೆ.

೧.೪. ಚೆನ್ನದಾಸರು : ಅಧ್ಯಯನ ಸಾಗಿ ಬಂದ ದಾರಿ

ಈವರೆಗೆ ಬುಡಕಟ್ಟು ಸಮುದಾಯಗಳು, ಅಲೆಮಾರಿ, ಅರೆಅಲೆಮಾರಿ ಸಮೂಹಗಳ ಕುರಿತಾದ ಅಧ್ಯಯನವನ್ನು ಪರಿಶೀಲಿಸಲಾಯಿತು. ಇನ್ನು ಪ್ರತ್ಯೇಕವಾಗಿ ಚೆನ್ನದಾಸರ ಸಮುದಾಯದ ಕುರಿತಾಗಿ ಬಂದಿರುವ ಸಾಹಿತ್ಯ ಮತ್ತು ಅಧೀಕೃತವಾಗಿರುವ ಉಲ್ಲೇಖಿತವಾದ ಮಾಹಿತಿಯನ್ನು ನೋಡಬಹುದು.

ಸಯ್ಯದ ಸಿರಾಜ್ ಉಲ್ ಹಸನ್ ಅವರು– "ದಿ ಕಾಸ್ಟ್ಸ್ ಆಂಡ್ ಟ್ರೈಬ್ಸ್ ಆಫ್ ನಿಜಾಮ್ಸ್ ಡೊಮಿನಿಯನ್", ಎಡ್ಗರ್ ಥರ್ಸ್ಟನ್ ಅವರು– "ಕಾಸ್ಟ್ಸ್ ಆಂಡ್ ಟ್ರೈಬ್ಸ್ ಆಫ್ ಸೌಥರ್ನ್ ಇಂಡಿಯಾ", ಎಲ್.ಕೆ. ಅನಂತಕೃಷ್ಣ ಅಯ್ಯರ ಅವರು "ದಿ ಮೈಸೂರ್ ಟ್ರೈಬ್ಸ್ ಆಂಡ್ ಕಾಸ್ಟ್ಸ್" ಹಾಗೂ ಕೆ.ಎಸ್.ಸಿಂಗ್–ಅವರು ಸಂಪಾದಿಸಿರುವ "ಪೀಪಲ್ ಆಫ್ ಇಂಡಿಯಾ" ಸರಣಿಯ ಕರ್ನಾಟಕ ಸಂಪುಟ(–೨೬)ಗಳಲ್ಲಿ ದಾಸರ ಕುರಿತಾಗಿ ಕೆಲವು ಸಂಕ್ಷಿಪ್ತ ಮಾಹಿತಿಗಳನ್ನು ನೀಡಿದಾದರೆ. ಇವು ಸದರಿ ಸಮುದಾಯದ ಅಧ್ಯಯನದ ಆರಂಭಿಕ ದಾಖಲೆಗಳು.

ಥರ್ಸ್ಟನ್ ಅವರು "ದಾಸರಿಗಳು ಬೇರೆ ಬೇರೆ ಜಾತಿಗಳಿಗೆ ಗುರುಗಳಾಗಿರುವ ವೈಷ್ಣವ ಬ್ರಾಹ್ಮಣರ ಕೈಕೆಳಗಿನ ಸೇವಕರು" ಎಂದಿದ್ದಾರೆ. ಎಂ.ಡಬ್ಲೂ ಫ್ರಾನ್ಸಿಸ್ ಅವರು "ಒಡೆದು ಕಾಣುವ ಭಿಕ್ಷುಕರೆಂದರೆ ದಾಸರಿಗಳು. ಈ ಸಮಾಜ ಕಾಪು, ಬಲೀಜ, ಕುರುಬ, ಬೋಯ್ ಹಾಗೂ ಮೂಲ ಜಾತಿಗಳಿಂದ ಕೂಡಿ ಆಗಿದೆ" ಎಂದು ವಿವರಣೆ ನೀಡಿದ್ದಾರೆ. ಮೈಸೂರಿನ ಖಾನೇ ಸುಮಾರಿ ವರದಿ (೧೯೦೧)ಯಲ್ಲಿ ದಾಸರಿಗಳನ್ನು ಕೆಳ ವರ್ಗಗಳ ಭಿಕ್ಷುಕರೆಂದು ಹೇಳಿ "ಯಾವುದೇ ಚಿಂತೆ ಇಲ್ಲವೆ ಗಂಡಾಂತರ ಪ್ರಸಂಗಗಳಲ್ಲಿ ಮಾಡಿದ ಪ್ರತಿಜ್ಞೆಯಂತೆ, ತಿರುಪತಿ ತಿಮ್ಮಪ್ಪನಿಗೆ ಅರ್ಪಿತವಾದ ಸೇವಕರೇ ದಾಸರು" ಎಂದು ಸ್ಪಷ್ಟೀಕರಿಸಿದ್ದಾರೆ.

ತಂಜಾವೂರಿನ 'ಮ್ಯಾನ್ಯೂವೆಲ್ ಆಫ್ ತಂಜಾವೂರ'ದಲ್ಲಿ ಸಂಸ್ಕೃತದ 'ದಾಸ' ಪದಕ್ಕೆ ತಮಿಳಿನ ವಿಭಕ್ತಿ ಪ್ರತ್ಯಯ 'ಅನ್' ಸೇರಿ 'ದಾಸನ್' ರೂಪವಾಗಿದೆಯೆಂದು ನಿರೂಪಿಸುತ್ತ, ಇದನ್ನು "ವೈಷ್ಣವ ಭಕ್ತರಿಗೆ ಮಾತ್ರವೇ ಈ ಶಬ್ಧ ಬಳಸಲಾಗುತ್ತದೆ" ಎಂದು ಹೇಳಲಾಗಿದೆ. ನೆಲ್ಲೂರು ಕೈಪಿಡಿಯಲ್ಲಿ– ದಾಸರಿ ಪಂಥದ ಜನಸಮುದಾಯವನ್ನು "ಕರ್ನಾಟಕ ಮತ್ತು ತೆಲುಗು ಪ್ರದೇಶದ ಕಳ್ಳರು" ಎಂಬ ವಿವರಣೆಯಿದೆ.

ಸಯ್ಯದ ಸಿರಾಜ್ ಉಲ್ ಹಸನ್ ಅವರು– "ದಾಸರಿ ಎಂದರೆ ವೈಷ್ಣವ ಭಿಕ್ಷುಕರ ವರ್ಗ; 'ದಾಸ' ಅಥವಾ 'ದೇವರ ಸೇವಕ' ಎಂಬುದರಿಂದ ಈ ಹೆಸರು ಬಂದಿದೆ " ಎಂದಿದ್ದಾರೆ.

ಎಲ್. ಕೆ ಅನಂತಕೃಷ್ಣನ್ ಅಯ್ಯರ ಅವರು– "ಭಿಕ್ಷೆ ಬೇಡುವ ವೈಷ್ಣವ ಜಾತಿಯೇ ದಾಸರಿಯಾಗಿದೆ. ದಾಸರಿ ಎಂಬುದು ಯಾವುದೇ ನಿರ್ದಿಷ್ಟ ಜಾತಿಯನ್ನು ಸೂಚಿಸುವುದಿಲ್ಲ, ಬ್ರಾಹ್ಮಣೇತರ ಯಾವುದೇ ಜಾತಿಗೆ ಸೇರುವ ಎಲ್ಲ ವ್ಯಕ್ತಿಗಳಿಗೆ ಇದು ಅನ್ವಯಿಸುತ್ತದೆ." ಎಂದು ಸ್ಪಷ್ಟೀಕರಣ ನೀಡಿದ್ದಾರೆ.

ಸರ್ ಹರ್ಬರ್ಟ್ ರಿಸ್ಲೆ ಮತ್ತು ಡಾ. ಮಜುಮದಾರ್ ಅವರು "ಭಾರತಕ್ಕೆ ಬಂದ ಇಂಡೋ–ಆರ್ಯನ್‌ರು ಇಲ್ಲಿನ ಮೂಲ ನಿವಾಸಿಗಳನ್ನು ತಮಗಿಂತಲೂ ಕೆಳ ಮಟ್ಟದವರೆಂದು, ಕಾಡು ಜನರೆಂದು, ಅರೆನಾಗರಿಕ ಜನರೆಂದು ಪರಿಗಣಿಸಿದ್ದಲ್ಲದೆ, ಅವರನ್ನು 'ದಾಸರು' ಅಥವಾ 'ದಸ್ಯು'ಗಳು ಎಂದು ಕರೆದರು. ಅವರನ್ನು ಸಮಾಜದ ಅತ್ಯಂತ ಕೆಳ ಮಟ್ಟದಲ್ಲಿ ಇರಿಸಿದ್ದಲ್ಲದೆ, ಅವರಿಗೆ ಎಲ್ಲ ಬಗೆಯ ಧಾರ್ಮಿಕ ಹಾಗೂ ಸಾಮಾಜಿಕ ಸಮಾರಂಭಗಳನ್ನು ನಿರಾಕರಿಸಲಾಯಿತು."[2] ಎಂದು ಚ.ನ. ಶಂಕರರಾವ್ ವಿವರಿಸಿದ್ದಾರೆ.

ಕೆ.ಎಸ್. ಸಿಂಗ್ ಅವರು ಸಂಪಾದಿಸಿರುವ 'ಪೀಪಲ್ ಆಫ್ ಇಂಡಿಯಾ' ಗ್ರಂಥದಲ್ಲಿ ದಂಡಿಗೆದಾಸರು, ಚೆನ್ನದಾಸರು, ದಾಸರಿ ಮತ್ತು ಹೊಲೆಯ ದಾಸರಿ ಎನ್ನುವ ಪ್ರತ್ಯೇಕ ಲೇಖನಗಳಿದ್ದು, ಬೇರೆ ಬೇರೆಯವರಿಂದ ಅವುಗಳನ್ನು ಬರೆಸಲಾಗಿದೆ. ಅದರಲ್ಲಿ ಮುಖ್ಯವಾಗಿ– 'ಆರ್. ಗುಪ್ತಾ' ಅವರು– 'ದಂಡಿಗೆದಾಸ–ಚೆನ್ನದಾಸರ' ಎಂಬ ಲೇಖನದಲ್ಲಿ ದಂಡಿಗೆದಾಸರನ್ನು– "ಚೆನ್ನದಾಸರು, ಜಂಭೂದಾಸರು ಮತ್ತು ಹರಿದಾಸರು" ಎಂದು ಕರೆದು ಅವರ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಇನ್ನು ಎಂ. ಎಚ್. ಆರ್. ಖಾಸ್ಮಿ ಅವರು – ದಾಸರಿ, ಹೊಲೆಯ ದಾಸರಿ ಪ್ರಬಂಧಗಳನ್ನು ಬರೆದಿದ್ದಾರೆ. ದಾಸರಿ ಮತ್ತು ಹೊಲೆಯ ದಾಸರಿಗಳ ಕುರಿತಾಗಿ ವಿವರವಾದ ಮಾಹಿತಿ ನೀಡಿದ್ದಾರೆ.

ಈವರೆಗೆ ಪ್ರಸ್ತಾಪಿಸಿದ ವಿವರಗಳು ಆಂಗ್ಲ ಭಾಷೆಯಲ್ಲಿ ಬಂದಿರುವ ಮಾಹಿತಿಗಳಾಗಿವೆ. ಭಾರತೀಯ ಪ್ರಾದೇಶಿಕ ಭಾಷೆಯಲ್ಲಿ ರಚನೆಯಾದ ಮೊದಲ ಕೃತಿ ಆಂಧ್ರದ –"ಹೊಲೆಯದಾಸರಿ ಜೀವನ ವಿಧಾನಮು"[3] ಎಂಬುದು ಪುಟ್ಟ ಕೃತಿಯಾಗಿದೆ. ಕನ್ನಡದಲ್ಲಿ– ಮುಂಬಯಿ ಗ್ಯಾಝಟೀಯರ್ (ಉತ್ತರ ಕರ್ನಾಟಕದ ಪ್ರದೇಶಗಳಾದ ಧಾರವಾಡ, ಕಾರವಾರ, ಬೆಳಗಾವಿ, ಬಿಜಾಪುರ ಜಿಲ್ಲೆಗಳಿಗೆ ಸಂಬಂಧಿಸಿದ)ದಲ್ಲಿ ದಾಸರ ಕುರಿತಾಗಿ ಮೊದಲ ಮಾಹಿತಿ ಲಭಿಸುತ್ತದೆ. ಇದರಲ್ಲಿ ' ಗುಡಿಗಳ ಪರಿಚಾರಕರು' ಮತ್ತು 'ತಿರುಕರು' ಎಂದು ಎರಡು ಭಾಗ ಮಾಡಿ, ದಾಸರ ಕುರಿತಾಗಿ ವಿಫುಲ ಮಾಹಿತಿಯನ್ನು ಒದಗಿಸಿದ್ದಾರೆ. ಗುಡಿ ಪರಿಚಾರಕರ ಭಾಗದ ದಾಸರಲ್ಲಿ ಗೊಲ್ಲದಾಸರು, ವೊಳ್ಳೆದಾಸರು, ತೆಲುಗುದಾಸರು, ಗಂಡುದಾಸರು, ತಿರುಮಲದಾಸರು, ಬ್ಯಾಡದಾಸರು, ಹೊಲೆದಾಸರು

ಇತ್ಯಾದಿ ವರ್ಗಗಳಿವೆ ಎಂದು ತಿಳಿಸಿ, ಅವರು ವಾಸಿಸುವ ಪ್ರದೇಶ ಮತ್ತು ಅವರ ಜೀವನವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. 'ತಿರುಕರು' ವಿಭಾಗದಲ್ಲಿ 'ತಿರುಮಲದಾಸರು-ಗಂಡುದಾಸರು' ಎಂದು ಎರಡು ಒಳಭೇದಗಳಿದ್ದು, ತಿರುಮಲದಾಸರು ಕನ್ನಡಿಗರಾದರೆ, ಗಂಡುದಾಸರು ತೆಲುಗರೆಂದು ಸ್ಪಷ್ಟೀಕರಿಸಲಾಗಿದೆ. ಈ ಸಮುದಾಯದವರು ವಾಸಿಸುವ ಜಿಲ್ಲೆಗಳು, ಇವರ ವೃತ್ತಿಯನ್ನು ಕಿರುದಾಗಿ ಪರಿಚಯಿಸಲಾಗಿದೆ.

'ದಾಸ' ಸಮುದಾಯವನ್ನೇ ಕೇಂದ್ರ ಬಿಂದುವಾಗಿರಿಸಿ ಬಂದಿರುವ ಪ್ರಥಮ ಪ್ರಬಂಧವೆಂದರೆ, ಪ್ರೊ. ಬಿ. ವ್ಹಿ. ಗುಂಜೆಟ್ಟಿಯವರ "ದಾಸರು". ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಕನ್ನಡ ಅಧ್ಯಯನ ಪೀಠವು ಇದನ್ನು ಪ್ರಕಟಿಸಿದೆ. ಇದರಲ್ಲಿ ಪೀಠಿಕೆ, ದಾಸಮೂಲ, ದಾಸರ ಕುರಿತ ಅಭಿಪ್ರಾಯಗಳು, ಅಭಿಪ್ರಾಯಗಳ ತಾತ್ಪರ್ಯ, ದಾಸ ಪಂಗಡಗಳು, ವಿವಿಧ ದಾಸರ ವೃತ್ತಿ, ದಾಸರ ದೇವರು, ಧರ್ಮ, ಹೆರಿಗೆ, ಚೌಲಕರ್ಮ, ಮೈನೆರೆದ ಕಾರಣ, ವಿಧವಾ ವಿವಾಹ, ವಿವಾಹ ವಿಚ್ಛೇದನ, ಕುಲ ಪಂಚಾಯತಿ, ಮೊಗಿನಾಲುಧರ್ಮ, ಅಂತ್ಯವಿಧಿ, ವೇಷಭೂಷಣ, ದಾಸರ ಕಸಬು, ದಾಸರ ಕಲೆ ಮತ್ತು ಉಪಸಂಹಾರ ಇತ್ಯಾದಿ ಉಪಶೀರ್ಷಿಕೆಗಳ ಅಡಿಯಲ್ಲಿ ಗುಂಜೆಟ್ಟಿಯವರು ಪ್ರಬಂಧ ಕಟ್ಟಿಕೊಟ್ಟಿದ್ದಾರೆ. ಇಂದು ಬುಡಕಟ್ಟು ಅಧ್ಯಯನ ಅಥವಾ ಸಮುದಾಯ ಅಧ್ಯಯನವೆಂಬ ಶಾಸ್ತ್ರೀಯ ಚೌಕಟ್ಟಿನಲ್ಲಿ ನೋಡಿದಾಗ ಕೆಲವು ಕೊರತೆ ಕಾಣುವುದು ಸಹಜ. ಆದರೆ ಅಂದು ಅವರು ಮಾಡಿದ ಪ್ರಯತ್ನ ಅಭಿನಂದನೀಯವಾಗಿದೆ. ಮುಂದಿನ ಅಧ್ಯಯನಕಾರರಿಗೆ ದಾರಿ ತೋರಿಸುತ್ತದೆ.

ಕನ್ನಡದ ಜಾನಪದ ವಿದ್ವಾಂಸರು, ಕರ್ನಾಟಕ ಜಾನಪದ ರಂಗಭೂಮಿಯ ಅಧ್ಯಯನಕಾರ ಡಾ. ಎಂ.ಎಸ್. ಸುಂಕಾಪುರ, ಡಾ. ಎಂ. ಟಿ. ಧೂಪದ, ಡಾ. ಬಿ. ಬಿ. ಹೆಂಡಿ, ಡಾ. ಎಚ್. ಕೆ. ರಂಗನಾಥ, ಡಾ. ಚಂದ್ರಶೇಖರ ಕಂಬಾರ, ಡಾ.ಜೀ.ಶಂ. ಪರಮಶಿವಯ್ಯ, ಡಾ.ಬೆಟಗೇರಿ ಕೃಷ್ಣಶರ್ಮ, ಡಾ. ದೇವೇಂದ್ರಕುಮಾರ ಹಕಾರಿ, ಡಾ.ನಿಂಗಣ್ಣ ಸಣ್ಣಕ್ಕಿ, ಡಾ.ಬಸವರಾಜ ಮಲಶೆಟ್ಟಿ, ಮುಂತಾದವರು ತಮ್ಮ ಕೃತಿಗಳಲ್ಲಿ ದಾಸರನ್ನು, ಅವರ ದಾಸರಾಟವನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದಾರೆ.

ಡಾ. ಅರ್ಜುನ ಗೊಳಸಂಗಿ ಅವರು 'ದಲಿತ ಲೋಕದ ಶೋಧ; ಜಾನಪದ ಅಧ್ಯಯನ' ಗ್ರಂಥದ 'ದಾಸರು' ಲೇಖನ ಮೌಲಿಕವಾಗಿದೆ. ಇದರಲ್ಲಿ ದಾಸ ಪದದ ಅರ್ಥ, ಮೂಲ ಪಂಗಡ, ದಾಸರ ಮೂಲ, ದಾಸರಲ್ಲಿಯ ಒಳಪಂಗಡಗಳು, ದಾಸರ ಭೌತಿಕ ಬದುಕು, ಉಟೋಪಚಾರ, ವೇಷಭೂಷಣ, ಭಾಷೆ, ವಸತಿ, ಮದುವೆ, ಕುಟುಂಬ ಪದ್ಧತಿ, ವೃತ್ತಿಗಳು, ದಾಸರಾಟ,

ದೊಂಬಿದಾಸರ ಮೇಳ, ಅಭೌತಿಕ ಬದುಕು, ಜನನ, ತೊಟ್ಟಿಲು ಕಾರ್ಯ, ಋತುಮತಿ, ಮದುವೆ, ಮರಣ ಸಂಸ್ಕಾರ ಮೊದಲಾದ ಕಿರುಶೀರ್ಷಿಕೆಗಳ ಅಡಿಯಲ್ಲಿ ಹಲವಾರು ವಿಷಯಗಳನ್ನು ಪರಿಚಯಿಸಿದ್ದಾರೆ. ಪ್ರೊ. ಬಿ. ವ್ಹಿ. ಗುಂಜೆಟ್ಟಿಯವರ ಆಶಯವನ್ನು ಮುಂದುವರೆಸಿದ ಮೌಲಿಕ ಪ್ರಬಂಧವಿದು. ಆದರೆ ಆಳವಾದ ಅಧ್ಯಯನ ಸಾಧ್ಯವಾಗಿಲ್ಲ.

ಡಾ. ಹಿ. ಚಿ. ಬೋರಲಿಂಗಯ್ಯನವರ 'ದಾಸಪ್ಪ–ಜೋಗಪ್ಪ' ಮಹತ್ವದ ಕೃತಿಯಾಗಿದೆ. ಇದರಲ್ಲಿ ಪ್ರಮುಖವಾಗಿ ಎರಡು ಭಾಗಗಳಿದ್ದು ಒಂದರಲ್ಲಿ ದಾಸಪ್ಪ ಮತ್ತೊಂದರಲ್ಲಿ ಜೋಗಪ್ಪನನ್ನು ಸವಿಸ್ತಾರವಾಗಿ ಪರಿಚಯಿಸಲಾಗಿದೆ. ದಾಸಪ್ಪನ ಹಿನ್ನೆಲೆ, ದಾಸಪ್ಪನ ಉಡುಪು ವಸ್ತುಗಳು, ತಿರುಪತಿ ತಿಮ್ಮಪ್ಪ ಮತ್ತು ಇತರ ಒಕ್ಕಲಗಳು, ದಾಸಯ್ಯನ ತಿರುಪತಿಯಾತ್ರೆ, ದಾಸಪ್ಪನ ಪದಗಳು ಹೀಗೆ ಐದು ಅಧ್ಯಾಯಗಳಲ್ಲಿ ದಾಸಪ್ಪನನ್ನು ಪರಿಚಯಿಸಲಾಗುತ್ತದೆ. ಇದೊಂದು ಮಹತ್ವದ ಕೃತಿಯಾಗಿ ಗಮನ ಸೆಳೆಯುತ್ತದೆ.

ಡಾ. ಚಂದ್ರಶೇಖರ ಕಂಬಾರ ಅವರು ಸಂಪಾದಿಸಿರುವ 'ಕನ್ನಡ ಜಾನಪದ ವಿಶ್ವಕೋಶ'ದಲ್ಲಿ– ದಾಸದೀಕ್ಷೆ, ದಾಸಪ್ಪ, ದಾಸರಾಟ ಮತ್ತು ದಾಸರಿ ಎನ್ನುವ ಶೀರ್ಷಿಕೆಯಲ್ಲಿ ಕಿರು ಮಾಹಿತಿ ದಾಖಲುಗೊಂಡಿದೆ. ಕನ್ನಡ ಪುಸ್ತಕ ಪ್ರಾಧಿಕಾರದ ಜನಪದ ಮಾಲೆಯ 'ಜನಪದ ಕೈಪಿಡಿ'ಯಲ್ಲಿ ದಾಸರಾಟದ ವಿವರಣೆಯಿದೆ. ಮೈಸೂರು ವಿಶ್ವವಿದ್ಯಾಲಯ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ಹೊರತಂದಿರುವ 'ಕನ್ನಡ ವಿಶ್ವಕೋಶ' ಸಂಪುಟ– ಒಂಭತ್ತರಲ್ಲಿ ದೊಂಬಿದಾಸರ ಕುರಿತಾಗಿ ಮಾಹಿತಿಯಿದೆ. ಡಾ.ಜೀ. ವ್ಹಿ. ಸಂಪಾದಿಸಿರುವ– 'ಕನ್ನಡ ನಿಘಂಟು' ನಾಲ್ಕನೆಯ ಸಂಪುಟದಲ್ಲಿ ದಾಸ, ದಾಸಪಂಥ, ದಾಸರಿ ಪದಗಳ ಅರ್ಥವನ್ನು ವಿವರಿಸಲಾಗಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯವು ಹೊರತಂದಿರುವ ಡಾ.ಹಿ.ಚಿ. ಬೋರಲಿಂಗಯ್ಯನವರು ಸಂಪಾದಿಸಿದ–'ಕರ್ನಾಟಕ ಜನಪದ ಕಲೆಗಳ ಕೋಶ'ದಲ್ಲಿ ದಾಸರಾಟದ ಕಿರು ಪರಿಚಯವಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಕರ್ನಾಟಕ ರಾಜ್ಯಕೋಶ–ನಾಲ್ಕು: 'ಜನಸಮುದಾಯ' ಸಂಪುಟದಲ್ಲಿ ದಾಸ ಸಮುದಾಯದ ಉಪಜಾತಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳ ಚೆನ್ನದಾಸರ ಕ್ಷೇಮಾಭಿವೃದ್ಧಿ ಸಂಘವು ಪ್ರಕಟಿಸಿರುವ– 'ದಾಸಜನಾಂಗ' ವೆಂಬ ಕಿರುಪುಸ್ತಕ, ಕೇವಲ ೨೪ ಪುಟಗಳ ವ್ಯಾಪ್ತಿಯಲ್ಲಿದ್ದರೂ ದಾಸ ಸಮುದಾಯದ ಕುರಿತಾಗಿ ಉಪಯುಕ್ತ ಮತ್ತು ಮಹತ್ವದ ವಿಷಯಗಳನ್ನು ತಿಳಿಸುವ ಕುರುಹೊತ್ತಿಗೆಯ ದಾಖಲೆಯಾಗಿದೆ.

ಇವೆಲ್ಲವುಗಳನ್ನು ಅಧ್ಯಯನದ ಪೂರಕ ಸಾಮಗ್ರಿಯಾಗಿ ಬಳಸಿಕೊಂಡು, ಪ್ರಮುಖವಾಗಿ ಕ್ಷೇತ್ರಕಾರ್ಯವನ್ನು ಅವಲಂಭಿಸಿ ಸಾಂಸ್ಕೃತಿಕ ಅಧ್ಯಯನ ಕೈಕೊಂಡ ಹಿನ್ನಲೆಯಲ್ಲಿ ಮೂಡಿಬಂದ ಏಕೈಕ ಕೃತಿಯೆಂದರೆ, ಡಾ. ಯಲ್ಲಪ್ಪ ಬಿ. ಹಿಮ್ಮಡಿಯವರ 'ಚೆನ್ನದಾಸರ' ಕೃತಿಯಾಗಿದೆ. ಈ ಸಮುದಾಯವನ್ನು ಕುರಿತಾಗಿ ಬಂದಿರುವ ಅಧೀಕೃತ ಮಾಹಿತಿಯನ್ನು ಒದಗಿಸುವ ಗ್ರಂಥವಿದು. ಇಷ್ಟನ್ನು ಬಿಟ್ಟರೆ, ಚೆನ್ನದಾಸರ ಸಮುದಾಯದ ಅಧ್ಯಯನವಾಗಿಲ್ಲ. ಕರ್ನಾಟಕದ ಯಾವ ವಿಶ್ವವಿದ್ಯಾಲಯದಲ್ಲೂ ಎಂ.ಫಿಲ್. ಅಥವಾ ಪಿಎಚ್.ಡಿ.ಯಂಥ ಸಂಶೋಧನೆಗಳು ಈವರೆಗೆ ನಡೆದಿಲ್ಲ. ಆಧುನಿಕ ಜಗತ್ತಿಗೆ ಮುಖ ಮಾಡಿರುವ, ನಗರೀಕರಣಗಳಿಂದಾಗಿ ಬದುಕಿನ ಕ್ರಮ ಪಲ್ಲಟಗೊಂಡಿರುವ ಸಂದರ್ಭದಲ್ಲಿ ಈ ಜನಾಂಗದ ಅಧ್ಯಯನವಾಗಬೇಕಾದ ತುರ್ತು ಅವಶ್ಯಕತೆಯಿದೆ. ಈ ದಿಸೆಯಲ್ಲಿ ನಾನಿಟ್ಟಿರುವ ಪುಟ್ಟ ಹೆಜ್ಜೆಯಿದು.

ಕುಪ್ಪೆ ನಾಗರಾಜ ಅವರ 'ದೊಂಬಿದಾಸರು', ಕೋಟಗಾನಹಳ್ಳಿ ರಾಮಯ್ಯನವರ– 'ಸಿಂಧ್ ಮಾದಿಗರ ಸಂಸ್ಕೃತಿ', ಡಾ. ಜೀ. ಶಂ. ಪರಮಶಿವಯ್ಯನವರ 'ದೊಂಬಿ ದಾಸರ ಲಾವಣಿಗಳು', ಎಚ್.ಡಿ. ಪ್ರಶಾಂತ ಅವರ 'ಜನಸಮುದಾಯ', ಡಾ. ಕೆ. ಎಂ. ಮೇತ್ರಿ ಅವರ 'ಮರಗು ಭಾಷೆ', ಎ. ಎಸ್. ಪ್ರಭಾಕರ ಅವರ 'ಹೆಳವರು', ಡಾ. ಹರಿಲಾಲ್ ಪವಾರ ಅವರ 'ದಕ್ಕಲಿಗರು', ಡಾ. ರಹಮತ್ ತರೀಕೆರಿ ಅವರ 'ಪ್ರತಿ ಸಂಸ್ಕೃತಿ' ಕೃತಿಗಳು ಈ ಜನಾಂಗೀಯ ಅಧ್ಯಯನಕ್ಕೆ, ಸಮುದಾಯದ ತಿಳುವಳಿಕೆಗೆ ಪ್ರಶಸ್ತ ಪ್ರವೇಶಿಕೆಗಳಾಗಿವೆ. ವಿವಿಧ ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯಗಳು ತಮ್ಮದೆ ಆದ ರೀತಿಯಲ್ಲಿ ಕರ್ನಾಟಕದ ಹಿಂದುಳಿದ, ನಿರ್ಲಕ್ಷಕ್ಕೊಳಗಾದ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಕುರಿತಾಗಿ ಅಧ್ಯಯನ ಮಾಡಿವೆ. ಆದರೆ ಈ ನಿಟ್ಟಿನಲ್ಲಿ ಇನ್ನೂ ಸಾಗಬೇಕಾದ ದಾರಿ ದೂರವಿದೆ.

ಶತಶತಮಾನಗಳಿಂದ ತಮ್ಮದೆಯಾದ ಅಸ್ಮಿತೆ ಹಾಗೂ ಅನನ್ಯತೆಯನ್ನು ಉಳಿಸಿಕೊಂಡು ಬಂದಿರುವ ಅಲೆಮಾರಿ–ಅರೆಅಲೆಮಾರಿ ಸಮುದಾಯಗಳ ವಿಸ್ತೃತ ತಲಸ್ಪರ್ಶಿಯಾದ ಅಧ್ಯಯನ ಇನ್ನೂ ಮುಂದುವರೆಯಬೇಕಾಗಿದೆ. ಅಲೆಮಾರಿ–ಅರೆಅಲೆಮಾರಿ ಸಮುದಾಯಗಳ ಹಿನ್ನಲೆ, ಭಾರತೀಯ ಸಂದರ್ಭ, ಕರ್ನಾಟಕದಲ್ಲಿರುವ ಈ ಸಮುದಾಯಗಳ ಕುರಿತಾಗಿ ವಿಸ್ತೃತವಾಗಿ ಈ ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ. ಮುಂದುವರೆದು ಚೆನ್ನದಾಸರ ಸಮುದಾಯದ ಕುರಿತಾಗಿ ನಡೆದಿರುವ ಆರಂಭಿಕ ಅಧ್ಯಯನಗಳಾದ ಬ್ರಿಟಿಷ್ ಮಾದರಿ ಅಧ್ಯಯನ, ಪೂರ್ವಾಧ್ಯಯನಗಳ ಸಮೀಕ್ಷೆ, ಅಕಾಡೆಮಿ ಮತ್ತು ಪುಸ್ತಕ ಪ್ರಾಧಿಕಾರದ ಅಧ್ಯಯನಗಳು ಹಾಗೂ ಚೆನ್ನದಾಸರ ಸಮುದಾಯದ ಅಧ್ಯಯನ ನಡೆದುಬಂದ ದಾರಿಯನ್ನು ಪರಿಶೀಲಿಸಲಾಗಿದೆ. ಈ ಸಮುದಾಯದ

ಐತಿಹಾಸಿಕ ಮತ್ತು ಚಾರಿತ್ರಿಕ ನಡೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಈ ನಿಟ್ಟಿನಲ್ಲಿ ಚೆನ್ನದಾಸರ ಸಮುದಾಯದ ಕುರಿತಾಗಿ ಇಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

೧.೫. ಅಧ್ಯಾಯಗಳ ಸ್ವರೂಪ

"ಬೆಳಗಾವಿ ಜಿಲ್ಲೆಯ ಚೆನ್ನದಾಸರು: ಸಮುದಾಯ ಅಧ್ಯಯನ"ವೆಂಬ ಶೀರ್ಷಿಕೆಯ ಈ ಮಹಾ ಪ್ರಬಂಧವು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಒಂದನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಚೆನ್ನದಾಸರ ಸಮುದಾಯ ಸಾಗಿ ಬಂದ ದಾರಿ ಹಾಗೂ ಸ್ವರೂಪವನ್ನು ಒಳಗೊಂಡಿದೆ.

ಎರಡನೆಯ ಅಧ್ಯಾಯವು "ಕರ್ನಾಟಕದ ಅಲೆಮಾರಿಗಳು, ಅರೆ ಅಲೆಮಾರಿಗಳು". ಸಮುದಾಯದ ವಿವರಗಳನ್ನೊಳಗೊಂಡಿದೆ. ಇದರಲ್ಲಿ ಸರ್ವೇಕ್ಷಣ ಮತ್ತು ಗ್ಯಾಝುಟೀಯರಗಳನ್ನು ಆಧರಿಸಿ ಬ್ರಿಟಿಷ್ ಅಧ್ಯಯನದ ಮಾದರಿ ಸಂಶೋಧನೆಗಳನ್ನು ಆಧರಿಸಿರುವ ಎಂ.ಫಿಲ್, ಮತ್ತು ಪಿ.ಎಚ್.ಡಿ. ಅಧ್ಯಯನಗಳ ಮಾದರಿ, ಕರ್ನಾಟಕ ಸರ್ಕಾರದ ಅಧೀನ, ಆದರೆ ಸ್ವಾಯತ್ತ ಸಂಸ್ಥೆಗಳಾಗಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಪುಸ್ತಕ ಪ್ರಾಧಿಕಾರ ಮುಂತಾದವುಗಳು ಕೈಕೊಂಡ ಅಧ್ಯಯನದ ಮಾದರಿ, ಕರ್ನಾಟಕ ಸರ್ಕಾರದ ನೇರ ನಿಯಂತ್ರಣಕ್ಕೊಳಪಟ್ಟ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಆಯೋಗಗಳು ನೀಡಿದ ವರದಿಯನ್ನು ವಿವರಿಸಲಾಗಿದೆ. ಚೆನ್ನದಾಸರ ಸಮುದಾಯ ಅಧ್ಯಯನ ನಡೆದು ಬಂದ ದಾರಿಯನ್ನು ವಿವೇಚಿಸಲಾಗಿದೆ.

ಮೂರನೆಯ ಅಧ್ಯಾಯವು "ಕರ್ನಾಟಕದ ಚೆನ್ನದಾಸರ ಸಮುದಾಯದ ಹಿನ್ನೆಲೆ ಹಾಗೂ ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ವೈಶಿಷ್ಟ್ಯತೆಗಳು". ಇದರಲ್ಲಿ ಸಮುದಾಯದ ದಾಸ, ದಾಸರಿ, ದಾಸರು, ಚೆನ್ನದಾಸರು ಪದಗಳ ನಿಷ್ಪತ್ತಿ ಕುರಿತಾಗಿರುವ ಚರ್ಚೆಯಿದೆ. ಕರ್ನಾಟಕದಲ್ಲಿ ಚೆನ್ನದಾಸರ ಸಮುದಾಯದ ಉಪನಾಮಗಳನ್ನು ಚರ್ಚಿಸಿ, ಈ ಸಮುದಾಯದ ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆಯನ್ನು ವಿವರಿಸಲಾಗಿದೆ. ಈ ಸಮುದಾಯದ ಮೂಲ ಮತ್ತು ಪರ್ಯಟನೆಗಳನ್ನು ಸಾದ್ಯಂತವಾಗಿ ಅಧ್ಯಯನಿಸಲಾಗಿದೆ. ಮುಂದುವರೆದು, "ಬೆಳಗಾವಿ ಜಿಲ್ಲೆಯ ಚೆನ್ನದಾಸರು: ಸಮುದಾಯದ ವೈಶಿಷ್ಟ್ಯತೆ"ಗಳಲ್ಲಿ ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ಭೌಗೋಳಿಕ ವ್ಯಾಪ್ತಿ, ಪ್ರಸಾರದ ನೆಲೆಗಳು, ಕಲಾ ಪದ್ಧತಿ (ಬಳಿ ಬೆಡಗು)ಗಳನ್ನು ಗುರುತಿಸಿ ವಿವರಿಸಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ವಾಸವಾಗಿರುವ ಚೆನ್ನದಾಸರ

ಸಮೂಹದ ಜನಸಂಖ್ಯೆ, ಸಾಕ್ಷರತೆ ಪ್ರಮಾಣಗಳನ್ನು ದಾಖಲಿಸಲಾಗಿದೆ. ಕಥೆ, ಹಾಡು, ನಂಬಿಕೆ, ರಂಗಭೂಮಿ ಇತ್ಯಾದಿ ಸಮುದಾಯದ ಸಾಹಿತ್ಯವನ್ನು ಪರಿಚಯಿಸಿ ಸಂದರ್ಭಾನುಸಾರವಾಗಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವು "ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ದೈವಗಳು ಹಾಗೂ ಸಾಮಾಜಿಕ ಜೀವನ ವಿಧಾನ ಹಾಗೂ ಆರ್ಥಿಕ–ರಾಜಕೀಯ ಸ್ಥಿತಿಗತಿ". ಇದರಲ್ಲಿ ಚೆನ್ನದಾಸರ ಸಮುದಾಯದ ದೈವಗಳು, ಹಬ್ಬ ಮತ್ತು ದೈವತಾರಾಧನೆಗಳನ್ನು ಸ್ಥೂಲವಾಗಿ ಪರಿಚಯಿಸಲಾಗಿದೆ. ಜನನ, ನಾಮಕರಣ, ಋತುಮತಿ, ಮದುವೆ, ಸೀಮಂತ, ಮರಣ ಮುಂತಾದ ಸಂಪ್ರದಾಯಗಳನ್ನು ವಿವರಿಸಲಾಗಿದೆ. ಹಾಗೆಯೆ ಸಮುದಾಯದ ನ್ಯಾಯಾಂಗ ವ್ಯವಸ್ಥೆ, ವೈದ್ಯಕೀಯ ಪದ್ಧತಿ ಮತ್ತು ವೇಷಭೂಷಣಗಳು ಅವುಗಳ ಅಸ್ಮಿತೆಯನ್ನು ದಾಖಲಿಸಲಾಗಿದೆ. "ಚೆನ್ನದಾಸರ ಸಮುದಾಯದ ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿ"ಯ ಅಧ್ಯಯನವಿದೆ. ಇದರಲ್ಲಿ ಮುಖ್ಯವಾಗಿ ಮೂರು ಭಾಗಗಳಿವೆ. ಆರ್ಥಿಕ, ಉದ್ಯೋಗ, ಮತ್ತು ರಾಜಕೀಯವೆಂದು ಅಧ್ಯಯನದ ಅನುಕೂಲಕ್ಕಾಗಿ ವಿಭಜಿಸಲಾಗಿದೆ. 'ಆರ್ಥಿಕ' ಹಿನ್ನೆಲೆ'ಯಲ್ಲಿ ಕಸುಬುಗಳಾದ ಭಿಕ್ಷೆ, ಬೇಟೆ, ಕೌದಿಹೊಲೆಯುವುದು, ಕೂಲಿ ಮಾಡುವುದನ್ನು ಚರ್ಚಿಸಲಾಗಿದೆ. ಉಪಕಸುಬುಗಳಾಗಿ ಮಾರಾಟ, ಪಶುಪಾಲನೆ, ಕೃಷಿ ಚಟುವಟಿಕೆಗಳಿವೆ. ಸರಾಯಿ ತಯಾರಿಕೆ ಮತ್ತು ಮಾರುವುದು, ಹೂ ಮಾರುವುದು ಇತರ ಕಸುಬುಗಳನ್ನು ಪರಿಚಯಿಸಲಾಗಿದೆ. 'ಉದ್ಯೋಗ'ದಲ್ಲಿ ಸರಕಾರಿ, ಅರೆಸರಕಾರಿ, ವ್ಯಾಪಾರ, ಗುತ್ತಿಗೆ ಇತ್ಯಾದಿಗಳನ್ನು ವಿವರಿಸಲಾಗಿದೆ. ರಾಜಕೀಯವಾಗಿ ಮತದಾರರಾಗಿ ಬಲವರ್ಧನೆ, ಪಕ್ಷಗಳಾಗಿ ಬಲವರ್ಧನೆ, ಪ್ರಜ್ಞೆ ಮತ್ತು ಪ್ರಯತ್ನ, ಕಾರಣ ಮತ್ತು ಪರಿಹಾರೋಪಾಯಗಳನ್ನು ಗುರುತಿಸಲಾಗಿದೆ.

ಐದನೆಯ ಅಧ್ಯಾಯವು "ಚೆನ್ನದಾಸರು ಸಮುದಾಯದ ಪ್ರಚಲಿತ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು". ಇದರಲ್ಲಿ ಸಮುದಾಯದ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರೋಪಾ ಯಗಳನ್ನು ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ "ಸಮಾರೋಪ"ವಾಗಿದೆ. ಇದರಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ದಾಖಲಿಸಲಾಗಿದೆ. ಇದು ಸ್ಥೂಲವಾಗಿ ಮಹಾಪ್ರಬಂಧದ ಸ್ವರೂಪವಾಗಿದೆ.

*****

ಅಧ್ಯಾಯ ಎರಡು

ಕರ್ನಾಟಕದ ಅಲೆಮಾರಿ-ಅರೆ ಅಲೆಮಾರಿ ಸಮುದಾಯಗಳು

೨.೧. ಬ್ರಿಟಿಷ್ ಮಾದರಿ ಅಧ್ಯಯನ

೨.೨. ಪೂರ್ವಾಧ್ಯಯನಗಳ ಸಮೀಕ್ಷೆ

೨.೩. ಅಕಾಡೆಮಿ ಹಾಗೂ ಪುಸ್ತಕ ಪ್ರಾಧಿಕಾರದ ಅಧ್ಯಯನಗಳು

೨.೪. ಬೆಳಗಾವಿ ಜಿಲ್ಲೆಯ ಚಾರಿತ್ರಿಕ ಹಿನ್ನಲೆ

ಅಧ್ಯಾಯ ಎರಡು

ಕರ್ನಾಟಕದ ಅಲೆಮಾರಿ–ಅರೆ ಅಲೆಮಾರಿ ಸಮುದಾಯಗಳು

ಭಾರತವು ಬಹು ಸಂಸ್ಕೃತಿಯ ನಾಡು, ಹಲವು ಸಮುದಾಯಗಳ ಬೀಡು. ಅಲೆಮಾರಿಗಳೇ ಭಾರತದ ಮೂಲ ನಿವಾಸಿಗಳು. ಇವರೆ ವಿಶ್ವದ ಮೊದಲ ಆದಿವಾಸಿಗಳು. ಅಲೆಮಾರಿ–ಅರೆಅಲೆಮಾರಿಗಳು ಪರಿಸರದ ಶಿಶುಗಳಾಗಿ ಬಾಳುತ್ತ ಬಂದಿದ್ದಾರೆ. ಮಾನವ ಸಮಾಜ ಜೀವಿ. ಸಮುದಾಯದಲ್ಲಿ ಬೆಳೆದುಬಂದ ಅದಿಮ ಕಾಲದಿಂದ ಆದಿಮಾನವನಿಗೆ ಸಂಘಟನೆ ಅನಿವಾರ್ಯವಾಗಿತ್ತು. ಆಹಾರ ಸಂಗ್ರಹ, ಬೇಟೆಯಾಡುವುದು, ವಾಸ್ತವ್ಯ ಇವೆಲ್ಲ ಸಂದರ್ಭಗಳಲ್ಲಿ ಸಮೂಹದಲ್ಲಿದ್ದರೆ ಹೆಚ್ಚು ಅನುಕೂಲ. ಗೆಡ್ಡೆ–ಗೆಣಸು ಮತ್ತು ಪ್ರಾಣಿಗಳ ಮಾಂಸವನ್ನು ಅವಲಂಭಿಸಿದ ಮಾನವ ಆಹಾರ ಸಂಗ್ರಹಣೆಗಾಗಿ ಲೆಯುವುದು ಅನಿವಾರ್ಯವಾಗಿತ್ತು.

ಆರಂಭಿಕ ಕಾಲದಲ್ಲಿ ಮಾನವನ ಜೀವನ ಅಲೆಮಾರಿಯಾಗಿತ್ತು. ಬೇಟೆಯ ನಂತರ ಪಶುಸಂಗೋಪನೆಯ ಹಂತದಲ್ಲಿಯೂ ಇದೇ ಜೀವನ ವಿಧಾನ ಮುಂದುವರೆದಿತ್ತು. ಮಳೆಗಾಲ, ಚಳಿಗಾಲ ಹಾಗೂ ಬೇಸಿಗೆ ಕಾಲದಲ್ಲಿ ಕಾಲಕ್ಕನುಗುಣವಾಗಿ ಅಲೆಮಾರಿ ಜೀವನ ನಡೆಸುತ್ತಿದ್ದನು. ಪಶುಗಳ ಆಹಾರ ಮತ್ತು ತನ್ನ ಉಳಿವಿಗಾಗಿ ಅಲೆಮಾರಿ ಜೀವನ ಅವಲಂಭಿಸಿದ್ದನು. ಕೃಷಿಯ ಹಂತದಲ್ಲಿ ಸ್ಥಿರವಾಗಿ ನೆಲೆನಿಂತರೂ ಭಾರತದ ಎಲ್ಲ ಸಮುದಾಯಗಳು ಕೃಷಿ ಕಾಯಕವನ್ನು ಕೈಕೊಳ್ಳಲಿಲ್ಲ. ಕೆಲ ಸಮುದಾಯಗಳು ಒಕ್ಕಲತನವನ್ನು ಅವಲಂಭಿಸಿ ಸ್ಥಿರವಾಗಿ ನೆಲೆ ನಿಂತವು. ಇನ್ನುಳಿದ ಬಹುಪಾಲು ಸಮುದಾಯಗಳು ಅಲೆಮಾರಿ, ಅರೆಅಲೆಮಾರಿ ಜೀವನವನ್ನೇ ಮುಂದುವರೆಸಿದವು. ಆಯಾ ಸಮುದಾಯಗಳ ಜೀವನ ವಿಧಾನ ಮತ್ತು ಭಾರತದ ಭೌಗೋಳಿಕ ಸ್ಥಿತಿಗತಿಯು ಇದಕ್ಕೆ ಕಾರಣವಾಗಿದೆ.

ಸಾವಿರಾರು ವರುಷಗಳು ಗತಿಸಿದರೂ ಅಲೆಮಾರಿ, ಅರೆಅಲೆಮಾರಿ ಸಮುದಾಯಗಳು ತಮ್ಮ ಬದುಕನ್ನು ಹಾಗೆಯೇ ಮುಂದುವರೆಸಿಕೊಂಡು ಬಂದವು. ಮುಖ್ಯವಾಗಿ ಆಹಾರ ಸಂಗ್ರಹಣೆಗಾಗಿ ಈ ಸಮುದಾಯಗಳಿಗೆ ಅಲೆಮಾರಿ ಬದುಕು ಅನಿವಾರ್ಯವಾಗಿತ್ತು. "ಇವತ್ತಿಗೂ ಇಂಡಿಯಾದ ಬಹುತೇಕ ಅಲೆಮಾರಿಗಳು ಈ ದೇಶದ ಶ್ರೇಣಿಕೃತ ವ್ಯವಸ್ಥೆಯ ಕಾರಣಕ್ಕಾಗಿಯೇ

ರೂಪುಗೊಂಡವರು. ಭಾರತೀಯ ಸಮಾಜದ ಇಂತಹುದೇ ಕಾಲಘಟ್ಟದಲ್ಲಿ ಅಲೆಮಾರಿಗಳು ಸೃಷ್ಟಿಯಾದರೆಂದು ಹೇಳಲಾಗುವುದಿಲ್ಲ. ಭಾರತದ ಸಮಾಜ ಎಷ್ಟು ಸಂಕೀರ್ಣವೋ ಆ ವ್ಯವಸ್ಥೆಯ ಅಂತರ್ಗತ ಭಾಗವಾಗಿರುವ ಅಲೆಮಾರಿಗಳು ರೂಪುಗೊಳ್ಳುವುದಕ್ಕೆ ಕಾರಣವಾಗಿರುವ ಸಾಮಾಜಿಕ, ಆರ್ಥಿಕ ಸಂಗತಿಗಳು ಅಷ್ಟೇ ಸಂಕೀರ್ಣವಾಗಿವೆ. ಶ್ರೇಣೀಕರಣದ ಕಾರಣಕ್ಕಾಗಿ ಇಂಡಿಯಾದಲ್ಲಿ ಬದುಕುತ್ತಿರುವ ದುಡಿಯುವ ಕೆಳಜಾತಿ ಸಮುದಾಯಗಳು ಯಾವ ಹಂತಗಳಲ್ಲಿ ಬಂದಿರುವವೊ ಆ ಎಲ್ಲ ಹಂತಗಳಲ್ಲಿ ಅಲೆಮಾರಿಗಳು ಹಾದು ಬಂದಿದ್ದಾರೆ. ಭಾರತದ ರಾಜಕೀಯ, ಆರ್ಥಿಕ ಚಲನೆಗಳು ಇಲ್ಲಿನ ಉತ್ಪಾದನಾ ಸಂಬಂಧಗಳನ್ನು ಸ್ಪಷ್ಟವಾಗಿ ನಿಯಂತ್ರಿಸಿವೆ. ಈ ಕಾರಣಕ್ಕಾಗಿ ಭಾರತದ ಸಮಾಜವು ಹಲವು ಸ್ತರಗಳಲ್ಲಿ ಛಿದ್ರವಾಗಿದೆ”[೧] ಈ ಮಾತು ಅಷ್ಟೆ ಸತ್ಯವಾಗಿದೆ. ಇಂಥಹ ಸಮಸ್ಯೆಗಳನ್ನು ಎದುರಿಸಿ ಇಂದಿಗೂ ತನ್ನ ಛಾಪನ್ನು ಉಳಿಸಿಕೊಂಡು ಛಿದ್ರಗೊಂಡರೂ ಸಹ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದ ಸಮುದಾಯಗಳಲ್ಲಿ ಚೆನ್ನದಾಸರ ಸಮುದಾಯವೂ ಒಂದು.

ಕರ್ನಾಟಕದಲ್ಲಿ ೫೯ ವಿಮುಕ್ತ ಅಲೆಮಾರಿ ಮತ್ತು ಅರೆಅಲೆಮಾರಿ ಬುಡಕಟ್ಟುಗಳು ಇರುವುದನ್ನು ವಿದ್ವಾಂಸರು ಶೋಧಿಸಿದ್ದಾರೆ. ಇವುಗಳನ್ನು ಭಾರತೀಯ ಸಂವಿಧಾನಕ್ಕೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳನ್ನಾಗಿ ವಿಂಗಡಿಸಲಾಗಿದೆ. ಬೈರಾಗಿ, ಬಾಜಿಗರ್, ಭರಾಡಿ, ಬುಡಬುಡಕಿ, ಜೋಶಿ, ಗೊಂಧಳಿ, ಛಾರಾ, ಡೋಳಿ, ಡವೇರಿ, ದೊಂಬಾರಿ, ಘಿಸಾಡಿ, ಗಾರೂಡಿ, ಗೋಪಾಲ, ಹೆಳವ, ಜೋಗಿ, ಬೇಲಕಾರಿ, ಕೋಲ್ಹಾಟಿ, ನಂದಿಮಲಾ, ಫೂಲಮಾಳಿ, ಗೋಸಾವಿ, ನೀರಶಿಕಾರಿ, ಸುಡಗಾಡಸಿದ್ದ, ತಿರುಮಾಲಿ, ವಡಿ, ದುರ್ಗಮುರ್ಗಿ, ಹಾವಗಾರ, ಹಾವಾಡಿಗ, ಕಟಬು, ದರವೇಶ, ಮದಾರಿ, ಹಂಡಿಜೋಗಿ, ದೊಂಬಿದಾಸ, ಬೈಲಪತ್ತಾರ ಮುಂತಾದ ಸಮುದಾಯಗಳನ್ನು ಕರ್ನಾಟಕದಲ್ಲಿ ಈವರೆಗೆ ಗುರುತಿಸಲಾಗಿದೆ. ಇವರಲ್ಲಿ ಚೆನ್ನದಾಸರ ಸಮುದಾಯವು ಒಂದಾಗಿದೆ. ಈ ಅಲೆಮಾರಿ ಸಮುದಾಯದ ಅಧ್ಯಯನ ಸಾಗಿ ಬಂದ ದಾರಿ ಮತ್ತು ಅದರ ಮಾದರಿಯನ್ನು ಇಲ್ಲಿ ಅವಲೋಕಿಸಲಾಗಿದೆ.

ವಸಾಹತುಶಾಹಿ ಆಳ್ವಿಕೆಯ ಕಾಲದ ಭಾರತದಲ್ಲಿ ಪ್ರಥಮ ಬಾರಿಗೆ ಜನಗಣತಿ ಪ್ರಾರಂಭಗೊಂಡಿತು. “೧೮೮೧ರ ಭಾರತೀಯ ಜನಗಣತಿಯ ಪ್ರಕಾರ ೧೯೨೯ ಜಾತಿ ಮತ್ತು ಬುಡಕಟ್ಟು ಸಮುದಾಯಗಳು ಇರುವುದು ಕಂಡು ಬಂದಿದೆ. ಭಾರತೀಯ ಮಾನವ ಸರ್ವೇಕ್ಷಣೆ ಸಂಸ್ಥೆಯ ಅಧ್ಯಯನ ವರದಿಯಲ್ಲಿ (೨ನೇ ಅಕ್ಟೋಬರ್ ೧೯೮೫ರಿಂದ ೩೧ ಮಾರ್ಚ ೧೯೯೨ ರವರೆಗೆ) ೬೭೪೮ ಸಮುದಾಯಗಳನ್ನು ಗುರುತಿಸಲಾಗಿದೆ. ಅದರಲ್ಲಿ ೪೬೩೫ ಜನಸಮುದಾಯಗಳ

ಅಧ್ಯಯನ ಸಾಧ್ಯವಾಗಿದೆ."[೨] ಇದರಿಂದ ಭಾರತದಲ್ಲಿರುವ ಅಲೆಮಾರಿ ಮತ್ತು ಅರೆಅಲೆಮಾರಿಗಳ ಸಮುದಾಯವನ್ನು ಗುರುತಿಸುವುದು ಸುಲಭವಾಗಿದೆ.

"ಅಲೆಮಾರಿ ಮತ್ತು ಅರೆಅಲೆಮಾರಿ ಬುಡಕಟ್ಟುಗಳ ಆಯೋಗದ ಅಂದಾಜು ಪಟ್ಟಿಯ ಪ್ರಕಾರ ಭಾರತದ ಎರಡು(೨) ರಾಜ್ಯಗಳಲ್ಲಿ ಮತ್ತು ಐದು (೫) ಕೇಂದ್ರಾಡಳಿತ ಪ್ರದೇಶದಲ್ಲಿ ಒಟ್ಟು ಎಳುನೂರ ನಾಲ್ವತ್ತೊಂಬತ್ತು (೭೪೯) ವಿಮುಕ್ತ ಮತ್ತು ಅಲೆಮಾರಿ ಸಮುದಾಯಗಳು ಅಸ್ತಿತ್ವದಲ್ಲಿವೆ. ಮಹಾರಾಷ್ಟ್ರದಲ್ಲಿ ಎಪ್ಪತ್ತು ಮೂರು (೭೩) ಸಮುದಾಯಗಳು ಅಸ್ತಿತ್ವದಲ್ಲಿದ್ದರೆ, ಕರ್ನಾಟಕದಲ್ಲಿ ಐವತ್ತರೊಂಬತ್ತು (೫೯) ಅಲೆಮಾರಿ ಸಮುದಾಯಗಳಿವೆ"[೩] ಎಂದು ಡಾ. ಕೆ.ಎಂ. ಮೇತ್ರಿಯವರು ಹೇಳಿರುವುದು ಗಮನಾರ್ಹವಾಗಿದೆ. ಸಮಾಜಶಾಸ್ತ್ರಜ್ಞರು, ಮಾನವ ಜನಾಂಗದ ಅಧ್ಯಯನಕಾರರು, ಜಾನಪದ ವಿದ್ವಾಂಸರು ಅಲೆಮಾರಿ ಮತ್ತು ಅರೆಅಲೆಮಾರಿ ಸಮುದಾಯಗಳ ಅಧ್ಯಯನ ಕೈಗೊಂಡಿದ್ದಾರೆ. ಹೀಗಿದ್ದರೂ ಕೆಲವು ಸಮುದಾಯಗಳು ಇನ್ನೂ ಅಧ್ಯಯನಕ್ಕೆ ಒಳಪಡಬೇಕಾಗಿದೆ. ಅಂತಹ ಅಧ್ಯಯನಕ್ಕೊಳಪಡಬೇಕಾದ ಸಮುದಾಯಗಳಲ್ಲಿ ಪ್ರಸ್ತುತ ಅಧ್ಯಯನದ ಚೆನ್ನದಾಸರು ಸಮುದಾಯವೂ ಒಂದು.

ಕರ್ನಾಟಕದ ಅಲೆಮಾರಿ ಮತ್ತು ಅರೆಅಲೆಮಾರಿ, ಬುಡಕಟ್ಟು ಸಮುದಾಯಗಳನ್ನು ಕುರಿತಾಗಿ ಕರ್ನಾಟಕದ ಅನೇಕ ಸಂಘ-ಸಂಸ್ಥೆಗಳು, ಹಲವು ಇಲಾಖೆಗಳು ಅಧ್ಯಯನಗೈದಿವೆ. ಅವುಗಳೆಂದರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಎಂ.ಫಿಲ್. ಹಾಗೂ ಪಿ.ಎಚ್.ಡಿ. ಅಧ್ಯಯನಗಳು ಹಾಗೂ ಕರ್ನಾಟಕ ಸರಕಾರದ ಸಹಯೋಗದೊಂದಿಗೆ ವಿವಿಧ ಸಂಸ್ಥೆಗಳು ಕೈಗೊಂಡ ಸಂಶೋಧನೆ ಮತ್ತು ಸಮೀಕ್ಷೆಗಳು ಗಮನಾರ್ಹವಾಗಿವೆ.

ಪ್ರಸ್ತುತ ಅಧ್ಯಾಯದಲ್ಲಿ ಕರ್ನಾಟಕದ ಅಲೆಮಾರಿ-ಅರೆಅಲೆಮಾರಿ ಸಮುದಾಯಗಳ ಹಿನ್ನಲೆಯನ್ನು ಪರಿಶೀಲಿಸಲಾಗುವುದು. ಅಧ್ಯಯನಕ್ಕೆ ಅನುಕೂಲವಾಗುವಂತೆ ಬ್ರಿಟಿಷ್ ಅಧ್ಯಯನ ಮಾದರಿಯಲ್ಲಿ ಈ ಸಮುದಾಯದ ಅಧ್ಯಯನ ನಡೆದು ಬಂದ ದಾರಿ, ಅವರ ಕಾಲದಲ್ಲಿ ರಚನೆಗೊಂಡ ಸಾಹಿತ್ಯ ಮುಂತಾದವುಗಳನ್ನು ಅವಲೋಕಿಸಲಾಗಿದೆ. ಪೂರ್ವಾಧ್ಯಯನಗಳ ಸಮೀಕ್ಷೆಯಲ್ಲಿ ಈ ಸಮುದಾಯದ ಕುರಿತು ರಚನೆಗೊಂಡ ಗ್ರಂಥಗಳು, ಲೇಖನಗಳು, ಪ್ರಬಂಧಗಳು ಮುಂತಾದವುಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಪುಸ್ತಕ ಪ್ರಾಧಿಕಾರದ ಅಧ್ಯಯನಗಳು, ಬೆಳಗಾವಿ ಜಿಲ್ಲೆಯ ಚಾರಿತ್ರಿಕ ಹಿನ್ನಲೆಯನ್ನು ಅವಲೋಕಿಸಲಾಗಿದೆ.

೨.೧. ಬ್ರಿಟಿಷ್ ಮಾದರಿ ಅಧ್ಯಯನ

ಬ್ರಿಟಿಷ್ ಸರಕಾರ ಉತ್ತರ ಭಾರತದಲ್ಲಿ ೧೮೭೧ರಲ್ಲಿ ಪ್ರಕೃತಿ ಅವಲಂಭಿತ ಮತ್ತು ತನ್ನ ಆಡಳಿತದ ವ್ಯಾಪ್ತಿಗೆ ಬಾರದಿರುವ ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಪರಾಧಿ ಬುಡಕಟ್ಟುಗಳೆಂದು ಘೋಷಿಸಿ ಅಧಿಸೂಚನೆ ಹೊರಡಿಸಿತ್ತು. ಈ ಅಧಿನಿಯಮವನ್ನು ೧೯೧೧ರಲ್ಲಿ ಬ್ರಿಟಿಷ್‌ರು ಆಳುವ ಬ್ರಿಟಿಷ್ ಭಾರತದಲ್ಲಿ ಪರಿಷ್ಕರಣೆ ಮಾಡಿ ವಿಸ್ತರಿಸಿ ಜಾರಿಗೊಳಿಸಿದರು. ಮುಂದೆ ೧೮೯೭, ೧೯೧೧, ೧೯೨೩, ೧೯೨೪ ಮತ್ತು ೧೯೪೭ರಲ್ಲಿ ಈ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ಪುನ: ಪರಿಷ್ಕರಿಸಿ ಜಾರಿಗೊಳಿಸಲಾಯಿತು. ಇದು ಬುಡಕಟ್ಟು ಸಮುದಾಯದ ಹಿತ ಕಾಪಾಡುವ ಉದ್ದೇಶವಾಗಿರದೆ, ಪೋಲಿಸರಿಗೆ ಈ ಗುಂಪುಗಳನ್ನು ಬಂಧಿಸಲು, ದಂಡಿಸಲು ಹಾಗೂ ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಅನುಕೂಲ ಕಲ್ಪಿಸಲಾಯಿತು. ಈ ಸಮುದಾಯಗಳನ್ನು ವಸಾಹತುಗಳಲ್ಲಿ ಬೇಲಿ ಹಾಕಿ ಕಾದಿಡಲಾಗಿತ್ತು. ಇವರು ದಿನಂಪ್ರತಿ ಅಲ್ಲಿಯ ಅಧಿಕಾರಿಗಳಿಗೆ ಹಾಜರಿ ನೀಡುವುದು ಕಡ್ಡಾಯವಾಗಿತ್ತು. ಈ ಸಮುದಾಯಗಳ ವಸಾಹತುಗಳೇ ಅವರ ಪಾಲಿಗೆ ಜೈಲುಗಳಾಗಿ ಪರಿವರ್ತನೆಗೊಂಡಿದ್ದವು. ಇವರ ಮಕ್ಕಳಿಗಾಗಿ ಶಾಲೆಗಳನ್ನು ಆರಂಭಿಸಲಾಗಿತ್ತು. ಸಮುದಾಯದ ಹಿರಿಯರಿಗೆ ತರಬೇತಿ ನೀಡಲು ಕೇಂದ್ರಗಳನ್ನು ಪ್ರಾರಂಭಿಸಿ, ಅದರ ಉಸ್ತುವಾರಿಗೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಯನ್ನು ನೇಮಿಸಲಾಗಿತ್ತು.

ಬ್ರಿಟಿಷ್‌ರು ಅಪರಾಧಿಗಳೆಂದು ಪರಿಗಣಿಸಿದ ಬುಡಕಟ್ಟುಗಳ ವಸಾಹತುಗಳು ಕರ್ನಾಟಕದಲ್ಲಿ ಗದಗ, ಹುಬ್ಬಳ್ಳಿ, ಧಾರವಾಡ, ಬಾಗಲಕೋಟ, ಬಿಜಾಪೂರ, ಬೆಳಗಾವಿ ಮುಂತಾದ ಸ್ಥಳಗಳಲ್ಲಿ ಸ್ಥಾಪಿತವಾದವು. ಯಾರೋ ಓರ್ವ ವ್ಯಕ್ತಿ ಮಾಡಿದ ತಪ್ಪನ್ನು ಇಡೀ ಸಮುದಾಯಕ್ಕೆ ಆರೋಪಿಸಿ ಶಿಕ್ಷೆಗೊಳಪಡಿಸುವಂತ ಕ್ರೂರ ವ್ಯವಸ್ಥೆ ಇದಾಗಿತ್ತು. ವ್ಯಕ್ತಿಗತ ತಪ್ಪು ಅಥವಾ ಅಪರಾಧಗಳನ್ನು ಸಮುದಾಯಕ್ಕೆ ವರ್ಗಾಯಿಸುವುದು ತಪ್ಪೆಂಬುದು ೧೯೪೭ರಲ್ಲಿ ಮದ್ರಾಸ್ ಹಾಗೂ ೧೯೪೯ರಲ್ಲಿ ಮುಂಬೈ ಪ್ರಾಂತಗಳಲ್ಲಿ ಸರಕಾರ ಅಪರಾಧಿ ಬುಡಕಟ್ಟು ಅಧಿನಿಯಮವನ್ನು ಹಿಂಪಡೆಯಿತು.

ಭಾರತೀಯ ಅಪರಾಧಿ ಬುಡಕಟ್ಟುಗಳ ತನಿಖಾ ಸಮಿತಿಯ ಮೌಲ್ಯಮಾಪನದ ವರದಿಯ ಮೇರೆಗೆ ೧೯೫೨ರಲ್ಲಿ ಅಪರಾಧಿ ಬುಡಕಟ್ಟುಗಳನ್ನು ವಿಮುಕ್ತಗೊಳಿಸಲು ಈ ಸಂಬಂಧದ ಅಧಿನಿಯಮವನ್ನು ರದ್ದುಪಡಿಸಲಾಯಿತು. ಅಂದಿನಿಂದ ಈ ಸಮುದಾಯಗಳನ್ನು ಗುರುತಿಸಿ ಅವುಗಳಿಗೆ ಪ್ರತ್ಯೇಕ ಸೌಲಭ್ಯ ಕಲ್ಪಿಸುವ ವ್ಯವಸ್ಥೆಯಾಯಿತು ಎಂದು ತಿಳಿದು ಬರುತ್ತದೆ. ೧೯೬೧ರ ಜನಗಣತಿಯ ಪ್ರಕಾರ ಭಾರತದಲ್ಲಿ ೨,೭೧,೦೨,೧೮೦ ಜನರು ಈ ಹಿನ್ನೆಲೆಯನ್ನು ಹೊಂದಿದ್ದರೆಂದು

ದಾಖಲೆಗಳಿಂದ ಗೊತ್ತಾಗುತ್ತದೆ.[5] ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆ ಡಾ. ಅಂಬೇಡ್ಕರ ಅವರ ಸುಧಾರಣಾವಾದಿ ನಿಲುವು ಸಾಮಾಜಿಕ ಕಳಕಳಿಯ ಫಲವಾಗಿ ವಿಮುಕ್ತ, ಅಲೆಮಾರಿ, ಅರೆಅಲೆಮಾರಿ ಬುಡಕಟ್ಟುಗಳನ್ನು ಮತ್ತು ದಲಿತ ಸಮುದಾಯಗಳನ್ನು ಸಂವಿಧಾನ ಬದ್ಧವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಯಾದಿಯಲ್ಲಿ ಸೇರ್ಪಡೆಗೊಳಿಸಲಾಗಿದೆ. ಸಂಪೂರ್ಣ ನೆಲೆ ನಿಲ್ಲದ ಮತ್ತು ಅತಂತ್ರ ಸ್ಥಿತಿಯಲ್ಲಿರುವ ಹಲವಾರು ಸಮುದಾಯಗಳು ಕರ್ನಾಟಕ ರಾಜ್ಯದ ತುಂಬ ಹರಡಿವೆ. ಈ ಸಮುದಾಯಗಳಲ್ಲಿ ಸಾಕ್ಷರತೆ ವಿರಳವಾಗಿದೆ. ಸಾಮಾಜಿಕ ಮತ್ತು ಆರ್ಥಿಕವಾಗಿಯೂ ಇವರು ತುಂಬ ದುಸ್ಥಿತಿಯಲ್ಲಿದ್ದಾರೆ.

೨.೨. ಪೂರ್ವಾಧ್ಯಯನಗಳ ಸಮೀಕ್ಷೆ

ಸ್ವಾತಂತ್ರ್ಯ ಭಾರತದಲ್ಲಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯಗಳ ಕುರಿತಾಗಿ ಜಾಗೃತಿ ಮೂಡಿತು. ಗಾಂಧೀಜಿಯವರ ಉದಾರ ಮಾನವತಾವಾದ, ಅಂಬೇಡ್ಕರ್‌ರ ಸಾಮಾಜಿಕ ಕಾಳಜಿ, ಸಮಾಜ ಸುಧಾರಕರ ನಿರಂತರ ಪ್ರಯತ್ನದ ಫಲವಾಗಿ ಅಲೆಮಾರಿಗಳ ಅಧ್ಯಯನಕ್ಕೆ ಹೊಸ ತಿರುವು ಲಭಿಸಿತು. ವಿಶ್ವವಿದ್ಯಾಲಯಗಳು ಬುಡಕಟ್ಟು ಜನಾಂಗ, ಅಲೆಮಾರಿ ಸಮುದಾಯವನ್ನು ಅಧ್ಯಯನಕ್ಕೆ ಎತ್ತಿಕೊಂಡವು. ಸಮಾಜಶಾಸ್ತ್ರಿಯ ಅಧ್ಯಯನ ವಿಭಾಗ, ಬುಡಕಟ್ಟು ಅಧ್ಯಯನ ವಿಭಾಗ, ಮಾನವಶಾಸ್ತ್ರ ವಿಭಾಗ, ಜಾನಪದ ವಿಜ್ಞಾನ ವಿಭಾಗ ಹಾಗೂ ಅಭಿವೃದ್ಧಿ ಅಧ್ಯಯನ ವಿಭಾಗಗಳು ಕರ್ನಾಟಕ ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪನೆಗೊಂಡು ಸಂಶೋಧನೆಯಲ್ಲಿ ತೊಡಗಿಸಿಕೊಂಡವು. ಇದರಂತೆ ನಾಡಿನ ಹತ್ತಾರು ಸಂಘ-ಸಂಸ್ಥೆಗಳು ಸಮುದಾಯದ ಅಧ್ಯಯನಕ್ಕೆ ಉತ್ತೇಜನ ನೀಡಿ, ಬೆಂಗಾವಲಿಗೆ ನಿಂತಿವೆ. ವಿಶ್ವವಿದ್ಯಾಲಯಗಳು ವಿವಿಧ ವಿಭಾಗಗಳಲ್ಲಿ ಸಂಶೋಧನೆಗೆ ಅವಕಾಶಗಳನ್ನು ಕಲ್ಪಿಸಿದವು. ಎಂ.ಫಿಲ್. ಹಾಗೂ ಪಿಎಚ್.ಡಿ. ಯಂತಹ ಗಂಭೀರ ಹಾಗೂ ಮೌಲಿಕ ಸಂಶೋಧನೆಗಳು ಚಾಲನೆ ಪಡೆದವು.

"ಕಾಡುಗೊಲ್ಲರು" ಡಾ. ಕಾಳೇಗೌಡ ನಾಗವಾರ (ಬೆಂಗಳೂರು ವಿಶ್ವವಿದ್ಯಾಲಯ, ೧೯೭೬), "ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು" ಡಾ.ತೀ.ನಂ. ಶಂಕರನಾರಾಯಣ (ಮೈಸೂರು ವಿಶ್ವವಿದ್ಯಾಲಯ-೧೯೭೮), "ಮಲೆನಾಡ ಒಕ್ಕಲಿಗರು ಮತ್ತು ಅವರ ಜಾನಪದ" ಡಾ. ಅಂಬಳಿಕೆ ಹಿರಿಯಣ್ಣ (ಮೈಸೂರು ವಿಶ್ವವಿದ್ಯಾಲಯ-೧೯೮೨), "ಕರ್ನಾಟಕದ ಗೊಂದಲಿಗರು ಹಾಗೂ ಅವರ ಸಾಹಿತ್ಯ" ಡಾ.ನಿಂಗಣ್ಣ ಸಣ್ಣಕ್ಕಿ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೮೨), "ಹಾಲಕ್ಕಿ ಜನಪದ ಮತ್ತು ಅವರ ಸಾಹಿತ್ಯ" ಡಾ. ಎಲ್. ಈ. ಭಟ್ಟ (ಕರ್ನಾಟಕ ವಿಶ್ವವಿದ್ಯಾಲಯ,

ಧಾರವಾಡ-೧೯೮೪), "ಕರ್ನಾಟಕದ ಲಂಬಾಣಿಗಳು: ಒಂದು ಅಧ್ಯಯನ" ಡಾ. ಪಿ.ಕೆ. ಖಂಡೋಬಾ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೮೫), "ಸುಳ್ಯ ಪರಿಸರದ ಗೌಡ ಜನಾಂಗ : ಒಂದು ಅಧ್ಯಯನ" ಡಾ. ಪುರುಷೋತ್ತಮ ಬಿಳಿಮಲೆ (ಮಂಗಳೂರು ವಿಶ್ವವಿದ್ಯಾಲಯ-೧೯೮೫), "ಗೊಂಡರು : ಒಂದು ಅಧ್ಯಯನ" ಡಾ. ಸಯ್ಯದ ಜಮೀರುಲ್ಲಾ ಷರೀಫ್ (ಮೈಸೂರು ವಿಶ್ವವಿದ್ಯಾಲಯ-೧೯೮೯) "ಹಾಲಕ್ಕಿ ಸಮಾಜ: ಒಂದು ಅಧ್ಯಯನ" ಡಾ. ಗೋಪಾಲಕೃಷ್ಣ ಹೆಗಡೆ, (ಬೆಂಗಳೂರು ವಿಶ್ವವಿದ್ಯಾಲಯ-೧೯೮೯), "ದಕ್ಷಿಣ ಕನ್ನಡ ಜಿಲ್ಲೆಯ ಭೈರರು : ಒಂದು ಅಧ್ಯಯನ" ಡಾ. ಕೆ.ಆರ್. ಪಾಂಡುರಂಗ (ಮಂಗಳೂರು ವಿಶ್ವವಿದ್ಯಾಲಯ-೧೯೯೦), "ಕರ್ನಾಟಕದ ಹೆಳವರು: ಜಾನಪದೀಯ ಅಧ್ಯಯನ" ಡಾ.ಎಚ್.ಕೆ. ಪವಾರ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೧), "ಉತ್ತರ ಕರ್ನಾಟಕದ ಲಂಬಾಣಿ: ಒಂದು ಅಧ್ಯಯನ" ಡಾ. ಡಿ. ಬಿ. ನಾಯಕ (ಗುಲ್ಬರ್ಗಾ ವಿಶ್ವವಿದ್ಯಾಲಯ-೧೯೯೧), "ಮ್ಯಾಸ ನಾಯಕರು" ಡಾ. ಕರಿಸಿದ್ದಪ್ಪ (ಗುಲ್ಬರ್ಗಾ ವಿಶ್ವವಿದ್ಯಾಲಯ-೧೯೯೨), "ಹೊಲೆಯರು: ಒಂದು ಅಧ್ಯಯನ" ಡಾ. ಎಸ್. ಆರ್. ಸಿಂಗೆ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೨), "ಸೋಲಿಗರು: ಒಂದು ಅಧ್ಯಯನ" ಡಾ..ಕೆ. ಚಂದ್ರಪ್ಪ (ಮೈಸೂರು ವಿಶ್ವವಿದ್ಯಾಲಯ-೧೯೯೨), "ದಕ್ಷಿಣ ಕರ್ನಾಟಕದ ಕೊರಮರು" ಡಾ. ಬಿ. ಪಿ. ರಾಮಯ್ಯ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೨). "ಜನಪದ ಸಾಹಿತ್ಯದಲ್ಲಿ ದಲಿತರ ಬದುಕು" ಡಾ.ಅರ್ಜುನ ಗೊಳಸಂಗಿ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೪), "ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟುಗಳಲ್ಲಿ ಪ್ರಸಾಧನ ಕಲೆ" ಡಾ. ಸವಿತಾ ನಾಯಕ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೪), ಕರ್ನಾಟಕದ ಒಕ್ಕಲಿಗರಲ್ಲಿ ಕುಂಚಟಿಗರು: ಒಂದು ಅಧ್ಯಯನ" ಡಾ. ರಾಜಣ್ಣ (ಬೆಂಗಳೂರು ವಿಶ್ವವಿದ್ಯಾಲಯ -೧೯೯೪), "ಸುಡಗಾಡ ಸಿದ್ದರು" ಡಾ. ಭಾಸ್ಕರ ತಿಪ್ಪಣ್ಣ (ಗುಲ್ಬರ್ಗಾ ವಿಶ್ವವಿದ್ಯಾಲಯ-೧೯೯೫), "ದೊಕ್ಕಲ ಮಕ್ಕಳು: ಒಂದು ಅಧ್ಯಯನ" ಡಾ. ವೈ. ಯಲ್ಲಪ್ಪ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೧೯೯೬), "ಲಂಬಾಣಿಗಳು: ಒಂದು ಅಧ್ಯಯನ" ಡಾ. ಸಣ್ಣರಾಮ (ಕುವೆಂಪು ವಿಶ್ವವಿದ್ಯಾಲಯ-೧೯೯೬), "ಕಾಡುಗೊಲ್ಲರ ಸಾಂಸ್ಕೃತಿಕ ವೀರರು: ಒಂದು ಅಧ್ಯಯನ" ಡಾ. ಬಿ. ಪಿ. ಶಿವಣ್ಣ (ಮೈಸೂರು ವಿಶ್ವವಿದ್ಯಾಲಯ-೧೯೯೬), "ದಕ್ಷಿಣ ಕರ್ನಾಟಕದ ಉಪ್ಪಾರರ ಜಾನಪದ ಅಧ್ಯಯನ" ಡಾ.ಸಿ.ಎಸ್.ಉಮೇಶ (ಕನ್ನಡ ವಿಶ್ವವಿದ್ಯಾಲಯ, ಹಂಪಿ-೧೯೯೭), "ಚಿತ್ರದುರ್ಗ ಜಿಲ್ಲೆಯ ಮಾದರು: ಒಂದು ಅಧ್ಯಯನ" ಡಾ.ಮೈಲಹಳ್ಳಿ ರೇವಣ್ಣ (ಮೈಸೂರು ವಿಶ್ವವಿದ್ಯಾಲಯ-೧೯೯೭), "ಕಿಳ್ಳೇಕ್ಯಾತರರು : ಒಂದು ಅಧ್ಯಯನ" ಡಾ. ಸಣ್ಣವೀರಣ್ಣ ದೊಡಮನಿ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೨೦೦೧) ಮುಂತಾದವುಗಳು ಪ್ರಮುಖವಾಗಿವೆ.

ಅದೇ ರೀತಿಯಾಗಿ ಕೋಟಗಾನಹಳ್ಳಿ ರಾಮಯ್ಯನವರ "ಸಿಂಧ್ ಮಾದಿಗರು", ಎಚ್.ಡಿ. ಪ್ರಶಾಂತ ಅವರ "ಜನ ಸಮುದಾಯ" (ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦), ಜಿ.ವಿ.ದಾಸ ಅವರ "ಹೊಲೆಯ ದಾಸರ ವೃತ್ತಿ ಜೀವನ", ಪಿ. ಬಿ. ಖನಿರಾಮ ಅವರ "ಕೊರವರು", ಇವೆ ಮೊದಲಾದ ಕೃತಿಗಳು ಅಲೆಮಾರಿ, ಅರೆಅಲೆಮಾರಿ ಜನಾಂಗದ ಬದುಕು ಹಾಗೂ ಅವರ ಸಂಸ್ಕೃತಿಯನ್ನು ಕಟ್ಟಿಕೊಟ್ಟಿವೆ. ಹೀಗೆ ತಲಸ್ಪರ್ಷಿ ಅಧ್ಯಯನ ನಡೆದಿದ್ದರೂ ಇನ್ನೂ ಹಲವು ಸಮುದಾಯಗಳ ಬದುಕು, ಅವರ ನಡೆ-ನುಡಿ, ಸಂಸ್ಕೃತಿ, ಅವರ ಜೀವನ ವಿಧಾನವನ್ನು ಅಧ್ಯಯನಿಸುವ ಕಾರ್ಯ ಇನ್ನೂ ನಡೆಯಬೇಕಾಗಿದೆ. ಇದಕ್ಕೆ ಚೆನ್ನದಾಸರ ಸಮುದಾಯವೂ ಹೊರತಾಗಿಲ್ಲ. ಈ ಸಮುದಾಯದ ಕುರಿತು ಸಾದ್ಯಾಂತವಾದ ಅಧ್ಯಯನ ಇದುವರೆಗೂ ನಡೆದಿರುವದಿಲ್ಲ. ಆದ್ದರಿಂದ ಈ ಸಮುದಾಯದ ಅಧ್ಯಯನ ನಡೆಸಿ ಅವರ ಬಧುಕನ್ನು ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನವಿದು.

೨.೩. ಅಕಾಡೆಮಿ ಹಾಗೂ ಪುಸ್ತಕ ಪ್ರಾಧಿಕಾರದ ಅಧ್ಯಯನಗಳು

ಕರ್ನಾಟಕ ಸಾಹಿತ್ಯ ಅಕಾಡೆಮಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಪುಸ್ತಕ ಪ್ರಾಧಿಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯ ಮೊದಲಾದ ಸಂಸ್ಥೆಗಳು ಅಲೆಮಾರಿ ಜನಾಂಗಗಳ ಕುರಿತಾಗಿ ಅಧ್ಯಯನ ಕೈಕೊಂಡಿವೆ. ಈ ಸಮುದಾಯಗಳ ಕುರಿತು ಪುಸ್ತಕಗಳು ಪ್ರಕಟವಾಗಿವೆ. ಡಾ. ಬರಗೂರು ರಾಮಚಂದ್ರಪ್ಪನವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಮಯದಲ್ಲಿ ಹೊರಬಂದಿರುವ 'ಉಪಸಂಸ್ಕೃತಿ' ಮಾಲೆಯ ಪುಸ್ತಕಗಳು ಜನಾಂಗಿಯ ಅಧ್ಯಯನಕ್ಕೆ ವಿಸ್ತೃತವಾದ ಅವಕಾಶಗಳನ್ನು ಕಲ್ಪಿಸಿದವು. ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ಸಮುದಾಯದ ಅಧ್ಯಯನಕ್ಕೆ ಸಂಬಂಧಿಸಿದ ಮೌಲಿಕ ಪುಸ್ತಕಗಳನ್ನು ಪ್ರಕಟಿಸಿದೆ. ಸಹಸ್ರಮಾನದ ಜನಪದ ಮಾಲಿಕೆಯಲ್ಲಿ "ಕರ್ನಾಟಕದ ಬುಡಕಟ್ಟುಗಳು" ಸಂಪುಟ ಒಂದು ಮತ್ತು ಎರಡು ಹೆಬ್ಬೊತ್ತಿಗೆಗಳು ರೂಪುಗೊಂಡವು. ಇವುಗಳಲ್ಲಿ ತಲಾ ಇಪ್ಪತ್ತು ಬುಡಕಟ್ಟುಗಳನ್ನು ಪರಿಚಯಿಸಲಾಗಿದೆ. ಅಲೆಮಾರಿಗಳ ಅಧ್ಯಯನಕ್ಕೆ ಈ ಕೃತಿಗಳು ಆಧಾರ ಗ್ರಂಥಗಳಾಗಿವೆ. ಇದರಲ್ಲಿ 'ಚೆನ್ನದಾಸರ' ಸಮುದಾಯದ ಅಧ್ಯಯನವು ಒಂದಾಗಿದೆ.

ಪ್ರೊ. ಚಂದ್ರಶೇಖರ ಪಾಟೀಲರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಅವಧಿಯಲ್ಲಿ ಪಿಎಚ್.ಡಿ ಮಹಾಪ್ರಬಂಧಗಳನ್ನು ಪ್ರಕಟಿಸುವ ಯೋಜನೆ ರೂಪಿಸಿದರು. ಆ ಯೋಜನೆಯ ಮಾಲಿಕೆ ಯಲ್ಲಿಯೂ ಅಲೆಮಾರಿ ಸಮುದಾಯಗಳ ಪುಸ್ತಕಗಳು ಪ್ರಕಟವಾದವು. ಕನ್ನಡ ಪುಸ್ತಕ ಪ್ರಾಧಿಕಾರವು ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯಲ್ಲಿ "ಬುಡ್ಗ ಜಂಗಮ", "ಚೆನ್ನದಾಸರ",

"ದಕ್ಕಲಿಗ", "ಗೊಳಸಂಗಿ", "ಹಂಡಿಜೋಗಿ", "ಕೊರಮ", "ಕಿಳ್ಳೆಕ್ಯಾತ", ಸಿಂಧೊಳ್ಳು, "ಸುಡಗಾಡು ಸಿದ್ಧ", "ಡುಂಗ್ರಿಗಳಾಸಿಯ", "ಹಕ್ಕಿಪಿಕ್ಕಿ", "ಪಾರ್ಧಿ", "ರಾಜಗೊಂಡ", "ಬೈಲಪತ್ತಾರ", "ದೊಂಬಿದಾಸ", "ಘಿಸಾಡಿ", "ಗೊಂಧಳಿ", "ಕಾಂಜರ ಭಾಟ", "ಸಿಕ್ಲಿಗೆರ", "ಅಲೆಮಾರಿ ಕುರುಬ", "ಕಾಡುಗೊಲ್ಲ", ಮುಂತಾದ ಇಪ್ಪತ್ತೊಂದು ಕೃತಿಗಳನ್ನು ಹೊರತಂದಿದೆ. ಸಮುದಾಯ ಅಧ್ಯಯನಕ್ಕೆ ಇವು ಮಹತ್ತರವಾದ ಕೊಡುಗೆ ನೀಡಿವೆ. ಡಾ. ಎಸ್.ಜಿ. ಸಿದ್ಧರಾಮಯ್ಯನವರ ಅವಧಿಯಲ್ಲಿ ಈ ಮಾಲಿಕೆಯ ಪುಸ್ತಕಗಳು ರೂಪುಗೊಂಡವು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಸಾರಂಗದಿಂದ ಪ್ರಕಟಗೊಂಡ "ಕರ್ನಾಟಕ ಬುಡಕಟ್ಟು ಸಮುದಾಯಗಳು", "ಅಲೆಮಾರಿ-ಅರೆಅಲೆಮಾರಿ ಸಮುದಾಯಗಳ ಅಧ್ಯಯನ ವರದಿ ಮಾಲೆಯ ಪುಸ್ತಕಗಳು", ಕನ್ನಡ ಭಾಷಾಭಿವೃದ್ಧಿ ಯೋಜನೆಯು ಹೊರತಂದ "ಜನಾಂಗಿಕ ಭಾಷೆಯ ಕೃತಿಗಳು" ತುಂಬ ಮೌಲಿಕವಾಗಿವೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ಪತ್ರಿಕೆಯು "ಮಾನವಶಾಸ್ತ್ರ, ಸಾಂಸ್ಕೃತಿಕ ಮಾನವಶಾಸ್ತ್ರ, ಸಾಮಾಜಿಕ ಮತ್ತು ಶಾರೀರಿಕ ಮಾನವಶಾಸ್ತ್ರ, ಸಮಾಜಶಾಸ್ತ್ರ, ಅಭಿವೃದ್ಧಿ, ಪರಿಸರ, ಸಮುದಾಯಗಳ ಚರಿತ್ರೆ, ಮೌಖಿಕ ಸಾಹಿತ್ಯ" ಮುಂತಾದ ಲೇಖನಗಳನ್ನು ಪ್ರಕಟಿಸುತ್ತಿದೆ. ಅಲೆಮಾರಿ, ಅರೆಅಲೆಮಾರಿ, ಅಲಕ್ಷಿತ ಸಮುದಾಯಗಳ ಕುರಿತು ವಸ್ತು ವಿಷಯಗಳ ಕಡೆಗೂ ತನ್ನನ್ನು ವಿಸ್ತರಿಸಿಕೊಳ್ಳುತ್ತದೆ"" ಎಂಬುದು ಗಮನಾರ್ಹವಾಗಿದೆ. ಪ್ರಸ್ತುತ ಬುಡಕಟ್ಟು ಅಧ್ಯಯನ ಪತ್ರಿಕೆಯು ಮೌಲಿಕ ಲೇಖನಗಳನ್ನು ಪ್ರಕಟಿಸುತ್ತ ಬಂದಿದೆ.

೨.೪. ಬೆಳಗಾವಿ ಜಿಲ್ಲೆಯ ಚಾರಿತ್ರಿಕ ಹಿನ್ನಲೆ

ರಾಜ್ಯದಲ್ಲಿಯೇ ಭೌಗೋಳಿಕವಾಗಿ ಅತ್ಯಂತ ವಿಸ್ತಾರವಾದ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಬೆಳಗಾವಿ, ಚಾರಿತ್ರಿಕವಾಗಿಯೂ ಸಹ ಅಷ್ಟೇ ಮಹತ್ವವನ್ನು ಪಡೆದುಕೊಂಡಿದೆ. ಬೆಳಗಾವಿ ಜಿಲ್ಲೆಯ ಪ್ರಾಚೀನ ಚಾರಿತ್ರಿಕ ಹಿನ್ನಲೆಯನ್ನು ಅವಲೋಕಿಸಿದರೆ, ಅದು ಕ್ರಿ.ಶ.ಪೂರ್ವದಷ್ಟು ಹಿಂದಕ್ಕೆ ಹೋಗುತ್ತದೆ. ಈ ಜಿಲ್ಲೆಯಲ್ಲಿ ಕ್ರಿ.ಶ.ಪೂರ್ವದಲ್ಲಿಯೇ ಮಾನವ ನೆಲೆ ನಿಂತಿರುವುದಕ್ಕೆ ಜಿಲ್ಲೆಯ ಅನೇಕ ಕಡೆಗಳಲ್ಲಿ ದೊರಕಿರುವ ಇತಿಹಾಸ ಪೂರ್ವಯುಗದ ನೆಲೆಗಳಲ್ಲಿನ ಪೊಳಯುಳಿಕೆಗಳೇ ಸಾಕ್ಷಿಗಳಾಗಿವೆ. ಈ ಪೊಳಯುಳಿಕೆಗಳು ಬೆಳಗಾವಿ ಜಿಲ್ಲೆ ಐತಿಹಾಸಿಕತೆಯನ್ನು ತೋರ್ಪಡಿಸುತ್ತವೆ. ಮುಂದುವರೆದು ಇತಿಹಾಸ ಕಾಲವನ್ನು ಅವಲೋಕಿಸಿದರೆ, ಬೆಳಗಾವಿ ಜಿಲ್ಲೆಯಲ್ಲಿ ಮೌರ್ಯರ ಕಾಲದ ಆಡಳಿತವನ್ನು ಗುರುತಿಸುವ ಯಾವ ಕುರುಹುಗಳು ದೊರಕುವುದಿಲ್ಲ. ಆದರೂ ಸಹಲ್ಲೀ ಜಿಲ್ಲೆಯು ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂಬುದನ್ನು ಗುರುತಿಸಲು ಅವಕಾಶವಿದೆ. ಕರ್ನಾಟಕದ

ಸನ್ನತಿ, ಮಸ್ಕಿ, ಜಟಿಂಗರಾಮೇಶ್ವರ, ಸಿದದಾಪೂರ ಇನ್ನೂ ಹಲವು ಕಡೆಗಳಲ್ಲಿ ದೊರಕಿದ ಅಶೋಕನ ಶಿಲಾಶಾಸನಗಳನ್ನು ಆಧಾರವಾಗಿಟ್ಟುಕೊಂಡು ಈ ಜಿಲ್ಲೆಯ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಲು ಅವಕಾಶವಿದೆ.

ಮೌರ್ಯರ ನಂತರ ದಕ್ಷಿಣದಲ್ಲಿ ಅಧಿಕಾರಕ್ಕೆ ಬಂದ ಶಾತವಾಹನರು ಬೆಳಗಾವಿ ಮೇಲೆ ತಮ್ಮ ಪ್ರಭುತ್ವ ಸ್ಥಾಪಿದರು. ಇದನ್ನು ವಡಗಾವಿ-ಮಾಧವಪೂರದಲ್ಲಿ ದೊರಕಿರುವ ಶಾತವಾಹನರ ನೆಲೆಗಳು ದೃಢಪಡಿಸುತ್ತವೆ. ನಂತರ ಈ ಜಿಲ್ಲೆ ಕನ್ನಡದ ಪ್ರಥಮ ಅರಸು ಮನೆತನ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು. ಈ ಮನೆತನದವರು ಜಿಲ್ಲೆಯ ಮುರಗೋಡನ್ನು ತಮ್ಮ ಎರಡನೆಯ ರಾಜಧಾನಿಯನ್ನಾಗಿಸಿಕೊಂಡಿದ್ದರು. ಬದಾಮಿ ಚಾಲುಕ್ಯರ ಹಾಗೂ ರಾಷ್ಟ್ರಕೂಟರ ಆಧೀನಕ್ಕೊಳಪಟ್ಟ ಈ ಪ್ರದೇಶ ನಂತರ ಕಲ್ಯಾಣಿ ಚಾಲುಕ್ಯರ ಪ್ರದೇಶವಾಗಿ ಮಾರ್ಪಟ್ಟಿತು. ಇವರ ಸಾಮಂತರಾಗಿ ನಂತರ ಸ್ವತಂತ್ರ್ಯರಾಗಿ ಆಡಳಿತ ನಡೆಸಿದ ಸವದತ್ತಿ ರಟ್ಟರ ಆಡಳಿತದ ಕಾಲದಲ್ಲಿ ಕೂಹುಂಡಿ-೩೦೦೦ ನಾಡಿನ ಭಾಗವಾಗಿ ರಟ್ಟರ ರಾಜಧಾನಿಯಾಗಿ ವೇಣುಗ್ರಾಮವೆಂಬ ಹೆಸರಿನಿಂದ ಕರ್ನಾಟಕದ ಇತಿಹಾಸದಲ್ಲಿ ಮೆರೆಯಿತು. ನಂತರ ಕಲ್ಯಾಣದ ಕಲಚೂರಿಗಳ, ದೇವಗಿರಿ ಯಾದವರ ಹಾಗೂ ದ್ವಾರಸಮುದ್ರದ ಹೊಯ್ಸಳರ ಪ್ರಭಾವಕ್ಕೊಳಗಾಯಿತು.

ಮಧ್ಯಕಾಲಾವಧಿಯಲ್ಲಿ ಈ ಪ್ರದೇಶವು ಕ್ರಮವಾಗಿ ವಿಜಯನಗರದ ಅರಸರು, ದೆಹಲಿಯ ಸುಲ್ತಾನರು(ಖಿಲ್ಜಿ ಹಾಗೂ ತುಘಲಕ್ ಮನೆತನಗಳು), ವಿಜಾಪೂರದ ಆದಿಲ್ ಶಾಹಿಗಳು, ಮೊಘಲರು, ಮರಾಠರ ಶಿವಾಜಿ, ಪೇಶ್ವೆಗಳು, ಪಟವರ್ಧನರು, ಸಂಸ್ಥಾನಿಕರ ತರುವಾಯ ಬ್ರಿಟಿಷರ್ ಆಳ್ವಿಕೆಗೆ ಒಳಗಾಯಿತು. ಬ್ರಿಟಿಷರ ಕಾಲದಲ್ಲಿ ಈ ಜಿಲ್ಲೆಯ ಪ್ರದೇಶಗಳು ಹಲವು ಭಾಗಗಳ್ಲಿ ಹರಿದು ಹಂಚಿ ಹೋದವು.

ಬೆಳಗಾವಿಯು ಜಿಲ್ಲೆಯಾಗಿ ರೂಪುಗೊಂಡಿದ್ದು ಬ್ರಿಟಿಷರ ಕಾಲದಲ್ಲಿ. ಕ್ರಿ.ಶ. ೧೮೧೮ರಲ್ಲಿ ಬ್ರಿಟಿಷರು ಮರಾಠರಿಂದ ಈ ಪ್ರದೇಶವನ್ನು ಗೆದ್ದ ನಂತರ ಇದನ್ನು ಮದ್ರಾಸ್ ಪ್ರಾಂತಕ್ಕೆ ಸೇರಿಸಿದರು. ಕ್ರಿ.ಶ. ೧೮೩೨ರಲ್ಲಿ ಈ ಪ್ರದೇಶದ ಕೆಲವು ತಾಲೂಕುಗಳನ್ನು ಬೇರ್ಪಡಿಸಿ ಸೊಲ್ಲಾಪೂರ ಜಿಲ್ಲೆಯನ್ನಾಗಿಸಿದರು. ಅದು ಮುಂಬೈ ಪ್ರಾಂತ್ಯಕ್ಕೆ ಒಳಪಟ್ಟಿತು. ಕ್ರಿ.ಶ. ೧೮೩೦ರಲ್ಲಿ ಧಾರವಾಡ ಜಿಲ್ಲೆಯೆಂದು ಹೆಸರಿಸಿ ಮುಂಬೈ ಅಧಿಪತ್ಯಕ್ಕೆ ಅಳವಡಿಸಲಾಯಿತು. ಕ್ರಿ.ಶ. ೧೮೩೬ರಲ್ಲಿ ಧಾರವಾಡ ಜಿಲ್ಲೆಯ ಪ್ರದೇಶವನ್ನು ಉತ್ತರ ಹಾಗೂ ದಕ್ಷಿಣ ಎಂದು ವಿಂಗಡಿಸಿ ಉತ್ತರ ಭಾಗಕ್ಕೆ ಬೆಳಗಾವಿಯನ್ನು ಕೇಂದ್ರವನ್ನಾಗಿಸಿದರು. ಬೆಳಗಾವಿ ಜಿಲ್ಲೆಗೆ ಆವಾಗ ಪಾಶ್ಚಾಪೂರ, ಸಂಪಗಾವಿ, ಬೀಡಿ, ಚಿಕ್ಕೋಡಿ, ಪರಸಗಡ, ಬಾಗಲಕೋಟೆ, ಬದಾಮಿ, ಹುನಗುಂದ, ಇಂಡಿ ಮತ್ತು ಮುದ್ದೇಬಿಹಾಳ ಎಂಬ ಹತ್ತು

ತಾಲೂಕುಗಳನ್ನು ಸೇರಿಸಲಾಗಿತ್ತು. ಮುಂದೆ ಇಂಡಿ ಮತ್ತು ಮುದ್ದೇಬಿಹಾಳ ತಾಲೂಕುಗಳನ್ನು ಸೋಲ್ಲಾಪೂರ ಜಿಲ್ಲೆಗೆ ಸೇರಿಸಿ ಗೋಕಾಕ ಮತ್ತು ಅಥಣಿ ತಾಲೂಕುಗಳನ್ನು ಬೆಳಗಾವಿ ಜಿಲ್ಲೆಗೆ ಸೇರಿಸಲಾಯಿತು.

ಕ್ರಿ.ಶ.೧೮೬೪ರಲ್ಲಿ ಸೊಲ್ಲಾಪೂರ ಜಿಲ್ಲೆಗೆ ಸೇರಿದ ಇಂಡಿ, ಹಿಪ್ಪರಗಿ, ಬಿಜಾಪೂರ, ಮನಗೂಳಿ ಮತ್ತು ಮುದ್ದೇಬಿಹಾಳ ತಾಲೂಕುಗಳನ್ನು ಬೆಳಗಾವಿ ಜಿಲ್ಲೆಗೆ ಸೇರಿದ ಬಾಗಲಕೋಟೆ, ಬದಾಮಿ ಮತ್ತು ಹುನಗುಂದ ತಾಲೂಕುಗಳನ್ನು ಸೇರಿಸಿ ಕಲಾದಗಿ ಜಿಲ್ಲೆಯನ್ನು ನಿರ್ಮಿಸಲಾಯಿತು. ಮುಂದೆ ಕ್ರಿ.ಶ. ೧೮೬೪ರಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಪಾಶ್ಚಾಪೂರ, ಸಂಪಗಾವಿ, ಬೀಡಿ, ಚಿಕ್ಕೋಡಿ, ಪರಸಗಡ, ಗೋಕಾಕ ಮತ್ತು ಅಥಣಿ ಎಂಬ ಎಳು ತಾಲೂಕುಗಳಿದ್ದವು. ತದನಂತರ ಹುಕ್ಕೇರಿ, ಚಂದಗಡ ಮತ್ತು ಮುರಗೋಡ ಎಂಬ ತಾಲೂಕುಗಳು ಅಸ್ಥಿತ್ವಕ್ಕೆ ಬಂದವು. ಸ್ವಾತಂತ್ರ್ಯಾನಂತರದಲ್ಲಿ ಕ್ರಿ.ಶ. ೧೯೫೬ರ ವರೆಗೆ ಮುಂಬೈ ಪ್ರಾಂತದಲ್ಲಿದ್ದ ಈ ಜಿಲ್ಲೆ ಕರ್ನಾಟಕದ ಭಾಗವಾಗಿ ಮಾರ್ಪಟ್ಟಿತು. ಪ್ರಸ್ತುತ ಬೆಳಗಾವಿಯಲ್ಲಿ ಅಥಣಿ, ಬೆಳಗಾವಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ, ರಾಮದುರ್ಗ, ಸವದತ್ತಿ, ರಾಯಬಾಗ ಬೈಲಹೊಂಗಲ ಹಾಗೂ ಖಾನಾಪೂರ ಒಟ್ಟು ಹತ್ತು ತಾಲೂಕುಗಳಿವೆ.

ಬೆಳಗಾವಿ ಜಿಲ್ಲೆಗೆ ಭೌಗೋಳಿಕ ವ್ಯಾಪ್ತಿಯಿದ್ದು, ಅಥಣಿ, ಬೆಳಗಾವಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ, ರಾಮದುರ್ಗ, ಸವದತ್ತಿ, ರಾಯಬಾಗ ತಾಲೂಕುಗಳಲ್ಲಿ ನೆಲೆನಿಂತಿರುವ ಚೆನ್ನದಾಸರ ಸಮುದಾಯವನ್ನು ಸಮೀಕ್ಷೆಗೊಳಪಡಿಸಲಾಗಿದೆ. ಈ ತಾಲೂಕಗಳ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಚೆನ್ನದಾಸರ ಸಮುದಾಯದ ಅಧ್ಯಯನ ಕೈಗೊಳ್ಳಲಾಗಿದೆ. ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸಂಘಟನಾ ಕ್ಷೇತ್ರಗಳನ್ನು ಕೂಡ ಈ ಅಧ್ಯಯನದ ವ್ಯಾಪ್ತಿಗೆ ಅಳವಡಿಸಿಕೊಳ್ಳಲಾಗಿದೆ.

*****

ಟಿಪ್ಪಣಿಗಳು

----

೧. ಪ್ರಭಾಕರ ಎ.ಎಸ್. 'ಹೆಳವರು', ಪು-೩೩, ೨೦೧೦

೨. ಸಿಂಗ್ ಕೆ. ಎಸ್.   'ಪೀಪಲ್ ಆಫ್ ಇಂಡಿಯಾ', ಸಂ-೮, ಪುಟ-೯-೧೦, ೧೯೯೬

೩. ಹೆಚ್ಚಿನ ವಿವರಗಳಿಗಾಗಿ ನೋಡಿ- 'ಕರ್ನಾಟಕ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಪ್ರಸ್ತಾವನೆ, ಪುಟ-೧೦

೪. ಅದೇ, ಪುಟ-೧೨

೫. ಮೇತ್ರಿ ಕೆ.ಎಮ್., ಬುಡಕಟ್ಟು ಅಧ್ಯಯನ- ಸಂಪುಟ-೪. ೨೦೦೭

೬. ದಾಸ ಜಿ.ವಿ. 'ಹೊಲೆಯದಾಸರಿ ಜೀವನ ವಿಧಾನಮು', ೧೯೯೮

೭. ಶಂಕರರಾವ್ ಚ.ನ. 'ಭಾರತೀಯ ಸಮಾಜ', ಪುಟ-೦೭, ೨೦೦೭

ಅಧ್ಯಾಯ ಮೂರು

ಕರ್ನಾಟಕದ ಚೆನ್ನದಾಸರ ಸಮುದಾಯದ ಹಿನ್ನೆಲೆ ಮತ್ತು ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ವೈಶಿಷ್ಟ್ಯತೆ

ಅ. ಕರ್ನಾಟಕದ ಚೆನ್ನದಾಸರ ಸಮುದಾಯದ ಹಿನ್ನೆಲೆ

೩.೧. ಕರ್ನಾಟಕದ ಚೆನ್ನದಾಸರ ಸಮುದಾಯದ ಹಿನ್ನೆಲೆ

೩.೨. ಕರ್ನಾಟಕದಲ್ಲಿ ಚೆನ್ನದಾಸರ ಸಮುದಾಯದ ಉಪನಾಮಗಳು

೩.೨.೧. ಚೆನ್ನದಾಸರು

೩.೨.೨. ಆಟದ ದಾಸರು

೩.೨.೩. ತಿರುಮಲದಾಸರು

೩.೨.೪. ಹೆಣ್ಣುದಾಸರು

೩.೨.೫. ದೊಂಬಿದಾಸರು

೩.೨.೬. ಚಕ್ರವಾದ್ಯ ದಾಸರು

೩.೨.೭. ಶಂಖದಾಸರು

೩.೨.೮. ಗೋಪಾಳ ಬುಟ್ಟಿದಾಸರು

೩.೩. ಚೆನ್ನದಾಸರ ಸಮುದಾಯದ ಪೌರಾಣಿಕ ಹಿನ್ನೆಲೆ

೩.೪. ಚಾರಿತ್ರಿಕ ಹಿನ್ನೆಲೆ

೩.೫. ಸಮುದಾಯದ ಮೂಲ ಮತ್ತು ಪರ್ಯಟನೆ

೩. ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ವೈಶಿಷ್ಟ್ಯತೆ

೩.೬. ಬೆಳಗಾವಿ ಜಿಲ್ಲೆಯ ಚೆನ್ನದಾಸರು

೩.೭. ಭೌಗೋಳಿಕ ವ್ಯಾಪ್ತಿ

೩.೮. ಪ್ರಸಾರದ ನೆಲೆಗಳು

೩.೯. ಕಲಾ ಪದ್ಧತಿ (ಬಳಿ/ಬೆಡಗು)

೩.೧೦. ಜನಸಂಖ್ಯೆ

೩.೧೧. ಸಾಕ್ಷರತೆ

೩.೧೨. ಸಾಹಿತ್ಯ

೩.೧೨.೧. ಭಾಷೆ

೩.೧೨.೨. ಕಥೆ

೩.೧೨.೩. ಹಾಡು

೩.೧೨.೪. ಗಾದೆ ಮಾತು

೩.೧೨.೫. ನಂಬಿಕೆಗಳು

೩.೧೨.೬. ರಂಗಭೂಮಿ

ಅಧ್ಯಾಯ ಮೂರು

ಕರ್ನಾಟಕದ ಚೆನ್ನದಾಸರ ಸಮುದಾಯದ ಹಿನ್ನಲೆ ಮತ್ತು ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ವೈಶಿಷ್ಟ್ಯತೆ

ಅ. ಕರ್ನಾಟಕದ ಚೆನ್ನದಾಸರ ಸಮುದಾಯದ ಹಿನ್ನಲೆ

ದಾಸ, ದಾಸಯ್ಯ, ದಾಸರಿ, ದಾಸರ, ದಾಸರು ಎಂದು ಕರ್ನಾಟಕದಲ್ಲಿ ಬಹುತೇಕ ರೂಢಿಯಲ್ಲಿ ಬಳಕೆಗೊಂಡಿರುವ ಚೆನ್ನದಾಸರ ಸಮುದಾಯವು ತಾನು ಮಾಡುವ ವೃತ್ತಿಯ ವೈವಿಧ್ಯತೆಯಿಂದಾಗಿ ಭಿನ್ನ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ತನ್ನನ್ನು ಪರಿಚಯಿಸಿಕೊಂಡಿದೆ. ಬೇರೆ ಸಮಾಜದವರು ಹಾಗೆಯೆ ಈ ಸಮುದಾಯವನ್ನು ಗುರುತಿಸಿದ್ದಾರೆ. ಅವುಗಳೆಲ್ಲ 'ದಾಸ' ಸಮುದಾಯದ ವೃತ್ತಿ ಲಾಂಛನಗಳಲ್ಲಿನ ಭಿನ್ನತೆಗಳಾಗಿವೆಯೇ ಹೊರತು, ಭಿನ್ನ-ವಿಭಿನ್ನವಾದ ಜಾತಿಗಳಲ್ಲ. ಬುಕ್ಕದಾಸರು, ಬುಟ್ಟದಾಸರು, ಚಂಚುದಾಸರು, ಚಿನ್ನದಾಸರು, ದಂಡೆದಾಸರಿ, ಹೊಲೆದಾಸರು, ಕಂಗೆಡ್ಲುದಾಸರು, ಮಾಲದಾಸರಿ, ಪಾಗದಾಸರಿ, ತೆಲಗುದಾಸರಿ ಮುಂತಾಗಿ ವಿವಿಧ ಹೆಸರುಗಳಿಂದ ಈ ಸಮುದಾಯವನ್ನು ಗುರುತಿಸುವ ಪ್ರಯತ್ನ ನಡೆದಿದೆ.

'ದಾಸ' ಎಂಬ ಪದಕ್ಕೆ ಒಂದೆಡೆ ನಿಲ್ಲದ, ಊರಿಂದೂರಿಗೆ ಅಲೆಯುವ ಎಂಬ ಅರ್ಥವಿದೆ. ಭಜನೆ, ಕೀರ್ತನೆ ಮಾಡುತ್ತ ಬದುಕುತ್ತಿರುವ ಭಕ್ತ ಸಮುದಾಯವಾಗಿದೆ. ಇದರಿಂದ ಚೆನ್ನದಾಸರ ಸಮುದಾಯವು ಅಲೆಮಾರಿ ಸಮುದಾಯವೆಂಬುದು ಸ್ಪಷ್ಟವಾಗುತ್ತದೆ. ಈಗ ಚಲಾವಣೆಯಲ್ಲಿರುವ ದಾಸ ಸಮುದಾಯದಲ್ಲಿರುವ ಉಪಜಾತಿಗಳು ಜಾತಿಗಳಲ್ಲ. ಅವು ಚೆನ್ನದಾಸರ ಸಮುದಾಯದ ಪರ್ಯಾಯ ನಾಮಗಳು. ಇವುಗಳನ್ನು ಉಪನಾಮಗಳೆಂದು ಕರೆಯುವುದುಂಟು.

ಅಲೆಮಾರಿ ಹಾಗೂ ಅರೆಅಲೆಮಾರಿಗಳಾಗಿರುವ ಚೆನ್ನದಾಸರ ಸಮುದಾಯದವರು ಸಮಾಜದ ಸಂಪರ್ಕದಿಂದ ದೂರವಿದ್ದಾರೆ. ಊರ ಹೊರಗೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಸಮಾಜದ ದೈವಾರಾಧನೆ, ಆಚರಣೆ, ಹಬ್ಬ, ಉತ್ಸವಗಳು, ಸುಗ್ಗಿಯ ಕಾಲದಲ್ಲಿ ರೈತರ ಹೊಲ-ತೋಟಗಳಿಗೆ ಭಿಕ್ಷಾಟನೆಗೆ ಅಲೆದಾಡಿ ದವಸ ಧಾನ್ಯ ಪಡೆದು ಉಪಜೀವನ ಸಾಗಿಸುತ್ತಿದ್ದಾರೆ. ಅನಕ್ಷರಸ್ಥ ಸಮುದಾಯವಾದರೂ, ಹಿರಿಯರಿಂದ ಬಳುವಳಿಯಾಗಿ ಪಡೆದ ಜನಪದ ಹಾಡುಗಳು,

ಏಕತಾರಿ ಪದಗಳು, ಅನುಭಾವ ಗೀತೆ, ತತ್ವಪದಗಳನ್ನು ಹಾಡುತ್ತ ಹಳ್ಳಿ-ಹಳ್ಳಿಗಳಿಗೆ ಸಂಚರಿಸಿ ಭಿಕ್ಷೆ ಬೇಡುತ್ತಾರೆ. ಮತ್ತೆ ಕೆಲವರು ಕೂಲಿ-ನಾಲಿ ಮಾಡಿ ಶ್ರಮಿಕ ಬದುಕನ್ನು ಸಾಗಿಸುತ್ತಿದ್ದಾರೆ. ಬೆರಳೆಣಿಕೆಯಷ್ಟು ಜನರು ಬೇಸಾಯ ಮಾಡಿ ಜೀವನ ನಿರ್ವಹಿಸುತ್ತಿದ್ದಾರೆ. ಊರ ಹೊರಗೆ ಬಿಡಾರ ಹೂಡಿ ಬದುಕು ಸಾಗಿಸುತ್ತಿರುವ ಈ ಸಮುದಾಯವನ್ನು ಸಮಾಜ ಅಸ್ಪೃಶ್ಯರೆಂದು ಪರಿಗಣಿಸಿರುವುದು ವಿಪರ್ಯಾಸವಾಗಿದೆ.

ಚೆನ್ನದಾಸರು ಆಂಧ್ರ ಮೂಲದಿಂದ ಬಂದಿರುವ ಸಮುದಾಯವಾಗಿದೆ. ಕರ್ನಾಟಕದ ಬಹುಪಾಲು ಚೆನ್ನದಾಸರು ತೆಲುಗು ಭಾಷಿಕರಾಗಿದ್ದಾರೆ. ಕನ್ನಡ ಮನೆ ಮಾತಾಗಿರುವ ಚೆನ್ನದಾಸರನ್ನು ವಿಚಾರಿಸಿದರೆ ತಮ್ಮ ಹಿರಿಯರು ತೆಲುಗು ಮಾತನಾಡುತ್ತಿದ್ದರು. ನಾವೆಲ್ಲ ಆಂಧ್ರನಾಡಿನವರೆಂದು ವಿವರಿಸುತ್ತಾರೆ. ಕ್ಷೇತ್ರಕಾರ್ಯ ಕೈಗೊಂಡು ಮಾಹಿತಿ ಕಲೆ ಹಾಕುವ ಸಂದರ್ಭದಲ್ಲಿ ಅವರ ಮೂಲವನ್ನು ಕೇಳಿದಾಗ ಪ್ರತಿಯೊಬ್ಬರು ಆಂಧ್ರಪ್ರದೇಶವೇ ತಮ್ಮ ಮೂಲಸ್ಥಳವೆಂದು ಹೇಳಿರುವುದು ಗಮನಾರ್ಹವಾಗಿದೆ.

ಚೆನ್ನದಾಸರ ಸಮುದಾಯದ ಜನರು ಇತ್ತೀಚಿಗೆ ಬಹುತೇಕ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಕಂಡು ಬರುತ್ತಾರೆ. ಈ ಸಮುದಾಯ ಭಿಕ್ಷಾಟನೆ ಮತ್ತು ಉದ್ಯೋಗವನ್ನು ಹುಡುಕುತ್ತ ರಾಜ್ಯಾದ್ಯಂತ ಹರಡಿಕೊಂಡಿದೆ. ಈ ಮೊದಲು ಧಾರ್ಮಿಕ ಕ್ರಿಯಾಚರಣೆಗಳ ಮೂಲಕ ಹಂಸನೂರ, ಕಲ್ಲೋಳಿ, ಕದರಮಂಡಲಗಿ, ಕನಕಗಿರಿ, ಬಯ್ಯಾಪುರ, ತುಳಸಿಗೇರಿ, ಕೊಟಬಾಗಿ, ಅರ್ಜುನವಾಡ, ಉದಗಟ್ಟಿ, ಸಂಕೋನಟ್ಟಿ ಮುಂತಾದ ಕಡೆಗಳಲ್ಲಿ ವಲಸೆ ಬಂದು ನೆಲೆಯನ್ನು ಕಂಡುಕೊಂಡಿದ್ದಾರೆ. ಭಿಕ್ಷಾಟನೆಗೆ ಅನುಕೂಲವಿರುವ, ಕೃಷಿ ಪ್ರದೇಶ ಮತ್ತು ಮಳೆಗಾಲದ ಪ್ರದೇಶಗಳಿಗೆ ಈ ಸಮುದಾಯ ಮುಖ ಮಾಡಿರುವುದು ಸಾಮಾನ್ಯವಾಗಿದೆ. ಇವರ ಕಲೆಗಳಿಗೆ ಎಲ್ಲೆಲ್ಲಿ ಪ್ರೋತ್ಸಾಹ ಲಭಿಸಿದೆಯೋ ಅಲ್ಲಲ್ಲಿ ಹೆಚ್ಚಾಗಿ ಈ ಸಮುದಾಯ ನೆಲೆಸಿದೆ. ಬಹುತೇಕ ಜಿಲ್ಲೆಗಳ ಗ್ರಾಮೀಣ ಸ್ಥಳಗಳಲ್ಲಿ ನೀರು ಮತ್ತು ಆಸರೆ ಲಭಿಸುವ ಅನುಕೂಲ ಪ್ರದೇಶಗಳು ಭಿಕ್ಷಾಟನೆಗೆ ಪೂರಕವಾಗಿರುವ ನೆಲೆಗಳನ್ನು ವಾಸಸ್ಥಾನಕ್ಕಾಗಿ ಆಯ್ದುಕೊಂಡಿದೆ.

ಅಲೆಮಾರಿ ಸಮುದಾಯದ ಹಿನ್ನಲೆಯನ್ನು ತಿಳಿದುಕೊಳ್ಳುವ ಮುಂಚೆ 'ಸಮುದಾಯದ' ಅರ್ಥ, ವ್ಯಾಪ್ತಿ ಅರಿತುಕೊಳ್ಳುವುದು ಸೂಕ್ತ. ಜಾನಪದ ಕೈಪಿಡಿಯಲ್ಲಿ- "ತಮ್ಮ ಸಾರ್ವಜನಿಕ ಜೀವನಕ್ಕೆ ಅಗತ್ಯವಾದ ಬೇಡಿಕೆಗಳಿಗಾಗಿ ಪ್ರಮುಖ ಗಮನವನ್ನು ಕೊಟ್ಟು ಜೀವಿಸುವ ಸದಸ್ಯರ ಒಂದು ನಿರ್ಧಿಷ್ಟ ಗುಂಪನ್ನು ಸಮುದಾಯ ಎನ್ನುತ್ತಾರೆ. ಅದು ಇರುವುದು ಒಂದೆರಡು ಹಿತಗಳ ಸಾಧನೆಗೆ ಅಲ್ಲ. ಬದಲು ಅದು ಗುಂಪಿನ ಜನರ ಸರ್ವಹಿತವನ್ನು ಸಾಧಿಸುವ

ಅವಕಾಶಗಳನ್ನು ಕಲ್ಪಿಸಿಕೊಡಬೇಕು. ವ್ಯಕ್ತಿಯೊಬ್ಬ ತನ್ನ ಜೀವನವನ್ನು ಸಂಪೂರ್ಣವಾಗಿ ಸಮುದಾಯದಲ್ಲಿ ಕಳೆಯುತ್ತಾನೆ. ಅದು ಒಂದು ಸಣ್ಣ ಹಳ್ಳಿಯಲ್ಲಾದರೂ ಇರಬಹುದು, ದೊಡ್ಡ ಗುಂಪಾಗಿಯಾದರೂ ಇರಬಹುದು. ಭಾರತದಲ್ಲಿ ವೇದಪೂರ್ವಕಾಲದಲ್ಲಿ ಇಂಥ ಅನೇಕ ಸ್ವಯಂ ಪೂರ್ಣವಾದ ಮತ್ತು ಶಕ್ತಿಶಾಲಿಯಾದ ಸಮುದಾಯಗಳು ಅಸ್ತಿತ್ವದಲ್ಲಿದ್ದವು ಎಂದು ಹೇಳಲಾಗಿದೆ. ಈ ಸಮುದಾಯಗಳು ಗುಡಿಸಲು, ಜಾನುವಾರು, ಬಳಕೆಯ ಪದಾರ್ಥ, ಗುದ್ದಲಿ ಮೊದಲಾದ ಎಲ್ಲ ಉತ್ಪಾದನ ಸಾಧನಗಳನ್ನು ಸಮಾನವಾಗಿ ಉಪಯೋಗಿಸಿಕೊಳ್ಳುತ್ತವೆ. ಭೂಮಿಯ ಮೇಲಿನ ಒಡೆತನ ಕೂಡ ಇಲ್ಲಿ ಸಮಾನವಾದದು. ಇಂಥ ಪ್ರಾಚೀನ ಸಮುದಾಯಗಳಲ್ಲಿ ಉತ್ಪಾದನೆಯ ಸಮಾನ ವಿತರಣೆ ಇತ್ತು. ಆದರೆ ಮಿಗತೆ ಉತ್ಪಾದನೆ ಇರಲಿಲ್ಲ.ಈ ಅರ್ಥದಲ್ಲಿ ಜಗತ್ತಿನ ಕೆಲವು ಬುಡಕಟ್ಟುಗಳನ್ನು ‘ಸಮುದಾಯಗಳು’[೧] ಎಂದು ಕರೆಯಲಾಗುತ್ತಿದೆ. ಗೊತ್ತಾದ ಸ್ಥಳದಲ್ಲಿ ಜನರು “ಸಾಮೂಹಿಕವಾಗಿ ಬದುಕುವುದು ಸಮುದಾಯವೊಂದರ ಪ್ರಮುಖ ಲಕ್ಷಣವಾಗಿದೆ. ಅಲ್ಲಿರುವ ಜನರ ನಡುವೆ ಪರಸ್ಪರಾವಲಂಬನೆ ಇರುತ್ತದೆ.”[೨] ಎಂಬುದು ಮಹತ್ತರವಾಗಿದೆ. ಒಟ್ಟಾರೆ ಈ ಸಮುದಾಯವೆಂಬುದು ಹಲವು ಜನರಿಂದ ಒಡಗೂಡಿದ ಸಮೂಹವಾಗಿದೆ.

೩.೧. ಕರ್ನಾಟಕದ ಚೆನ್ನದಾಸರ ಸಮುದಾಯದ ಹಿನ್ನೆಲೆ

ಚೆನ್ನದಾಸರ ಸಮುದಾಯಕ್ಕೆ ಕರ್ನಾಟಕದಲ್ಲಿ ಪ್ರಾದೇಶಿಕವಾಗಿ ಬೇರೆ ಬೇರೆ ಹೆಸರುಗಳು ಇದ್ದರೂ ಈ ಸಮುದಾಯ ತನ್ನನ್ನು ‘ಚೆನ್ನದಾಸರು’ ಎಂದೆ ಗುರುತಿಸಿಕೊಂಡಿದೆ. ಶೈಕ್ಷಣಿಕ ಮತ್ತು ಇತರ ದಾಖಲಾತಿಗಳಲ್ಲಿ ‘ಚೆನ್ನದಾಸರು’ ಎಂದು ತನ್ನ ಜಾತಿಯನ್ನು ದಾಖಲಿಸುತ್ತ ಬಂದಿದೆ. ಚೆನ್ನದಾಸರ ಸಮುದಾಯದ ಪರ್ಯಾಯ ಹೆಸರುಗಳಾದ ದಂಡಿಗೆದಾಸರ, ಜಂಬೂದಾಸರ, ಚಕ್ರವಾದ್ಯದಾಸರ, ಹರಿದಾಸರ, ಶಂಖದಾಸರ, ಗೋಪಾಳಬುಟ್ಟಿದಾಸರ, ನಾಮದಾಸರ, ಹೊಲೆಯದಾಸರ, ಮಾಲದಾಸರಿ, ಆಟದದಾಸರ, ದಾಸರಿ ಇನ್ನೂ ಮುಂತಾಗಿ ಬೇರೆ ಬೇರೆಯಾಗಿದ್ದರೂ ಸಹ ‘ಚೆನ್ನದಾಸರೆಂದೇ’ ಕರ್ನಾಟಕದಾದ್ಯಂತ ಈ ಸಮುದಾಯವು ತನ್ನನ್ನು ತಾನು ಗುರುತಿಸಿಕೊಳ್ಳುತ್ತ ಬಂದಿದೆ. ಪ್ರಾದೇಶಿಕ ನೆಲೆಯಲ್ಲಿ ಸ್ಥಳೀಯವಾಗಿ ಇವರನ್ನು ಸಹಜವಾಗಿ ದಾಸರು, ದಾಸರ, ದಾಸರಿ, ದಾಸಯ್ಯ ಎಂದೇ ಸರಳೀಕರಿಸಿ ಬಳಸುವುದನ್ನು ಕಾಣುತ್ತೇವೆ. ಈ ಸಮುದಾಯ ಕೂಡ ಸಮಾಜಕ್ಕೆ ತನ್ನನ್ನು ಪರಿಚಯಿಸಿಕೊಳ್ಳುವಾಗ ಈ ಮೇಲೆ ಪ್ರಸ್ತಾಪಿಸಿದ ಹೆಸರುಗಳನ್ನು ಹೇಳುತ್ತ ಬಂದಿದೆ. ಆದ್ದರಿಂದ ಈ ಸಮುದಾಯವನ್ನು ದಾಸರು–ದಾಸರಿ ಎಂದು ಅಧ್ಯಯನಕಾರರು ಕರೆದಿದ್ದಾರೆ.

"ದಾಸರು, ದಾಸರಪದ ಪ್ರಯೋಗ ಕರ್ನಾಟಕದ್ದಾಗಿದೆ. ದಾಸರಿ ತೆಲುಗು ಭಾಷೆಯ ಪದವಾಗಿದ್ದರೆ, ದಾಸು, ದಾಸಯ್ಯ ತಮಿಳು ಭಾಷೆಯ ಪ್ರಯೋಗವಾಗಿದೆ. ಅಧ್ಯಯನಕಾರರು ಚೆನ್ನದಾಸರ ಸಮುದಾಯದೊಳಗಿನ ಪರ್ಯಾಯ ನಾಮಗಳನ್ನು ಅರ್ಥೈಸಲಾರದೆ ಉಪಜಾತಿಗಳೆಂದೂ, ಭಿನ್ನಜಾತಿಗಳೆಂದು ಬರೆದಿದ್ದಾರೆ. ಕಾರಣ ಅಧ್ಯಯನಕಾರರಿಗಿರುವ ಕ್ಷೇತ್ರ ಕಾರ್ಯದ ಅಭಾವ ಮತ್ತು ಈ ಸಮುದಾಯಕ್ಕಿರುವ ಅಜ್ಞಾನ ಹಾಗೂ ತನ್ನ ಜಾತಿಗಿರುವ ಕೀಳರಿಮೆಯಿಂದ ತನ್ನ ಜಾತಿಯ ಹೆಸರನ್ನು ಮರೆಮಾಚುತ್ತ ಬಂದಿರುವುದು ಈ ಸಮಸ್ಯಗೆ ಕಾರಣವಾಗಿದೆ."[೩] ಎಂಬುದು ವಾಸ್ತವವನ್ನು ವಿವರಿಸುತ್ತವೆ. ಕೆಲವು ವಿದ್ವಾಂಸರು ಚೆನ್ನದಾಸರ ಸಮುದಾಯವನ್ನು ವ್ಯಾಖ್ಯಾನಿಸಿರುವುದು ಈ ರೀತಿಯಾಗಿದೆ.

'ದಿ ಮೈಸೂರ್ ಟ್ರೈಬ್ಸ್ ಆಂಡ್ ಕಾಸ್ಟ್'ನ ೧೯೦೧ರ ಜನಗಣತಿಯ ವರದಿಯಲ್ಲಿ "ಗಂಡುದಾಸರು, ದೊಂಬಿದಾಸರು, ಧರ್ಮದಾಸರು, ಶಂಖದಾಸರು, ಚಕ್ರದಾಸರು ಎಂದು ಪಟ್ಟಿ ಮಾಡಿ ಸ್ವಗೋತ್ರ ಪಂಗಡಗಳನ್ನು ಹೆಸರಿಸಲಾಗಿದೆ. ಭಾಗದಾಸರು, ಕತ್ತರಿದಾಸರು, ಆಟದದಾಸರು, ಬಿಂದಿಗೆದಾಸರು, ನಾಮಧಾರಿದಾಸರು, ಮತ್ತು ಶನಿವಾರಿದಾಸರು ಈ ಹೆಸರುಗಳು ನಿಜವಾಗಿ ವಿಭಿನ್ನ ಪಂಗಡಗಳನ್ನು ಪ್ರತಿನಿಧಿಸುತ್ತವೆ ಅಥವಾ ಸೂಚಿಸುತ್ತವೆ ಎಂದು ಹೇಳುವುದು ಸ್ಪಷ್ಟವಾಗಿಲ್ಲ." ಎಂದು ನಮೂದಿಸಲಾಗಿದೆ.

ಮುಂಬೈ ಗೆಝುಟೀಯರ್‌ದ ಕರ್ನಾಟಕ ವಿಭಾಗದಲ್ಲಿ ದಾಸರು ಸಮುದಾಯವನ್ನು ಗೊಲ್ಲದಾಸರು, ವೊಳ್ಳೆದಾಸರು, ತೆಲಗುದಾಸರು, ಗಂಡುದಾಸರು, ತಿರುಮಲದಾಸರು, ಬ್ಯಾಡದಾಸರು, ಹೊಲೆದಾಸರು ಎಂದು 'ಗುಡಿಗಳ ಪರಿಚಾರಕರು' ಭಾಗದಲ್ಲಿ ದಾಖಲಿಸಿದ್ದಾರೆ. ಮತ್ತೊಂದೆಡೆ 'ತಿರುಕರು' ಭಾಗದಲ್ಲಿ ತಿರುಮಲದಾಸರು, ಗಂಡುದಾಸರು, ಎಂದು ಎರಡು ಒಳಭೇಧಗಳನ್ನು ಸೂಚಿಸಿದ್ದಾರೆ. ಇದರೊಡನೆ ದಂಡಿಗೆ ದಾಸರನ್ನು ಕಬ್ಬಲಿಗೇರ ಕುಲವೆಂದೂ, ಹೊಲೆದಾಸರನ್ನು ಹೊಲೆ ಜೋಗತಿಗಳ ಹೊಟ್ಟೆಯವರೆಂದು ಹೇಳಲಾಗಿದೆ.

ಹೈದ್ರಾಬಾದ್ ವಿಭಾಗದ "ದಿ ಕಾಸ್ಟ್ ಆಂಡ್ ಟ್ರೈಬ್ಸ್ ಆಫ್ ಎಚ್.ಇ.ಎಚ್ ನಿಜಾಮ್ಸ್ ಡೊಮಿನಿಯನ್"ದಲ್ಲಿ ಭಾಗವತ ಬುಕ್ಕದಾಸರಿ, ಬುಟ್ಟಿದಾಸರಿ, ಚಂಚುದಾಸರು, ಚಿನ್ನದಾಸರಿ, ದಂಡೆದಾಸರಿ, ಹೊಲೆದಾಸರಿ, ಕಂಗೆಡ್ಲು ದಾಸರಿ, ಮಾಲದಾಸರಿ, ಪಾಗದಾಸರಿ, ತೆಲಗುದಾಸರಿ, ಎಂದು ದಾಖಲಿಸಿರುವುದು ಗಮನಾರ್ಹವಾಗಿದೆ. ಥರ್ಸ್ಟನ್ ಅವರ "ಕಾಸ್ಟ್ ಆಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ" ಕೃತಿಯಲ್ಲಿ ಬಲೀಜ, ಗಂಗೆದ್ದಲ, ಗೊಲ್ಲ, ಜಾನಪ್ಪ, ಪಲ್ಲಿ, ವಳ್ಳವ ಎಂದು ಉಪವಿಭಾಗಗಳನ್ನು ಗುರುತಿಸಲಾಗಿದೆ.

ಈ ಮೇಲೆ ಪ್ರಸ್ತಾಪಿಸಿದ ನಾಲ್ಕು ಕೃತಿಗಳಲ್ಲಿರುವ 'ದಾಸ' ಸಮುದಾಯದ ಕುರಿತಾಗಿರುವ ಮಾಹಿತಿಗಳು ಸ್ಪಷ್ಟವಾಗಿರದೆ ದೋಷಪೂರಿತವಾಗಿರುತ್ತವೆ. ಏಕೆಂದರೆ, ಥರ್ಸ್ಟನ್, ಅನಂತಕೃಷ್ಣ ಅಯ್ಯರ್, ನಂಜುಂಡಯ್ಯ ಮೊದಲಾದವರು ಬರೆದ ಕೆಳವರ್ಗದ ಚರಿತ್ರೆ ಪ್ರಾಮಾಣಿಕವಾಗಿ ಚಿತ್ರಿಸಲ್ಪಟ್ಟಿಲ್ಲ."[೪] ವೆಂದು ಎಸ್. ಎಸ್. ಹಿರೇಮಠರು ಆಕ್ಷೇಪಿಸಿರುವುದನ್ನಿಲ್ಲಿ ನೆನೆಪಿಸಿಕೊಳ್ಳಬೇಕು. ಮೇಲಿನ ನಾಲ್ಕು ಗ್ರಂಥಗಳಲ್ಲಿರುವ ವಿವರಣೆಗಳು ಸಮರ್ಪಕವಾಗಿರದ ಕಾರಣ "ಚೆನ್ನದಾಸರ ಸಮುದಾಯವನ್ನು ವೈಜ್ಞಾನಿಕ ಕ್ಷೇತ್ರಾಧ್ಯಯನದ ಮೂಲಕ ವಿವೇಚಿಸದೆ ಅಲ್ಲಲ್ಲಿ ಕೇಳಿ ಸಂಗ್ರಹಿಸಿದ ಮಾಹಿತಿಗಳನ್ನಾಧರಿಸಿದ ಬರವಣಿಗೆಗಳಾಗಿವೆ. ಸದರೀ ಸಮುದಾಯಕ್ಕೆ ಸಂಬಂಧ ಪಡದವರು ಮೇಲ್ಜಾತಿಯ ಬರಹಗಾರರು. ಬೇರೆಯವರ ಮೂಲಕ ಕೇಳಿ ಮಾಹಿತಿ ಸಂಗ್ರಹಿಸಿ ಬರೆದಿರುವ ಬರಹಗಳಾಗಿವೆ. ಹೀಗಾಗಿ ಇವನ್ನು ಪೂರ್ಣ ಪ್ರಮಾಣದ ಚಾರಿತ್ರಿಕ ದಾಖಲೆಗಳೆಂದು ಗ್ರಹಿಸುವುದು ಉಚಿತವೆನಿಸುವುದಿಲ್ಲ."[೫] ಎಂಬದು ಸಮಂಜಸವಾಗಿದೆ.

೩.೨. ಕರ್ನಾಟಕದಲ್ಲಿ ಚೆನ್ನದಾಸರ ಸಮುದಾಯದ ಉಪನಾಮಗಳು

ಯಾವುದೇ ಸಮುದಾಯ ಅಥವಾ ಜನಾಂಗವು ಮೇಲ್ನೋಟಕ್ಕೆ ಒಂದೇ ರೀತಿಯಾಗಿ ಕಾಣಿಸುತ್ತಿದ್ದರೂ, ಸೂಕ್ಷ್ಮಸ್ತರದಲ್ಲಿ ವಿಭಿನ್ನವಾಗಿರುವುದು ಸ್ವಾಭಾವಿಕವಾಗಿದೆ. ಕೆಲವು ಅಂಶಗಳಲ್ಲಿ ಸಮಾನತೆ ಕಂಡು ಬಂದರೂ ಆಂತರ್ಯದಲ್ಲಿ ವಿಭಿನ್ನತೆ ಇದ್ದೇ ಇರುತ್ತದೆ. ಹಾಗೆಯೆ ಕರ್ನಾಟಕದ ಚೆನ್ನದಾಸರ ಸಮುದಾಯದಲ್ಲಿ ಉಪನಾಮಗಳು ಗೋಚರಿಸುತ್ತವೆ. ಅಧ್ಯಯನಕ್ಕೆ ಅನುಗುಣವಾಗಿ ಬೆಳಗಾವಿ ಜಿಲ್ಲೆಯಲ್ಲಿರುವ ಚೆನ್ನದಾಸರ ಸಮುದಾಯಕ್ಕೆ ಸಂಬಂಧಿಸಿದ ಉಪನಾಮಗಳು ಈ ಕೆಳಗಿನಂತಿವೆ.

೧. ಚೆನ್ನದಾಸರು

೨. ಆಟದದಾಸರು

೩. ತಿರುಮಲದಾಸರು

೪. ಹೆಣ್ಣುದಾಸರು

೫. ದೊಂಬಿದಾಸರು

೬. ಚಕ್ರವಾದ್ಯದಾಸರು

೭. ಶಂಖದಾಸರು

೮. ಗೋಪಾಳಬುಟ್ಟಿದಾಸರು

ಹೀಗೆ ಚೆನ್ನದಾಸರ ಸಮುದಾಯದಲ್ಲಿ ಒಟ್ಟು ಎಂಟು ಉಪನಾಮಗಳಿರುವುದನ್ನು ಗುರುತಿಸಲಾಗಿದೆ. ಅವುಗಳನ್ನು ಅನುಕ್ರಮವಾಗಿ ಮುಂದೆ ಪರಿಶೀಲಿಸಲಾಗುವುದು.

೩.೨.೧. ಚೆನ್ನದಾಸರು

"ಚೆನ್ನ" ಎಂದರೆ ಕೊಳಲು, ಶಹನಾಯಿ ಎಂಬ ಸಾಮಾನ್ಯವಾದ ಅರ್ಥವಿದೆ. ಈ ವಾದ್ಯ ಪರಿಕರಗಳೊಂದಿಗೆ ಜೀವನೋಪಾಯಕ್ಕೆ ಅಲಂಕಾರ ಭೂಷಣರಾಗಿ ಪೌರಾಣಿಕ ಕತೆಗಳನ್ನು ಹಾಡುತ್ತ, ಗದ್ಯರೂಪದಲ್ಲಿ ವಿವರಿಸುತ್ತ ಹಳ್ಳಿಗರಿಗೆ ಮನರಂಜನೆ ಒದಗಿಸುತ್ತ ಉದರ ಪೋಷಣೆ ಮಾಡುವ ಜನಾಂಗವೆ 'ಚೆನ್ನದಾಸರು'[೬] ಎಂದು ಕರೆಯಲಾಗಿದೆ.

"ಚೆನ್ನ" ಎನ್ನುವ ವಾದ್ಯ ನುಡಿಸುವವರು ಚೆನ್ನದಾಸರು ಎನ್ನುವವರಿದ್ದಾರೆ. ಇದು ಜನಸಾಮಾನ್ಯರಲ್ಲಿ ಬಳಕೆಯಲ್ಲಿದೆ. 'ಚೆನ್ನ' ಎನ್ನುವ ವಾದ್ಯಕ್ಕೆ 'ಬಾಂಕಿ' ಎಂತಲೂ ಕರೆಯುತ್ತಾರೆ. ಪ್ರಸ್ತುತ ಇದು ತನ್ನ ಮಹತ್ವವನ್ನು ಕಳೆದುಕೊಂಡಿದೆ. ಹೀಗಾಗಿ ಈಗ ಅದರ ಬಳಕೆ ಕಡಿಮೆಯಾಗಿದೆ. "ಈ ವಾದ್ಯ ಬಳಸುವವರನ್ನು ಚೆನ್ನದಾಸರು ಎಂದು ಕರೆದಿರುವುದು ಸರಿಯೋ ಅಥವಾ ತಪ್ಪೋ ತಿಳಿಯದು" ಎಂದು ಹೇಳಿರುವ ಡಾ. ಯಲ್ಲಪ್ಪ ಹಿಮ್ಮಡಿಯವರು "ಚೆನ್ನದಾಸರ ಸಮುದಾಯಕ್ಕೆ ಈ ಹೆಸರು ಬರಲು ಈ ಹೆಸರಿನ ವ್ಯಕ್ತಿ ಕಾರಣವಾಗಿರಬಹುದು" ಎಂದು ಹೇಳಿ, ಪುರಾಣ ಮತ್ತು ಐತಿಹ್ಯಗಳ ಆಧಾರ ಒದಗಿಸಿದ್ದಾರೆ.

ಹೊಲೆಯರ ಐತಿಹ್ಯ ಪ್ರಕಾರ, ಮಾದಿಗರ ಐತಿಹ್ಯಗಳ ಪ್ರಕಾರ ಮತ್ತು ಹೊಲೆಯರ ಮಾಸ್ತೀಕರ ಐತಿಹ್ಯದ ಪ್ರಕಾರ ಮೂರು ಪೌರಾಣಿಕ ಸಂಗತಿಗಳನ್ನು ವಿವರಿಸುತ್ತ, ಅವುಗಳ ಐತಿಹ್ಯಗಳನ್ನು ವ್ಯಾಖ್ಯಾನಿಸಿ"ಚೆನ್ನಯ್ಯದಾಸು ಹೊಲೆಯ ಕುಲದ ಹಿರಿಯನೆಂಬುದು ಧ್ವನಿತವಾಗುತ್ತದೆ. ಈಗಿನ ಚೆನ್ನದಾಸರು ಆ ಚೆನ್ನಯ್ಯದಾಸುವಿನ ವಂಶದವರಾಗಿರಬೇಕು ಎಂಬ ಅರ್ಥ ಧ್ವನಿಸುತ್ತದೆ. ಚನ್ನಯ್ಯ ಮುಂದೆ ಬರುವ 'ದಾಸು' ತಮಿಳು ಮೂಲವನ್ನು, ದಾಸರಿ ತೆಲುಗು ಮೂಲವನ್ನು ಸೂಚಿಸಿದರೆ, ದಾಸರು ಕನ್ನಡ ಮೂಲವನ್ನು ಸೂಚಿಸುತ್ತದೆ."[೭] ಎಂದು ವಿವರಿಸಿದ್ದಾರೆ. ಇದು ಸತ್ಯಕ್ಕೆ

ಸಮೀಪವಾಗಿದೆ. ಚೆನ್ನದಾಸರು ಉತ್ತರ ಕರ್ನಾಟಕದ ನಿವಾಸಿಗಳಾಗಿದ್ದಾರೆ. ಚೆನ್ನಕೇಶ್ವರನ ಭಕ್ತರು ಹಾಗೂ ಸೇವಕರಾಗಿದ್ದಾರೆ.

೩.೨.೨. ಆಟದ ದಾಸರು

ಹೈದರಾಬಾದ್ ಕರ್ನಾಟಕದಲ್ಲಿ ಇವರು ಹೆಚ್ಚಾಗಿ ನೆಲೆಸಿದ್ದಾರೆ. ಗುಲ್ಬರ್ಗಾ, ಬೀದರ್, ಬಳ್ಳಾರಿ, ರಾಯಚೂರ, ಕೊಪ್ಪಳ ಜಿಲ್ಲೆಗಳಲ್ಲಿ ಈ ಆಟದದಾಸರು ಕಂಡು ಬರುತ್ತಾರೆ. ಈ ಸಮುದಾಯದವರು ತಮ್ಮ ಜೀವನೋಪಾಯಕ್ಕಾಗಿ ಆಟ-ಬಯಲಾಟಗಳನ್ನೇ ಅವಲಂಭಿಸಿದ್ದಾರೆ. ತಮ್ಮ ಹಿರಿಯರಿಂದ ಬಳುವಳಿಯಾಗಿ ಬಂದ ಕಲೆಯನ್ನೆ ಮುಂದುವರಿಸಿಕೊಂಡು ಬರುತಿದ್ದಾರೆ. ಪೌರಾಣಿಕ ಪ್ರಸಂಗಗಳಾದ ಗಿರಿಜಾಕಲ್ಯಾಣ, ರತಿಕಲ್ಯಾಣ, ದಾನಶೂರಕರ್ಣ, ದುಶ್ಯಾಸನ ಮರ್ಧನ, ಕೀಚಕವಧೆ, ದೇವಿಕಥೆ, ಶತಕಂಠರಾವಣ, ಕರ್ಣಾರ್ಜುನರ ಕಾಳಗ, ಪಾಂಡುವಿಜಯ, ಆಂಜನೇಯ ಸಾಹಸ, ಲಂಕಾದಹನ ಮೊದಲಾದ ಕಥೆಗಳನ್ನು ಆಧರಿಸಿ ಬಯಲಾಟಗಳನ್ನು ಆಡುತ್ತಾರೆ. ವಸ್ತು ವಿಷಯಕ್ಕೆ ಅನುಸಾರವಾಗಿ ಸಣ್ಣಾಟ-ದೊಡ್ಡಾಟಗಳ ಮುಖಾಂತರ ರಂಗಭೂಮಿಯ ಮೇಲೆ ಕಲೆಯನ್ನು ಪ್ರದರ್ಶನ ಮಾಡುತ್ತಾರೆ. ಹಳ್ಳಿಗರನ್ನೆ ಪಾತ್ರಗಳಲ್ಲಿ ಅಳವಡಿಸಿ ರಾತ್ರಿಯಿಡಿ ಆಟವಾಡಿ-ಆಟವಾಡಿಸಿ ಗ್ರಾಮೀಣ ಜನರಿಗೆ ಮನರಂಜನೆ ಒದಗಿಸುತ್ತಾರೆ. ಆಧುನಿಕ ಸಾಧನಗಳು ಇನ್ನು ಬಾರದ ಸಮಯದಲ್ಲಿ ಆಟ-ಬಯಲಾಟಗಳೆ ಗ್ರಾಮೀಣರಿಗೆ ಮನರಂಜನೆಯ ಸಾಧನಗಳಾಗಿದ್ದವು. ಊರ ಹಿರಿಯರು ನೀಡುವ ಸಂಭಾವನೆಯೆ ಇವರ ಜೀವನೋಪಾಯಕ್ಕೆ ದಾರಿಯಾಗಿತ್ತು.

ಆಟವಾಡುವ ದಾಸರ ತಂಡದಲ್ಲಿ ಸುಮಾರು ಏಳರಿಂದ ಹತ್ತು ಜನರು ಇರುತ್ತಾರೆ. ಇದರಲ್ಲಿ ಮುಮ್ಮೇಳ ಮತ್ತು ಹಿಮ್ಮೇಳ ಎಂಬ ಎರಡು ಮೇಳಗಳನ್ನಾಗಿ ವಿಭಾಗಿಸಲಾಗಿರುತ್ತದೆ. ಮುಮ್ಮೇಳದಲ್ಲಿ ಪಿಟೀಲು ಧಾರಿಯಿರುತ್ತಾನೆ. ಈತನೆ ಬಯಲಾಟದ ಮುಖಂಡ. ಈತನನ್ನು 'ಆಟದ ಮಾಸ್ತರ' ಎಂದು ಹಳ್ಳಿಗಳಲ್ಲಿ ಕರೆಯುತ್ತಾರೆ. ಪಾತ್ರಧಾರಿಗಳಿಗೆ ಮಾರ್ಗದರ್ಶಕನಾಗಿ ಮುಂದೆ ಪದಗಳನ್ನು ಹಾಡುತ್ತಿದ್ದರೆ, ಅದಕ್ಕನುಗುಣವಾಗಿ ಪಕ್ಕದ ವಾದ್ಯವಾಗಿ ಮೃದಂಗ, ಹಾರ್ಮೋನಿಯಂ ನುಡಿಸುತ್ತ ರಂಗಭೂಮಿಯ ಬಲಭಾಗದಲ್ಲಿ ಇಬ್ಬರಿರುತ್ತಾರೆ. ರಂಗಮಂದಿರದ ಹಿಂಭಾಗದಲ್ಲಿ ಸುಮಾರು ನಾಲ್ಕರಿಂದ ಏಳು ಜನರು ತಾಳ ನುಡಿಸುತ್ತಿರುತ್ತಾರೆ. ದೊಡ್ಡದಾದ ಧ್ವನಿಯೆತ್ತಿ ಹಾಡುತ್ತ, ಆಲಾಪಗೈಯುತ್ತ, ರಾಗ ಮತ್ತು ಸನ್ನಿವೇಶಕ್ಕೆ ತಾಳ ನುಡಿಸುತ್ತಾರೆ. ಇದನ್ನು ಹಿಮ್ಮೇಳವೆನ್ನುವರು.

ಹಿಮ್ಮೇಳದಲ್ಲಿ ಪರಿಣಿತರ ತಂಡವಿರುತ್ತದೆ. ಇವರು ಸಂಭಾವನೆಯಿಲ್ಲದೆ ಸ್ವಪ್ರೇರಣೆಯಿಂದ ನಿರ್ವಹಿಸುವ ಕೆಲಸ. ದಾಸರೇತರ ಜನಾಂಗದವರು ಇದರಲ್ಲಿ ಭಾಗವಹಿಸುತ್ತಾರೆ. ಆಧುನಿಕ ಸಮಾಜದಲ್ಲಿಂದು ಹಳ್ಳಿಗಳು ನಗರಗಳತ್ತ ಮುಖ ಮಾಡಿವೆ. ಪರಂಪರಾಗತ ಮನರಂಜನೆಯ ಸ್ಥಳದಲ್ಲಿ ಚಲನಚಿತ್ರಗಳು, ದೂರದರ್ಶನಗಳು ಸ್ಥಾಪನೆಗೊಂಡಿರುವುದರಿಂದ ಇಂದು ದಾಸರ ಆಟಕ್ಕೆ ಬೇಡಿಕೆಯಿಲ್ಲದಂತಾಗಿದೆ.

ಆಟದ ದಾಸರು ಇಂದು ಸಣ್ಣಪುಟ್ಟ ಸ್ಟೇಷನರಿ ಸಾಮಾನುಗಳಾದ ಹೆರಪಿನ್ನು, ಡಬ್ಬನ, ಕ್ಯಾರ, ದಾರ ಇನ್ನೂ ಮುಂತಾದ ಸಾಮಗ್ರಿಗಳನ್ನು ಹೊತ್ತು ಹಳ್ಳಿ ಹಳ್ಳಿಗಳಿಗೆ ತಿರುಗಾಡಿ ವ್ಯಾಪಾರ ವೃತ್ತಿ ಕೈಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಚೆನ್ನದಾಸರ ಸಮುದಾಯದ ಮಹಿಳೆಯರು ಕೈಕಸುಬುಗಳಾದ ಕೌದಿ ಹೊಲೆಯುವುದು, ಪಶುಸಂಗೋಪನೆ, ಕೃಷಿ ಕಾರ್ಮಿಕರಾಗಿ ತಮ್ಮನ್ನು ತೊಡಗಿಕೊಂಡಿದ್ದಾರೆ. ಈ ಸಮುದಾಯದ ಕೆಲವರು ನಾಯಿಗಳೊಂದಿಗೆ ಕಾಡು ಪ್ರಾಣಿಗಳ ಬೇಟೆಯಾಡಿ ಪ್ರಾಣಿಗಳ ಮಾಂಸವನ್ನು ಆಹಾರಕ್ಕಾಗಿ ಬಳಸುತ್ತಾರೆ.ಆದರೆ ಅದು ಇಂದು ಕಡಿಮೆಯಾಗಿದೆ. ಈ ಸಮುದಾಯದ ವಾಸಸ್ಥಾನಗಳಾದ ಗುಡಿಸಲುಗಳು ಊರ ಹೊರಗೆ ಇರುತ್ತವೆ. ತಮ್ಮದೆ ಆದ ಜನಸಮುದಾಯದೊಡನೆ ಊರ ಹೊರಗಿರುವುದರಿಂದ ಸಮಾಜದ ಸಂಪರ್ಕಕ್ಕೆ ಅಷ್ಟೊಂದು ಬಾರದೆ ಹೋಗಿದ್ದಾರೆ. ಪ್ರತ್ಯೇಕವಾಗಿ ಇವರು ನೆಲೆಸಿರುವುದರಿಂದ ಸಮಾಜದ ಮುಖ್ಯವಾಹಿನಿಯಲ್ಲಿ ಇನ್ನೂ ಸೇರ್ಪಡೆಯಾಗದಿರುವುದು ವಿಷಾದನೀಯ ಅಂಶವಾಗಿದೆ.

೩.೨.೩. ತಿರುಮಲದಾಸರು

ಈ ಸಮುದಾಯದವರು ಕೂಡ ಆಟದದಾಸರಂತೆ ಹೈದ್ರಾಬಾದ್ ಕರ್ನಾಟಕದಲ್ಲಿ ವಾಸಿಸುತ್ತಿದ್ದಾರೆ. ಹೆಸರೆ ಸೂಚಿಸುವಂತೆ ಇವರು ತಿರುಪತಿ ತಿಮ್ಮಪ್ಪನ ಸೇವಕರು. ಆತನ ಅನನ್ಯ ಭಕ್ತರೆಂದು ಹೇಳುತ್ತಾರೆ. 'ಏಕತಾರಿಗಳೊಂದಿಗೆ ತಿರುಪತಿ ತಿಮ್ಮಪ್ಪನ ಮಹಿಮೆಯನ್ನು ಹಾಡುಗಳ ಮೂಲಕ ಹೇಳುತ್ತ ಭಿಕ್ಷಾಟನೆ ಮಾಡಿ ಜೀವನ ನಿರ್ವಹಣೆ ಮಾಡುವ ಜನಾಂಗದವರನ್ನು ತಿರುಮಲದಾಸರೆಂದು ಕರೆಯುವರು' ಎಂಬ ಸಂಗತಿ ಕರ್ನಾಟಕ ಭಾಗದ ಮುಂಬಯಿ ಗೆಝೆಟೀಯರದಲ್ಲಿ ದಾಖಲಾಗಿದೆ.

ತಿರುಮಲದಾಸರು ಅಲೆಮಾರಿಗಳಾಗಿದ್ದು, ಊರಿಂದ ಊರಿಗೆ ಅಲೆದಾಡುವುದು, ಭಿಕ್ಷಾಟನೆಯೆ ಇವರ ಮುಖ್ಯ ವೃತ್ತಿಯಾಗಿದೆ. ಇವರಲ್ಲಿ ಕೆಲವರು ಅಲಂಕಾರಭೂಷಿತರಾಗಿ ತಿರುಪತಿ

ತಿಮ್ಮಪ್ಪನ ವಿವಿಧ ಭಂಗಿಗಳ ಭಾವಚಿತ್ರಗಳನ್ನು ಸಂಗ್ರಹಿಸಿ, ಅವುಗಳನ್ನು 'ಆಲ್ಬಂ'ದಂತೆ ಕೈಯಲ್ಲಿ ಹಿಡಿದು ತಿರುಪತಿ ತಿಮ್ಮಪ್ಪನ ಭಕ್ತರಿಗೆ ಮಾರುತ್ತ, ತಿಮ್ಮಪ್ಪನ ಹೆಸರಿನಲ್ಲಿ ಭಿಕ್ಷೆ ಬೇಡುತ್ತ ಕಷ್ಟಕರವಾದ ಜೀವನ ಸಾಗಿಸುತ್ತಿದ್ದಾರೆ. ಇವರು ಅಕ್ಷರವಂಚಿತರಾಗಿ, ಸರಕಾರಿ ಸೌಲಭ್ಯಗಳನ್ನು ಪಡೆಯುವ ಅವಕಾಶ ತಪ್ಪಿಸಿಕೊಂಡು ಸಮಾಜದ ಮುಖ್ಯವಾಹಿನಿಯಿಂದ ಇನ್ನೂ ಹೊರಗುಳಿದಿರುವುದು ವಿಷಾದನೀಯ ಸಂಗತಿಯಾಗಿದೆ.

೩.೨.೪. ಹೆಣ್ಣುದಾಸರು

ಈ ಸಮುದಾಯದವರು ಮೂಲತ: ಬಿಜಾಪೂರ, ಧಾರವಾಡ ಹಾಗೂ ಬಳ್ಳಾರಿ ಜಿಲ್ಲೆಗಳ ನಿವಾಸಿಗಳಾಗಿದ್ದಾರೆ. ಇವರ ಮುಖ್ಯ ಉದ್ಯೋಗ ಹಳ್ಳಿಯ ಆಟ–ಬಯಲಾಟಗಳಲ್ಲಿ ಸ್ತ್ರೀ ಪಾತ್ರ ನಿರ್ವಹಣೆ, ಮಹಿಳೆಯರ ತಂಡ ರಚಿಸಿಕೊಂಡು ಆಡುವ ಆಟವೇ ದಾಸರಾಟವಾಗಿದೆ. "ಹೆಣ್ಣುದಾಸರು ಎಂಬುದು ದಾಸರಲ್ಲಿಯ ಒಂದು ಒಳಪಂಗಡ. ಇವರಾಡುವ ಆಟಕ್ಕೆ ಯಾವುದೆ ನಿಶ್ಚಿತ ಸಂಭಾಷಣೆಯಿಲ್ಲ, ಹಾಡುಗಳಿಲ್ಲ. ಮಾತನಾಡಿದ್ದೇ ಸಂಭಾಷಣೆ, ಹಾಡಿದ್ದೇ ಹಾಡು. ಇದರಲ್ಲಿ ಮುಖ್ಯವಾಗಿ ತೋರುವುದು ಶೃಂಗಾರ ಭಾವ. ಇಲ್ಲಿಯ ಪಾತ್ರಗಳು ಮೂರು. ನಾಯಕ ನಟನೊಬ್ಬ ಭೀಮಣ್ಣ, ನಾಯಕಿ ಹಾಗೂ ಜುವಾರಿಯೆಂಬ ವಿಧೂಷಕನ ಪಾತ್ರ, ಇವೇ ಪ್ರಮುಖ ಪಾತ್ರಧಾರಿಗಳಾಗಿ ಆಟವನ್ನು ಮುನ್ನಡೆಯಿಸಿಕೊಂಡು ಹೋಗುತ್ತಾರೆ. ದಾಸರಾಟವು ಸಾಮಾನ್ಯವಾಗಿ ನಾಲ್ಕು ರಸ್ತೆಗಳು ಕೂಡುವೆಡೆಯಲ್ಲಿ ಒಂದು ಚಾಪೆಯ ಮೇಲೆ ನಡೆಯುತ್ತಿತ್ತು. ಪ್ರೇಕ್ಷಕರಿಗೆ ನಾಯಕ ಮತ್ತು ನಾಯಕಿಯರಿಂದ ಶೃಂಗಾರ ಮತ್ತು ಜುವಾರಿಯಿಂದ ಹಾಸ್ಯ ಧಾರಾಳವಾಗಿ ದೊರೆಯುತ್ತಿತ್ತು. ಸೈನಿಕರ ಮನರಂಜನೆಗಾಗಿಯೂ ದಾಸರಾಟಗಳು ಜರುಗುತ್ತಿದ್ದವು. ದಾಸರಾಟದವರು ಸೈನಿಕರ ಸಂಗಡವೆ ಇರಲಿ, ಊರಲ್ಲಿಯೇ ಪ್ರದರ್ಶನವಿರಲಿ, ಎಲ್ಲಿದ್ದರೂ ಈ ಮೇಳಗಳು ಆಟದ ನಾಯಕಿಯ ಹೆಸರಿನಿಂದ ಗುರುತಿಸಲ್ಪಡುತ್ತಿದ್ದವು"[೮] ಎಂಬುದು ಡಾ. ಬಸವರಾಜ ಮಲಶೆಟ್ಟಿಯವರ ವಿವರಣೆ ಗಮನಾರ್ಹವಾಗಿದೆ.

ಹೆಣ್ಣುದಾಸರ ಸಮುದಾಯದವರು ಕಲಾ ನಿಪುಣರಾಗಿದ್ದು, ಸಂಗೀತದ ಹಿನ್ನೆಲೆಯನ್ನು ಹೊಂದಿದವರಾಗಿದ್ದರು. ಹಿಂದೆ ರಾಜ–ಮಹಾರಾಜರ ಕಾಲದಲ್ಲಿ ಇವರ ಕಲೆಯನ್ನು ಮೆಚ್ಚಿ ಅರಸರು ಪುರಸ್ಕರಿಸಿದ ಸಂಗತಿಗಳನ್ನು ಪ್ರಸ್ತುತ ಮಾಹಿತಿದಾರರು ವಿವರಿಸುತ್ತಾರೆ. "ಶಿಲಪ್ಪದಿಗಾರಂ ಕಾವ್ಯದಲ್ಲಿ ತಮಿಳಿನ ಚೇರ ದೊರೆ ಉತ್ತರಕ್ಕೆ ಪ್ರಯಾಣ ಮಾಡುವಾಗ ನೀಲಗಿರಿಯಲ್ಲಿದ್ದು ಕನ್ನಡತಿಯರ ಕುಣಿತವನ್ನು ನೋಡಿದನೆಂಬ ಉಲ್ಲೇಖವಿದೆ. ಅದು ದಾಸರಾಟದ ಸ್ತ್ರೀಯರ ನೃತ್ಯವೇ ಆಗಿರಬೇಕು"[೯] ಎಂದು ಡಾ ಅರ್ಜುನ ಗೊಳಸಂಗಿಯವರು ಅಭಿಪ್ರಾಯಪಟ್ಟಿರುವುದು

ಯಥೋಚಿತವಾಗಿದೆ. ಜಾನಪದ ರಂಗಭೂಮಿಗೆ ಪ್ರಪ್ರಥಮವಾಗಿ ಪಾದಾರ್ಪಣೆ ಮಾಡಿದ ಶ್ರೇಯಸ್ಸು ಚೆನ್ನದಾಸರ ಸಮುದಾಯದ ಹೆಣ್ಣುದಾಸರಿಗೆ ಸಲ್ಲುತ್ತದೆ ಎಂಬುದರಲ್ಲಿ ಅತೀಶಯೋಕ್ತಿಯೆನಿಲ್ಲ. ಆದರೆ ಇಂದು ಜನಪದ ಕಲೆಗಳಿಗೆ ಹಿಂದಿನಷ್ಟು ಪ್ರೋತ್ಸಾಹವಿಲ್ಲ. ನೋಡುಗರ ಅಭಿರುಚಿಯು ಬದಲಾಗಿದೆ. ಹೀಗಾಗಿ ಈ ಜಾನಪದ ಕಲೆಯನ್ನು ನಂಬಿ ಜೀವನ ನಡೆಸುವ ಚೆನ್ನದಾಸರ ಸಮುದಾಯ ತುಂಬ ಸಂಕಷ್ಟದ ಸ್ಥಿತಿಯನ್ನೆದುರಿಸುತ್ತಿದೆ. ಉಪಜೀವನಕ್ಕಾಗಿ ಈಗಲೂ ಪರದಾಡುವಂತಾಗಿದೆ.

೩.೨.೫. ದೊಂಬಿದಾಸರು

ಈ ಸಮುದಾಯ ಕರ್ನಾಟಕದ ದಕ್ಷಿಣ ಭಾಗದಲ್ಲಿ ನೆಲೆ ನಿಂತಿದೆ. ಇಲ್ಲಿರುವ ದೊಂಬಿ ಮತ್ತು ದಾಸ ಎರಡು ಪದಗಳಿಗೆ ವಿಶೇಷ ಹಿನ್ನೆಲೆಯಿದೆ. 'ದೊಂಬಿ' ಎಂದರೆ ಗದ್ದಲ. ಗದ್ದಲ–ಗಲಭೆಯನ್ನು ಸಂಕೇತಿಸುವ ಪದವಾಗಿ ತೋರುತ್ತದೆ. ಇವರ ಆಟ–ಬಯಲಾಟ ಗೊಂದಲ ಮಯವಾಗಿದ್ದು, ಗದ್ದಲದಿಂದ ಆರಂಭವಾಗಿ ಗದ್ದಲದಲ್ಲಿಯೇ ಮುಂದುವರೆದು, ಗದ್ದಲದಲ್ಲಿ ಮುಕ್ತಾಯಗೊಳ್ಳುವುದರಿಂದ ಈ ಹೆಸರು ಬಂದಿರುವ ಸಾಧ್ಯತೆಯಿದೆ. ಈ ಸಮುದಾಯದ ಹಾಡುಗಾರರ ಕಂಠ ತುಂಬ ಮಧುರವಾಗಿದ್ದು ಶುಶ್ರಾವ್ಯವಾಗಿ ಹಾಡುತ್ತಾರೆ. ಏಕತಾರಿ ಜಪತಾಳಗಳ ಮೇಳದೊಂದಿಗೆ ಬಹಳ ಮಧುರವಾಗಿ ಬೀದಿ–ಬೀದಿಗಳಲ್ಲಿ ಗಾಯನ ಮಾಡುತ್ತಾರೆ. ಇವರ ಹಾಡುಗಾರಿಕೆಯನ್ನು 'ದೊಂಬಿದಾಸ'ರೆಂದು ಕರೆದಿರಬಹುದು.

'ದುಂಬಿದಾಸ' ಪದವೆ 'ದೊಂಬಿದಾಸ'ವಾಗಿರುವ ಸಾಧ್ಯತೆಯಿದೆ. "ಹಗಲು ಹೊತ್ತಿನಲ್ಲಿ ಭಿಕ್ಷಾಟನೆ ಮಾಡುತ್ತ, ಸಂಜೆ ಮತ್ತು ರಾತ್ರಿ ಹಾಡುಗಾರಿಕೆಯಲ್ಲಿ ತೊಡಗಿರುವ ಜನಾಂಗ, ದಲಿತ ವರ್ಗಕ್ಕೆ ಸೇರಿದ ಸಮುದಾಯವಿದು" ಎಂದು ಮೈಸೂರು ಟ್ರೈಬ್ಸ್ ಮತ್ತು ಕಾಸ್ಟ್'ದಲ್ಲಿ ದಾಖಲಿಸಲಾಗಿದೆ.[೧೦] ಈ ರೀತಿಯಾಗಿ ಹಿಂದಿನ ಅಧ್ಯಯನಕಾರರು 'ದೊಂಬಿದಾಸರು' ಪದವನ್ನು ತಮ್ಮ ಅಧ್ಯಯನದ ವ್ಯಾಪ್ತಿಯೊಳಗೆ ಅರ್ಥೈಸಿದ್ದಾರೆ. ಆದರೆ ಇದು ಕಪೋಲಕಲ್ಪಿತವಾದ ಸಂಗತಿಯೆಂದು ಹೇಳಿರುವ ಅದೇ ಸಮುದಾಯದ ಡಾ. ಯಲ್ಲಪ್ಪ. ಬಿ ಹಿಮ್ಮಡಿಯವರು ವಿವರಿಸಿದ್ದು ಹೀಗೆ "ಈ ಗುಂಪಿನವರು ಭಿಕ್ಷಾಟನೆಗೆ ಹೊರಟಾಗ ಬಳಸುವ ಪ್ರಮುಖ ವಾದ್ಯವೆಂದರೆ ತಂಬೂರಿ. ಇದಕ್ಕೆ ಒಂದೇ ತಂತಿ ಇರುವುದರಿಂದ ಇದನ್ನು 'ಏಕತಾರಿ' ಎಂದು ಕರೆಯುತ್ತಾರೆ. ಆದರೆ ಜನ ಕರೆಯುವುದು ಮತ್ತು ಹಿಂದಿನ ಸಾಹಿತ್ಯದ ದಾಖಲೆಗಳಲ್ಲಿ ತಂಬೂರಿ ಎಂದು ಬಳಕೆಯಾಗಿದೆ. ತಂಬೂರಿದಾಸರು, ದೊಂಬೂರಿದಾಸರು> ದೊಂಬಿದಾಸರು ಈ ಪದದ ನಿಷ್ಪನ್ನವಾಗಿದೆ. ನಾಲಿಗೆಯ ತೊಡರಿನಿಂದಾಗಿ ದೊಂಬದಾಸ ಎಂದೂ ಪ್ರಾರಂಭದಲ್ಲಿ ಇಂಗ್ಲಿಷನ 'ಡಿ' ಅಕ್ಷರದಿಂದಾಗಿ

ಡೊಂಬದಾಸ ಇಂದು ಕೆಲವೆಡೆ ಬಳಕೆಗೊಂಡಿರುವುದುಂಟು"[೧೧] ಎಂದು ಏಕತಾರಿ ಅಥವಾ ತಂಬೂರಿಯ ಕುರಿತು ಸ್ಪಷ್ಟೀಕರಣ ನೀಡಿದ್ದಾರೆ. ಚೆನ್ನದಾಸರ ಮೂಲದ ಈ ಸಮುದಾಯದವರು ಮೈಸೂರು ಭಾಗದ ಪ್ರಾಂತದಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಕುಪ್ಪೆ ನಾಗರಾಜ ಅವರು 'ದೊಂಬಿದಾಸ' ಜನಾಂಗ ಕುರಿತು ಪ್ರತ್ಯೇಕ ಗ್ರಂಥವೊಂದನ್ನು ರಚಿಸಿದ್ದಾರೆ.[೧೨] ಅಶಿಕ್ಷಿತ ಭಿಕ್ಷುಕ ವೃತ್ತಿಯ ಈ ಸಮುದಾಯದವರು ಕೃಷಿ, ಕೂಲಿ, ಕೀಲಿಕೈ ರಿಪೇರಿ, ಬ್ಯಾಟರಿ, ಛತ್ರಿ ರಿಪೇರಿ ಮಾಡುವ ವೃತ್ತಿಯಲ್ಲಿ ನಿರತರಾಗಿದ್ದಾರೆ. ಸರಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದು, ಅಕ್ಷರ ಪ್ರಪಂಚದಿಂದ ದೂರವುಳಿದ, ಸಮಾಜದ ಮುಖ್ಯವಾಹಿನಿಯಿಂದ ಹೊರಗುಳಿದ ಇವರ ಬದುಕಿಗೆ ಹೊಸ ಕಾಯಕಲ್ಪ ನೀಡಬೇಕಾಗಿದೆ ಅನಿವಾರ್ಯತೆಯಿದೆ. ಅಂದಾಗ ಮಾತ್ರ ಇವರು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯ ಮತ್ತು ಇತರ ಸಮುದಾಯಗಳಂತೆ ಜೀವನ ನಡೆಸಲು ಸಾಧ್ಯವಾಗುತ್ತದೆ.

೩.೨. ೬. ಚಕ್ರವಾದ್ಯ ದಾಸರು

'ಚಕ್ರವಾದ್ಯ'ವೆಂಬುದು ಒಂದು ಚರ್ಮ ವಾದ್ಯವಾಗಿದೆ. ಚಕ್ರದ ಆಕಾರದಲ್ಲಿ ದುಂಡಾಗಿರುವ ಈ ಧರ್ಮವಾದ್ಯವನ್ನು ಭಿಕ್ಷೆಗೆ ಹೋದಾಗ ನುಡಿಸುತ್ತಾರೆ. ವಿಶೇಷವಾಗಿ ಹನುಮಂತ ದೇವರ ಪೂಜೆಯ ಸಮಯದಲ್ಲಿ ಚಕ್ರವಾದ್ಯವನ್ನು ನುಡಿಸುವುದುಂಟು. ಚಕ್ರವಾದ್ಯ ನುಡಿಸುವವರನ್ನು 'ಚಕ್ರವಾದ್ಯದಾಸ' ರೆಂದು ಕರೆಯುವರು.

ಈ ಚಕ್ರವಾದ್ಯದಾಸರನ್ನು ವಾದ್ಯದ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ. ಆರಂಭದ ಅಧ್ಯಯನಕಾರರು ಇವರನ್ನು ಚಕ್ರವರ್ತಿದಾಸರೆಂದು ದಾಖಲಿಸಿದ್ದಾರೆ. ಇದು ಸರಿಯಲ್ಲ. ಚಕ್ರವಾದ್ಯ ಧರ್ಮವಾದ್ಯದ ಹಿನ್ನೆಲೆಯನ್ನು ಅರಿಯದೆ ನಗರಗಳಲ್ಲಿ ಕುಳಿತು ವ್ಯಾಖ್ಯಾನಿಸಿರುವುದು ದುರಂತವಿದು. ಭಾರತ ಸರಕಾರವು ಈ ಚಕ್ರವಾದ್ಯದಾಸರನ್ನು ೧೯೩೫ರಲ್ಲಿ ಪರಿಶಿಷ್ಟ ಜಾತಿಗಳ ಪಟ್ಟಿಗೆ ಸೇರ್ಪಡೆಗೊಳಿಸಿ ಸೌಲಭ್ಯ ಕಲ್ಪಿಸಿದೆ. ಭಾರತ ಸರಕಾರ ಕಲ್ಪಿಸಿದ ಸೌಲಭ್ಯವನ್ನು ಅರಿಯದ ಈ ಜನಾಂಗ ಭಿಕ್ಷಾಟನೆಯನ್ನೆ ತನ್ನ ಪ್ರಧಾನ ಜೀವನ ವೃತ್ತಿಯಾಗಿಸಿಕೊಂಡಿದೆ.

೩.೨.೭. ಶಂಖದಾಸರು

ಈ ಸಮುದಾಯವನ್ನು ಭಿಕ್ಷಾಟನೆಗೆ ಪ್ರಮುಖವಾಗಿ ಶಂಖವನ್ನು ಬಳಸುವುದರಿಂದ .ಇವರನ್ನು ಶಂಖದಾಸರೆಂದು ಕರೆಯುತ್ತಾರೆ. ಭಿಕ್ಷಾಟನೆ ಸಂದರ್ಭದಲ್ಲಿ ಮನೆ-ಮನೆಗಳ ಮುಂದೆ

ನಿಂತು ಜಾಗಟೆ ಹೊಡೆದು ಶಂಖವನ್ನೂದುತ್ತ 'ವೆಂಕಟರಮಣ ಗೋವಿಂದಾss ಗೋವಿಂದಾss' ಎಂದು ಉಘಡಿಸಿ ಭಿಕ್ಷೆ ಬೇಡುತ್ತಾರೆ. ಭಿಕ್ಷೆಗೆ ಹೋದಾಗ ಹಾಡುವದಿಲ್ಲ. ಆದ್ದರಿಂದ ಇವರಲ್ಲಿ ದಂಡಗೆ, ತಂಬೂರಿ, ಶ್ರುತಿ ವಾದ್ಯಗಳಿರುವದಿಲ್ಲ. ಇವರನ್ನು ದಾಸಯ್ಯಾ, ಶಂಖದಾಸಯ್ಯ ಎಂದು ಜನರು ಕರೆಯುತ್ತಾರೆ. ಈ ಸಮುದಾಯದವರು ಮೈಸೂರು ಪ್ರಾಂತ್ಯದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ಮೈಸೂರು ಟ್ರೈಬ್ಸ್ ಮತ್ತು ಕಾಸ್ಟ್‌ದಲ್ಲಿ ಇವರ ಉಲ್ಲೇಖವಿದೆ.

೩.೨.೮. ಗೋಪಾಳ ಬುಟ್ಟಿದಾಸರು

ಚೆನ್ನದಾಸ ಸಮುದಾಯದ ಎಲ್ಲ ಉಪನಾಮದವರಲ್ಲಿ ಗೋಪಾಳ ಬುಟ್ಟಿಯನ್ನು ಬಳಸುವ ಸಂಪ್ರದಾಯವಿದೆ. ಭಿಕ್ಷೆಯ ಅಕ್ಕಿ, ದವಸಧಾನ್ಯಗಳನ್ನು ಈ ಗೋಪಾಳ ಬುಟ್ಟಿಯಲ್ಲಿಯೇ ನೀಡಿಸಿಕೊಳ್ಳುತ್ತಾರೆ. ಚೆನ್ನದಾಸರ ಸಮುದಾಯದ ಕುಲ ಸಂಕೇತವೆ ಗೋಪಾಳ ಬುಟ್ಟಿಯಾಗಿದೆ. ಕೆಲವು ಕಡೆ ಭಿಕ್ಷಾಟನೆಗೆ ಗೋಪಾಳ ಬುಟ್ಟಿಯ ಬದಲಿಗೆ ಜೋಳಿಗೆಯನ್ನು ಒಯ್ದರೂ, ಮನೆಯಲ್ಲಿಯಾದರೂ ಅದನ್ನು ಇಡುತ್ತಾರೆ. ಕೆಲವರು ಭಿಕ್ಷಾಟನೆ ವೃತ್ತಿಯನ್ನು ತ್ಯಜಿಸಿದ್ದರೂ, ತಮ್ಮೂರಿನ ಹನುಮಂತ ದೇವರ ಜಾತ್ರೆಯಲ್ಲಿ ದೇವಸ್ಥಾನದ ಮುಂದಿರುವ ಗೋಪಾಳ ಬುಟ್ಟಿಯನ್ನು ಹೆಗಲಿಗೆ ಹಾಕಿಕೊಂಡು ಅಲ್ಲಿಯೇ ನಾಲ್ಕು ಜನರಿಂದ ಭಿಕ್ಷೆ ಬೇಡುವ ಸಂಪ್ರದಾಯವಿದೆ. ನಿರಂತರವಾಗಿ ಗೋಪಾಳಬುಟ್ಟಿಯಲ್ಲಿಯೆ ಭಿಕ್ಷಾಟನೆ ಮಾಡುವವರನ್ನು ಗೋಪಾಳಬುಟ್ಟಿ ದಾಸರೆಂದು ಕರೆಯಲಾಗುತ್ತದೆ. ಈ ಸಂಪ್ರದಾಯವನ್ನು ಆಚರಿಸಿಕೊಂಡು ಬರುವ ಚೆನ್ನದಾಸರು ಪ್ರಸ್ತುತ ಗೋಕಾಕ ತಾಲೂಕಿನ ಕಲ್ಲೋಳಿಯ ಹಣಮಂತ ದೇವರ ಜಾತ್ರೆಯಲ್ಲಿ ಪ್ರತಿ ವರ್ಷ ನಡೆಸಿ ಸಂಪ್ರದಾಯವನ್ನು ಇಂದಿಗೂ ಜೀವಂತವಾಗಿರಿಸಿದ್ದಾರೆ.

ಬಾಗಲಕೋಟ-ಬಿಜಾಪೂರ ಜಿಲ್ಲೆಯಲ್ಲಿ ರೈತಾಪಿ ಜನಾಂಗದವರು ಹೊಲಗಳಲ್ಲಿ ರಾಶಿ ಮಾಡುವಾಗ ಆಯಗಾರಿಕೆಯ ಹೆಸರಿನಲ್ಲಿ ಹಲವು ಸಮುದಾಯಗಳಿಗೆ ಧಾನ್ಯವನ್ನು ನೀಡುವ ಸಂಪ್ರದಾಯ ಇಂದಿಗೂ ಜಾರಿಯಲ್ಲಿದೆ. ಅಂಥ ಆಯಗಾರಿಕೆಯನ್ನು ಪಡೆಯುವವರಲ್ಲಿ ಒಬ್ಬರಾದ ಹೊಲೆಯದಾಸರು ಗೋಪಾಳಬುಟ್ಟಿಯನ್ನಿಟ್ಟು ಧಾನ್ಯ ಪಡೆಯುವ ಪದ್ಧತಿ ಇವತ್ತಿಗೂ ಮುಂದುವರೆದಿದೆ. ಗೋಪಾಳಬುಟ್ಟಿಗೆ ಧಾನ್ಯ ನೀಡಿದ ತರುವಾಯ, ರೈತರು ಧಾನ್ಯವನ್ನು ಚೀಲದಲ್ಲಿ ತುಂಬುವುದನ್ನು ಈಗಲೂ ಪಾಲಿಸಿಕೊಂಡು ಬಂದಿದ್ದಾರೆ. ರಾಶಿ ಮುಗಿದರೂ, ಅಕಸ್ಮಾತ ಗೋಪಾಳ ಬುಟ್ಟಿದಾಸರು ಭಿಕ್ಷಾಟನೆಗೆ ಬಾರದೆ ಹೋದರೆ; ಅವರ ಪಾಲಿನ ದವಸ-ಧಾನ್ಯವನ್ನು ತೆಗೆದಿರಿಸಿಯೇ

ಧಾನ್ಯ ತುಂಬುವ ಕಾರ್ಯ ನಡೆಯುತ್ತದೆ. ಇದು ಅವರ ಕುರಿತಾಗಿರುವ ಗೌರವದ ಪ್ರತೀಕ ಮತ್ತು ಸಂಪ್ರದಾಯವೂ ಹೌದು.

ಈವರೆಗೆ ಪ್ರಸ್ತಾಪಿಸಿದ ಎಲ್ಲ ಉಪನಾಮಗಳು ಚೆನ್ನದಾಸರ ಸಮುದಾಯಗಳಿಗೆ ಸಂಬಂಧಪಟ್ಟಿರುತ್ತವೆ. ಅಷ್ಟೇ ಅಲ್ಲದೆ–ಮಾಲದಾಸರಿ, ದಶವಂತದಾಸರಿ, ಹೊಲೆಯದಾಸರು ಇನ್ನೂ ಮುಂತಾದ ಸಮುದಾಯಗಳು ಪ್ರಸ್ತುತ ಅಧ್ಯಯನದ ಚೆನ್ನದಾಸರ ಉಪನಾಮಗಳೆ ಆಗಿವೆ. ವೃತ್ತಿ ಮತ್ತು ವೃತ್ತಿಪರ ಪರಿಕರಗಳ ಮೂಲಕ ಚೆನ್ನದಾಸರ ಸಮುದಾಯವು ಬೇರೆ ಬೇರೆ ಹೆಸರುಗಳಿಂದ ರಾಜ್ಯದಾದ್ಯಂತ ಹರಡಿಕೊಂಡಿವೆ. ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಗುಜರಾತ ರಾಜ್ಯಗಳಲ್ಲಿ ಚೆನ್ನದಾಸರ ಸಮುದಾಯ ಇರುವುದನ್ನು ಅಧ್ಯಯನಕಾರರು ಗುರುತಿಸಿದ್ದಾರೆ. ದೇಶದ ಅದರಲ್ಲಿಯೂ ದಕ್ಷಿಣ ಭಾರತದ ಹಲವು ಕಡೆಗಳಲ್ಲಿ ತಮ್ಮ ನೆಲೆ ಕಂಡುಕೊಂಡಿರುವ ಈ ಸಮುದಾಯವು ಇಂದಿಗೂ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಒಂದಿರುವುದು ಅದರ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ.

"ಭಾರತ ಸರಕಾರದ ೧೯೩೬ರ ಆರ್ಡರ್ಸ್ ಇನ್ ಕೌನ್ಸಿಲ್‌ದಲ್ಲಿಯ ಒಂದು ಪರಿಶಿಷ್ಟದಲ್ಲಿ ಅಸ್ಪೃಶ್ಯ ಎಂದು ಪರಿಗಣಿಸಲ್ಪಟ್ಟಿರುವ ಜನಾಂಗ ಇಲ್ಲವೆ, ಪಂಗಡ ಇಲ್ಲವೆ ಗುಂಪುಗಳ ಪಟ್ಟಿಯನ್ನು ಕೊಡಲಾಗಿದೆ. ಅದನ್ನು ಬಾಬಾಸಾಹೇಬ ಅಂಬೇಡ್ಕರ್ ಅವರು ತಮ್ಮ 'ಅಸ್ಪೃಶ್ಯರು ಯಾರು?' ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾರೆ. ವಿವಿಧ ರಾಜ್ಯಗಳಲ್ಲಿನ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಚೆನ್ನದಾಸರ, ಚಕ್ರವಾದ್ಯದಾಸರ, ಮಾಲದಾಸರಿ, ಮಾಲದಾಸು, ಹೊಲೆಯದಾಸರಿ, ನಟ, ಮುಂತಾಗಿ ಈ ಸಮುದಾಯದ ಹೆಸರುಗಳಾಗಿವೆ. 'ನಟ' ಎನ್ನುವ ಪದ ನಟುವರಾದ ದಾಸರಿಗೆ ಬಳಸುವ ಪದವಾಗಿದೆ. ಈ 'ನಟ' ಜಾತಿ ಉತ್ತರದ ಹಲವಾರು ರಾಜ್ಯಗಳ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿದೆ. ಅಂದರೆ ಈ ಸಮುದಾಯ ಭಾರತದ ತುಂಬ ಹರಡಿರುವ ಸಾಧ್ಯತೆ ಇದೆ ಎಂಬುದನ್ನು ಸೂಚಿಸುತ್ತದೆ"[೧೩] ಎಂಬ ಮಾತು ವಿಚಾರಣೀಯವಾಗಿದೆ. ಇದನ್ನು ಉಲ್ಲೇಖಿಸಿ ಹೇಳುವುದಾದರೆ, ಈ ಸಮುದಾಯ ದೇಶದ ತುಂಬ ತನ್ನ ನೆಲೆಗಳನ್ನು ಕಂಡುಕೊಂಡಿದೆ.

ವೃತ್ತಿ ಹಾಗೂ ವೃತ್ತಿಯಾಧಾರಿತ ವಾದ್ಯಗಳ ಮೂಲಕ ಪ್ರಸ್ತುತ ದಾಸ ಸಮುದಾಯಕ್ಕೆ ಚರಿತ್ರೆಯ ನಂಟಿದೆ. ಥರ್ಸ್ಟನ್ ಅವರ ಪ್ರಬಂಧದಲ್ಲಿ ಈ ಅಂಶವನ್ನು ಸೂಚಿಸಲಾಗಿದೆ. "Dasar is not a Caste, but Simply an occupational division" ಎಂದು ಹೇಳಲಾಗಿದೆ. ಕೆ.ಎಸ್. ಸಿಂಗ್ ಅವರು "ಪೀಪಲ್ ಆಫ್ ಇಂಡಿಯಾ–ಕರ್ನಾಟಕ" ಪುಸ್ತಕದಲ್ಲೂ "ದಾಸರಿಗಳಲ್ಲಿ ಸಾಮಾಜಿಕ ವಿಭಜನೆ, ಸಾಮಾಜಿಕ ಶ್ರೇಣಿ ಹಾಗೂ ಉಪವಿಭಾಗಗಳಿರುವುದಿಲ್ಲ. ಆದರೆ ಅವರು ಮಾಡುವ

ಉದ್ಯೋಗದಿಂದ ಶಂಖದಾಸರಿ, ಶನಿವಾರದಾಸರಿ, ನಾಮಧಾರಿದಾಸರಿ ಮತ್ತು ಧರ್ಮದಾಸರಿ ಎಂದು ವ್ಯತ್ಯಾಸ ಮಾಡುವುದುಂಟು" ಎಂದು ಸೂಚಿಸಲಾಗಿದೆ. ಇದನ್ನು ಅವಲೋಕಿಸಿದರೆ, ದಾಸರಿ ಎಂಬುದು ಒಂದು ಉದ್ಯೋಗಮಾಡುವ ಜನರ ಸಮುದಾಯವೆ ಹೊರತು, ಒಂದು ಜಾತಿ ಅಲ್ಲ ಎಂಬುದನ್ನು ಸೂಚಿಸುತ್ತದೆ.

೩.೩. ಚೆನ್ನದಾಸರ ಸಮುದಾಯದ ಪೌರಾಣಿಕ ಹಿನ್ನೆಲೆ

ಪ್ರತಿಯೊಂದು ಸಮುದಾಯ ತನ್ನದೆ ಆದ ಪುರಾಣ ಪ್ರಪಂಚವನ್ನು ನಿರ್ಮಿಸಿ ಕೊಂಡಿರುತ್ತದೆ. ತನ್ನ ಸಮುದಾಯದ ಪರಂಪರೆಯು ಧಾರ್ಮಿಕ ಪುರುಷನಿಂದ ಪ್ರಾರಂಭವಾಗಿದೆ ಎಂದು, ಪೌರಾಣಿಕ ವ್ಯಕ್ತಿಯೇ ತಮ್ಮ ಪರಂಪರೆಯ ಮೂಲ ಪುರುಷನೆಂದು ಹೇಳಿ ಹೆಮ್ಮೆ ಪಡುವುದು ಸರ್ವೇಸಾಮಾನ್ಯವಾಗಿದೆ. ಪೌರಾಣಿಕ ವ್ಯಕ್ತಿ ಅಥವಾ ಐತಿಹಾಸಿಕ ಸಂಗತಿಯಿರಬಹುದು. ಚಾರಿತ್ರಿಕ ಘಟನೆಯನ್ನು ಆಧರಿಸಿರಬಹುದು. ತನ್ನ ಸಮುದಾಯಕ್ಕೆ ಸುಧೀರ್ಘ ಪರಂಪರೆಯಿದೆ, ಭವ್ಯವಾದ ಇತಿಹಾಸವಿದೆ ಎಂದು ಸಾಧಿಸುವಲ್ಲಿಯೆ ಒಂದು ರೀತಿಯ ಧನ್ಯತೆಯನ್ನು ಪಡೆಯುತ್ತದೆ.

ಚೆನ್ನದಾಸರ ಸಮುದಾಯವು ಅಸಂಘಟಿತವಾಗಿ ಚೆದುರಿಹೋದ, ಅಶಿಕ್ಷಿತ ಮತ್ತು ಅಲ್ಪಸಂಖ್ಯೆಯ ಜನಾಂಗವಾಗಿದೆ. ಶೈಕ್ಷಣಿಕವಾಗಿ ಹಿಂದುಳಿದ, ಸಂಘಟನೆಯ ಕೊರತೆಯಿರುವ, ಆರ್ಥಿಕ ಮುಗ್ಗಟ್ಟಿನಿಂದ ತತ್ತರಿಸಿಹೋದ, ಹಿಂದುಳಿದ ಸಮುದಾಯ ಇದಕ್ಕೊಂದು ಇತಿಹಾಸವಿದೆ ಎಂಬುದನ್ನು ತಿಳಿದುಕೊಂಡಿಲ್ಲ. ತಿಳಿದುಕೊಳ್ಳುವ ಗೋಜಿಗೂ ಹೋಗಿಲ್ಲ. "ಪ್ರತಿ ಜನಾಂಗವು ತಮ್ಮ ವಂಶವು ಒಬ್ಬ ದೇವತಾ ಪುರುಷನಿಂದ ಅಥವಾ ಮಹರ್ಷಿಯಿಂದ ಆರಂಭವಾಗುವ ಗೋತ್ರಕ್ಕೆ ಸಂಬಂಧಪಟ್ಟಿದೆ" ಎಂದು ಹೇಳಿಕೊಳ್ಳುವುದು ಈ ದೇಶದಲ್ಲಿ ಸರ್ವೇ ಸಾಮಾನ್ಯವಾಗಿದೆ. ಆದರೆ "ದಾಸರ ವಂಶದ ಮೂಲಪುರುಷನು ಯಾವ ಋಷಿಯೂ ಆಗಿರದೆ, ಸಾಮಾನ್ಯ ಮಾನವನೆ ಆಗಿದ್ದಾನೆ. ಈತನ ಹೆಸರು "ಅಜಮಿಳ". ಈ ಅಜಮಿಳನು ಊರ ಹೊರಗೆ ವಾಸಿಸುತ್ತಿದ್ದನು. ಈತ ಕೀಳು ಕುಲದವನು. ಪಕ್ಕದ ಕಾಡಿನಿಂದ ಕಟ್ಟಿಗೆ ಕಡಿದು ತಂದು ಮಾರಿ ಅದರಿಂದ ಜೀವನ ನಡೆಸುತ್ತಿದ್ದನು. ಅದೇ ಹಳ್ಳಿಯ ಮತ್ತೊಂದು ಹೊರಬದಿಯಲ್ಲಿ ಬಹಿಷ್ಕೃತಳಾದ ಬ್ರಾಹ್ಮಣ ಮಹಿಳೆಯೊರ್ವಳು ನೆಲೆಸಿದ್ದಳು. ಅತ್ಯಂತ ರೂಪಲಾವಣ್ಯದಿಂದ ತುಂಬಿ ಆಕರ್ಷಕಳಾದ ಉಚ್ಚಕುಲದ ಸ್ತ್ರೀಯಿಂದ ಅಜಮಿಳ ಆಕರ್ಷಿತನಾದ. ಒಂಟಿಯಾದ ಇವಳಿಗೂ ಅವನ ಬಗ್ಗೆ ಕುತೂಹಲ. ಕೆಲಕಾಲದ ಪರಿಚಯದ ನಂತರ ಇಬ್ಬರಿಗೂ ಶರೀರ ಸಂಬಂಧ ಬೆಳೆಯಿತು. ಇವರಿಬ್ಬರೂ ದಾಂಪತ್ಯ

ಜೀವನ ಸಾಗಿಸಿದರು. ಇವರಿಗೆ ಹಲವಾರು ಗಂಡು ಮತ್ತು ಹೆಣ್ಣು ಮಕ್ಕಳು ಜನಿಸಿದರು. ಇವರ ಸಂತತಿಯೇ ಮುಂದೆ ದಾಸರಾದರು"[೧೪] ಎಂದು ಡಾ. ಎಂ.ಟಿ. ಧೂಪದ ವಿವರಿಸಿದ್ದಾರೆ.

ಅರ್ಜುನ ಗೊಳಸಂಗಿಯವರು ತಮ್ಮ "ದಲಿತ ಲೋಕದ ಶೋಧ : ಜನಪದೀಯ ಅಧ್ಯಯನ" ಕೃತಿಯಲ್ಲಿ ಇದನ್ನೆ ಪ್ರಸ್ತಾಪಿಸಿದ್ದಾರೆ.[೧೫] ಮಾನವ ಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಪೌರಾಣಿಕ ಹಿನ್ನೆಲೆಯನ್ನು ವ್ಯಾಖ್ಯಾನಿಸಿದ್ದು ಹೀಗಿದೆ. 'ಬಹಿಷ್ಕಾರ ಹೊಂದಿದ ಸ್ತ್ರೀ ಆರ್ಯಳಾಗಿ ಪುರುಷ ದ್ರಾವಿಡನಾಗಿರಬಹುದು. ದಾಸ ಸಮುದಾಯ ಕ್ಷತ್ರೀಯರೆಂದು ಮಾರುತಿಯ ಪೂಜಾರಿ ಗಳೆಂದು ತಿಳಿದು ಬರುತ್ತದೆ. ಉತ್ತರ ಕರ್ನಾಟಕದ ಪ್ರತಿ ಹಳ್ಳಿ-ಹಳ್ಳಿಗಳಲ್ಲಿಯೂ ಹನುಮಂತ, ಮಾರುತಿ ದೇವರ ದೇವಾಲಯಗಳಿರುತ್ತವೆ. ಅನೇಕ ಆಂಜನೇಯನ ಪೂಜಾರಿಗಳು ಕ್ಷತ್ರೀಯರಾಗಿದ್ದಾರೆಂದು"[೧೬] ದಾಸರ ಮೂಲವನ್ನು ವಿವರಿಸುತ್ತ ಪ್ರೊ. ಬಿ.ವ್ಹಿ. ಗುಂಜೆಟ್ಟಿಯವರು ಪ್ರಸ್ತಾಪಿಸಿರುವುದು ಹೀಗಿದೆ. "ದಾಸರ ಮೂಲ ಪುರುಷ ಅಜಮಿಳನೆಂಬುದು ಒಂದು ಅಖ್ಯಾಯಿಕೆಯುಂಟು. ಅಜಮಿಳನೆಂಬುವವನು, ಕನ್ಯಾಕುಬ್ಜದಲ್ಲಿ ಬ್ರಾಹ್ಮಣ ಮಾತಾಪಿತೃಗಳನ್ನು ಧರ್ಮಪತ್ನಿಯನ್ನು ಪರಿತ್ಯಾಗಮಾಡಿ ಶೂದ್ರ ಸ್ತ್ರೀ ಸಂಪರ್ಕ ಮಾಡಿ ಅನೇಕ ಮಕ್ಕಳನ್ನು ಹೊಂದಿದನು. ಆ ಮಕ್ಕಳೆ ದಾಸ ಕುಲದವರಾದರೆಂದು ಹೇಳುವುದುಂಟು"[೧೭]

ಮತ್ತೊಂದು ಮೂಲದ ಪ್ರಕಾರ "ಬ್ರಾಹ್ಮಣನಾದ ಅಜಮಿಳನು ಕೆಳಜಾತಿಯ ಮಹಿಳೆ ಯನ್ನು ಮದುವೆಯಾದನು. ಅವರಿಗೊಂದು ಗಂಡು ಮಗುವಾಯಿತು. ತಂದೆಯ ಕಡೆಯವರು ಹಾಗೂ ತಾಯಿಯ ಕಡೆಯವರು ಇಬ್ಬರೂ ಆ ಮಗುವನ್ನು ಸ್ವೀಕರಿಸಲಿಲ್ಲ. ಎರಡು ಕುಲದವರೂ ತಿರಸ್ಕರಿಸಿದ ಬಳಿಕ ಮಗುವು ಅನಾಥವಾಯಿತು. ಬದುಕುವುದಕ್ಕಾಗಿ ಭಿಕ್ಷೆ ಬೇಡುವುದು ಅನಿವಾರ್ಯವಾಯಿತು. ಹೀಗೆ ಭಿಕ್ಷಾ ವೃತ್ತಿ ಕೈಕೊಂಡವನೆ ಚೆನ್ನದಾಸ. ಅವನ ವಂಶಸ್ಥರೆ ಚೆನ್ನದಾಸರಾದರೆಂದು ಮಾಹಿತಿದಾರ (ಮುತ್ತಿನಗೆರೆ ತುಕಾರಾಮ) ಹೇಳುತ್ತಾನೆ.

ಪುರಾಣ ಭಾರತಕೋಶದಲ್ಲಿ ಅಜಮಿಳನ ಪ್ರಸಂಗದ ನಿರೂಪಣೆಯಿದೆ. "ಅಜಮಿಳನು ಕನೋಜಿನ ಓರ್ವ ಬ್ರಾಹ್ಮಣ ಪುರುಷ. ಆತ ಹೊಲತಿಯನ್ನು ಕಂಡು ಮೋಹಿಸಿ, ಅವಳನ್ನು ಪಡೆದು ಸಂಸಾರಿಯಾದನು. ಮುಂದೆ ಅವರಿಂದ ಅನೇಕ ಮಕ್ಕಳು ಜನಸಿದರು. ಅಜಮಿಳ ಸಾಯುವ ಸಂದರ್ಭದಲ್ಲಿ ಯಮಧೂತರಿಗೆ ಹೆದರಿ, ಭಯಭೀತನಾಗಿ 'ನಾರಾಯಣ' ಎಂದು ತನ್ನ ಕಿರಿಯ ಮಗನನ್ನು ಕರೆಯುತ್ತಾನೆ. ನಾರಾಯಣನನ್ನು ಸ್ಮರಿಸಿದ್ದರಿಂದ ಹರಿನಾಮದ ಸ್ಮರಣೆಯಾಗಿ ವೈಕುಂಠ ಪದವಿಯನ್ನು ಪಡೆದನು"[೧೮] ಎಂಬ ಉಲ್ಲೇಖವಿದೆ.

ಇನ್ನೊಂದು ಅಖ್ಯಾಯಿಕೆಯಲ್ಲಿ "ವೈಷ್ಣವ ಸಂತನಾದ ಏಕಾಂಗ ರಂಗಸ್ವಾಮಿಯ ಬಣಜಿಗ ಶಿಷ್ಯ ಹಾಗೂ ಕುರುಬರ ಹೆಣ್ಣುಮಗಳ ಸಂಪರ್ಕದಿಂದ ಜನಸಿದ ಮಕ್ಕಳೆಂದು ಹೇಳಿ, ಕಂಚಿ ತಾತಾಚಾರ್ಯರೆ ತಮ್ಮ ಮೂಲ ಪುರುಷನೆಂದು ಹೇಳುವ ಒಂದು ಗುಂಪು ಉಂಟು"[೧೯] ಎಂದು ವಿವರಿಸಲಾಗಿದೆ.

ಎಚ್.ಎ. ಸ್ಟುವರ್ಟ್ ಎಂಬ ವಿದ್ವಾಂಸರು "ದಾಸರು ಉತ್ತರ ಜಿಲ್ಲೆಯೊಂದರ ಸಿರಿವಂತ ಶೂದ್ರನ ಖ್ಯಾತ ವಂಶಜರು. ಅವನು ಮಕ್ಕಳಿಲ್ಲವಾದ್ದರಿಂದ ತನಗೆ ಮಕ್ಕಳಾದರೆ ಅವರಲ್ಲಿ ಒಬ್ಬರನ್ನು ದೇವರ ಸೇವೆಗೆ ಅರ್ಪಿಸುವುದಾಗಿ ಹರಕೆ ಹೊರುತ್ತಾನೆ. ತದನಂತರ ತನಗೆ ಜನಸಿದ ಹಲವು ಮಕ್ಕಳಲ್ಲಿ ಒರ್ವನನ್ನು ದೇವರ ಸೇವೆಗೆಂದು ದಾಸ (ಸೇವಕ)ನೆಂದು ಹೆಸರಿಟ್ಟು ದೇವರ ಸೇವೆಗೆ ಒಪ್ಪಿಸಿ ಹರಕೆ ತೀರಿಸಿದನು. ಅಂದಿನಿಂದ ದಾಸನು ತನ್ನ ತಂದೆಯ ಆಸ್ತಿಯಲ್ಲಿ ತನ್ನ ಪಾಲನ್ನು (ಹಕ್ಕನ್ನು) ಕಳೆದುಕೊಂಡನು. ಆತನಲ್ಲದೆ ಮುಂದೆ ಅವನ ಮಕ್ಕಳು ವಂಶಪಾರಂಪರಾಗತವಾದ ಹಕ್ಕನ್ನು ಕಳೆದುಕೊಂಡು ಭಿಕ್ಷುಕರಾದರು. ಆ ಭಿಕ್ಷುಕರೆ ದಾಸರಾದರು"[೨೦] ಎಂದು ವಿವರಿಸಲಾಗಿದೆ.

ಈ ರೀತಿಯಾಗಿ ಹಲವು ವಿದ್ವಾಂಸರು ತಮ್ಮದೇ ರೀತಿಯಲ್ಲಿ ದಾಸರ ಮೂಲವನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಅಜಮಿಳನ ಪ್ರಸಂಗ ಹೆಚ್ಚುಕಡಿಮೆ ಎಲ್ಲೆಡೆಯೂ ಪ್ರಸ್ತಾಪಿತವಾಗಿದೆ. ಪ್ರಸ್ತುತ ಅಜಮಿಳನ ಆಖ್ಯಾಯಿಕೆಯ ಪ್ರಕಾರ ದಾಸಕುಲವೆಂಬುದು ಆರ್ಯ ಮತ್ತು ದ್ರಾವಿಡ ಜನಾಂಗದ ಸಂಕರ(ಸಂತಾನ)ವೆಂಬ ಸೂಚನೆಯಿದೆ. ಈ ಸಂತಾನವು ಸಾಮಾಜಿಕ ಚತುವರ್ಣ ವ್ಯವಸ್ಥೆಯಲ್ಲಿ ಕೆಳ ಸ್ತರಕ್ಕೆ ತಳ್ಳಲ್ಪಟ್ಟಿತು. ಕಾಲಾನಂತರದಲ್ಲಿ ಸಾಮಾಜಿಕ ವಿಭಜನೆಯ ಜಾತಿ ವ್ಯವಸ್ಥೆಯಲ್ಲಿ ಪರ್ಯಾವಸಾನವಾಗಿರಬಹುದು. ಜಾತಿಪದ್ಧತಿಯಲ್ಲಿ ದಾಸರು ಹೀನಕುಲದವರೆಂದು ತುಚ್ಚೀಕರಿಸಿರುವ ಸಂಭಾವ್ಯತೆಯು ಹೆಚ್ಚಾಗಿದೆ. "ನಾರಾಯಣ ಎನ್ನುವುದು ವಿಷ್ಣುವಿನ ಇನ್ನೊಂದು ನಾಮವಾಗಿದೆ. ಇದು ವೈಷ್ಣವ ಧರ್ಮದ ಪ್ರತೀಕವಾಗಿದ್ದು, ಅದನ್ನು ಸೇರಿದ ಇಂಥ ಹೀನ ಕುಲಗಳಿಗೆ ಒಂದು ಸಾಮಾಜಿಕ ಮತ್ತು ಧಾರ್ಮಿಕ ಮನ್ನಣೆ ನೀಡಿ ಗೌರವಿಸುವುದರ ಪ್ರತೀಕವಾಗಿದೆ. ಅಂದರೆ ತುಚ್ಚೀಕರಣಕ್ಕೊಳಗಾಗಿದ್ದ ದಾಸಕುಲವು ವೈಷ್ಣವ ಧರ್ಮವನ್ನು ಸ್ವೀಕರಿಸಿ ಸಾಮಾಜಿಕ ಮತ್ತು ಧಾರ್ಮಿಕ ಮನ್ನಣೆಯನ್ನು ಗಳಿಸಿಕೊಂಡಿದೆ".[೨೧] ಎಂದು ಅರ್ಥೈಸಬಹುದಾಗಿದೆ.

೩.೪. ಚಾರಿತ್ರಿಕ ಹಿನ್ನೆಲೆ

ದಾಸ ಸಮುದಾಯಕ್ಕೆ ಚಾರಿತ್ರಿಕ ಪ್ರಜ್ಞೆ ಇರದಿದ್ದರೂ, ಸದ್ಯ ಉಪಲಬ್ಧ ಸಾಹಿತ್ಯ ರಾಶಿಯಲ್ಲಿ ಕೆಲವು ಚಾರಿತ್ರಿಕ ಸಂಗತಿಗಳು ಲಭ್ಯವಾಗಿರುವುದನ್ನು ಅಧ್ಯಯನಕಾರರು ಹೆಕ್ಕಿ ತೆಗೆದು

ತಮ್ಮದೆ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಹದಿನೈದು ಮತ್ತು ಹದಿನಾರನೆಯ ಶತಮಾನದಲ್ಲಿ ಹರಿದಾಸ ಪಂಥ ವೈಷ್ಣವ ಧರ್ಮವನ್ನು ಸ್ವೀಕರಿಸುವ ಮೊದಲೆ ಈ ಚೆನ್ನದಾಸರ ಸಮುದಾಯವು 'ದಾಸ' ಮತ್ತು 'ದಾಸರು' ಎನ್ನುವ ಜಾತಿಯಿಂದಲೆ ಗುರುತಿಸಿಕೊಂಡಿದ್ದರು. ಇದಕ್ಕೆ ಸಂಬಂಧಿಸಿದಂತೆ ನಿದರ್ಶನಗಳು ದೊರಕುತ್ತವೆ.

ಆರ್ಯರನ್ನು ಆರಂಭದಲ್ಲಿ ವಿರೋಧಿಸಿ ಪ್ರತಿಭಟಿಸಿದ ದ್ರಾವಿಡರೆ ದಸ್ಯುಗಳಾಗಿ, ದಾಸರೆನಿಸಿಕೊಂಡರು. ಸಹಜ ಕಲಾವಿದರಾದ ಇವರನ್ನು ನಟುವರೆಂದು ಕರೆದಿದ್ದಾರೆ. ಈ ನಟುವರೆ ಮುಂದೆ ಆರು ಮತ್ತು ಏಳನೆಯ ಶತಮಾನದಲ್ಲಿ ವೈಷ್ಣವ ಧರ್ಮಕ್ಕೆ ಸೇರ್ಪಡೆಯಾಗಿ, ವೈಷ್ಣವ ಭಿಕ್ಷುಕರಾದರೆಂದು ಹಲವಾರು ವಿದ್ವಾಂಸರು ವಿವರಿಸಿದ್ದಾರೆ.

ಭಾರತೀಯ ಗೆಝೆಟೀಯರ್‌ನಲ್ಲಿ "ಆರ್ಯ ಮತ್ತು ಅನಾರ್ಯ ಬುಡಕಟ್ಟುಗಳು ಒಂದೆಡೆ ನೆಲೆಯೂರಿ ಜೊತೆಗೆ ಬೆರೆತು ಕೊಳ್ಳುತ್ತಿದ್ದಂತೆ ಏಕಜಾತಿ ಪರಂಪರೆಯು ದೇವ ಮತ್ತು ಅಸುರ, ಆರ್ಯ ಮತ್ತು ದಾಸ, ಧಣಿ ಮತ್ತು ಸೇವಕ ಎಂಬ ದ್ವಿಜಾತಿ ಸಮಾಜಿಕ ವ್ಯವಸ್ಥೆಯಾಗಿ ಮಾರ್ಪಾಡುಗೊಂಡಿತು. ಇದು ಮೂಲ ಮಿಸೆನ್ ಒಡೆಯುವುದರಿಂದ ಆದುದಲ್ಲ. ಹಿಂದೆ ವೈರಿಗಳಾಗಿದ್ದು, ಮೂಲ ನಿವಾಸಿಗಳನ್ನು ಆರ್ಯಸಮಾಜದಲ್ಲಿ ವರ್ತಕರು ಮತ್ತು ಕೂಲಿಗಳಾಗಿ ಸೇರಿಸಿಕೊಂಡುದುದರ ಪರಿಣಾಮವಾಗಿ ಋಗ್ವೇದವು ಹೆಸರಿಸುವಂತೆ ಬಿಳಿಚರ್ಮದವರು ಮತ್ತು ಕರಿಚರ್ಮದವರು ಎಂಬ, ಧಣಿಗಳು ಮತ್ತು ದಾಸರೆಂಬ ಎರಡು ಜಾತಿ ಅಥವಾ ವರ್ಣಗಳು ನಿರ್ಮಾಣವಾದವು."[೨೨] ಎಂ.ಟಿ. ಧೂಪದ ಅವರು "ದಾಸವೆನ್ನುವುದು ಒಂದು ಸಾಂಸ್ಕೃತಿಕ ಹಿನ್ನೆಲೆಯನ್ನು ಒಳಗೊಂಡ ಸಮುದಾಯವಾಗಿದೆ. ಆರ್ಯರು ದಕ್ಷಿಣ ಭಾರತಕ್ಕೆ ಬಂದು ಇಲ್ಲಿರುವವರನ್ನು ತಮ್ಮ ದಾಸ(ಗುಲಾಮ)ರನ್ನಾಗಿ ಮಾಡಿಕೊಂಡ ಸಮುದಾಯ ಇರಬಹುದು. ಅಥವಾ ಆರ್ಯ ಮತ್ತು ದ್ರಾವಿಡರ ಸಂಗಮ ಸಂತತಿ ಎಂದು ಭಾವಿಸಲು ಸಾಧ್ಯವಿದೆ"[೨೩] ಎನ್ನುತ್ತಾರೆ. ಧೂಪದ ಅವರೇ ಮುಂದುವರೆದು ಕೆಲವು ವಿವರಗಳನ್ನು ನೀಡುತ್ತಾರೆ. "ಕೆಲವು ಸಂಸ್ಕೃತ ಗ್ರಂಥಗಳಲ್ಲಿ ದಾಸರನ್ನು ದಸ್ಯುಗಳೆಂದು ವರ್ಣಿಸಿದ್ದು, ಆರ್ಯರನ್ನು ಪ್ರತಿಭಟಿಸಿದ ದ್ರಾವಿಡರೇ ದಸ್ಯುಗಳು"[೨೪] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ನಟುವ ಜನಾಂಗವನ್ನು ಹೋಲುವಂತಹ ಜನರೆಂದು ತಿಳಿಸಲಾಗಿದೆ. ನರಕುಲ ವಿಜ್ಞಾನಿಗಳ ಪ್ರಕಾರ ನಟು ಜನಾಂಗವು ಒಂದು ಅಲೆಮಾರಿ ಜನಾಂಗ. ಕ್ರೊಕರ್ ಅಭಿಪ್ರಾಯದಂತೆ "ಜಿಪ್ಸಿಯಂತಹ ಒಂದು ಜನಾಂಗ. ಇವರು ನೃತ್ಯಗಾರರು. ಆಟವಾಡುವ, ರೂಪಜೀವಿಗಳಾದ ಒಂದು ಜನಾಂಗ. ಈ ಜನಾಂಗದ ಉಗಮ ಸ್ಥಾನದ ಬಗ್ಗೆ ನರಕುಲ ವಿಜ್ಞಾನಿಗಳು ಇನ್ನು ಒಂದು

ನಿಶ್ಚಿತ ಅಭಿಪ್ರಾಯ ತಳೆದಿಲ್ಲ. ನಟು ಜನಾಂಗದ ಉಗಮ ದಾಸ ಜನಾಂಗದ ಉಗಮದಂತಿದೆ"[೨೫] ಎಂದು ಹೇಳಿದ್ದಾರೆ.

ಮತ್ತೊಂದೆಡೆ "ವೇದ ಪುರಾಣಗಳಲ್ಲಿ ಬರುವ ಶುಷ್ಣ, ಶಂಬರ ಇತ್ಯಾದಿಗಳು ಭಾರತದಲ್ಲಿ ಅಡಿಯಿಟ್ಟ ಆರ್ಯರ ಆಕ್ರಮಣಗಳನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದ ಐತಿಹಾಸಿಕ ವ್ಯಕ್ತಿಗಳೆ ಆಗಿದ್ದಾರೆ. ಇವರನ್ನೆ ದಾಸ ಎಂದು ಕರೆದಿರಬಹುದು. ದಾಸ ಎನ್ನುವುದು ಉತ್ತರ ಭಾರತದ ಪಶ್ಚಿಮ ಭಾಗದ 'ದಾಹ' ಎನ್ನುವ ಬುಡಕಟ್ಟಿಗೆ ಸದೃಶ್ಯವಾಗಿದೆ.[೨೬] ಎಂಬ ವಿವರಣೆ ಲಭಿಸುತ್ತದೆ.

ಡಾ. ಪುರುಷೋತ್ತಮ ಬಿಳಿಮಲೆಯವರು –"ಸಾಮಾನ್ಯವಾಗಿ ಮಾರಾಟ ಮಾಡಿದ ಹೆಣ್ಣುಗಳಲ್ಲಿ ಹುಟ್ಟಿದ ಮಗು ಆ ಮನೆಗೆ ದಾಸನಾಗಿರುತ್ತಿದ್ದ ಎಂದು ಹೇಳಲು ಹಾಗೂ ಊಹಿಸಲು ಅವಕಾಶವಿದೆ. ಕೌಟಿಲ್ಯನ ಅರ್ಥಶಾಸ್ತ್ರ ಗ್ರಂಥದಲ್ಲಿ ಉಲ್ಲೇಖಿತವಾದ ಜನ್ಮದಾಸರು ಇಂಥವರೆ ಆಗಿದ್ದಿರಬಹುದು. ಇವರಿಗೆ ಹುಟ್ಟಿನಿಂದ ಸಾಯುವವರೆಗೆ ಒಂದು ಮನೆಯಿಂದ ಬಿಡುಗಡೆಯಿಲ್ಲ. ಇವರು ಹುಟ್ಟುವಾಗಲೆ ದಾಸರು. ಮನುಸ್ಮೃತಿಯಲ್ಲಿ ಉಲ್ಲೇಖಿತವಾದ ಏಳು ಪ್ರಕಾರದ ದಾಸರಲ್ಲಿ ದಾಸೀಪುತ್ರರದ್ದು ಒಂದು ಗುಂಪು. ನಾರದ ಸ್ಮೃತಿಯಲ್ಲಿ ದಾಸಿ ದಕ್ಷಿಣೆಗಳಿಂದ ಬಂದವರು ಎಂಬ ವಿವರವಿದೆ. ಹಾಗೆಯೆ ಕೊಳ್ಳಲ್ಪಟ್ಟವರು ಎಂಬ ಮಾತಿದೆ. ಈ ಮಾತುಗಳೆಲ್ಲ ಮಾರಾಟ ಮಾಡಲ್ಪಟ್ಟ ಇಲ್ಲವೆ ಹುಟ್ಟುತ್ತಲೆ ದಾಸರಾದ ಜನವರ್ಗವೊಂದನ್ನು ಹೇಳುತ್ತವೆ"[೨೭] ಎಂದು ವಿವರಿಸಿದ್ದಾರೆ.

ಜಾನಪದ ವಿದ್ವಾಂಸರು, ಭಾರತೀಯ ಇತಿಹಾಸಕಾರರು, ಮಾನವ ಜನಾಂಗದ ಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳ ಅಭಿಪ್ರಾಯ ಹಾಗೂ ಅವರ ಅಧ್ಯಯನಗಳ ಹಿನ್ನೆಲೆಯಲ್ಲಿ ಮುಖ್ಯವಾಗಿ ಮೂರು ಅಂಶಗಳು ಗೋಚರಿಸುತ್ತವೆ. ಆರ್ಯ ಅಧ್ಯಯನಕ್ಕೆ ಅನುಕೂಲವಾಗಲೆಂದು ಹೀಗೆ ಕ್ರೋಢೀಕರಿಸಬಹುದು.

ಆರ್ಯ ಮತ್ತು ದ್ರಾವಿಡರ ಸಂಘರ್ಷ

ಭಾರತಕ್ಕೆ ಆರ್ಯರ ಆಗಮನದ ನಂತರ ಆರ್ಯ ಮತ್ತು ಭಾರತದ ಮೂಲ ನಿವಾಸಿಗಳಾದ ದ್ರಾವಿಡರ ನಡುವೆ ನಡೆದ ಯುದ್ಧ ನಿರ್ಣಾಯಕ ಘಟ್ಟದಲ್ಲಿ ದ್ರಾವಿಡರು ಸೋತು ಹೋಗಿ ಗುಲಾಮರಾದರು. ಉತ್ತರ ಭಾರತದಲ್ಲಿ ದ್ರಾವಿಡರು ಸೋಲಲ್ಪಟ್ಟರು. ಸೋತ ಜನಾಂಗವನ್ನು

ತಮ್ಮ ದಾಸರನ್ನಾಗಿ ಮಾಡಿಕೊಂಡು ಅವರನ್ನು 'ದಸ್ಯು'ಗಳು, ಅಸುರರು, ಕಿರಾತಕರು, ಮ್ಲೇಚ್ಛರು, ರಾಕ್ಷಸರು ಎಂದು ಕರೆದರು. ಅವರೆ ಮುಂದೆ ದಾಸರಾದದ್ದು ಚಾರಿತ್ರಿಕ ಸತ್ಯವಾಗಿದೆ.

ಮಾರಾಟದ ಸರಕು–ಹುಟ್ಟುತ್ತಲೆ ದಾಸರಾದ ಜನಾಂಗ

ಇನ್ನೊಂದು ಅಂಶದ ಪ್ರಕಾರ, ದಾಸರು ಮಾರಾಟ ಮಾಡಲ್ಪಟ್ಟವರು. ಇವರು ತಮ್ಮ ಅಸ್ತಿತ್ವವನ್ನು ಕಳೆದುಕೊಂಡು, ಕೊಂಡವರ ಸೇವಕರಾದರು, ಇಲ್ಲವೆ ಹುಟ್ಟುತ್ತಲೇ ಇವರು ದಾಸರಾದ ಜನಸಮುದಾಯ ಎಂದು ಹೇಳಲಾಗಿದೆ..

ನಟು–ನಟುವರ–ಕಲಾವಿದರು

ದಾಸರು ಮೂಲತಃ ಕಲಾವಿದರು. ಒಂದು ಸಾಂಸ್ಕೃತಿಕ ಜನಸಮುದಾಯವಾಗಿದ್ದು, ನಟನೆಯಲ್ಲಿ ಚತುರರಾಗಿದ್ದರು. ನಟುವರು–ಆಟವಾಡುವ ರೂಪುಜೀವಿಗಳು. ಬೆಟಗೇರಿ ಕೃಷ್ಣಶರ್ಮ, ಡಾ. ಬಿ.ಬಿ.ಹೆಂಡಿ, ಪ್ರೊ ಬಿ.ವ್ಹಿ. ಗುಂಜೆಟ್ಟಿ, ಡಾ. ನಿಂಗಣ್ಣ ಸಣ್ಣಕ್ಕಿ, ಡಾ. ಬಸವರಾಜ ಮಲಶೆಟ್ಟಿ, ಡಾ. ಎಂ.ಚಿದಾನಂದಮೂರ್ತಿ ಮುಂತಾದವರು ದಾಸರ ಚಾರಿತ್ರಿಕ ಹಿನ್ನೆಲೆಯ ಕುರಿತಾಗಿ ಜಿಜ್ಞಾಸೆ ಮಾಡಿದ್ದಾರೆ. ದಾಸಸಮುದಾಯದ ಉಪನಾಮ ಹಾಗೂ ಪರ್ಯಾಯ ನಾಮಗಳನ್ನು ಚರ್ಚಿಸುತ್ತ ದಾಸರ ಐತಿಹಾಸಿಕ ಹಿನ್ನೆಲೆಯನ್ನು ಪ್ರಸ್ತಾಪಿಸಿದ್ದಾರೆ.

೩.೫. ಸಮುದಾಯದ ಮೂಲ ಮತ್ತು ಪರ್ಯಟನ

ಮಾನವ ಜನಾಂಗಿಯ ಅಧ್ಯಯನಕಾರರು, ಜಾನಪದ ವಿದ್ವಾಂಸರು, ಸಮಾಜ ಶಾಸ್ತ್ರಜ್ಞರು ಮತ್ತು ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ವಿಶ್ಲೇಷಿಸಿರುವಂತೆ " ಈ ದೇಶದ ನಾಗವಂಶದ ದಾಸ ಅಥವಾ ದಸ್ಯುಗಳೆ ಮುಂದೆ ಅನೇಕ ಅಸ್ಪೃಶ್ಯ ಜಾತಿಗಳಾಗಿ ಮಾರ್ಪಟ್ಟಿವೆ. ಅಂಥ ಹಲವು ಸಮುದಾಯಗಳಲ್ಲಿ ಇಂದಿನ ಚೆನ್ನದಾಸರ ಸಮುದಾಯದ ಉಪನಾಮಗಳ ಗುಂಪು ಕೂಡ ಒಂದಾಗಿರುವ ಸಾಧ್ಯತೆಯಿದೆ. ಏಕೆಂದರೆ ಡಾ. ಅಂಬೇಡ್ಕರ್ ಅವರು ಹೇಳುವ ನಾಗರು ಆಂಧ್ರಪ್ರದೇಶ ಮತ್ತು ಕರ್ನಾಟಕ ಮಧ್ಯಭಾಗದಲ್ಲೂ ಇದ್ದರು. ಇತಿಹಾಸಕಾರರಾದ ಡಾ.ಎಂ. ಎಂ. ರಾಜಶೇಖರಯ್ಯನವರು "ನಾಗರು ಕುಲೀನರು ಇವರು ಉಚ್ಛಮಟ್ಟದ ಸಾಂಸ್ಕೃತಿಕ ನೆಲೆಯಲ್ಲಿ ಜೀವಿಸುತ್ತಿದ್ದರು. ಕ್ರಿಸ್ತ ಶಕೆಯ ಮೊದಲ ಶತಮಾನಗಳಲ್ಲಿ ಆಂಧ್ರಪ್ರದೇಶ ಮತ್ತು ಅದರ ನಿಕಟವರ್ತಿ

ಪ್ರದೇಶಗಳು ನಾಗರ ಆಳ್ವಿಕೆಗೆ ಒಳಪಟ್ಟಿದ್ದವು. ಇದಕ್ಕೆ ಹಲವಾರು ಆಧಾರಗಳಿಂದ ಸೂಚನೆ ಸಿಗುತ್ತದೆ" ಎಂದಿದ್ದಾರೆ.

ಶಾತವಾಹನರು ಮತ್ತು ಅವರ ನಂತರ ಬಂದ ಚುಟು ಕುಲ ಶಾತಕರ್ಣಿಗಳು ಹೆಚ್ಚು ಕಡಿಮೆ ನಾಗಕುಲದಿಂದ ಮೂಡಿಬಂದ ರಕ್ತ ಸಂಬಂಧಿಗಳು. ಡಾ. ಎಚ್.ಸಿ. ರಾಯಚೌದರಿ ಗುರುತಿಸಿದಂತೆ ದ್ವಾತ್ರಿಮ ಸತ್ವಕಲಿತ್ತನು ಶಾಲಿವಾಹಸನನ್ನು ಪ್ರತಿನಿಧಿಸುತ್ತಾನೆ. ಈ ಶಾತವಾಹನ ಸಂತತಿಯ ಪೌರಾಣಿಕ ಪ್ರತಿನಿಧಿ ಎನ್ನಬಹುದು. ಅವನು ಬ್ರಾಹ್ಮಣ ಮತ್ತು ನಾಗರ ಬೆರಕೆಯ ಸಂತಾನದವನು. ಆ ಸಂತತಿಯಲ್ಲಿ ಆಳಿದವರ ಹೆಸರುಗಳ ಪಟ್ಟಿಯಲ್ಲಿ ನಾಗರಿಗೆ ವಿಶಿಷ್ಟವಾದ ಹೆಸರುಗಳಿರುವುದರಿಂದ ಇದಕ್ಕೆ ಸಾಕಷ್ಟು ಪುಷ್ಟಿ ದೊರೆಯುತ್ತದೆ. ಶಾತವಾಹನರ ಆಳ್ವಿಕೆಯ ಕಡೆಯ ಘಟ್ಟದ ವೇಳೆಗೆ ನಾಗರು ಬಹಳ ಪ್ರಬಲರಾಗಿ ವರ್ಧಿಸಿದ್ದರೆಂಬುದು ಅನೇಕ ಸಂಗತಿಗಳಿಂದ ಖಚಿತಗೊಳ್ಳುತ್ತದೆ. ಶಾತವಾಹನರ ಪ್ರಮುಖ ಸಂತತಿಯವರಲ್ಲಿ ಕಡೆಯ ರಾಜನಾದ ಪುಲುಮಾಯಿ ಎಂಬುವವನ ಆಳ್ವಿಕೆಯ ಕಾಲದಲ್ಲಿ ಸ್ಕಂದನಾಗ ಎಂಬ ನಾಯಕನೊಬ್ಬನು ಬಳ್ಳಾರಿಯ ಅಧಿಪತಿಯಾಗಿದ್ದುದು ಕಂಡು ಬರುತ್ತದೆ.

ಎರಡನೆಯದಾಗಿ, ಚುಟು ರಾಜನೊರ್ವನ ಮಗಳಾದ ನಾಗ ಮುಲಾನಿಕಾ ಎಂಬುವಳು ದಾನವೊಂದನ್ನು ಕೊಟ್ಟಂತೆ ಉಲ್ಲೇಖವಿದೆ. ಅವಳು ಕೊಟ್ಟ ದಾನವು ಒಂದು ನಾಗ ಹಾಗೂ ಶಿವನಿಂದ ನಾಗಶ್ರೀ ಎಂಬ ಹೆಸರಿನ ಅವಳ ಮಗ. ಈ ಸಂತತಿಯ ಎಲ್ಲ ಉಲ್ಲೇಖಿತ ರಾಜರಿಗೂ ಒಂದೆ ಹೆಸರಿರುವುದು ಇನ್ನೊಂದು ವಿಶೇಷ. ಅದು ಸಹ ನಾಗರ ಜೊತೆ ಈ ಸಂತತಿಯವರಿಗೆ ಹತ್ತಿರದ ಸಂಪರ್ಕವಿದ್ದಿತೆಂಬುದನ್ನು ಸ್ಪಷ್ಟಪಡಿಸುತ್ತದೆ. ಮೂರನೆಯದಾಗಿ ಸೋರಿಂಗೋಯ್‌ನ ರಾಜಧಾನಿ "ಉರಗಪುರ" ಎಂಬ ಹೆಸರು ಯಾರೊ ಒಬ್ಬ ನಾಗ ದೊರೆಯ ಒಂಟಿಯಾದ ಆಳ್ವಿಕೆಯನ್ನು ಸೂಚಿಸುವುದಿಲ್ಲ. ಬದಲಾಗಿ ಸಾಕಷ್ಟು ದೀರ್ಘಾವಧಿಯವರೆಗೆ ಸ್ಥಾಪನೆಗೊಂಡಿದ್ದ ಒಂದು ನಾಗರ ಪಾಳೆಯವನ್ನು ಸೂಚಿಸುತ್ತದೆ."[೨೮] ಎಂದು ವಿವರಿಸಿರುವುದನ್ನು ಇಲ್ಲಿ ಅವಲೋಕಿಸಬಹುದಾಗಿದೆ.

ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ಆಂಧ್ರಪ್ರದೇಶ ಮತ್ತು ಕರ್ನಾಟಕದ ಭಾಗದಲ್ಲಿ ನಾಗ ದೊರೆಗಳ ರಾಜ ಮನೆತನಗಳು ಇದ್ದವೆಂಬುದನ್ನು ಇತಿಹಾಸ ವಿವರಿಸುತ್ತದೆ. ಭಾಷೆಯ ವಿಷಯವಾಗಿಯೂ ಉತ್ತರದ 'ಅಸುರ'ರ ಭಾಷೆ ದಕ್ಷಿಣದ ದ್ರಾವಿಡರ ಭಾಷೆಗೆ ಹತ್ತಿರವಿರುವ ಭಾಷೆಯಾಗಿದ್ದು, ಅದು ತನ್ನ ಸ್ವಂತಿಕೆಯನ್ನು ಉಳಿಸಿಕೊಂಡಿದೆ. ಈ ವಿಷಯವಾಗಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ವಿವರಿಸಿದ್ದು ಹೀಗಿದೆ, "ತಮಿಳು ಮತ್ತು ತತ್ಸಂಬಂಧಿತ

ಭಾಷೆಗಳು ಪ್ರಾಚೀನವಾದ ಅಸುರಭಾಷೆಯ ಆಯಕಟ್ಟಿನ ಮೇಲೆ ನಿಂತಿವೆಯೆಂಬುದು ಈ ದೃಷ್ಟಿಕೋನಕ್ಕೆ ಇನ್ನೊಂದು ಅಂಶವು ಪುಷ್ಟಿ ನೀಡುತ್ತದೆ. ಅದು ಏನೆಂದರೆ ಸಿಂಧೂ ಸೀಮಾರೇಖೆಯ ಬಳಿಯ ಒಂದು ಬುಡಕಟ್ಟಾದ ಬ್ರಹ್ವೀಗಳ ಭಾಷೆಯ (ತಮಿಳು ಮತ್ತು ತತ್ಸಂಬಧಿತ) ಭಾಷೆಯೊಡನೆ ಬಹುವಾಗಿ ಹೋಲುತ್ತದೆ. ಅದೆಷ್ಟರ ಮಟ್ಟಿಗೆ ಹೋಲಿಕೆಯೆಂದರೆ ಡಾ. ಕಾಲ್ಡವೆಲ್ ಹೇಳುವಂತೆ " ಬ್ರಾಹುಯಿ (ಭಾಷೆಯು) ದ್ರಾವಿಡ ಜನಾಂಗವನ್ನು ಸಿಂಧೂ ನದಿಯಿಂದಾಚೆಗೆ ಅಂದರೆ ಮಧ್ಯ ಏಷ್ಯಾದ ದಕ್ಷಿಣ ಭಾಗಗಳವರೆಗೆ ಗುರುತಿಸಲು ಸಾಧ್ಯಮಾಡಿಕೊಡುತ್ತದೆ. ನಾನು ಮೊದಲೆ ನಮೂದಿಸಿದಂತೆ ಈ ಪ್ರದೇಶವು ಅಸುರರ ಅಥವಾ ನಾಗರ ಆವಾಸ ಸ್ಥಾನವಾಗಿತ್ತು. ದ್ರಾವಿಡ ಅಧಿಪತ್ಯಗಳ ಪ್ರತಿಷ್ಠಾಪಕರು ಈ (ಅಸುರ ಅಥವಾ ನಾಗ) ಜನಾಂಗಕ್ಕೆ ಸೇರಿದವರಾಗಿದ್ದಿರಬೇಕು."[೨೯]

ಈ ರೀತಿಯಾಗಿ ಕ್ರೊಢೀಕರಿಸಲ್ಪಟ್ಟ ಎಲ್ಲ ಸಾಕ್ಷಾಧಾರಗಳನ್ನು ಗಣನೆಗೆ ತೆಗೆದುಕೊಂಡರೆ ತೋರುವ ಸಾಧ್ಯತೆಯೆಂದರೆ, "ಭಾರತದ ದಕ್ಷಿಣಕ್ಕೆ ಸೇರಿದ ದ್ರಾವಿಡರು ಉತ್ತರದ ಅಸುರರು ಅಥವಾ ನಾಗರ ಸಂತತಿಗೆ ಸೇರಿದವರೆ ಆಗಿದ್ದಾರೆ."[೩೦] ಎಂದು ಅಂಬೇಡ್ಕರ್ ಅವರು ಸ್ಪಷ್ಟಪಡಿಸಿದ್ದಾರೆ.

ಹಲವು ವಿದ್ವಾಂಸರ ಅಭಿಪ್ರಾಯಗಳು, ಡಾ ಅಂಬೇಡ್ಕರ್‌ರ ಖಚಿತ ತೀರ್ಮಾನದಂತೆ ಸ್ಪಷ್ಟವಾಗುವ ಅಂಶವೆಂದರೆ, ಸಿಂಧ್ ಪ್ರಾಂತದ ಮೂಲಕ ಭಾರತವನ್ನು ಪ್ರವೇಶಿಸಿದ ಆರ್ಯರು ಮೊದಲು ಉತ್ತರದಲ್ಲಿರುವ ನಾಗರನ್ನು(ದ್ರಾವಿಡ ಭಾಷೆಯನ್ನಾಡುವವರನ್ನು) ಪರಾಭವಗೊಳಿ ಸಿದರು. ಪರಾಜಿತರಾದ ನಾಗಕುಲದ ಕೆಲವು ಗುಂಪುಗಳು ಆರ್ಯರ ದಬ್ಬಾಳಿಕೆಯನ್ನು ಸಹಿಸದೆ ಅವರ ಗುಲಾಮಗಿರಿಯಲ್ಲಿ ಬಾಳುವುದನ್ನು ನಿರಾಕರಿಸಿ ಭಾರತದಲ್ಲಿ ದಕ್ಷಿಣಕ್ಕೆ ಪ್ರಯಾಣಿಸಿದ್ದರು. ದಕ್ಷಿಣದಲ್ಲಿ ದ್ರಾವಿಡರ ಆಳ್ವಿಕೆಯಿತ್ತು. ಆರ್ಯರು ದಂಡೆತ್ತಿ ಬಂದು, ದ್ರಾವಿಡ ನಾಗಕುಲದ ದೊರೆಗಳನ್ನು ಅವರ ಸಮುದಾಯವನ್ನು ಪದೇ ಪದೇ ಪರಾಭವಗೊಳಿಸಿ, ಸೇಡಿನ ರೀತಿಯಲ್ಲಿ ಸೋತವರನ್ನು ಗುಲಾಮಗಿರಿಗೆ ತಳ್ಳಿ ದಾಸತ್ವವನ್ನು ಹೇರಿದರು. ಸೋತು ಹೋದ ದಕ್ಷಿಣ ದ್ರಾವಿಡ ಸಮುದಾಯವನ್ನು ಆರ್ಯರು ಅಸ್ಪೃಶ್ಯರೆಂದು ಪರಿಗಣಿಸಿದರು. ಸೋತು ಶರಣಾಗತರಾದವರು ಗೆದ್ದವರ ದಬ್ಬಾಳಿಕೆಯನ್ನು ಸಹಿಸುವುದು ಅನಿವಾರ್ಯವಾಗಿತ್ತು. ಈ ಅಸ್ಪೃಶ್ಯ ಅಥವಾ ಗುಲಾಮಿ ಸಮುದಾಯದೊಳಗೆ 'ದಾಸ' ಸಮುದಾಯವು ಸಮಾವೇಶಗೊಂಡಿದೆ.

ಆಂಧ್ರಪ್ರದೇಶದ ಯಾವ ಭಾಗದಿಂದ ಮತ್ತು ಯಾವ ಕಾಲದಲ್ಲಿ ಈ ಸಮುದಾಯ ಕರ್ನಾಟಕವನ್ನು ಪ್ರವೇಶಿಸಿತು ಎನ್ನುವುದಕ್ಕೆ ಸ್ಪಷ್ಟ ಆಧಾರಗಳಿಲ್ಲ. ಇದಕ್ಕೆ ಅಪವಾದವೆಂಬಂತೆ "ಬೆಳಗಾವಿ ಜಿಲ್ಲೆಯ ಚೆನ್ನದಾಸರ ಒಂದು ಕುಟುಂಬ ಮದನಪಲ್ಲಿಯಿಂದ ಕ್ರಿ.ಶ. ೧೫೧೬ ರಲ್ಲಿ

ಬಂದಿರುವುದಕ್ಕೆ ಹೆಳವರು ದಾಖಲಿಸಿದ ಹೊತ್ತಿಗೆಗಳಲ್ಲಿ ಆಧಾರ ಲಭಿಸುತ್ತದೆ. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ನೆಲೆನಿಂತಿರುವ ಚೆನ್ನದಾಸರ ಸಮುದಾಯ ಒಂದೆ ಬಾರಿಗೆ ವಲಸೆ ಬಂದಿಲ್ಲ, ಹಾಗೂ ಒಂದೆ ಸಮಯಕ್ಕೆ ಒಂದು ಗುಂಪಾಗಿಯೂ ಬಂದಿರುವುದಿಲ್ಲ. ಹಾಗೆ ಬರುವ ಸಾಧ್ಯತೆಯೂ ಇಲ್ಲ.

ಪ್ರಸ್ತುತ ರಾಯಚೂರ ಜಿಲ್ಲೆಯಲ್ಲಿರುವ ಕೆಲವು ಚೆನ್ನದಾಸರ ಸಮುದಾಯದವರು ತಾವು ಆಂಧ್ರಪ್ರದೇಶದ ಗದ್ವಾಲ್ ಮೂಲದಿಂದ ಬಂದಿರುವುದಾಗಿ ತಿಳಿಸುತ್ತಾರೆ. ಕರ್ನಾಟಕದ ಬಿಜಾಪುರ, ಬಾದಾಮಿ, ಬಾಗಲಕೋಟೆ, ಧಾರವಾಡ ಮತ್ತು ಮಂಗಳೂರು ಇನ್ನೂ ಮುಂತಾದ ಪ್ರದೇಶಗಳಲ್ಲಿ ವಾಸಿಸುತ್ತಿರುವ ಚೆನ್ನದಾಸರ ಸಮುದಾಯದವರು ತಮ್ಮ ಮೂಲದ ಕುರಿತು ಹೇಳುವುದೇನೆಂದರೆ, ತಾವು ಆಂದ್ರಪ್ರದೇಶದ ಮೂಲದವರೆಂದು ತಿಳಿಸುತ್ತಾರೆ. ತಾವು ಆಂಧ್ರಪ್ರದೇಶದ ಗಿರಿಯಾಲ, ಕರೀಮನಗರ, ಮದನಪಲ್ಲಿ ಮುಂತಾದ ಭಾಗಗಳಿಂದ ಕರ್ನಾಟಕದ ಹಲವು ಪ್ರದೇಶಗಳಿಗೆ ವಲಸೆ ಬಂದಿರುವುದಾಗಿ ತಿಳಿಸುತ್ತಾರೆ.

ಚೆನ್ನದಾಸರ ಸಮುದಾಯದ ಮೂಲ ಮತ್ತು ವಲಸೆ ಕುರಿತು ಹೇಳುವುದಾದರೆ, ಚೆನ್ನದಾಸರ ಸಮುದಾಯದ ಮೂಲ ಆಂಧ್ರಪ್ರದೇಶವೆ ಆಗಿದೆ. ಮೂಲ ಪುರುಷರಾದ ಚನ್ನಯ್ಯ ದಾಸು ಮತ್ತು ಮಾಲದಾಸರಿ ಆಂಧ್ರದವರೆ ಆಗಿರುವರು. ಆಂಧ್ರಪ್ರದೇಶದ ಮದನಪಲ್ಲಿ, ಹನುಮಪಲ್ಲಿ, ಗದ್ವಾಲ್ ಮತ್ತು ಕರ್ನೂಲ್ ಕಡೆಗಳಿಂದ ಬಂದಿರುವ ಸಾಧ್ಯತೆಯಿದೆ. ಕ್ರಿ.ಶ. ೧೧ ಮತ್ತು ೧೨ನೆಯ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರ ಶ್ರೀವೈಷ್ಣವ ಧರ್ಮ ಪ್ರಚಾರದ ಸಂದರ್ಭದಲ್ಲಿ ಹಾಗೂ ೧೬ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯ ಪತನದ ನಂತರದಲ್ಲಿ ಪ್ರಮುಖವಾಗಿ ವಲಸೆ ಬಂದಿರುವ ಸಂಭವಗಳಿವೆ. ಬ್ರಿಟಿಷ್ ಆಡಳಿತದ ಸಂದರ್ಭದಲ್ಲಿಯೂ ಬಂದಿರುವ ಸಾಧ್ಯತೆಗಳಿವೆ. ಇದಕ್ಕೂ ಮುನ್ನ ಕೆಲವು ಗುಂಪುಗಳು ಆಳರಸರ ಸೈನ್ಯದ ಜೊತೆಗೆ ಸೈನಿಕರ ಮನರಂಜನೆಗಾಗಿ ಬಂದಿರುವ ಸಾಧ್ಯತೆಯಿದೆ. ಯುದ್ಧದ ಭೀತಿ, ಭೀಕರ ಬರಗಾಲ ಕಾರಣಗಳಿಂದಾಗಿಯೂ ಆಂಧ್ರದ ಪಶ್ಚಿಮ ಭಾಗದಿಂದ ಬಂದಿರುವ ಸಾಧ್ಯತೆಯೂ ಇದೆ. ಎಂಬುದು ತಿಳಿದು ಬರುತ್ತದೆ.

ಮೊದಲು ಅಲೆಮಾರಿಗಳಾಗಿದ್ದಾಗ ನೆಲೆ ಕಂಡುಕೊಳ್ಳಲು ಗುಂಪು ಗುಂಪಾಗಿ ತಂಡದೊಡನೆ ಹೋಗುತ್ತಿದ್ದರು. ಒಂದೊಂದು ತಂಡದಲ್ಲಿ ಕನಿಷ್ಠ ಐದಾರು ಕುಟುಂಬಗಳಾದರೂ ಇರುತ್ತಿದ್ದವು. ಆಗ ಊರಿನ ಹೊರಬಯಲು, ದೊಡ್ಡಮರಗಳ ಗುಂಪಿನ ಕೆಳಗೆ ಗುಡಾರಗಳನ್ನು ಹಾಕಿ ಬಿಡಾರ ಹೂಡುತ್ತಿದ್ದರು. ಉಪಜೀವನಕ್ಕೆ ಅನುಕೂಲವಿರುವ ಪ್ರದೇಶದಲ್ಲಿ ಆ ಸ್ಥಳದ ಯಜಮಾನನ್ನು

ವಿಚಾರಿಸಿ ನೆಲೆ ನಿಲ್ಲಲು ಗುಡಿಸಲು ಹಾಕಿಕೊಳ್ಳುತ್ತಿದ್ದರು. ಚೆನ್ನದಾಸರ ಸಮುದಾಯ ವಾಸವಾಗಿರುವ ಯಾವುದೇ ಪ್ರದೇಶದಲ್ಲಿ ನೋಡಿದರೂ ಊರು ಬಿಟ್ಟು ದೂರದಲ್ಲಿ ಒಂದೆ ಕಡೆಗೆ ಗುಂಪು ಗುಂಪಾಗಿರುವುದು ಕಂಡುಬರುತ್ತದೆ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ಚೆನ್ನದಾಸರ ಸಮುದಾಯ ಹೆಚ್ಚಾಗಿದೆ. ಜೀವನೋಪಾಯಕ್ಕಾಗಿ ಕೆಲಸ ಹುಡುಕಿಕೊಂಡು ಹೋದವರು ಮತ್ತು ಸಣ್ಣಪುಟ್ಟ ನೌಕರಿ ಮಾಡುವವರು ಮಾತ್ರ ಪಟ್ಟಣಗಳಿಗೆ ವಲಸೆಹೋಗಿ ಅಲ್ಲಿಯೇ ನೆಲೆ ಕಂಡುಕೊಂಡಿದ್ದಾರೆ. ಒಂದೆಡೆ ನೆಲೆ ನಿಂತವರು ತಂಡ–ತಂಡವಾಗಿ ಮತ್ತೊಂದೆಡೆ ಚಲಿಸುವುದು ಸಾಮಾನ್ಯವಾಗಿತ್ತು. ಈಗ ಭಿಕ್ಷಾಟನೆ ಮತ್ತು ಅಲಂಕಾರ ವಸ್ತುಗಳ ಮಾರಾಟಕ್ಕೆ ಅನುಕೂಲವಿಲ್ಲದಿರುವುದರಿಂದ ಜೀವನೋಪಾಯಕ್ಕಾಗಿ ಕೂಲಿ ಕೆಲಸಗಳನ್ನು ಅವಲಂಭಿಸಿದ್ದಾರೆ. ಕೆಲವರು ಕೃಷಿ ಕಾಯಕ ಕೈಗೊಂಡಿದ್ದಾರೆ. ಎಲ್ಲೋ ಕೆಲವರು ಸಣ್ಣ ಪುಟ್ಟ ವ್ಯಾಪಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಚೆನ್ನದಾಸರ ಸಮುದಾಯದ ಹಿನ್ನೆಲೆ, ಕರ್ನಾಟಕದಲ್ಲಿ ನೆಲೆಸಿರುವ ಚೆನ್ನದಾಸರ ಸಮುದಾಯದಲ್ಲಿ ಇನ್ನೂ ಹಲವು ಉಪನಾಮಗಳಿವೆ. ಅವುಗಳ ಕುರಿತಾಗಿ ವಿಸ್ತೃತವಾಗಿ ಚರ್ಚಿಸಲಾಗಿದೆ. ಪ್ರಸ್ತುತ ಸಮುದಾಯದ ಮೂಲಪುರುಷನ ಕುರಿತಾಗಿರುವ ಪೌರಾಣಿಕ ಹಿನ್ನೆಲೆ, ಈ ಸಮುದಾಯಕ್ಕಿರುವ ಚಾರಿತ್ರಿಕ ಹಿನ್ನೆಲೆಯನ್ನು ಅವಲೋಕಿಸಿ ವಾಸ್ತವದ ತಳಹದಿಯ ಮೇಲೆ ಈ ಸಮುದಾಯದ ಮೂಲವನ್ನು ಕಟ್ಟಿಕೊಡಲಾಗಿದೆ. ಬೆಳಗಾವಿ ಜಿಲ್ಲೆಗೆ ವಲಸೆಬಂದ ಸಮುದಾಯದ ಮೂಲ ಮತ್ತು ಪರ್ಯಟನೆಯನ್ನು ಚರ್ಚಿಸಲಾಗಿದೆ. ಸದರಿ ಸಮುದಾಯದ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಹಿನ್ನೆಲೆಯನ್ನು ಕ್ಷೇತ್ರಕಾರ್ಯ ಅಧ್ಯಯನದ ಮೂಲಕ ನಿರೂಪಿಸಲಾಗಿದೆ.

ಬ. ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ವೈಶಿಷ್ಟ್ಯತೆ

ಎಲ್ಲ ಸಮುದಾಯಗಳಿಗೂ ತನ್ನದೆ ಆದ ವೈಶಿಷ್ಟ್ಯತೆ ಇದ್ದೆ ಇರುತ್ತದೆ. ಪ್ರತಿ ಸಮುದಾಯವು ಭವ್ಯಪರಂಪರೆಯನ್ನು, ಸಂಪದ್ಭರಿತವಾದ ಇತಿಹಾಸವನ್ನು ಹೊಂದಿರುತ್ತವೆ. ಅದೇ ರೀತಿ ಬೆಳಗಾವಿ ಜಲ್ಲೆಯ ಚೆನ್ನದಾಸರ ಸಮುದಾಯಕ್ಕೂ ತನ್ನದೆ ಆದ ವಿಶಿಷ್ಟ ಪರಂಪರೆ ಇದೆ. ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿ ತೀರಾ ವಿಶಿಷ್ಟವೆನಿಸುವ ಆಚರಣೆಗಳನ್ನು ಒಳಗೊಂಡಿವೆ. ಸದರಿ ಸಮುದಾಯದಲ್ಲಿ ಸುಮಾರು ಇಪ್ಪತ್ತೆಂಟು(೨೮) ಬೆಡಗುಗಳಿವೆ. ಇವುಗಳಿಗೆ 'ಬಳಿ' ಎಂತಲೂ ಕರೆಯುತ್ತಾರೆ. ಮೇಲಿನ ಪ್ರಮುಖ ಬೆಡಗುಗಳ ಜೊತೆಗೆ ಇತರ ಕೆಲ ಬೆಡಗುಗಳು ಈ ಸಮುದಾಯದಲ್ಲಿವೆ.

ಚೆನ್ನದಾಸರ ಸಮುದಾಯದ ಸಾಹಿತ್ಯ ಸಮೃದ್ಧವಾಗಿದೆ. ಈ ಸಮುದಾಯದ ಮಾತೃ ಭಾಷೆ ತೆಲುಗುವಾದರೂ, ವ್ಯವಹಾರಕ್ಕಾಗಿ ಪರಿಸರದ ಭಾಷೆಯಾದ ಕನ್ನಡವನ್ನೇ ಬಳಸುತ್ತಾರೆ. 'ಮರಗು' ಭಾಷೆ ಈ ಸಮುದಾಯದ ವೈಶಿಷ್ಟ್ಯತೆಗಳಲ್ಲಿ ಒಂದು. ಹಾಡು, ಕಥೆ, ಗಾದೆಮಾತುಗಳು, ಒಗಟುಗಳು, ಒಡಪುಗಳು, ತತ್ವಪದಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಸದರಿ ಸಮುದಾಯದ ಆಟ, ಸಣ್ಣಾಟ, ಬಯಲಾಟ ಮುಂತಾದ ರಂಗ ಭೂಮಿಗೆ ನೀಡಿದ ಕೊಡುಗೆ ಅಪಾರವಾಗಿದೆ. ದಾಸರಾಟ, ಕೃಷ್ಣಪಾರಿಜಾತ, ರೇಣುಕಾಯಲ್ಲಮ್ಮ, ಭಸ್ಮಾಸುರ, ರತಿಕಲ್ಯಾಣ ಮುಂತಾದ ಬಯಲಾಟಗಳು ದಾಸರಾಡುವ ಪ್ರಸಿದ್ಧ ಜಾನಪದ ಕಲೆಗಳಾಗಿವೆ. ಹರಿಭಜನೆ ಹಾಗೂ ಶಿವಭಜನೆ ಹರಿಹರರ ಸಮನ್ವಯದ ಸಂಕೇತಗಳಾಗಿವೆ. ಈ ಸಮುದಾಯದ ನಂಬಿಕೆಗಳು ತೀರಾ ವಿಚಿತ್ರವಾಗಿವೆ. ಇನ್ನೀತರ ಸಮುದಾಯದಲ್ಲಿ ಕಾಣದ ಕೇವಲ ದಾಸ ಸಮುದಾಯಕ್ಕೆ ಮಾತ್ರ ಮೀಸಲಾಗಿವೆ. ದಾಸ ಸಮುದಾಯದ ಅಸ್ಮಿತೆ ಮತ್ತು ಅನನ್ಯತೆಯನ್ನು ಅವರ ಕಥೆ ಹಾಗೂ ಗಾದೆ ಮಾತು, ತತ್ವಪದ, ನಂಬಿಕೆಗಳಲ್ಲಿ ಗುರುತಿಸಬಹುದು.

ಆಂಧ್ರ ಪ್ರದೇಶವೆ ಚೆನ್ನದಾಸರ ಸಮುದಾಯದ ಮೂಲ ವಾಸಸ್ಥಾನವೆಂಬುದು ಹಿಂದಿನ ಅಧ್ಯಾಯದಲ್ಲಿ ನೋಡಲಾಗಿದೆ. ಈ ಜನಾಂಗ ಆಂಧ್ರಪ್ರದೇಶದ ಮದನಪಲ್ಲಿ , ಹನುಮಪಲ್ಲಿ, ಗದ್ವಾಲ್ ಕಡೆಗಳಿಂದ ಬಂದಿರುವ ಸಾಧ್ಯತೆಯಿದೆ. ಹಂಪಿಯ ಪರಿಸರದ ಆಂಧ್ರದ ಗಡಿಯ ಜಿಲ್ಲೆಗಳಿಂದಲೂ ಬಂದಿರಬಹುದು. ಬೆಳಗಾವಿ ಜಿಲ್ಲೆಗೆ ಈ ಸಮುದಾಯ ವಲಸೆ ಬಂದಿರುವುದನ್ನು ಈ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ.

ಮೂಲದಲ್ಲಿ ಅಸ್ಪೃಶ್ಯ ಸಮುದಾಯವಾದ ಈ 'ದಾಸ' ಅಥವಾ 'ದಸ್ಸು' ಸಮುದಾಯವು ಆಂಧ್ರದ ಅಸ್ಪೃಶ್ಯ ಸಮುದಾಯವಾದ 'ಮಾಲಾ' ಸಮುದಾಯಕ್ಕೆ ಸೇರಿದೆ. ಕಲಾ ನಿಪುಣರಾದ ಈ ಸಮುದಾಯದ ಕೆಲವು ಗುಂಪುಗಳು ಅಸ್ಪೃಶ್ಯತೆಯ ಅವಮಾನದಿಂದ ವಿಮುಕ್ತಿ ಪಡೆಯಲು ಅಂದಿನ ವೈಷ್ಣವ ದಾಸ ದೀಕ್ಷೆಯನ್ನು ಪಡೆದು ಕಾಲಾನಂತರದಲ್ಲಿ ಕರ್ನಾಟಕದೆಡೆಗೆ ಅಲೆಮಾರಿಯಾಗಿ ಜೀವನ ಸಾಗಿಸುತ್ತ ಬಂದಿದೆ. ಆ ಕುರುಹಾಗಿ ಈಗಲೂ ತೆಲುಗು ಭಾಷೆಯನ್ನು ಮನೆ ಮಾತನ್ನಾಗಿ ಉಳಿಸಿಕೊಂಡು ಬಂದಿದೆ.

"ಆಂಧ್ರ ಮೂಲದ ಈ ಸಮುದಾಯ ಜಾತೀಯತೆಯ ಅವಮಾನದಿಂದ ಬಿಡುಗಡೆ ಬಯಸಿ ವೈಷ್ಣವ ಧರ್ಮ ಸ್ವೀಕರಿಸಿ, ದಕ್ಷಿಣ ಭಾರತದೆಲ್ಲೆಡೆ ಚೆದುರಿದೆ. ಬಹುಶ: ಈ ಸಮುದಾಯ ಎರಡು ಘಟ್ಟಗಳಲ್ಲಿ ಚದುರಿರುವ ಸಾಧ್ಯತೆಯಿದೆ. ಮೊದಲು ರಾಮಾನುಜಾಚಾರ್ಯರ ವೈಷ್ಣವ ಧರ್ಮದ ಪ್ರಚಾರಾಂದೋಲನದ ಸಂದರ್ಭದಲ್ಲಿ ಹಾಗೂ ನಂತರದ ಮಧ್ವಾಚಾರ್ಯರ ಹರಿದಾಸ

ಭಕ್ತಿ ಆಂದೋಲನ ಸಂದರ್ಭದಲ್ಲಿ ಬಂದಿರಬಹುದು. ಈ ಸಮುದಾಯವು ವೈಷ್ಣವ ಧರ್ಮವನ್ನು ಅಭಿಮಾನಪೂರ್ವಕವಾಗಿ ಒಪ್ಪಿಕೊಂಡು ಸ್ವೀಕರಿಸಿ ಅದರ ಧಾರ್ಮಿಕ ಲಾಂಛನಗಳೊಂದಿಗೆ ಅದನ್ನು ಜನಸಾಮಾನ್ಯರ ಬಳಿಗೆ ತಲುಪಿಸಲು ಭಿಕ್ಷಾವೃತ್ತಿಯ ಮೂಲಕ ಮೂಲಸ್ಥಳದಿಂದ ಬೇರ್ಪಟ್ಟಿದೆ. ವಿಜಯನಗರ ಸಾಮ್ರಾಜ್ಯದ ಆಶ್ರಯ ಹೊಂದಿದ ಈ ಸಮುದಾಯ ೧೬ನೆಯ ಶತಮಾನದಲ್ಲಿ ಆ ಸಾಮ್ರಾಜ್ಯದ ಪತನದ ನಂತರ ಕರ್ನಾಟಕದ ಬಹುತೇಕ ಪೂರ್ವಭಾಗದ ಮಧ್ಯಭಾಗಕ್ಕೆ ಸರಿಯುತ್ತ ಚೆದುರಿ ಬಂದಿದೆ. ನಂತರದಲ್ಲಿ ಭಿಕ್ಷೆಯ ಮೂಲಕ ನೆಲೆಯನ್ನರಸುತ್ತ ಎಲ್ಲ ಕಡೆಗೂ ವ್ಯಾಪಿಸಿದೆ."[೩೧] ಈ ಸಂದರ್ಭದಲ್ಲಿಯೇ ಬೆಳಗಾವಿ ಜಿಲ್ಲೆಗೂ ಚೆನ್ನದಾಸರ ಸಮುದಾಯ ಬಂದಿರುವಂತಿದೆ.

೩.೬. ಬೆಳಗಾವಿ ಜಿಲ್ಲೆಯ ಚೆನ್ನದಾಸರು

ಬೆಳಗಾವಿ ಜಿಲ್ಲೆಯಲ್ಲಿರುವ ಚೆನ್ನದಾಸರ ಸಮುದಾಯವನ್ನು ಪ್ರಮುಖವಾಗಿ ಬಳಕೆಯಲ್ಲಿ 'ದಾಸರು' ಎಂದೆ ರೂಢಿಯಲ್ಲಿ ಬೇರೆ ಸಮುದಾಯದವರು ಕರೆಯುತ್ತಾರೆ. ವಾಸ್ತವವಾಗಿ ದಾಖಲೆಗಳಲ್ಲಿ ೧೬ನೆಯ ಶತಮಾನದ ದಾಖಲೆ ಸಿಗುವುದು ಕೂಡ ಇದೇ ಜಿಲ್ಲೆಯದು. ಈ ಹೆಳವರ ದಾಖಲೆಯನ್ನು ಅನುಬಂಧದಲ್ಲಿ ನೀಡಲಾಗಿದೆ. ಈ ಜಿಲ್ಲೆಯ ಶೈಕ್ಷಣಿಕ ದಾಖಲೆಗಳಲ್ಲಿ 'ಚೆನ್ನದಾಸರು' ಎಂಬುದನ್ನು ೧೯೬೦ರ ದಶಕದಿಂದ ಜಾತಿ ಪ್ರಮಾಣ ಪತ್ರಗಳು ಮತ್ತು ಜೀವಿತ ಪ್ರಮಾಣಪತ್ರಗಳ ದಾಖಲೆಗಳಿವೆ.

ಬೆಳಗಾವಿ ಜಿಲ್ಲೆಯಲ್ಲಿ ಈ ಸಮುದಾಯವನ್ನು ಚೆನ್ನದಾಸರು, ದಾಸರು, ದಂಡಿಗೆ ದಾಸರು ಎಂದು ಬೇರೆ ಬೇರೆ ಸಮುದಾಯದವರು ಕರೆಯುವ ರೂಢಿ ಇದೆ. ಇನ್ನು ಕೆಲವು ಕಡೆ ಶಾಲೆಯಲ್ಲಿ ಹೆಸರು ದಾಖಲಿಸುವ ಸಂದರ್ಭದಲ್ಲಿ ಶಿಕ್ಷಕರೆ ತಮಗೆ ತೋಚಿದಂತೆ ಜಾತಿ ಅಂಕಣದಲ್ಲಿ, ಡಂಗದಾಸರು ಎಂದು, ರಾಮದಾಸರು ಎಂದು ಕೆಲವು ಕಡೆ ದಾಖಲಾಗಿವೆ. ಬಾಂಬೆ ಗೆಝಟೀಯರ್ ಮತ್ತು ಪ್ರೋ. ಬಿ.ವಿ. ಗುಂಜೆಟ್ಟಿಯವರ ಅಧ್ಯಯನದಂತೆ ಚೆನ್ನದಾಸರ ಸಮುದಾಯ ಬೆಳಗಾವಿ ಜಿಲ್ಲೆಯಲ್ಲಿರುವುದನ್ನು ಕಾಣಿಸಲಾಗಿದೆ.

ಈ ಜಿಲ್ಲೆಯ ಚೆನ್ನದಾಸರ ಸಮುದಾಯದ ಉಪನಾಮಗಳು ಹೆಚ್ಚಿಲ್ಲ. ಮತ್ತೆ ಗೊಂದಲವೂ ಇಲ್ಲ. 'ದಾಸರು' ಎಂದೂ, ಮತ್ತು ದಂಡಿಗೆ ದಾಸರು ಎಂದು ಜಿಲ್ಲೆಯ ಸವದತ್ತಿ, ರಾಮದುರ್ಗ ತಾಲೂಕುಗಳಲ್ಲಿ ಕೆಲವು ಕಡೆ ಪ್ರಚಲಿತವಿದೆ. ಆದರೆ ವೈವಾಹಿಕ ಸಂಬಂಧ ಹಾಗೂ

ಬೆಡಗು–ಬಳಿಗಳ ಮೂಲಕ ಕಂಡುಬರುವಂತೆ ಚೆನ್ನದಾಸರ ಸಮುದಾಯವೊಂದೆ ಈ ಜಿಲ್ಲೆಯಲ್ಲಿದೆ. ಇವರು ಹೆಚ್ಚಾಗಿ 'ತೆಲುಗು' ಭಾಷೆಯನ್ನು ಮನೆ ಮಾತನ್ನಾಗಿ ಬಳಸುತ್ತಾರೆ.

೩.೭. ಭೌಗೋಳಿಕ ವ್ಯಾಪ್ತಿ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಅರ್ಜುನವಾಡ ಗ್ರಾಮದ 'ಶ್ರೀ ಭೀಮಪ್ಪ ಹೊನ್ನಹುಲ್ಲೆನ್ನವರ' ಎಂಬುವವರ ವಂಶಾವಳಿಯಲ್ಲಿ ಕ್ರಿ.ಶ. ೧೫೮೯ರ ಸುಮಾರಿಗೆ ವಲಸೆ ಬಂದವರೆಂಬ ವಿವರ ದೊರಕುತ್ತದೆ. ಜಾತಿ–ಚೆನ್ನದಾಸರ, ಕುಲ–ಹೊನ್ನಹುಲ್ಲೆನ್ನವರೆಂದು ವಿವರಿಸಿ, ಅರ್ಜುನವಾಡದಲ್ಲಿ ಕ್ರಿ.ಶ. ೧೫೮೯ರಲ್ಲಿ ನೆಲೆನಿಂತರೆಂದು ದಾಖಲೆಯಿದೆ.[೩೨] ಜಾತಿ>ಚನ್ನಯ್ಯದಾಸರ' ಎಂಬುದು 'ಚೆನ್ನದಾಸರ' ಎಂಬುದೆ ಶಿಥಿಲಗೊಂಡು ಹಾಗಾಗಿದೆ. ಈ 'ಚೆನ್ನದಾಸರ' ಎಂಬ ಪದವು 'ಚೆನ್ನಯ್ಯದಾಸು' ಇಲ್ಲವೆ 'ಚೆನ್ನದಾಸರಿ'ಯಿಂದ ಬಂದಿರುವುದಿದೆ.

ಚೆನ್ನದಾಸರ ಸಮುದಾಯ ಒಂದೇ ಬಾರಿಗೆ, ಒಂದೇ ಕಡೆಯಿಂದ ಬೆಳಗಾವಿ ಜಿಲ್ಲೆಗೆ ಆಗಮಿಸಿಲ್ಲ. ವಿಜಯನಗರದ ಪತನದ ನಂತರ ರಾಜಾಶ್ರಯ ತಪ್ಪಿದ ಮೇಲೆ ಭಿಕ್ಷಾಟನೆ ಮಾಡುತ್ತ ಬಂದಿದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಬೆಳಗಾವಿ ಜಿಲ್ಲೆಯ ಭೌಗೋಳಿಕ ಪ್ರದೇಶವನ್ನು ಗಮನದಲ್ಲಿರಿಸಿ, ಕ್ಷೇತ್ರಕಾರ್ಯ ಕೈಗೊಂಡು ಜಿಲ್ಲೆಯಲ್ಲಿ ನೆಲೆಸಿರುವ ಚೆನ್ನದಾಸರ ಸಮುದಾಯದ ಗ್ರಾಮಗಳನ್ನು ಪರಿಗಣಿಸಲಾಗಿದೆ. ಮುಖ್ಯವಾಗಿ ರಾಯಬಾಗ, ಅಥಣಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ, ರಾಮದುರ್ಗ, ಚಿಕ್ಕೋಡಿ ಮತ್ತು ಸವದತ್ತಿ ತಾಲೂಕು ವ್ಯಾಪ್ತಿಯಲ್ಲಿರುವ ನೆಲೆಗಳು ಮತ್ತು ಬೆಳಗಾವಿ ನಗರ ಪ್ರದೇಶ ಮತ್ತು ಬೆಳಗಾವಿ ತಾಲೂಕಿನ ವ್ಯಾಪ್ತಿಯಲ್ಲಿ ನೆಲೆಸಿರುವ ಈ ಸಮುದಾಯವನ್ನು ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ.

೩.೮. ಪ್ರಸಾರದ ನೆಲೆಗಳು

ಈ ಸಮುದಾಯ ಇಂದು ಜಿಲ್ಲೆಯ ಎಂಟು ತಾಲೂಕುಗಳಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವುದು ಅಧ್ಯಯನದಿಂದ ಕಂಡು ಬರುತ್ತದೆ. ಹುಕ್ಕೇರಿ ತಾಲೂಕಿನ ಅರ್ಜುನವಾಡ ಗ್ರಾಮಕ್ಕೆ ಪ್ರಪ್ರಥಮವಾಗಿ ಈ ಸಮುದಾಯದವರು ವಲಸೆ ಬಂದಿರುವುದು ದಾಖಲೆಗಳಿಂದ ತಿಳಿದು ಬರುತ್ತದೆ. ಮುಂದೆ ಕೊಟಬಾಗಿ ಮತ್ತು ಗೋಕಾಕ ತಾಲೂಕಿನ ಕಲ್ಲೋಳಿಗಳಲ್ಲಿ ನೆಲೆನಿಂತಿರುವ ಸಾಧ್ಯತೆಯಿದೆ. ಭೌಗೋಳಿಕ ಹಿನ್ನೆಲೆಯೂ ಇದಕ್ಕೆ ಪೂರಕವಾಗಿದೆ.

ನಾಗರಿಕತೆ ಬೆಳೆದು ಬಂದಿದ್ದು ನದಿಗಳ ದಡದಲ್ಲಿ. ಅನಂತರ ಸಮುದಾಯವು ನೆಲೆಗೊಳ್ಳುವುದು ನೀರಿನ ಸೌಕರ್ಯ ಇರುವವೆಡೆಯೆ ಆಗಿದೆ. ಅರ್ಜುನವಾಡ ಮಾರ್ಕಂಡೇಯ ನದಿಯ ತಟದಲ್ಲಿದೆ. ನೀರಿನ ಲಭ್ಯತೆ, ಮಳೆಗಾಲದ ಸಮೃದ್ಧಿ, ಕೃಷಿ ಚಟುವಟಿಕೆಗಳಿಗೆ ಪೂರಕವಾದ ಪ್ರದೇಶ ಅರ್ಜುನವಾಡದಲ್ಲಿರುವುದರಿಂದ ಈ ಸಮುದಾಯ ಈ ಪ್ರದೇಶದಲ್ಲಿ ಪ್ರಪ್ರಥಮವಾಗಿ ಬೆಳಗಾವಿ ಜಿಲ್ಲೆಯಲ್ಲಿ ನೆಲೆಗೊಂಡಿದೆ. ತದನಂತರ, ಹಿರಣ್ಯಕೇಶಿ ವ್ಯಾಪ್ತಿಯಲ್ಲಿರುವ ಕೊಟಬಾಗಿ, ಘಟಪ್ರಭಾ ನದಿ ಪ್ರದೇಶವಾದ ಕಲ್ಲೋಳಿಯಲ್ಲಿ ಈ ಸಮುದಾಯ ತನ್ನ ನೆಲೆ ಕಂಡುಕೊಂಡಂತೆ ತೋರುತ್ತದೆ. ರಾಯಬಾಗ ಮತ್ತು ಗೋಕಾಕ ತಾಲೂಕಿನ ಪೂರ್ವಭಾಗದ ಹಳ್ಳಿಗಳಿಗೆ ಸೊಲ್ಲಾಪೂರ, ಬಿಜಾಪೂರ ಪ್ರದೇಶಗಳ ಮೂಲಕ ಬಂದಿರುವ ಸಾಧ್ಯತೆಗಳನ್ನು ಆ ಸಮುದಾಯದ ಹಿರಿಯರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹೇಳಿದ್ದಾರೆ.

ಇಂದು ಅಥಣಿ ತಾಲೂಕಿನ ಬಡಚಿ, ಸಂಕೋನಟ್ಟಿಗಳಲ್ಲಿ, ಚಿಕ್ಕೋಡಿ ತಾಲೂಕಿನ ಹಿರೇಕೋಡಿ, ಗೋಕಾಕ ತಾಲೂಕಿನ ಕಲ್ಲೋಳಿ, ಮಸಗುಪ್ಪಿ, ರಂಗಾಪೂರ, ಉದಗಟ್ಟಿ, ಹೊಸಟ್ಟಿ, ಕೌಜಲಗಿ, ಲೋಳಸುರಗಳಲ್ಲಿ, ರಾಮದುರ್ಗ ತಾಲೂಕಿನ ಬಟಕುರ್ಕಿ, ಬೀಡಕಿ, ಜಾಜಿಕೊಪ್ಪ, ಗೊನ್ನಾಗರ, ಹುಣಶ್ಯಾಳ, ಹುಲಕುಂದ, ಸುರೇಬಾನ, ಸಾಲಳ್ಳಿಗಳಲ್ಲಿ, ಹುಕ್ಕೇರಿ ತಾಲೂಕಿನ ಗುಡಸ, ಕೊಟಬಾಗಿ, ಅರ್ಜುನವಾಡ, ಕುರುಣಿ ಗ್ರಾಮಗಳಲ್ಲಿ, ರಾಯಬಾಗ ತಾಲೂಕಿನ ಬ್ಯಾಕೂಡ, ಖಣದಾಳ, ಪರಮಾನಂದವಾಡಿ, ರಾಯಬಾಗ, ಚಿಂಚಲಿ, ಯಲ್ಪಾರಟ್ಟಿ, ಆಲಕನೂರ, ದಾಸರವಾಡಿ, ಹಾರೂಗೇರಿ, ಹಿಡಕಲ್, ಜಲಾಲಪೂರ, ಕಂಕಣವಾಡಿ, ಸಿದ್ದಾಪೂರ, ಕುಡಚಿ, ಮುಗಳಖೋಡ, ಯಲ್ಪಾರಟ್ಟಿ, ಸವಸುದ್ದಿ, ನಿಲಜಿ ಮತ್ತು ಮೇಕಳಿ ಗ್ರಾಮಗಳಲ್ಲಿ, ಬೆಳಗಾವಿ ತಾಲೂಕಿನ ಹೊನಗಾ, ಬೆನ್ನಾಳಿ ಮತ್ತು ಕಣಬರ್ಗಿಗಳಲ್ಲಿ ಸವದತ್ತಿ ತಾಲೂಕಿನ ಸವದತ್ತಿ ಹಾಗೂ ಹಂಚಿನಾಳ ಗ್ರಾಮಗಳಲ್ಲಿ ಈ ಸಮುದಾಯದ ನೆಲೆಗಳಿವೆ.

ಬೆಳಗಾವಿ ಜಿಲ್ಲೆಯ ಖಾನಾಪೂರ ಮತ್ತು ಬೈಲಹೊಂಗಲ ತಾಲೂಕುಗಳನ್ನು ಹೊರತುಪಡಿಸಿ, ಇನ್ನೂಳಿದ ಎಂಟು ತಾಲೂಕುಗಳಲ್ಲಿಯೂ ಈ ಸಮುದಾಯ ನೆಲೆಗೊಂಡಿದೆ. ಸ್ಥಳೀಯವಾಗಿ ನೀರಿಗೆ ಅನುಕೂಲವಿರುವ, ಭಿಕ್ಷಾಟನೆಗೆ ಸಮೃದ್ಧವಾಗಿರುವ ಭೌಗೋಳಿಕವಾಗಿ ಸುರಕ್ಷಿತವಾಗಿರುವ ಪ್ರದೇಶಗಳನ್ನು ವಾಸಿಸಲು ಆಯ್ದುಕೊಂಡಿರುವುದು ಸುಸ್ಪಷ್ಟವಾಗಿದೆ. “ಮುಂಚೆ ಅಲೆಮಾರಿ ಗಳಿದ್ದಾಗ ಈ ಸಮುದಾಯ ನೆಲೆಯನ್ನರಸಿ, ಗುಂಪು–ಗುಂಪಾಗಿ ಹೋಗುತ್ತಿದ್ದರು. ಒಂದೊಂದು ಗುಂಪಿನಲ್ಲಿ ಕನಿಷ್ಟ ಐದಾರು ಕುಟುಂಬಗಳಾದರೂ ಇರುತ್ತಿದ್ದವು. ಆಗ ಊರ ಹೊರಗಿನ ಬಯಲು ದೊಡ್ಡ ಮರಗಳ ಗುಂಪಿನ ಕೆಳಗೆ ಗುಡಾರವನ್ನು ಹಾಕಿಕೊಂಡು ನೆಲೆ

ನಿಲ್ಲುತ್ತಿದ್ದರು. ಉಪಜೀವನಕ್ಕೆ ಅನುಕೂಲವಿದ್ದ ಪಕ್ಷದಲ್ಲಿ ಜಾಗದ ಯಜಮಾನನ್ನು ಕೇಳಿ ಗುಡಿಸಲು ಹಾಕುತ್ತಿದ್ದರು."[೩೩] ಈ ಸಮುದಾಯ ನಗರ ಪಟ್ಟಣ ಪ್ರದೇಶಗಳಿಂದ ದೂರವಾಗಿದ್ದು ಹೆಚ್ಚಾಗಿ ಹಳ್ಳಿ-ಹಳ್ಳಿಗಳಲ್ಲಿಯೆ ನೆಲೆಸಿದ್ದರು. ಗ್ರಾಮೀಣ ಪ್ರದೇಶಗಳಲ್ಲಿಯೂ ಕೂಡ ಊರ ಬಿಟ್ಟು ದೂರ ಬಿಡಾರ ಹೂಡಿರುವುದನ್ನು ಕಾಣಬಹುದು. ತಮ್ಮ ಸಮುದಾಯದ ಬಗೆಗಿರುವ ಕೀಳರಮೆ, ಭಿಕ್ಷಾಟನಾ ವೃತ್ತಿ, ಸಂಕೋಚ ಸ್ವಭಾವ ಹಾಗೂ ಮಾಂಸಾಹಾರ ಸೇವನೆ, ಅಸ್ಪೃಶ್ಯ ಸಮುದಾಯಗಳೇ ಇವರನ್ನು ಗೇಲಿ ಮಾಡುವಷ್ಟು ಆಹಾರ ವಿಧಾನ ಇವರದಾಗಿದೆ. ಬೇಟೆ ಇವರ ಮುಖ್ಯ ಕಸುಬುಗಳಲ್ಲಿ ಒಂದು. ಇವರು ಬೆಕ್ಕು, ಮುಂಗುಸಿ, ಅಳಿಲು, ಹೆರ್ಜೆಟ್ಟು, ಉಡ, ಕೊಕ್ಕ, ಇಲಿ, ಮುಳ್ಳಂದಿ, ಹಂದಿ, ನರಿ ಮುಂತಾದ ಪ್ರಾಣಿಗಳನ್ನು, ಬೆಳವು, ಬುರ್ಲಿ, ಕವುಜಗ, ನೀರುಗೋಳಿ, ಮುಂತಾದ ಪಕ್ಷಿ ಮತ್ತು ಅವುಗಳ ತತ್ತಿಗಳನ್ನು ತಿನ್ನುವುದರಿಂದ, ಸೆರೆ-ಸಿಂಧಿಯನ್ನು ಯಥೇಚ್ಛವಾಗಿ ಕುಡಿಯುವುದರಿಂದ, ಬೇರೆ ಸಮುದಾಯದವರು ಇವರನ್ನು ತುಚ್ಚವಾಗಿ ಕಾಣುತ್ತಾರೆ. ಹೀಗಾಗಿ ಇವರು ಗ್ರಾಮಗಳಿಂದ ಮತ್ತು ಬೇರೆ ಸಮುದಾಯಗಳ ಜನವಸತಿಯಿಂದ ದೂರದಲ್ಲಿ ಪ್ರತ್ಯೇಕವಾಗಿ ನೆಲೆನಿಲ್ಲುತ್ತಾರೆ. ನಗರಗಳಲ್ಲಿ ಈ ಸಮುದಾಯದವರು ದಲಿತರ ಕೇರಿಯ ಹತ್ತಿರವಿದ್ದರೆ, ಹಳ್ಳಿಗಳಲ್ಲಿ ಊರ ಬಿಟ್ಟು ದೂರವಿದ್ದಾರೆ. ಗುಂಪು ಗುಂಪಾಗಿ ವಾಸಿಸುವುದು, ತಂಡ-ತಂಡಗಳಾಗಿ ವೃತ್ತಿ ಕೈಕೊಳ್ಳುವುದು ಈ ಸಮುದಾಯದ ವಿಶೇಷತೆಯಾಗಿದೆ.

ಬೆಳಗಾವಿ ಜಿಲ್ಲೆಯ ಚನ್ನದಾಸರ ಸಮುದಾಯದ ತಾಲೂಕಾವಾರು ಪ್ರಸಾರದ ನೆಲೆಗಳು



೩.೯. ಕಲಾ ಪದ್ಧತಿ (ಬಳಿ/ಬೆಡಗು)

ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಬಹುತೇಕವಾಗಿ ಎಲ್ಲ ಜಾತಿಗಳಿಗೂ ಉಪಜಾತಿ ಒಳಪಂಗಡಗಳಿವೆ. ಒಂದು ಜಾತಿಯನ್ನು ಇನ್ನಿತರ ಜಾತಿಗಳಿಂದ ಬೇರ್ಪಡಿಸಿ ತೋರಿಸುವುದನ್ನು ಮತ್ತು ಒಂದು ಜಾತಿಯ ಸಂಬಂಧಿಗಳನ್ನು ಬೆಸೆಯುವಲ್ಲಿ ಬೆಡಗುಗಳು ಪ್ರಮುಖ ಪಾತ್ರ ವಹಿಸುತ್ತವೆ. ಇವುಗಳನ್ನು ಬಳಿ ಎಂತಲೂ, ಕೆಲವು ಕಡೆ ತಳಿ, ಕುಲ ಎಂತಲೂ ಕರೆಯುತ್ತಾರೆ. "ಈ ಬಳಿಗಳು ರಕ್ತಸಂಬಂಧವನ್ನು ನಿರ್ಧರಿಸುವಾಗ ಪ್ರಮುಖ ಪಾತ್ರವಹಿಸುತ್ತವೆ. ಬಳಿಗಳು ಒಂದು ಸಮುದಾಯದ ಆದಿಮ ಸ್ಮೃತಿ ಕೋಶವನ್ನು ತಮ್ಮ ಒಳಗೆ ಬಚ್ಚಿಕೊಂಡಿರುತ್ತವೆ."[೩೪] ಎಂಬ ಡಾ .ಎ. ಎಸ್. ಪ್ರಭಾಕರ ಅವರ ಮಾತು ಮೌಲಿಕವಾಗಿದ್ದು, ಹೊಸ ಬೆಳಕನ್ನು ಚೆಲ್ಲಿದೆ.

ಭಾರತದ ಸಮಾಜದಲ್ಲಿ ಮದುವೆ ಎಂಬುದು ಒಂದು ಪವಿತ್ರವಾದ ಬಂಧನ. ನಾಗರಿಕ ಜೀವನಕ್ಕೆ ಸುಸಂಸ್ಕೃತ ಸಮಾಜದ ತಳಹದಿಯೆ ಮದುವೆಯ ಮೇಲೆ ನಿಂತಿದೆ. ಗಂಡು ಹೆಣ್ಣುಗಳ ಸಹಜೀವನ, ಸಮಾಗಮ, ವಂಶಾಭಿವೃದ್ಧಿ, ಪರಸ್ಪರ ಆಸರೆ, ಸಹಕಾರಕ್ಕೆ ಮದುವೆಯು ಅತ್ಯವಶ್ಯಕ. ಇದನ್ನು ಕ್ರಮಬದ್ಧಗೊಳಿಸಲು ಪ್ರತಿಯೊಂದು ಸಮಾಜವು ತನ್ನದೆ ಆದ ಶಿಸ್ತನ್ನು ಅಳವಡಿಸಿಕೊಂಡಿದೆ. ಮದುವೆಯು ಸಹೋದರ ಸಂಬಂಧಿಗಳಲ್ಲಿ ಆಗುವಂತಿಲ್ಲ. ಆದರೆ ಸಹೋದರಿ ಸಂಬಂಧಿಗಳಲ್ಲಿ ಪುರಸ್ಕಾರವಿದೆ. ಇದನ್ನು ಅನುಸರಿಸಲು ಬಳಿ ಅಥವಾ ಬೆಡಗನ್ನು ಸೃಷ್ಟಿಸಲಾಗಿದೆ. ಚೆನ್ನದಾಸರ ಸಮುದಾಯಗಳಲ್ಲಿಯೂ ಹಲವಾರು ಬೆಡಗುಗಳಿವೆ. ಒಂದು ಬೆಡಗಿನವರು ತಮ್ಮ ಬೆಡಗನ್ನು ಬಿಟ್ಟು, ಮಿಕ್ಕುಳಿದ ಯಾವುದೇ ಬೆಡಗಿನವರ ಜೊತೆಗೆ ವೈವಾಹಿಕ ಸಂಬಂಧ ಬೆಳೆಸಲು ಅವಕಾಶವಿದೆ. ಇದೇ ಸಮುದಾಯದಲ್ಲಿ ಒಂದು ಬೆಡಗಿನವರಿಗೆ ಕೆಲವೊಂದು ನಿರ್ದಿಷ್ಟ ಪಡಿಸಿದ ಬೆಡಗುಗಳು ಸೋದರ ಸಂಬಂಧ ಪಡೆದಿವೆ. ಇಂಥಲ್ಲಿ ವಿವಾಹಕ್ಕೆ ನಿಷೇಧವಿದೆ. ಮತ್ತೆ ಕೆಲವು ಬೆಡಗುಗಳನ್ನು ಸಹೋದರಿ ಸಂಬಂಧವನ್ನು ಪರಿಗಣಿಸಲಾಗುತ್ತದೆ. ಎಲ್ಲಿ ಸಹೋದರಿ ಸಂಬಂಧವೆಂದು ಒಪ್ಪಿತವಾಗಿದೆಯೊ ಅಲ್ಲಿ ಮದುವೆಗೆ ಸಮ್ಮತಿಯಿದೆ. ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ಪ್ರಮುಖವಾದ ಬೆಡಗುಗಳು ಈ ಕೆಳಗಿನಂತಿವೆ.

೧) ಅಕ್ಕೆನ್ನವರ್ (ಮುಕುಂದೋಳ್)

೨) ಅಕ್ಷತ (ಅಚ್ಚುತ)

೩) ಬೆಳ್ಳೆನ್ನವರ್

೪) ಬೋದೆನ್ನವರ (ಬೋದುಲೊಳು)

೫) ಭೀಮನೋಳು

೬) ದುಂಪಲ್ಲೊಳು

೭) ದೊಂತರ ಬೈ((ಮೈ)ನೊಳ್ಳು

೮) ಇಮಿಡೊಳು (ಇಮಿಡೆರ ಶೆಟ್ಟಿ)

೯) ಗಟ್ಟಿನೊಳ್

೧೦) ಗ್ವಾದಾವೊಳ್

೧೧) ಗ್ವಾ(ಗ)ಲೊಳ್ಳು

೧೨) ಗೋಪಾಳನವರ

೧೩) ಹೊನ್ನಪೇಡ

೧೪) ಜೊನ್ನಲೋಳು

೧೫) ಕುಂದ್ರೋಳ್ಳು

೧೬) ಕ್ವಾಮಟೊಳ್ಳು

೧೭) ಮಾದ್ನೋಳು

೧೮) ಮಾಡಬೈನೋಳು

೧೯) ಮುಡ್ರೋಳು(ಮುರೆನ್ನವರ)

೨೦) ಮೇಚಿನೋಳು

೨೧) ಮೊಗಸಾಲೊಳ್ಳು

೨೨) ಪಸುಪೋಳು(ಅರಿಷಿಣ)

೨೩) ಪುಲಿಯೋಳು (ಹುಲ್ಲೆನ್ನವರ)

೨೪) ರೇಕೆಲೋಳು

೨೫) ಶಿಲಿ (ಶೆಲ) ಮಶೆಟ್ಪೋಳು

೨೬) ಸುಣ್ಣಪೋಳು

೨೭) ತಟ್ಟಿಲೋಳು

೨೮) ವಾಟ್ಪೋಳ್ಳು

ಈ ಬಳಿ ಅಥವಾ ಬೆಡಗುಗಳ ಜೊತೆಗೆಯೆ ಹೂವಿನ ಕುಲ, ಅಮೃತದವರು, ಚಟ್ಯಾರ, ಚಂದಾವಾರ, ಏಕತಾರಿಕಾಯಿ, ಕಸ್ತೂರಿ ಕುಲ, ಸೆಟ್ಟಿಕುಲ, ಹೂವಲರು, ಹೊನ್ನ ಬೀರೂರ, ಹೊನ್ನಬೆನ್ನಲರು, ಹೊನ್ನಗುಂಡ್ಲನವರ, ಹೊನ್ನಗೋಪಾಳ, ಹೊನ್ನಮಲ್ಲಿಗೆ, ಹೊನ್ನಮರೆನ್ನವರ, ಹೊನ್ನಹೊಟಗದವರ, ಹೊನ್ನಾವಿಗೆ, ಹೊನ್ನನವರ, ಕಸ್ತೂರಿಯವರ ಎಂಬ ಬೆಡಗುಗಳು ಈ ಸಮುದಾಯದಲ್ಲಿವೆ.

೩.೧೦. ಜನಸಂಖ್ಯೆ

ಜನಸಂಖ್ಯಾಶಾಸ್ತ್ರವೆಂಬುದು ಇಂದು ಜಗತ್ತಿನಲ್ಲಿ ಹೆಚ್ಚು ಪ್ರಾಮುಖ್ಯತೆ ಹಾಗೂ ಪ್ರಾಧಾನ್ಯತೆಯನ್ನು ಪಡೆದ ಅಧ್ಯಯನದ ಒಂದು ಶಾಖೆಯಾಗಿದೆ. ವಿಶಾಲ ವ್ಯಾಪ್ತಿಯನ್ನು ಪಡೆದ ಈ ಅಧ್ಯಯನವು ಭಾರತದಲ್ಲಷ್ಟೆ ಅಲ್ಲದೆ, ಜಾಗತಿಕವಾಗಿ ಒಂದು ಪ್ರಮುಖ ವಿಷಯವಾಗಿದೆ. ಜಾಗತಿಕ ಜನಸಂಖ್ಯಾ ಇತಿಹಾಸದಲ್ಲಿ ಹದಿನೆಂಟನೆಯ ಶತಮಾನದಲ್ಲಿ ಜನಸಂಖ್ಯಾ ಬೆಳವಣಿಗೆಯು ತೀವ್ರತರವಾಗಿ ಬೆಳವಣಿಗೆಯಾಯಿತು. ಇದರಿಂದ ಆರ್ಥಿಕ ಹಾಗೂ ಸಾಮಾಜಿಕ ಸಮಸ್ಯಗಳು ಹುಟ್ಟಿದವು. ಆದ್ದರಿಂದ ಜನಸಂಖ್ಯಾ ಅಧ್ಯಯನದತ್ತ ಗಮನಹರಿಸಲಾಯಿತು. ಜನಸಂಖ್ಯೆ ಅಧ್ಯಯನವನ್ನು ಆಂಗ್ಲಭಾಷೆಯಲ್ಲಿ 'ಡೆಮಾಗ್ರಫಿ' ಅಥವಾ 'ಪಾಪುಲೇಶನ್ ಸ್ಟಡೀಸ್' ಎನ್ನುತ್ತಾರೆ. ಈ ಅಧ್ಯಯನವನ್ನು ವೈಜ್ಞಾನಿಕವಾಗಿ ಆರಂಭಿಸಿದ ಕೀರ್ತಿ ಅಮೇರಿಕಾಕ್ಕೆ ಸಲ್ಲುತ್ತದೆ. ಅಮೇರಿಕಾದಲ್ಲಿ ೧೭೯೦ರಲ್ಲಿ, ಫ್ರಾನ್ಸ ಹಾಗೂ ಇಂಗ್ಲೆಂಡಿನಲ್ಲಿ ೧೮೦೧ರಲ್ಲಿ ಜನಗಣತಿಯನ್ನು ಆರಂಭಿಸಲಾಯಿತು.

ಭಾರತದಲ್ಲಿ ೧೯೩೦ರಿಂದೀಚೆಗೆ ಜನಸಂಖ್ಯಾಶಾಸ್ತ್ರ ಅಧ್ಯಯನವು ಮಹತ್ವತೆಯನ್ನು ಪಡೆದುಕೊಂಡಿತು. ೧೮೮೧ರಲ್ಲಿ ಡಬ್ಲ್ಯೂ ಡಬ್ಲ್ಯೂ ಹಂಟರ್ ಅವರ ಯೋಜನೆಯು ೧೮೮೧ರಲ್ಲಿ ಒಂಬತ್ತು ಸಂಪುಟಗಳಲ್ಲಿ "ದ ಇಂಪೀರಿಯಲ್ ಗೆಝುಟೀಯರ್ ಆಫ್ ಇಂಡಿಯಾ" ಎಂಬ ಗ್ರಂಥ

ಪ್ರಕಟಗೊಂಡಿತು. ಇದರಲ್ಲಿ ಸಾರ್ವಜನಿಕ ಆರೋಗ್ಯ, ಪೌಷ್ಠಿಕಾಂಶಗಳು, ಚಿಕ್ಕವಯಸ್ಸಿನ ವಿವಾಹ, ಜನನ ಹಾಗೂ ಮರಣ ಪ್ರಮಾಣಗಳು, ಶಿಶು ಮರಣ ಮತ್ತು ಅದಕ್ಕೆ ಕಾರಣಗಳು, ವಿವಾಹ ಪದ್ಧತಿ ಹಾಗೂ ಜನನ ಪ್ರಮಾಣ ಸಂಬಂಧದ ಎಲ್ಲ ಮಾಹಿತಿಗಳನ್ನು ನಮೂದಿಸಿದ್ದಾನೆ. 'ದ ಇಂಪೀರಿಯಲ್ ಗೆಝಟೀಯರ್ ಆಫ್ ಇಂಡಿಯ' ಕೃತಿಯು ಭಾರತದ ಜನಸಂಖ್ಯೆ ಹಾಗೂ ಸಂಸ್ಕೃತಿಯನ್ನು ಕುರಿತಾಗಿ ವೈಜ್ಞಾನಿಕವಾಗಿ ಹಾಗೂ ಕ್ರಮಬದ್ಧವಾಗಿ ಅಧ್ಯಯನ ಮಾಡಿದ ಮೊದಲ ಜನಗಣತಿ ಅಧ್ಯಯನವಾಗಿದೆ. ವಸಹಾತು ವ್ಯವಸ್ಥೆಯಲ್ಲಿ ಪ್ರಾರಂಭಗೊಂಡ ಜನಗಣತಿಯು ಜನಸಂಖ್ಯೆ ಅಧ್ಯಯನದ ಪ್ರಾರಂಭವೆನ್ನಬಹುದು. ಸ್ವಾತಂತ್ರ್ಯದ ನಂತರ ಭಾರತದಲ್ಲಿ ೧೯೫೨ರಲ್ಲಿ ಪ್ರಥಮ ಜನಗಣತಿಯನ್ನು ನಡೆಸಲಾಯಿತು. ಅಲ್ಲಿಂದ ಪ್ರಾರಂಭಗೊಂಡ ಜನಗಣತಿ ಪ್ರತಿ ಹತ್ತು ವರುಷಕ್ಕೊಮ್ಮೆ ಇಂದಿಗೂ ಮುಂದುವರೆದುಕೊಂಡು ಬಂದಿದೆ.

ವಸಾಹತು ಕಾಲದಲ್ಲಿ ಜನಗಣತಿ ಪ್ರಾರಂಭಗೊಂಡರೂ, ಆರಂಭಗೊಂಡಾಗಿನಿಂದಲೂ ಬುಡಕಟ್ಟು ಮತ್ತು ಆದಿವಾಸಿ ಸಮುದಾಯಗಳ ಕುರಿತಾಗಿ ಪ್ರತ್ಯೇಕವಾಗಿ ಜನಗಣತಿ ಕಾರ್ಯ ನಡೆದಿಲ್ಲ. ಪ್ರತಿ ಹತ್ತು ವರುಷಕ್ಕೊಮ್ಮೆ ನಡೆಯುತ್ತ ಬಂದ ಸಾಮಾನ್ಯ ಜನಗಣತಿ ಒಟ್ಟು ಭಾರತ ದೇಶವಾಸಿಗಳ ಜೀವನ ಕ್ರಮವಾಗಿದೆ. ಇದರಲ್ಲಿ ಶಿಕ್ಷಣ, ಆರ್ಥಿಕತೆ, ಲಿಂಗಪ್ರಮಾಣ, ಸಾಕ್ಷರತೆ ಇತ್ಯಾದಿ ವಿಷಯಗಳನ್ನು ಒಳಗೊಂಡಿರುತ್ತದೆ.

ಇಡೀ ವಿಶ್ವದಲ್ಲಿ ಆಫ್ರಿಕಾದ ನಂತರ ಗರಿಷ್ಠ ಬುಡಕಟ್ಟು ಸಮುದಾಯದ ಜನರು ಇರುವ ದೇಶವೆಂದರೆ, ಭಾರತ. ೨೦೧೧ನೇ ಜನಗಣತಿಯ ಪ್ರಕಾರ, ದೇಶದ ಒಟ್ಟು ಜನಸಂಖ್ಯೆಯ ಶೇ.೮.೬ರಷ್ಟು ಬುಡಕಟ್ಟುಗಳು ಮೂಲತ: ಅರಣ್ಯವಾಸಿಗಳು. ಇಡೀ ಬುಡಕಟ್ಟು ಜನಾಂಗಗಳಲ್ಲಿ ಬಡತನರೇಖೆಗಿಂತ ಕೆಳಗಿರುವವರ ಸಂಖ್ಯೆ ಅಧಿಕವಾಗಿದೆ. ಭಾರತದಲ್ಲಿ ಈ ಸಮುದಾಯ ಎಲ್ಲ ವಲಯದಲ್ಲಿಯೂ ಕಂಡುಬರುತ್ತದೆ. ದೇಶದಲ್ಲಿ ೩೨ ಮೂಲನಿವಾಸಿಗಳು, ೪೧ ಬುಡಕಟ್ಟು ಸಮುದಾಯದವರು ವಾಸಿಸುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸರಕಾರದಿಂದ ಮಾನ್ಯತೆ ಪಡೆದಿರುವ ೫೦ ಬುಡಕಟ್ಟು ಸಮುದಾಯದವರಿದ್ದಾರೆ. ಇವುಗಳಲ್ಲಿ ಸಿದ್ಧಿ, ಗೌಡ್ಲು, ಕೊರಗ, ಮಲೆಕುಡಿಯಾ, ಮರಾಠನಾಯ್ಕ, ಜೇನುಕುರುಬ, ಕಾಡುಕುರುಬ, ಯರವ ಮುಂತಾದವರಿದ್ದಾರೆ. ಅವರಲ್ಲಿ ಪ್ರಸ್ತುತ ಅಧ್ಯಯನದ ಚೆನ್ನದಾಸರ ಸಮುದಾಯವೂ ಒಂದು.

ಕರ್ನಾಟಕದಲ್ಲಿಯೆ ಬೆಳಗಾವಿ ಜಿಲ್ಲೆಯಲ್ಲಿ ಚೆನ್ನದಾಸರ ಸಮುದಾಯವು ಹೆಚ್ಚಾಗಿ ನೆಲೆ ನಿಂತಿದೆ. ಬೆಳಗಾವಿ ಜಿಲ್ಲೆಯ ರಾಯಬಾಗ, ಅಥಣಿ, ಚಿಕ್ಕೋಡಿ, ಹುಕ್ಕೇರಿ, ಬೆಳಗಾವಿ, ರಾಮದುರ್ಗ, ಗೋಕಾಕ ಹಾಗೂ ಸವದತ್ತಿ ತಾಲೂಕಿನ ಅನೇಕ ಹಳ್ಳಿಗಳಲ್ಲಿ ವಾಸವಾಗಿದ್ದಾರನ್ನಿತರ

ಬುಡಕಟ್ಟು ಸಮುದಾಯಗಳಿಗೆ ಹೋಲಿಸಿದರೆ, ಇವರ ಜನಸಂಖ್ಯೆ ಪ್ರಮಾಣ ಅತಿ ಕಡಿಮೆ. ಒಂದು ತಾಲೂಕಿನ ಕೆಲವು ಹಳ್ಳಿಗಳಲ್ಲಿ ಮಾತ್ರ ಇವರ ನೆಲೆಗಳಿವೆ.

ಕೋಷ್ಟಕ– ಒಂದು

ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ನೆಲೆಗಳು, ಲಿಂಗಾನುಪಾತ ಮತ್ತು ಜನಸಂಖ್ಯೆಯ ವಿವರ

ಕ್ರ.ಸಂ	ತಾಲೂಕು	ಊರು	ಕುಟುಂಬ	ಗಂಡು	ಹೆಣ್ಣು	ಒಟ್ಟು
೦೧	ಅಥಣಿ	ಬಡಚಿ	೧೫	೩೭	೩೫	೭೨
		ಸಂಕೋನಟ್ಟಿ	೧೦	೨೫	೨೩	೪೮
ಒಟ್ಟು			೨೫	೬೨	೫೮	೧೨೦
೦೨	ಗೋಕಾಕ	ಉದಗಟ್ಟಿ	೮೨	೧೮೪	೧೮೨	೩೬೬
		ಕಲ್ಲೋಳಿ	೪೨	೧೧೫	೧೦೦	೨೧೫
		ಕೌಜಲಗಿ	೦೭	೧೮	೧೫	೩೩
		ಮಸಗುಪ್ಪಿ	೧೬	೫೬	೫೯	೧೧೫
		ರಂಗಾಪೂರ	೨೬	೭೪	೬೫	೧೩೯
		ಲೋಳಸುರ	೧೧	೨೮	೨೪	೫೨
		ಹೊಸಟ್ಟಿ	೩೦	೭೮	೭೧	೧೪೯
ಒಟ್ಟು			೨೧೪	೫೫೩	೫೧೬	೧೦೬೯

೦೩	ಚಿಕ್ಕೋಡಿ	ಹಿರೇಕೋಡಿ	೫೨	೧೪೧	೧೧೧	೨೫೨
ಒಟ್ಟು			**೫೨**	**೧೪೧**	**೧೧೧**	**೨೫೨**
೦೪	ಬೆಳಗಾವಿ	ಎಂಬಾಳ	೦೫	೧೩	೧೨	೨೫
		ಕಣಬರ್ಗಿ	೦೨	೦೬	೦೪	೧೦
		ಬೆಳಗಾವಿ	೦೮	೨೦	೧೮	೩೮
		ಹೊನಗಾ	೭೧	೧೫೬	೧೨೫	೨೯೧
ಒಟ್ಟು			**೮೬**	**೧೯೫**	**೧೫೯**	**೩೬೪**
೦೫	ರಾಮದುರ್ಗ	ಕಲಿಮಾಡ	೦೫	೧೪	೧೩	೨೭
		ಗೊಣ್ಣಾಗರ	೦೮	೨೨	೨೦	೪೨
		ಜಾಜಿಕೊಪ್ಪ	೦೩	೧೨	೧೧	೨೩
		ಜಾಲಿಕಟ್ಟಿ	೦೪	೧೨	೧೦	೨೨
		ಬೆಡಕಿ	೦೪	೧೨	೧೦	೨೨
		ಬಟಕುರ್ಕಿ	೦೫	೧೫	೧೫	೩೦
		ಮುದೇನೂರು	೦೧	೦೩	೦೨	೦೫
		ಮುಳ್ಳೂರು	೦೫	೧೮	೧೬	೩೪
		ರಾಮದುರ್ಗ	೨೫	೬೮	೬೨	೧೩೦
		ಸಾಲಹಳ್ಳಿ	೧೦	೨೮	೨೫	೫೩

		ಸುರೇಬಾನ/ಮಣಿಹಾಳ	೧೫	೩೯	೩೭	೭೬
		ಹುಣಶ್ಯಾಳ	೦೫	೧೪	೧೩	೨೭
		ಹುಲಕುಂದ	೧೫	೪೧	೩೯	೮೦
		ಚಿಕ್ಕನರಗುಂದ	೦೬	೧೦	೦೮	೧೮
		ಹಲಗತ್ತಿ	೦೫	೦೮	೦೬	೧೪
ಒಟ್ಟು			೧೧೬	೩೧೬	೨೮೭	೬೦೩
೦೬	ರಾಯಬಾಗ	ಅಲಖನೂರ	೨೩	೫೪	೩೬	೧೧೦
		ಐಬರಟ್ಟಿ	೪೦	೧೧೦	೯೧	೨೦೧
		ಕಂಕಣವಾಡಿ	೧೭	೫೨	೫೦	೧೦೨
		ಕುಡಚಿ	೪೬	೧೬೨	೧೫೫	೩೧೫
		ಖಣದಾಳ	೧೦	೨೮	೨೫	೫೩
		ಖೇಮಲಾಪೂರ	೭೪	೧೭೨	೧೬೨	೩೩೪
		ಚಿಂಚಲಿ	೬೮	೨೦೮	೧೬೨	೩೭೦
		ಜಲಾಲಪೂರ	೪೫	೧೨೧	೯೯	೨೨೦
		ದಾಸರವಾಡಿ (ಸವದತ್ತಿ)	೭೫	೧೯೮	೧೭೨	೩೭೦
		ನಿಲಜಿ	೭೧	೧೬೪	೧೩೧	೨೯೫
		ಪರಮಾನಂದವಾಡಿ	೧೦	೨೮	೨೫	೫೩

		ಬ್ಯಾಕುಡ	೦೮	೨೦	೧೮	೩೮
		ಮುಗಳಖೋಡ	೧೧೧	೨೯೧	೨೫೮	೫೪೯
		ಮೇಖಳಿ	೨೧	೭೬	೮೨	೧೫೭
		ಯಲ್ಪಾರಟ್ಟಿ	೨೭	೫೮	೫೪	೧೧೨
		ರಾಯಬಾಗ	೧೨	೩೨	೩೦	೬೨
		ಸವಸುದ್ದಿ	೩೯	೯೪	೮೫	೧೭೯
		ಸಿದ್ದಾಪೂರ	೭೪	೧೭೦	೧೬೦	೩೩೦
		ಹಾರೂಗೇರಿ	೧೮೦	೫೩೬	೪೬೧	೯೯೭
		ಹಿಡಕಲ್	೧೬೧	೩೯೧	೩೫೯	೭೫೦
ಒಟ್ಟು			**೧೧೧೨**	**೨೯೬೫**	**೨೬೧೫**	**೫೫೯೭**
೦೭	ಸವದತ್ತಿ	ಕಾಗದಾಳ	೦೪	೧೦	೦೯	೧೯
		ಸವದತ್ತಿ	೧೦	೭೦	೫೦	೧೨೦
		ಹಂಚಿನಾಳ	೦೭	೩೦	೨೭	೫೭
		ಹನುಮಸಾಗರ	೦೭	೧೮	೧೫	೩೩
		ಹಿರೇಕುಂಬಿ	೦೬	೨೫	೨೦	೪೫
ಒಟ್ಟು			**೩೪**	**೧೫೩**	**೧೨೧**	**೨೭೪**

೦೮	ಹುಕ್ಕೇರಿ	ಅರ್ಜುನವಾಡ	೩೮	೧೩೩	೯೯	೨೩೨
		ಕುರಣಿ	೫೧	೧೨೫	೧೧೬	೨೪೧
		ಕೊಟಬಾಗಿ	೪೭	೧೩೯	೧೩೧	೨೭೦
		ಗುಡಸ್	೦೪	೦೯	೧೦	೧೯
		ಒಟ್ಟು	**೧೪೦**	**೪೦೬**	**೩೫೬**	**೭೬೨**
		ಒಟ್ಟು	**೧೭೭೯**	**೪೭೯೧**	**೪೨೨೩**	**೯೦೧೪**

ಈ ಮೇಲಿನ ಕೋಷ್ಟಕವನ್ನು ಅವಲೋಕಿಸಿದರೆ "ಜಿಲ್ಲೆಯ ರಾಯಬಾಗ ಾಲೂಕಿನಲ್ಲಿ ಅತಿ ಹೆಚ್ಚು ಅಂದರೆ, ಒಂದು ಸಾವಿರದಾ ಒಂದು ನೂರಾ ಹನ್ನೆರಡು ುಟುಂಬಗಳಿವೆ. ಇವುಗಳಲ್ಲಿ ಎರಡು ಸಾವಿರದಾ ಒಂಭತ್ತು ನೂರಾ ಅರವತ್ತೈದು ಗಂಡಸರು ಾಗೂ ಎರಡು ಸಾವಿರದಾ ಆರು ನೂರಾ ಹದಿನೈದು ಹೆಂಗಸರು ಒಟ್ಟು ಐದು ಸಾವಿರದಾ ಐದು ೂರಾ ತೊಂಭತ್ತೆಳು ಜನರು ವಾಸವಾಗಿದ್ದಾರೆ. ಅಥಣಿ ತಾಲೂಕಿನಲ್ಲಿ ಈ ಸಮುದಾಯದ ಅತಿ ಡಿಮೆ ಜನರು ವಾಸಿಸುತ್ತಿದ್ದಾರೆ. ಮೂವತ್ತೊಂದು ಕುಟುಂಬಗಳಲ್ಲಿ ಅರವತ್ತೆರಡು ಗಂಡು ಹಾಗೂ ವತ್ತೆಂಟು ಹೆಣ್ಣು ಒಟ್ಟು ಒಂದು ನೂರಾ ಇಪ್ಪತ್ತು ಜನರು ವಾಸಿಸುತ್ತಿದ್ದಾರೆ."[೩೫] ಬೆಳಗಾವಿ ಲ್ಲೆಯ ಅನೇಕ ತಾಲೂಕುಗಳಲ್ಲಿ ನೆಲೆಸಿದ್ದಾರೆ. ಇನ್ನೂಳಿದ ಸಮುದಾಯಗಳಿಗೆ ಹೋಲಿಸಿದರೆ ವರ ಪ್ರಮಾಣ ಅತಿ ಕಡಿಮೆಯಿದೆ. ಒಂದು ತಾಲೂಕಿನ ಕೆಲವು ಹಳ್ಳಿಗಳಲ್ಲಿ ಮಾತ್ರ ಇವರ ಲೆಗಳಿವೆ. ಅವುಗಳನ್ನು ಅವಲೋಕಿಸುವುದಾದರೆ,

ಅಥಣಿ ತಾಲೂಕಿನಲ್ಲಿ (ಬಡಚಿ ಗ್ರಾಮದಲ್ಲಿ ಹದಿನೈದು ಕುಟುಂಬಗಳಿದ್ದು, ಅದರಲ್ಲಿ ಮೂವತ್ತೇಳು ಗಂಡು, ಮೂವತ್ತೈದು ಹೆಣ್ಣು ಹೀಗೆ ಒಟ್ಟು ಎಪ್ಪತ್ತೆರಡು ಜನರಿದ್ದಾರೆ. ಸಂಕೋನಟ್ಟಿಯಲ್ಲಿ ಹತ್ತು ಕುಟುಂಬಗಳಿದ್ದು, ಅದರಲ್ಲಿ ಇಪ್ಪತ್ತೈದು ಗಂಡು, ಇಪ್ಪತ್ತಮೂರು ಹೆಣ್ಣು ಒಟ್ಟು ನಾಲ್ವತ್ತೆಂಟು ಜನರಿದ್ದಾರೆ) ಒಂದುನೂರ ಇಪ್ಪತ್ತು ಜನರು ನೆಲೆಸಿದ್ದಾರೆ.

ಬೆಳಗಾವಿ ತಾಲೂಕಿನಲ್ಲಿ (ಎಂಬಾಳದಲ್ಲಿ ಐದು ಕುಟುಂಬಗಳಿದ್ದು, ಹದಿಮೂರು ಗಂಡು, ಹನ್ನೆರಡು ಹೆಣ್ಣು, ಒಟ್ಟು ಇಪ್ಪತ್ತೈದು ಜನರಿದ್ದಾರೆ. ಅದರಂತೆ ಹೊನಗಾದಲ್ಲಿ ಎಪ್ಪತ್ತೊಂದು ಕುಟುಂಬಗಳಿದ್ದು ಅದರಲ್ಲಿ ಒಂದು ನೂರಾ ಐವತ್ತಾರು ಗಂಡು, ಒಂದು ನೂರಾ ಇಪ್ಪತ್ತೈದು ಹೆಣ್ಣು, ಒಟ್ಟು ಎರಡು ನೂರಾ ತೊಂಭತ್ತೊಂದು ಜನರಿದ್ದಾರೆ. ಕಣಬರ್ಗಿಯಲ್ಲಿ ಎರಡು ಕುಟುಂಬಗಳಿವೆ. ಅದರಲ್ಲಿ ಆರು ಗಂಡು, ನಾಲ್ಕು ಹೆಣ್ಣು, ಒಟ್ಟು ಹತ್ತು ಜನರಿದ್ದಾರೆ. ತಾಲೂಕ ಕೇಂದ್ರ ಬೆಳಗಾವಿಯಲ್ಲಿ ಎಂಟು ಕುಟುಂಬಗಳಿವೆ. ಅವುಗಳಲ್ಲಿ ಇಪ್ಪತ್ತು ಗಂಡು, ಹದಿನೆಂಟು ಹೆಣ್ಣು, ಒಟ್ಟು ಮೂವತ್ತೆಂಟು ಜನರಿದ್ದಾರೆ.) ಒಟ್ಟು ಎಂಭತ್ತಾರು ಕುಟುಂಬಗಳಲ್ಲಿ ಮೂರು ನೂರಾ ಅರವತ್ತಾನ್ಕು ಜನರಿದ್ದಾರೆ.

ಚಿಕ್ಕೋಡಿ ತಾಲೂಕಿನ ಹಿರೆಕೋಡಿಯಲ್ಲಿ ಐವತ್ತೆರಡು ಕುಟುಂಬಗಳಿದ್ದು, ಒಂದು ನೂರಾ ನಲ್ವತ್ತೊಂದು ಗಂಡು, ಒಂದು ನೂರಾ ಹನ್ನೊಂದು ಹೆಣ್ಣು, ಒಟ್ಟು ಎರಡು ನೂರಾ ಐವತ್ತೆರಡು ಜನರು ವಾಸವಾಗಿದ್ದಾರೆ.

ಗೋಕಾಕ ತಾಲೂಕಿನಲ್ಲಿ (ಕಲ್ಲೋಳಿಯಲ್ಲಿ ನಾಲ್ವತ್ತೆರಡು ಕುಟುಂಬಗಳಿದ್ದು, ಒಂದು ನೂರಾ ಹದಿನೈದು ಜನ ಗಂಡು, ಒಂದು ನೂರು ಜನ ಹೆಣ್ಣು, ಒಟ್ಟು ಎರಡು ನೂರಾ ಹದಿನೈದು ಜನರಿದ್ದಾರೆ. ಮಸಗುಪ್ಪಿಯಲ್ಲಿ ಹದಿನಾರು ಕುಟುಂಬಗಳಿದ್ದು, ಅದರಲ್ಲಿ ಐವತ್ತಾರು ಗಂಡು, ಐವತ್ತೊಂಭತ್ತು ಹೆಣ್ಣು, ಒಟ್ಟು ಒಂದು ನೂರಾ ಹದಿನೈದು ಜನರಿದ್ದಾರೆ. ರಂಗಾಪೂರದಲ್ಲಿ ಇಪ್ಪತ್ತಾರು ಕುಟುಂಬಗಳಿವೆ. ಅದರಲ್ಲಿ ಎಪ್ಪತ್ತಾನ್ಕು ಗಂಡು, ಅರವತ್ತೈದು ಗಂಡು, ಒಟ್ಟು ಒಂದು ನೂರಾ ಮೂವತ್ತೊಂಭತ್ತು ಜನರಿದ್ದಾರೆ. ಉದಗಟ್ಟಿಯಲ್ಲಿ ಎಂಭತ್ತೆರಡು ಕುಟುಂಬಗಳಿದ್ದು, ಅದರಲ್ಲಿ ಒಂದು ನೂರಾ ಎಂಭತ್ತಾನ್ಕು ಗಂಡು ಮತ್ತು ಒಂದು ನೂರಾ ಎಂಭತ್ತೆರಡು ಹೆಣ್ಣು ಒಟ್ಟು ಮೂರು ನೂರಾ ಅರವತ್ತಾರು ಜನರಿದ್ದಾರೆ. ಹೊಸಟ್ಟಿಯಲ್ಲಿ ಮೂವತ್ತು ಕುಟುಂಬಗಳಿದ್ದು, ಎಪ್ಪತ್ತೆಂಟು ಗಂಡು, ಎಪ್ಪತ್ತೊಂದು ಹೆಣ್ಣು ಒಟ್ಟು ಒಂದು ನೂರಾ ನಾಲ್ವತ್ತೊಂಭತ್ತು ಜನರಿದ್ದಾರೆ. ಕೌಜಲಗಿಯಲ್ಲಿ ಏಳು ಕುಟುಂಬಗಳಿದ್ದು, ಅದರಲ್ಲಿ ಹದಿನೆಂಟು ಗಂಡು, ಹದಿನೈದು ಹೆಣ್ಣು, ಒಟ್ಟು ಮೂವತ್ಮೂರು ಜನರಿದ್ದಾರೆ. ಲೋಳಸುರದಲ್ಲಿ ಹನ್ನೊಂದು ಕುಟುಂಬಗಳಿದ್ದು, ಅದರಲ್ಲಿ ಇಪ್ಪತ್ತೆಂಟು ಗಂಡು ಹಾಗೂ

ಇಪ್ಪತ್ನಾಲ್ಕು ಹೆಣ್ಣು ಹೀಗೆ ಒಟ್ಟು ಐವತ್ತೆರಡು ಜನರಿದ್ದಾರೆ.) ಎರಡು ನೂರಾ ಹದಿನಾಲ್ಕು ಕುಟುಂಬಗಳಲ್ಲಿ ಒಟ್ಟು ಒಂದು ಸಾವಿರದ ಅರವತ್ತರೊಂಭತ್ತು ಜನರು ವಾಸಿಸುತ್ತಿದ್ದಾರೆ.

ರಾಮದುರ್ಗ ತಾಲೂಕಿನಲ್ಲಿ (ಬಟಕುರ್ಕಿಯಲ್ಲಿ ಐದು ಕುಟುಂಬಗಳಿವೆ. ಅವುಗಳಲ್ಲಿ ಹದಿನೈದು ಗಂಡು ಮತ್ತು ಹದಿನೈದು ಹೆಣ್ಣು ಒಟ್ಟು ಮೂವತ್ತು ಜನರಿದ್ದಾರೆ. ಬಿಡಕಿಯಲ್ಲಿ ನಾಲ್ಕು ಕುಟುಂಬಗಳಿದ್ದು, ಅವುಗಳಲ್ಲಿ ಹನ್ನೆರಡು ಗಂಡು ಹಾಗೂ ಹತ್ತು ಹೆಣ್ಣು ಒಟ್ಟು ಇಪ್ಪತ್ತೆರಡು ಜನರಿದ್ದಾರೆ. ಜಾಜಿಕೊಪ್ಪದಲ್ಲಿ ಮೂರು ಕುಟುಂಬಗಳಿದ್ದು, ಅವುಗಳಲ್ಲಿ ಹನ್ನೆರಡು ಗಂಡು ಮತ್ತು ಹನ್ನೊಂದು ಹೆಣ್ಣು ಒಟ್ಟು ಇಪ್ಪತ್ಮೂರು ಜನರಿದ್ದಾರೆ. ಗೊನ್ನಾಗರದಲ್ಲಿ ಎಂಟು ಕುಟುಂಬಗಳಿದ್ದು, ಅವುಗಳಲ್ಲಿ ಇಪ್ಪತ್ತೇರಡು ಗಂಡು ಹಾಗೂ ಇಪ್ಪತ್ತು ಹೆಣ್ಣು ಹೀಗೆ ಒಟ್ಟು ನಾಲ್ವತ್ತೆರಡು ಜನರಿದ್ದಾರೆ. ಹುಣಶ್ಯಾಳದಲ್ಲಿ ಐದು ಕುಟುಂಬಗಳಿದ್ದು, ಅದರಲ್ಲಿ ಹದಿನಾಲ್ಕು ಗಂಡು ಹಾಗೂ ಹದಿಮೂರು ಹೆಣ್ಣು ಒಟ್ಟು ಇಪ್ಪತ್ತೇಳು ಜನರಿದ್ದಾರೆ. ಹುಲಕುಂದದಲ್ಲಿ ಹದಿನೈದು ಕುಟುಂಬಗಳಿದ್ದು, ಅವುಗಳಲ್ಲಿ ನಾಲ್ವತ್ತೊಂದು ಗಂಡು ಹಾಗೂ ಮೂವತ್ತೊಂಭತ್ತು ಹೆಣ್ಣು ಒಟ್ಟು ಎಂಭತ್ತು ಜನರಿದ್ದಾರೆ. ಜಾಲಿಕಟ್ಟಿಯಲ್ಲಿ ನಾಲ್ಕು ಕುಟುಂಬಗಳಿದ್ದು, ಅದರಲ್ಲಿ ಹನ್ನೆರಡು ಗಂಡು ಹಾಗೂ ಹತ್ತು ಹೆಣ್ಣು ಒಟ್ಟು ಇಪ್ಪತ್ತೆರಡು ಜನರಿದ್ದಾರೆ. ಕಲಿಮಾಡದಲ್ಲಿ ಐದು ಕುಟುಂಬಗಳಿದ್ದು, ಅದರಲ್ಲಿ ಹದಿನಾಲ್ಕು ಗಂಡು ಹಾಗೂ ಹದಿಮೂರು ಒಟ್ಟು ಇಪ್ಪತ್ತೇಳು ಜನರಿದ್ದಾರೆ. ಮುದೇನೂರಿನಲ್ಲಿ ಕೇವಲ ಒಂದೇ ಒಂದು ಕುಟುಂಬವಿದ್ದು, ಮೂರು ಗಂಡು ಹಾಗೂ ಎರಡು ಹೆಣ್ಣು ಒಟ್ಟು ಐದು ಜನರಿದ್ದಾರೆ. ಮುಳ್ಳೂರಲ್ಲಿ ಐದು ಕುಟುಂಬಗಳಿದ್ದು, ಹದಿನೆಂಟು ಗಂಡು, ಹದಿನಾರು ಹೆಣ್ಣು, ಒಟ್ಟು ಮೂವತ್ನಾಲ್ಕು ಜನರಿದ್ದಾರೆ. ರಾಮದುರ್ಗದಲ್ಲಿ ಇಪ್ಪತ್ತೈದು ಕುಟುಂಬಗಳಿವೆ. ಅವುಗಳಲ್ಲಿ ಅರವತ್ತೆಂಟು ಗಂಡು ಮತ್ತು ಅರವತ್ತೆರಡು ಹೆಣ್ಣು, ಒಟ್ಟು ಒಂದು ನೂರಾ ಮೂವತ್ತು ಜನರಿದ್ದಾರೆ. ಸಾಲಳ್ಳಿ ಗ್ರಾಮದಲ್ಲಿ ಹತ್ತು ಕುಟುಂಬಗಳಿದ್ದು, ಅದರಲ್ಲಿ ಇಪ್ಪತ್ತೆಂಟು ಗಂಡು ಹಾಗೂ ಇಪ್ಪತ್ತೈದು ಹೆಣ್ಣು ಒಟ್ಟು ಐವತ್ಮೂರು ಜನ ವಾಸವಾಗಿದ್ದಾರೆ. ಸುರೇಬಾನದಲ್ಲಿ ಹದಿನೈದು ಕುಟುಂಬಗಳಿವೆ. ಅವುಗಳಲ್ಲಿ ಮೂವತ್ತೊಂಭತ್ತು ಗಂಡು ಹಾಗೂ ಮೂವತ್ತೇಳು ಹೆಣ್ಣು, ಒಟ್ಟು ಎಪ್ಪತ್ತಾರು ಜನರಿದ್ದಾರೆ. ಚಿಕ್ಕನರಗುಂದ ಗ್ರಾಮದಲ್ಲಿ ಆರು ಕುಟುಂಬಗಳಿದ್ದು ಅದರಲ್ಲಿ ಹತ್ತು ಗಂಡು, ಎಂಟು ಜನ ಹೆಣ್ಣು ಹೀಗೆ ಒಟ್ಟು ಹದಿನೆಂಟು ಜನ ವಾಸವಾಗಿದ್ದಾರೆ. ಹಲಗತ್ತಿ ಗ್ರಾಮದಲ್ಲಿ ಐದು ಕುಟುಂಬಗಳಿವೆ. ಅದರಲ್ಲಿ ಎಂಟು ಗಂಡು, ಆರು ಹೆಣ್ಣು ಹೀಗೆ ಒಟ್ಟು ಹದಿನಾಲ್ಕು ಜನರಿದ್ದಾರೆ.) ಒಟ್ಟು ಒಂದು ನೂರಾ ಹದಿನಾರು ಕುಟುಂಬಗಳಿವೆ. ಇವುಗಳಲ್ಲಿ ಮೂರು ನೂರಾ ಹದಿನಾರು ಗಂಡು, ಎರಡುನೂರಾ ಏಂಬತ್ತೆಳು ಒಟ್ಟು ಆರು ನೂರಾ ಮೂರು ಜನರು ವಾಸಿಸುತ್ತಿದ್ದಾರೆ.

ರಾಯಬಾಗ ತಾಲೂಕಿನಲ್ಲಿ (ಖಣದಾಳದಲ್ಲಿ ಹತ್ತು ಕುಟುಂಬಗಳಿದ್ದು, ಅವುಗಳಲ್ಲಿ ಇಪ್ಪತ್ತೆಂಟು ಗಂಡು, ಇಪ್ಪತ್ತೈದು ಹೆಣ್ಣು, ಒಟ್ಟು ಐವತ್ತ್ಮೂರು ಜನರಿದ್ದಾರೆ. ಪರಮಾನಂದವಾಡಿ ಯಲ್ಲಿ ಹತ್ತು ಕುಟುಂಬಗಳಿವೆ. ಅದರಲ್ಲಿ ಇಪ್ಪತ್ತೆಂಟು ಗಂಡು ಹಾಗೂ ಇಪ್ಪತ್ತೈದು ಹೆಣ್ಣು, ಒಟ್ಟು ಐವತ್ತ್ಮೂರು ಜನರಿದ್ದಾರೆ. ರಾಯಬಾಗದಲ್ಲಿ ಹನ್ನೆರಡು ಕುಟುಂಬಗಳಿವೆ. ಅವುಗಳಲ್ಲಿ ಮೂವತ್ತೆರಡು ಗಂಡು ಮತ್ತು ಮೂವತ್ತು ಹೆಣ್ಣು, ಒಟ್ಟು ಅರವತ್ತೆರಡು ಜನರಿದ್ದಾರೆ. ಆಲಕನೂರ ಗ್ರಾಮದಲ್ಲಿ ಇಪ್ಪತ್ತ್ಮೂರು ಕುಟುಂಬಗಳಿದ್ದು, ಅವರಲ್ಲಿ ಐವತ್ತ್ನಾಲ್ಕು ಜನ ಗಂಡು ಹಾಗೂ ಮೂವತ್ತಾರು ಜನ ಹೆಣ್ಣು, ಒಟ್ಟು ಒಂದು ನೂರಾ ಹತ್ತು ಜನರಿದ್ದಾರೆ. ಚಿಂಚಲಿ ಗ್ರಾಮದಲ್ಲಿ ಅರವತ್ತೆಂಟು ಕುಟುಂಬಗಳಲ್ಲಿ, ಎರಡು ನೂರಾ ಎಂಟು ಗಂಡು ಹಾಗೂ ಒಂದು ನೂರಾ ಅರವತ್ತೆರಡು ಹೆಣ್ಣು, ಒಟ್ಟು ಮೂರು ನೂರಾ ಎಪ್ಪತ್ತು ಜನರಿದ್ದಾರೆ. ದಾಸರವಾಡಿ ಸವದತ್ತಿಯಲ್ಲಿ ಎಪ್ಪತ್ತೈದು ಕುಟುಂಬಗಳಿವೆ. ಅದರಲ್ಲಿ ಒಂದುನೂರಾ ತೊಂಭತ್ತೆಂಟು ಗಂಡು, ಒಂದುನೂರಾ ಎಪ್ಪತ್ತೆರಡು ಹೆಣ್ಣು, ಒಟ್ಟು ಮೂರುನೂರಾ ಎಪ್ಪತ್ತು ಜನರಿದ್ದಾರೆ. ಹಾರೂಗೇರಿ ಯಲ್ಲಿ ಒಂದುನೂರಾ ಎಂಭತ್ತು ಕುಟುಂಬಗಳಿವೆ. ಅವುಗಳಲ್ಲಿ ಐದುನೂರಾ ಮೂವತ್ತಾರು ಗಂಡು, ನಾಲ್ಕುನೂರಾ ಅರವತ್ತೊಂದು ಹೆಣ್ಣು, ಒಟ್ಟು ಒಂಭತ್ತನೂರಾ ತೊಂಭತ್ತೆಳು ಜನರಿದ್ದಾರೆ. ಹಿಡಕಲ್ ಗ್ರಾಮದಲ್ಲಿ ಒಂದುನೂರಾ ಅರವತ್ತೊಂದು ಕುಟುಂಬಗಳಿದ್ದು, ಅದರಲ್ಲಿ ಮೂರು ನೂರಾ ತೊಂಭತ್ತೊಂದು ಗಂಡು, ಮೂರುನೂರಾ ಐವತ್ತೊಂಭತ್ತು ಹೆಣ್ಣು, ಒಟ್ಟು ಏಳುನೂರಾ ಐವತ್ತು ಜನರಿದ್ದಾರೆ. ಜಲಾಲಪೂರದಲ್ಲಿ ನಾಲ್ವತ್ತೈದು ಕುಟುಂಬಗಳಿದ್ದು, ಅದರಲ್ಲಿ ಒಂದು ನೂರಾ ಇಪ್ಪತ್ತೊಂದು ಗಂಡು, ತೊಂಭತ್ತೊಂಭತ್ತು ಹೆಣ್ಣು, ಒಟ್ಟು ಎರಡುನೂರಾ ಇಪ್ಪತ್ತು ಜನರಿದ್ದಾರೆ. ಕಂಕಣವಾಡಿಯಲ್ಲಿ ಹದಿನೇಳು ಕುಟುಂಬಗಳಿವೆ. ಅದರಲ್ಲಿ ಐವತ್ತೆರಡು ಗಂಡು, ಐವತ್ತು ಹೆಣ್ಣು, ಒಟ್ಟು ಒಂದುನೂರಾ ಎರಡು ಜನರಿದ್ದಾರೆ. ಖೆಮಲಾಪೂರದಲ್ಲಿ ಎಪ್ಪತ್ತ್ನಾಲ್ಕು ಕುಟುಂಬಗಳಲ್ಲಿ ಒಂದುನೂರಾ ಏಪ್ಪತ್ತೆರಡು ಗಂಡು, ಒಂದುನೂರಾ ಅರವತ್ತೆರಡು ಹೆಣ್ಣು, ಒಟ್ಟು ಮೂರುನೂರಾ ಮೂವತ್ತ್ನಾಲ್ಕು ಜನರಿದ್ದಾರೆ. ಕುಡಚಿ ಗ್ರಾಮದಲ್ಲಿ ನಾಲ್ವತ್ತಾರು ಕುಟುಂಬಗಳಿದ್ದು, ಅದರಲ್ಲಿ ಒಂದುನೂರಾ ಅರವತ್ತೆರಡು ಗಂಡು, ಒಂದು ನೂರಾ ಐವತ್ತೈದು ಹೆಣ್ಣು, ಒಟ್ಟು ಮೂರು ನೂರಾ ಹದಿನೇಳು ಜನರಿದ್ದಾರೆ. ಮೇಖಳಿ ಗ್ರಾಮದಲ್ಲಿ ಇಪ್ಪತ್ತೊಂದು ಕುಟುಂಬಗಳಿದ್ದು, ಅದರಲ್ಲಿ ಏಪ್ಪತ್ತಾರು ಗಂಡು, ಏಂಭತ್ತೆರಡು ಹೆಣ್ಣು, ಒಟ್ಟು ಒಂದುನೂರಾ ಐವತ್ತೇಳು ಜನರಿದ್ದಾರೆ. ಮುಗಳಖೋಡ ಗ್ರಾಮದಲ್ಲಿ ಒಂದುನೂರಾ ಹನ್ನೊಂದು ಕುಟುಂಬಗಳಿವೆ. ಅದರಲ್ಲಿ ಎರಡುನೂರಾ ತೊಂಭತ್ತೊಂದು ಗಂಡು, ಎರಡುನೂರಾ ಐವತ್ತೆಂಟು ಹೆಣ್ಣು, ಒಟ್ಟು ಐದುನೂರಾ ನಾಲ್ವತ್ತೊಂಭತ್ತು ಜನರಿದ್ದಾರೆ. ನಿಲಜಿ ಗ್ರಾಮದಲ್ಲಿ ಎಪ್ಪತ್ತೊಂದು ಕುಟುಂಬಗಳಿದ್ದು, ಅದರಲ್ಲಿ ಒಂದುನೂರಾ ಅರವತ್ನಾಲ್ಕು ಗಂಡು, ನೂರಾ ಮೂವತ್ತೊಂದು

ಹೆಣ್ಣು, ಒಟ್ಟು ಎರಡುನೂರಾ ತೊಂಭತ್ತೈದು ಜನರಿದ್ದಾರೆ. ಸವಸುದ್ದಿಯಲ್ಲಿ ಮೂವತ್ತೊಂಭತ್ತು ಕುಟುಂಬಗಳಿವೆ. ಅದರಲ್ಲಿ ತೊಂಭತ್ನಾಲ್ಕು ಗಂಡು, ಏಂಭತ್ತೈದು ಹೆಣ್ಣು, ಒಟ್ಟು ಒಂದು ನೂರಾ ಏಪ್ಪತ್ತೊಂಭತ್ತು ಜನರಿದ್ದಾರೆ. ಯಬರಟ್ಟಿಯಲ್ಲಿ ನಾಲ್ವತ್ತು ಕುಟುಂಬಗಳಿವೆ. ಅದರಲ್ಲಿ ನೂರಾಹತ್ತು ಗಂಡು, ತೊಂಭತ್ತೊಂದು ಹೆಣ್ಣು, ಒಟ್ಟು ಏರಡು ನೂರಾ ಒಂದು ಜನರಿದ್ದಾರೆ. ಬ್ಯಾಕೂಡದಲ್ಲಿ ಎಂಟು ಕುಟುಂಬಗಳಿವೆ. ಅದರಲ್ಲಿ ಇಪ್ಪತ್ತು ಗಂಡು, ಹದಿನೆಂಟು ಹೆಣ್ಣು, ಒಟ್ಟು ಮೂವತ್ತೆಂಟು ಜನರಿದ್ದಾರೆ. ಯಲ್ಪಾರಟ್ಟಿಯಲ್ಲಿ ಇಪ್ಪತ್ತೇಳು ಕುಟುಂಬಗಳಿವೆ. ಅದರಲ್ಲಿ ಐವತ್ತೆಂಟು ಗಂಡು, ಐವತ್ನಾಲ್ಕು ಹೆಣ್ಣು, ಒಟ್ಟು ಒಂದು ನೂರಾ ಹನ್ನೆರಡು ಜನರಿದ್ದಾರೆ. ಸಿದ್ದಾಪೂರದಲ್ಲಿ ಎಪ್ಪತ್ತನಾಲ್ಕು ಕುಟುಂಬಗಳಿವೆ. ಅದರಲ್ಲಿ ಒಂದು ನೂರ ಎಪ್ಪತ್ತು ಗಂಡು, ಒಂದು ನೂರ ಅರವತ್ತು ಹೆಣ್ಣು, ಒಟ್ಟು ಮೂರು ನೂರಾ ಮೂವತ್ತು ಜನರಿದ್ದಾರೆ) ಒಂದು ಸಾವಿರದ ಒಂದು ನೂರ ಹನ್ನೆರಡು ಕುಟುಂಬಗಳಿವೆ. ಇವುಗಳಲ್ಲಿ ಐದು ಸಾವಿರದ ಐದು ನೂರ ತ್ತೊಂಭತ್ತೆಳು ಜನರಿದ್ದಾರೆ.

ಹುಕ್ಕೇರಿ ತಾಲೂಕಿನಲ್ಲಿ (ಗುಡಸ್ ಗ್ರಾಮದಲ್ಲಿ ನಾಲ್ಕು ಕುಟುಂಬಗಳಿವೆ. ಅವುಗಳಲ್ಲಿ ಒಂಭತ್ತು ಗಂಡು ಹಾಗೂ ಹತ್ತು ಹೆಣ್ಣು, ಒಟ್ಟು ಹತ್ತೊಂಭತ್ತು ಜನರಿದ್ದಾರೆ. ಕೊಟಬಾಗಿ ಗ್ರಾಮದಲ್ಲಿ ನಾಲ್ವತ್ತೇಳು ಕುಟುಂಬಗಳಿವೆ. ಅವುಗಳಲ್ಲಿ ಒಂದುನೂರಾ ಮೂವತ್ತೊಂಭತ್ತು ಗಂಡು ಹಾಗೂ ಒಂದು ನೂರ ಮೂವತ್ತೊಂದು ಹೆಣ್ಣು, ಒಟ್ಟು ಎರಡು ನೂರ ಎಪ್ಪತ್ತು ಜನರಿದ್ದಾರೆ. ಅರ್ಜುನವಾಡ ಗ್ರಾಮದಲ್ಲಿ ಮೂವತ್ತೆಂಟು ಕುಟುಂಬಗಳಿವೆ. ಅವುಗಳಲ್ಲಿ ಒಂದುನೂರ ಮೂವತ್ತಮೂರು ಗಂಡು ಹಾಗೂ ತೊಂಭತ್ತೊಂಭತ್ತು ಹೆಣ್ಣು, ಒಟ್ಟು ಎರಡು ನೂರ ಮೂವತ್ತೆರಡು ಜನರಿದ್ದಾರೆ. ಕುರಣಿ ಗ್ರಾಮದಲ್ಲಿ ಐವತ್ತೊಂದು ಕುಟುಂಬಗಳಿವೆ. ಅವುಗಳಲ್ಲಿ ಒಂದು ನೂರ ಇಪ್ಪತ್ತೈದು ಗಂಡು ಹಾಗೂ ನೂರ ಹದಿನಾರು ಹೆಣ್ಣು, ಒಟ್ಟು ಎರಡು ನೂರ ನಾಲವತ್ತೊಂದು ಜನರಿದ್ದಾರೆ.) ಒಂದು ನೂರ ನಾಲವತ್ತು ಕುಟುಂಬಗಳಿವೆ. ಅವುಗಳಲ್ಲಿ ನಾಲ್ಕುನೂರ ಆರು ಗಂಡು ಮತ್ತು ಮೂರುನೂರ ಐವತ್ತಾರು ಹೆಣ್ಣು ಹೀಗೆ ಒಟ್ಟು ಏಳು ನೂರ ಅರವತ್ತೆರಡು ಜನರು ವಾಸಿಸುತ್ತಿದ್ದಾರೆ.

ಸವದತ್ತಿ ತಾಲೂಕಿನಲ್ಲಿ (ಸವದತ್ತಿಯಲ್ಲಿ ಹತ್ತು ಕುಟುಂಬಗಳಿವೆ. ಅವುಗಳಲ್ಲಿ ಎಪ್ಪತ್ತು ಗಂಡು ಹಾಗೂ ಐವತ್ತು ಹೆಣ್ಣು, ಒಟ್ಟು ಒಂದುನೂರ ಇಪ್ಪತ್ತು ಜನರಿದ್ದಾರೆ. ಹಂಚಿನಾಳ ಗ್ರಾಮದಲ್ಲಿ ಏಳು ಕುಟುಂಬಗಳಿವೆ. ಅವುಗಳಲ್ಲಿ ಮೂವತ್ತು ಗಂಡು ಹಾಗೂ ಇಪ್ಪತ್ತೆಳು ಹೆಣ್ಣು ಒಟ್ಟು ಐವತ್ತೇಳು ಜನರಿದ್ದಾರೆ. ಹಿರೇಕುಂಬಿ ಗ್ರಾಮದಲ್ಲಿ ಆರು ಕುಟುಂಬಗಳಿವೆ. ಅದರಲ್ಲಿ ಇಪ್ಪತ್ತೈದು ಗಂಡು, ಇಪ್ಪತ್ತು ಹೆಣ್ಣು ಒಟ್ಟು ನಾಲವತ್ತೈದು ಜನರಿದ್ದಾರೆ. ಕಾಗದಾಳ ಗ್ರಾಮದಲ್ಲಿ ನಾಲ್ಕು ಕುಟುಂಬಗಳಿವೆ. ಅದರಲ್ಲಿ ಹತ್ತು ಗಂಡು, ಒಂಬತ್ತು ಹೆಣ್ಣು ಒಟ್ಟು ಹತ್ತೊಂಭತ್ತು ಜನ ವಾಸವಾಗಿದ್ದಾರೆ. ಹನುಮಸಾಗರ

ಗ್ರಾಮದಲ್ಲಿ ಏಳು ಕುಟುಂಬಗಳಿದ್ದು ಅದರಲ್ಲಿ ಹದಿನೆಂಟು ಗಂಡು, ಹದಿನೈದು ಹೆಣ್ಣು ಒಟ್ಟು ಮೂವತ್ತ್ಮೂರು ಜನರು ವಾಸಿಸುತ್ತಿದ್ದಾರೆ.) ಮೂವತ್ತ್ನಾಲ್ಕು ಕುಟುಂಬಗಳಿವೆ. ಅವುಗಳಲ್ಲಿ ಒಂದುನೂರ ಐವತ್ತ್ಮೂರು ಗಂಡು ಮತ್ತು ಒಂದುನೂರ ಎಪ್ಪತ್ತೊಂದು ಹೆಣ್ಣು ಹೀಗೆ ಒಟ್ಟು ಎರಡುನೂರ ಏಪ್ಪತ್ನಾಲ್ಕು ಜನರು ವಾಸಿಸುತ್ತಿದ್ದಾರೆ.

ಅಥಣಿ ತಾಲೂಕಿನಲ್ಲಿ ಒಂದು ನೂರ ಇಪ್ಪತ್ತು, ಬೆಳಗಾವಿ ತಾಲೂಕಿನಲ್ಲಿ ಮೂರುನೂರ ಐವತ್ತ್ನಾಲ್ಕು, ಚಿಕ್ಕೋಡಿ ತಾಲೂಕಿನಲ್ಲಿ ಏರಡು ನೂರ ಐವತ್ತೆರಡು, ಗೋಕಾಕ ತಾಲೂಕಿನಲ್ಲಿ ಒಂದು ಸಾವಿರದಾ ನಾಲವತ್ತೆಂಟು, ರಾಮದುರ್ಗ ತಾಲೂಕಿನಲ್ಲಿ ಆರುನೂರ ಮೂರು, ರಾಯಬಾಗ ತಾಲೂಕಿನಲ್ಲಿ ಐದು ಸಾವಿರದ ಐದು ನೂರ ತ್ತೊಂಭತ್ತೇಳು, ಹುಕ್ಕೇರಿ ತಾಲೂಕಿನಲ್ಲಿ ಏಳು ನೂರ ಅರವತ್ತೆರಡು, ಸವದತ್ತಿ ತಾಲೂಕಿನಲ್ಲಿ ಎರಡುನೂರ ಎಪ್ಪತ್ನಾಲ್ಕು ಜನರು ಇದ್ದಾರೆ. ಹೀಗೆ ಬೆಳಗಾವಿ ಜಿಲ್ಲೆಯ ವ್ಯಾಪ್ತಿಯಲ್ಲಿ ಹದಿನೇಳು ನೂರ ಎಪ್ಪತ್ತೊಂಭತ್ತು ಕುಟುಂಬಗಳಿವೆ. ಅದರಲ್ಲಿ ನಾಲ್ಕು ಸಾವಿರದ ಏಳು ನೂರ ತೊಂಭತ್ತೊಂದು ಗಂಡು, ನಾಲ್ಕು ಸಾವಿರದ ಎರಡುನೂರ ಇಪ್ಪತ್ತ್ಮೂರು ಹೆಣ್ಣು, ಒಟ್ಟು ಒಂಭತ್ತು ಸಾವಿರದ ಹದಿನಾಲ್ಕು ಚೆನ್ನದಾಸರ ಸಮುದಾಯದ ಜನ ವಾಸ್ತವ್ಯ ಮಾಡಿದ್ದಾರೆ.

ಮೇಲಿನ ಅಂಕಿ ಅಂಶವನ್ನು ನಾವು ಅವಲೋಕಿಸಿದರೆ, ಬೆಳಗಾವಿ ಜಿಲ್ಲಯ ಒಟ್ಟು ಹತ್ತು ತಾಲೂಕಿನ ಪೈಕಿ ಎಂಟು ತಾಲೂಕುಗಳಲ್ಲಿ ಚೆನ್ನದಾಸರ ಸಮುದಾಯ ನೆಲೆನಿಂತಿದೆ. ಖಾನಾಪೂರ ಹಾಗೂ ಬೈಲಹೊಂಗಲ ತಾಲೂಕಿನಲ್ಲಿ ಸದರಿ ಸಮುದಾಯ ಕಂಡುಬರುವುದಿಲ್ಲ. ನೆಲೆ ನಿಂತಿರುವ ತಾಲೂಕುಗಳಲ್ಲಿ ರಾಯಬಾಗ ತಾಲೂಕಿನಲ್ಲಿ ಅತೀ ಹೆಚ್ಚು ಜನಸಂಖ್ಯೆ ಕಂಡು ಬರುತ್ತದೆ. ರಾಯಬಾಗ ತಾಲೂಕು ನೀರಾವರಿಗೆ ಒಳಪಟ್ಟಿದೆ. ಘಟಪ್ರಭಾ ಎಡದಂಡೆ ಕಾಲುವೆಯು ಹರಿದ ಪ್ರದೇಶದ ಹಳ್ಳಿಗಳಲ್ಲಿ ಈ ಸಮುದಾಯವನ್ನು ಹೆಚ್ಚಾಗಿ ಕಾಣುತ್ತೇವೆ. ಅಥಣಿ ತಾಲೂಕಿನಲ್ಲಿ ಕಡಿಮೆ ಜನಸಂಖ್ಯೆಯಿದೆ. ಇದಕ್ಕೆ ಅಥಣಿ ತಾಲೂಕು ನೀರಾವರಿಗೆ ಒಳಪಡದಿರುವುದು, ಗಡಿಭಾಗದಲ್ಲಿ ರುವುದು, ಹಿಂದುಳಿದ ಪ್ರದೇಶವಾಗಿರುವುದು ಇದಕ್ಕೆ ಕಾರಣವಿರಬಹುದು.

೩.೧೧. ಸಾಕ್ಷರತೆ

ಚೆನ್ನದಾಸರ ಸಮುದಾಯವು ಕರ್ನಾಟಕದ ಅಸಂಘಟಿತ ಸಮುದಾಯಗಳಲ್ಲಿ ಒಂದಾಗಿದೆ. ಹೀಗಾಗಿ ಶೈಕ್ಷಣಿಕವಾಗಿ ಹಿಂದುಳಿದಿದ್ದು ಶೋಚನೀಯ ಸ್ಥಿತಿಯಲ್ಲಿದೆ. ೧೯೭೦ರ

ಸುಮಾರಿಗೆ ಬೆಳಗಾವಿ ಜಿಲ್ಲೆಯಲ್ಲಿ ಈ ಸಮುದಾಯದ ನೌಕರರು ಒಗ್ಗೂಡಿ 'ಚೆನ್ನದಾಸರ ಸೇವಾ ಸಂಘವನ್ನು ಹುಟ್ಟು ಹಾಕಿದರು. ಈ ಸಂಘದ ಮೂಲಕ ಶೈಕ್ಷಣಿಕವಾಗಿ ಜಾಗೃತಿ ಮೂಡಿಸಲು ಪ್ರಯತ್ನಿಸಿದರು. ಆದರೆ ಈ ಸಮುದಾಯ ತನ್ನ ಆಂತರಿಕ ಸಮಸ್ಯೆಗಳಿಂದ ಎಚ್ಚೆತ್ತುಕೊಳ್ಳಲು ಸಾಧ್ಯವಾಗಲಿಲ್ಲ. ಕ್ರಿ.ಶ. ೧೯೭೭ರ ಸುಮಾರಿಗೆ ಗದಗದಲ್ಲಿ ಚೆನ್ನದಾಸರ ಸಮಾಜ ಸೇವಾ ಸಂಘ ಆರಂಭಗೊಂಡು ಶಿಕ್ಷಣದ ಮಹತ್ವ ತಿಳಿಸಲು ಪ್ರಯತ್ನಿಸಿತ್ತು. ಆದರೂ ಪೂರ್ಣ ಪ್ರಮಾಣದ ಜಾಗೃತಿ ಮೂಡಲಿಲ್ಲ.

೨೦೦೩ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕವನ್ನು ಗಮನದಲ್ಲಿ ಇರಿಸಿಕೊಂಡು "ಕರ್ನಾಟಕ ಚೆನ್ನದಾಸರ ಕ್ಷೇಮಾಭಿವೃದ್ಧಿ ಸಂಘ" ಅಸ್ತಿತ್ವಕ್ಕೆ ಬಂತು. ಕೆ. ಭಾಸ್ಕರದಾಸ ಎಕ್ಕಾರು ಅವರ ನೇತೃತ್ವದಲ್ಲಿ ಸ್ಥಾಪನೆಗೊಂಡ ಈ ಸಂಘವು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ತನ್ನ ಸಮುದಾಯದ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡಿತು. ಸಾಮಾಜಿಕ ಸಂಘಟನೆ, ನೌಕರರ ಸಂಘಟನೆ, ಚಿಂತನಾ ಸಮಾವೇಶ, ಕಲಾವಿದರ ಸಮಾವೇಶ ಮುಂತಾದವುಗಳ ಸಂಘಟನೆಗಳಿಂದಾಗಿ ಈ ಚೆನ್ನದಾಸರ ಸಮುದಾಯದಲ್ಲಿ ಜಾಗೃತಿ ಮೂಡಿತು. ಮುಂದೆ ಪ್ರತಿ ಜಿಲ್ಲೆಗಳಲ್ಲೂ ಚೆನ್ನದಾಸರ ಸಮುದಾಯದ ಸಂಘಟನೆಗಳು ಅಧೀಕೃತವಾಗಿ ನೋಂದಾಯಿಸಲ್ಪಟ್ಟವು. ಬೇರೆ,ಬೇರೆ ಹೆಸರುಗಳಿಂದಾಗಿ, ಮೀಸಲಾತಿಯು ಲಭಿಸದಿರುವುದನ್ನು ಗಂಭೀರವಾಗಿ ಪರಿಗಣಿಸಿ ಹೋರಾಟ ಮಾಡಿದುದ್ದರ ಪರಿಣಾಮವಾಗಿ ಪರಿಶಿಷ್ಟ ಜಾತಿಯ ಸೌಲಭ್ಯಗಳು ದೊರೆತು ಈ ಸಮುದಾಯದ ಹುಡುಗರು ಶಿಕ್ಷಣ ಪಡೆಯಲು ಅನುಕೂಲವಾಯಿತು.

೨೦೦೧ರಿಂದೀಚೆಗೆ 'ಬೆಳಗಾವಿ ಜಿಲ್ಲಾ ಚೆನ್ನದಾಸರ ಕ್ಷೇಮಾಭಿವೃದ್ಧಿ ಸಂಘ'ದ ನಿರಂತರ ಚಟುವಟಿಕೆಗಳಿಂದ ಬೆಳಗಾವಿ ಜಿಲ್ಲೆಯ ಸಮುದಾಯ ಜಾಗೃತಗೊಂಡಿದೆ. "ಮೊದಲಿನ ಹತ್ತು ವರುಷಗಳಿಗೆ ಹೋಲಿಸಿದರೆ ಈ ಸಮುದಾಯದ ಸಾಕ್ಷರತಾ ಪ್ರಮಾಣದಲ್ಲಿ ಇತ್ತೀಚೆಗೆ ಸ್ವಲ್ಪಮಟ್ಟಿನ ಏರಿಕೆ ಕಂಡು ಬಂದಿದೆ. ಮೆಟ್ರಿಕ್ ಪೂರ್ವದ ಸಾಕ್ಷರತಾ ಪ್ರಮಾಣ ಆಶಾದಾಯಕವಾಗಿದ್ದರೆ, ಮೆಟ್ರಿಕ್ ನಂತರದ ಸಾಕ್ಷರತಾ ಪ್ರಮಾಣ ಶೋಚನೀಯವಾಗಿದೆ. ಹಲವೆಡೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಚೆನ್ನದಾಸರ ಜಾತಿ ಪ್ರಮಾಣ ಪತ್ರದ ತೊಂದರೆಯಿಂದ, ಶಾಲೆಯ ಶುಲ್ಕ ಕಟ್ಟಲು ಸಾಧ್ಯವಾಗದೆ ಶಾಲೆ ಬಿಟ್ಟ ಚೆನ್ನದಾಸರ ಸಮುದಾಯದ ಯುವಕರ ಸಂಖ್ಯೆ ಗಣನೀಯವಾಗಿದೆ. ಹೀಗಾಗಿ ಮೆಟ್ರಿಕ್ ನಂತರದ ತಾಂತ್ರಿಕ, ವಿಜ್ಞಾನ, ವೃತ್ತಿಪರ ತರಬೇತಿಗಳಿಗೆ ಮತ್ತು ಪದವಿಗಳಿಗೆ ಮಕ್ಕಳು ಹೋಗಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ."[೩೬] ಎಂಬುದು

ಯೋಚಿಸಬೇಕಾದ ಸಂಗತಿಯಾಗಿದೆ. ಇದು ಚೆನ್ನದಾಸರ ಸಮುದಾಯದ ಸಾಕ್ಷರತೆಯ ಪ್ರಮಾಣ ಕಡಿಮೆಯಾಗಲು ಕಾರಣವಾಗಿದೆ.

ಕೋಷ್ಠಕ–ಎರಡು

ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ಲಿಂಗವಾರು ಸಾಕ್ಷರತಾ ಪ್ರಮಾಣದ ವಿವರ (ಶೇಕಡಾವಾರು ಪ್ರಮಾಣದಲ್ಲಿ)

ಸಾಕ್ಷರತಾ ಪ್ರಮಾಣ					
೭ನೇ ವರ್ಗದವರೆಗಿನ ಸಾಕ್ಷರತೆ		೧೦ನೇ ವರ್ಗದವರೆಗಿನ ಸಾಕ್ಷರತೆ		೧೦ನೇ ವರ್ಗದ ಮೇಲ್ಪಟ್ಟವರ ಸಾಕ್ಷರತೆ	
ಗಂ	ಹೆ	ಗಂ	ಹೆ	ಗಂ	ಹೆ
೨೪	೧೨	೨೦.೨೬	೮.೨೦	೫.೦	೧.೦

ಬೆಳಗಾವಿ ಜಿಲ್ಲೆಯಲ್ಲಿ ನೆಲೆಸಿರುವ ಚೆನ್ನದಾಸರ ಸಮುದಾಯದಲ್ಲಿ ಐದು ವರುಷಕ್ಕಿಂತ ಕಡಿಮೆಯಿರುವ ಮಕ್ಕಳು ಶೇ.೭.೭೦ರಷ್ಟು ಇದ್ದಾರೆ. ಇವರನ್ನು ಬದಿಗಿರಿಸಿದರೆ, ಶೇ.೯೨.೨೯ ಮಕ್ಕಳು ಶಿಕ್ಷಣ ಪಡೆಯಲು ಅರ್ಹರಾಗಿದ್ದಾರೆ. ಇಷ್ಟಿದ್ದರೂ ಸಾಕ್ಷರತೆ ಪಡೆದವರ ಸಂಖ್ಯೆ ಕೇವಲ ಶೇ. ೩೫.೨೩ (೨೦೧೧ರ ಜಗಣತಿಯಂತೆ) ರಷ್ಟಿರುವುದು ಸಮೀಕ್ಷೆಯಿಂದ ತಿಳಿದು ಬರುತ್ತದೆ. ಇದರಲ್ಲಿ ಏಳನೆಯ ತರಗತಿ ಪೂರೈಸಿದವರ ಸಂಖ್ಯೆ ಪ್ರತಿಶತ ಶೇ.೧೮ ಮಾತ್ರ. ಇದರಲ್ಲಿ

ಶೇ.೧೨ರಷ್ಟು ಗಂಡು ಹಾಗೂ ಶೇ.೬ರಷ್ಟು ಹೆಣ್ಣು ಸಾಕ್ಷರರಿದ್ದಾರೆ. ಕೇವಲ ಶೇ.೧೪.೨೩ರಷ್ಟು ಜನ ಮಾತ್ರ ಎಸ್.ಎಸ್.ಎಲ್.ಸಿ. ಪೂರೈಸಿದ್ದಾರೆ. ಅದರಲ್ಲಿ ಬಾಲಕರ ಸಾಕ್ಷರತೆ ಪ್ರಮಾಣ ಅಧಿಕವಾಗಿದ್ದರೆ, ಬಾಲಕಿಯರ ಸಾಕ್ಷರತೆ ಪ್ರಮಾಣ ತುಂಬ ಕೆಳಸ್ತರದಲ್ಲಿದೆ. "ಕರ್ನಾಟಕ ರಾಜ್ಯದ ಎಲ್ಲ ಸಮುದಾಯಗಳ ಸರಾಸರಿ ಸಾಕ್ಷರತಾ ಪ್ರಮಾಣ ಶೇ. ೬೬.೬೪ (೨೦೧೧ರ ಜನಗಣತಿಯಂತೆ). ಚೆನ್ನದಾಸರ ಸಮುದಾಯದ ಅನಕ್ಷರತೆ ಪ್ರಮಾಣವು ೬೪.೭೭ರಷ್ಟಿದೆ. ರಾಜ್ಯದ ಸರಾಸರಿ ಶಿಕ್ಷಣ ಮತ್ತು ಚೆನ್ನದಾಸರ ಸಮುದಾಯದ ನಡುವಿನ ಶಿಕ್ಷಣದ ಅಂತರ ಶೇ.೩೧.೪೧ರಷ್ಟಿದೆ. ಇದು ಇವರ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಸೂಚಿಸುತ್ತದೆ"[೩೭] ಕರ್ನಾಟಕದಲ್ಲಿ ಚೆನ್ನದಾಸರ ಸಮುದಾಯ ಶೈಕ್ಷಣಿಕವಾಗಿ ಹಿಂದುಳಿದಿರುವಂತೆ ಬೆಳಗಾವಿ ಜಿಲ್ಲೆಯಲ್ಲಿಯೂ ಈ ಸಮುದಾಯ ಶೈಕ್ಷಣಿಕವಾಗಿ ಹಿಂದುಳಿದಿದೆ. ಮೇಲಿನ ಕೋಷ್ಟಕದ ಮಾಹಿತಿಯನ್ವಯ ವಿಶ್ಲೇಷಿಸಿದಾಗ ಈ ಸಮುದಾಯದ ಸಾಕ್ಷರತ ಪ್ರಮಾಣ ಇತರ ಸಮುದಾಯಗಳಿಗಿಂತ ತೀರಾ ಕಡಿಮೆ ಇದೆ. ಇರುವ ಸಾಕ್ಷರರಲ್ಲಿಯೇ ಏಳನೆಯ ತರಗತಿ ಹಾಗೂ ಅದಕ್ಕಿಂತಲೂ ಕಡಿಮೆ ಇರುವ ಸಾಕ್ಷರರ ಸಂಖ್ಯೆ ಹೆಚ್ಚಾಗಿದೆ. ಮಾಧ್ಯಮಿಕ ಶಿಕ್ಷಣವನ್ನು ಪಡೆದವರ ಸಂಖ್ಯೆ ಅದಕ್ಕಿಂತಲೂ ಕಡೆಮೆಯಿದೆ. ಹತ್ತನೆಯ ತರಗತಿಗಿಂತ ಮೇಲ್ಪಟ್ಟ ಶಿಕ್ಷಣವನ್ನು ಪಡೆದ ಸಾಕ್ಷರರ ಸಂಖ್ಯೆ ಕ್ವಚಿತ್ತಾಗಿ ಕಂಡು ಬರುತ್ತದೆ. ಒಟ್ಟು ಸಾಕ್ಷರರ ಪ್ರಮಾಣದಲ್ಲಿ ಮಹಿಳಾ ಸಾಕ್ಷರತೆಯು ತುಂಬ ಕಡಿಮೆ ಇದೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆ, ಬಾಲ್ಯವಿವಾಹ, ಹೆಣ್ಣಿಗೆ ಸ್ವಾತಂತ್ರ್ಯ ಇಲ್ಲದಿರುವುದು, ಸಾಕ್ಷರತೆ ಅರಿಯದ ಮಹಿಳಾ ಸಮಾಜ, ಮೂಢನಂಬಿಕೆ ಮುಂತಾದವುಗಳು ಈ ಸಮುದಾಯದಲ್ಲಿ ಮಹಿಳಾಸಾಕ್ಷರತೆ ಕಡಿಮೆಯಿರಲು ಕಾರಣಗಳಾಗಿವೆ. ಒಟ್ಟಾರೆ ಈ ಸಮುದಾಯದಲ್ಲಿ ಸಾಕ್ಷರತೆಯು ಕಡಿಮೆಯಿರಲು ಕಾರಣಗಳು ಹಲವು. ಆರ್ಥಿಕ ದುಸ್ಥಿತಿ, ಕಷ್ಟದ ಜೀವನ ನಿರ್ವಹಣೆ, ಅಲೆಮಾರಿ ಜೀವನ, ಬದುಕಿಗೆ ಭದ್ರತೆ ಇಲ್ಲದಿರುವುದು, ಖಾಯಂ ವೃತ್ತಿ ಇಲ್ಲದಿರುವುದು, ನಿರಂತರ ಅಲೆದಾಟ, ಮೂಢನಂಬಿಕೆಗಳು ಮುಂತಾದವುಗಳು ಶಿಕ್ಷಣ ಕ್ಷೇತ್ರದಲ್ಲಿ ತನ್ನ ಪರಿಣಾಮವನ್ನು ಬೀರಿವೆ.

೩.೧೨. ಸಾಹಿತ್ಯ

ಚೆನ್ನದಾಸರು ಸಾಹಿತ್ಯವನ್ನು ರಚಿಸಿದವರಲ್ಲ. ಆದರೆ ತಮ್ಮ ಹಾಡು, ಅಭಿನಯದ ಮೂಲಕವಾಗಿ ಸಾಹಿತ್ಯವನ್ನು ಪೋಷಿಸಿಕೊಂಡು ಬಂದ ಸಮುದಾಯವಾಗಿದೆ. ಐತಿಹಾಸಿಕ ಸಂಗತಿಗಳನ್ನು ಒಳಗೊಂಡ ಲಾವಣಿಗಳು, ಮಾನವೀಯ ಮೌಲ್ಯಗಳನ್ನು ಸಾರುವ ತತ್ವ ಪದಗಳು, ಸಾಮಾಜಿಕ ಮೌಲ್ಯಗಳನ್ನೊಳಗೊಂಡ ಏಕತಾರಿ ಪದಗಳು, ಪೌರಾಣಿಕ ಸಂಗತಿಗಳನ್ನು ಒಳಗೊಂಡ

ಆಟ-ಬಯಲಾಟಗಳನ್ನು ಆಡುತ್ತ ಬಂದಿದ್ದಾರೆ. ಕಥನಕವನ, ಲಾವಣಿಗಳನ್ನಿವರು ಹೆಚ್ಚು ಪ್ರಚಾರಗೊಳಿಸಿದ್ದಾರೆ. ಚೆನ್ನದಾಸರ ಸಮುದಾಯದ ಕುರಿತಾಗಿ ಥರ್ಸ್ಟನ್ ಅವರು "ಬಹುಜನಪ್ರಿಯ ಲಾವಣಿಕಾರರು"[೩೮] ಎಂದು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

೩.೧೨.೧. ಭಾಷೆ

ಈ ಸಮುದಾಯದ ಮಾತೃಭಾಷೆ ತೆಲುಗು. ಹೀಗಾಗಿ ಈ ಸಮುದಾಯ ಮನೆಯಲ್ಲಿ ತೆಲುಗು ಭಾಷೆಯನ್ನಾಡುತ್ತಾರೆ. ವ್ಯವಹಾರಿಕ ಭಾಷೆಯನ್ನಾಗಿ ಕನ್ನಡವನ್ನು ಬಳಸುತ್ತಾರೆ. ಇವರ ಸಾಹಿತ್ಯದ ಭಾಷೆಯು ಕನ್ನಡವಾಗಿರುವುದು ವಿಶೇಷವಾಗಿದೆ. ದಾಸರು ಆಂಧ್ರದಿಂದ ವಲಸೆ ಬಂದ ಜನಪದ ವೃಂದವಾಗಿರುವುದರಿಂದ ಇವರ ಮನೆಯ ಆಡು ಭಾಷೆ ತೆಲುಗು. ಆದರೆ ನೆಲೆ ನಿಂತಿರುವುದು ಕರ್ನಾಟಕ ಪ್ರದೇಶವಾಗಿದ್ದರಿಂದ ಕನ್ನಡ ಇವರ ವ್ಯವಹಾರಿಕ ಭಾಷೆಯಾಗಿದೆ. ಕನ್ನಡದೊಂದಿಗೆ ತೆಲುಗು ಭಾಷೆಯ ಪದಗಳನ್ನು ಕಲಬೆರಕೆ ಮಾಡಿ ಮಾತನಾಡುತ್ತಾರೆ".[೩೯] ಎಂದು ಡಾ ಅರ್ಜುನ ಗೊಳಸಂಗಿಯವರು ವಿವರಿಸುತ್ತಾರೆ. ಉತ್ತರ ಕರ್ನಾಟಕದಲ್ಲಿರುವ ಚೆನ್ನದಾಸರು ಮರಾಠಿ ಪದಗಳನ್ನು ಬಳಸಿದರೆ, ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿರುವ ಚೆನ್ನದಾಸರು ಉರ್ದು ಭಾಷೆಯ ಪದಗಳನ್ನು ಬಳಸುತ್ತಾರೆ. ರಾಯಚೂರ, ಕೋಲಾರದವರು ತೆಲುಗು ಮಿಶ್ರಿತ ಕನ್ನಡ ಭಾಷೆಯನ್ನು ಆಡುತ್ತಾರೆ. ಬೆಳಗಾವಿ ಜಿಲ್ಲೆಯವರು ನೆರೆಯ ಮಹಾರಾಷ್ಟ್ರದ ಪ್ರಭಾವದಿಂದ ಕನ್ನಡದಲ್ಲಿ ಮರಾಠಿ ಪದಗಳನ್ನು ಹೆಚ್ಚಾಗಿ ಬಳಸುವುದನ್ನು ಕಾಣುತ್ತೇವೆ.

"ಚೆನ್ನದಾಸರು ಕರ್ನಾಟಕದಲ್ಲಿ ಬಂದು ನೆಲೆ ನಿಂತ ಮೇಲೆ ಕನ್ನಡ ಭಾಷೆಯನ್ನು ಕಲಿತು ಜನಪದ ಕಾವ್ಯಗಳನ್ನು ಹಾಡಿ ವೃತ್ತಿಗಾಯಕರಾಗಿ ಜನಪ್ರಿಯರಾಗಿದ್ದಾರೆ. ಇವರಾಡುವ ಮಾತೃಭಾಷೆ ತೆಲುಗಿನ ಜೊತೆಗೆ ಕನ್ನಡದ ಉಪಭಾಷೆಯಾಗಿ ತೆಲುಗು-ಕನ್ನಡ ಭಾಷಿಕರಿಗೆ ಅರ್ಥವಾಗದ ಮರಗು ಭಾಷೆ (ಕೋಡ್ ಲಾಂಗ್ವೇಜ್)ಯಾಗಿ ಮಾರ್ಪಾಡಾಗಿದೆ".[೪೦] ಎಂಬುದು ಗಮನಾರ್ಹ ಅಂಶವಾಗಿದೆ. "ಮರಗು ಭಾಷೆಯ ಹಳೆಯ ತಲೆಮಾರಿನ ನಡುವೆ ಈಗಲೂ ಚಾಲ್ತಿಯಲ್ಲಿದ್ದು, ಲಿಪಿ ಇಲ್ಲದ ಭಾಷೆಯಾಗಿದೆ. ಈ ಭಾಷೆ ಸಮುದಾಯದ ಸಾಂಸ್ಕೃತಿಕ ಕಾರ್ಯ ಚಟುವಟಿಕೆಗಳಲ್ಲಿ ಮತ್ತು ಅಲೆಮಾರಿ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸುವುದು. ತಮ್ಮ ರಕ್ಷಣೆಗಾಗಿ ಅನ್ಯ ಭಾಷಿಕರಿಗೆ ಅರ್ಥವಾಗದಿರಲೆಂದು ತಮ್ಮೊಳಗೆ ರಹಸ್ಯವಾಗಿ ಸಂಭಾಷಿಸಿಕೊಳ್ಳಲು ಮರಗು ಭಾಷೆ ಬಳಸುವರು. ಈ ಮರಗು ಭಾಷೆಯನ್ನು ಕನ್ನಡ, ತೆಲುಗು, ಇತ್ಯಾದಿ ಭಾಷೆಗಳ ನಡುವೆ ಬಿಡಿ ಬಿಡಿ ಪದಗಳ ರೂಪದಲ್ಲಿ ಪೂರ್ಣ ವಾಕ್ಯಗಳ ರೂಪದಲ್ಲಿ ಬಳಸುತ್ತಾರೆ."[೪೧] ಪ್ರತಿಯೊಂದು

ಸಮುದಾಯ ತನ್ನದೆ ಆದ ವಿಶಿಷ್ಟ ಭಾಷೆಯನ್ನು ರೂಪಿಸಿಕೊಂಡಿರುತ್ತದೆ ಎನ್ನುವುದಕ್ಕೆ ಉತ್ತಮ ಉದಾಹರಣೆಯಾಗಿದೆ.

೩.೧೨.೨. ಕಥೆ

ಕಥೆಗಳು ಅನಾದಿಕಾಲದಿಂದಲೂ ಮಾನವನೊಂದಿಗೆ ಬೆಳೆದು ಬಂದಿವೆ. ಅಕ್ಷರ ಪ್ರಪಂಚಕ್ಕಿಂತಲೂ ಮುಂಚೆ ಕಥೆಗಳು ಹುಟ್ಟಿಕೊಂಡಿವೆ. ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಬೆಳೆಯುತ್ತ ಬಂದಿವೆ. ಮೌಖಿಕ ಪರಂಪರೆಯಲ್ಲಿ ಕಥೆಗಳು ಉಳಿದು ಬೆಳೆಯುತ್ತ ಬಂದಿವೆ. ಈ ಸಮುದಾಯ ಒಂದೆಡೆ ಸೇರಿದಾಗ ಮದುವೆ, ಜಾತ್ರೆ, ಹಬ್ಬ-ಹುಣ್ಣಿಮೆಗಳಲ್ಲಿ ರಾತ್ರಿಯ ಸಮಯದಲ್ಲಿ ಕಥೆಗಳನ್ನು ಹೇಳುವುದುಂಟು. ವೃತ್ತಿ ಕಥೆಗಾರರಲ್ಲದ ಜನರು ದಿನನಿತ್ಯದ ಕೆಲಸದ ಒತ್ತಡದಲ್ಲಿ, ಬಿಡುವು ಸಿಕ್ಕಾಗ ದೊಡ್ಡವರು ಮಕ್ಕಳಿಗೆ ಕಥೆಗಳನ್ನು ಹೇಳುತ್ತಾರೆ. ಇವರ ಬಹುಪಾಲು ಕಥೆಗಳು ರಮ್ಯ, ಅದ್ಭುತ, ಫ್ಯಾಂಟಸಿಯನ್ನು ಒಳಗೊಂಡಿರುತ್ತವೆ. ನೀತಿಕಥೆಗಳು, ಪರೋಪಕಾರದ ಕಥೆಗಳು, ಒಳ್ಳೆಯ ನಡತೆಗೆ ಸಂದ ಲಾಭ, ದುಷ್ಟನಿಗಾದ ಶಿಕ್ಷೆ, ಜಿಪುಣ, ಜಾರತನಕ್ಕಾಗುವ ಶಿಕ್ಷೆಗಳು, ಜಾಣತನದ ಕಥಾವಸ್ತುಗಳನ್ನು ಒಳಗೊಂಡಿರುತ್ತವೆ. ಅರ್ಧತಾಸು, ಒಂದು ತಾಸಿನಿಂದ ಮೊದಲು ಗೊಂಡು ಅರ್ಧ ದಿನವರೆಗೆ ಕಥೆ ಹೇಳುವ ಪರಿಣಿತರುಂಟು. ಬಿ.ಬಿ. ಮಹಿಷವಾಡಿಯವರು, ಬೆಳಗಾವಿ ಜಿಲ್ಲೆಯ ದಾಸರನ್ನು ಕುರಿತಾಗಿ ವಿವರಿಸುತ್ತ "ದಾಸರು ಕಥೆ ಹೇಳಿ ಹೊಟ್ಟೆ ತುಂಬಿಸಿಕೊಳ್ಳುವ, ಇಲ್ಲವೆ ಹಾಡನ್ನು ಹೇಳಿ, ಭಿಕ್ಷೆಯನ್ನು ಬೇಡುವ ದಲಿತ ವರ್ಗಕ್ಕೆ ಸೇರಿದವರು. ದಮ್ಮಡಿ ಬಾರಿಸುತ್ತ, ಏಕತಾರಿ ಮಿಡಿಯುತ್ತ ಅಭಿಮನ್ಯುವಿನ ಕಥೆ, ರಾಮ-ಲಕ್ಷ್ಮಣರ ಕಥೆ, ಪಾಂಡವರ ಕಥೆ ಹೇಳುವುದರ ಜೊತೆಗೆ ಭಂಟರ ಕಥೆಗಳನ್ನು ಹೇಳುತ್ತಾರೆ. ಸಂಗೋಳ್ಳಿ ರಾಯಣ್ಣ, ಸಿಂಧೂರು ಲಕ್ಷ್ಮಣ, ಕಟ್ಟಿಚನ್ನ, ಪವುಣಂಚಯ ಮುಂತಾದ ಕನ್ನಡ ನಾಡಿನ ಸಾಮಾನ್ಯ ಜನತೆಯ ಮುಂದೆ ಅಸಾಮಾನ್ಯ ಸಾಹಸ ಮಾಡಿ ಮೆರೆದ ಭಂಟರ ಸಾಹಸದ ಕಥೆಗಳನ್ನು ಹೇಳುತ್ತಾರೆ."[೬೨] ಎಂದು ದಾಖಲಿಸಿರುವುದು ಚೆನ್ನದಾಸರ ಸಮುದಾಯದ ವೃತ್ತಿ ನಿರತ ಕಥೆಗಾರರ ಮೇಲೆ ಹೊಸ ಬೆಳಕು ಚೆಲ್ಲಿದೆ.

೩.೧೨. ೩. ಹಾಡು

ದಾಸರು ಮೂಲತ: ಕಲಾವಿದರು. ಇವರ ಕಂಠ ಸುಶ್ರಾವ್ಯವಾಗಿದ್ದು, ಹಾಡಿನ ಮೂಲಕವೆ ಜನಮನ ಸೆಳೆಯುವ ಜನಸಮುದಾಯವಿದು. "ದಾಸರು ಹಾಡುವುದರಲ್ಲಿ ಒಳ್ಳೆಯ

ನಿಷ್ಣಾತರು. ದಾಸರು ದೇವತಾ ಸ್ತುತಿ ಮಾಡುವಾಗ ವಿಶೇಷವಾಗಿ ಪುರಂದರ ದಾಸರ ಹಾಡುಗಳನ್ನು ಹೇಳುವುದು ವಾಡಿಕೆಯಿದೆ."[೪೩] ಎಂಬುದು ಪ್ರೊ. ಬಿ. ವ್ಹಿ. ಗುಂಜೆಟ್ಟಿಯವರ ಮಾತು ದಾಸರ ಹಾಡುಗಾರಿಕೆಯನ್ನು ಪರಿಚಯಿಸುತ್ತದೆ.

'ರಾಮ ರಾಮ ರಾಮ ಸೀತಾ ರಾಮ ಎನ್ನಿರೋ,

ಪ್ರೇಮದಿಂದ ಭಜಿಸಿ ಅವನ ಮುಕ್ತಿ ಪಡೆಯಿರೋ, ಎಂದೂ,

ದೇವಕಿನಂದನ ಮುಕುಂದ,

ಜಗದೋದ್ಧಾರ ನವನೀತ ಚೋರ,

ಜಗಪತಿ ವಾಹನ ಜಗದೋದ್ಧಾರ' ಮುಂತಾಗಿ ದೇವರನ್ನು ಕೊಂಡಾಡುವರು.

ಮದುವೆಯ ಸಮಯದಲ್ಲಿ–

'ಸುರಗಿ ಸುತ್ತ ಅಣ್ಣ ನೋಡು ನಿನ್ನ ಗಡೆಗಣ್ಣ ।

ಚಾಯದ ಉಂಗುರ ತೆಗೆಯಬೇಕು ॥

ಚಾಯದ ಉಂಗುರ ತೆಗೆಯಬೇಕು ।

ಎಳೆಯ ಹಾರ‍್ಯಾವು ಜತನಾವ ।

ಬಿಳಿಯ ಕಂಡಿಕೆ ಕೈಯಾಗ ಹಿಡಕೊಂಡು ।

ಬಿಳಿಗಣ್ಣ ನೋಟ ತಿರುವುತ ।

ಬಿಳಿಗಣ್ಣ ನೋಟ ತಿರುವುತ

ಮದಿಮಗನ ಸೋದರ ಮಾವ ಸುತ್ತ್ಯಾನ ಸುರಗಿಯ' ಎಂದು ಹಾಡಿದರೆ,

ಹೂ ಮುಡಿಸುವ ಕಾಲದಲ್ಲಿ–

'ತವರವರ ಹೊಲದಾಗ ಎಳೆಯ ಸವತಿನ ಕಾಯಿ ।

ತಿಂದಿನಂದಿತ ಎನ್ನ ಜೀವ ತಾಯವ್ವ ।

ಹಪ್ಪಳ ಶಾಂಡಿಗಿ ಉಪ್ಪಿನ ಕಾಯವ ।

ತಿಂದಿನಂದಿತ ಎನ್ನ ಜೀವ ।

ಹಸರ ಕಡ್ಡಿಯ ಬಿಳಿಯ ಮಲ್ಲಿಗೆ ।

ಹೂವಿನ ದಂಡಿ ಕಟ್ಟಿನಂದಿತ ಎನ್ನ ಜೀವಾ ತಾಯವ್ವಾ ॥

ಇಳಕಲ್ ದಡಿಯ ಸೀರಿ ಗಿಳಿಯ ಬಣ್ಣದ ಕುಬುಸ ತೊಟ್ಟಿನಂದಿತ ಎನ್ನ ಜೀವಾ

ತಾಯವ್ವಾ॥

ಗಂಗವ್ವ ಗೌರವ್ವನಂಥ ಹೇಮರಡ್ಡಿ ಮಲ್ಲಮನಂಥ ಮಗಳ ಬೇಡಿತ ಎನ್ನ ಜೀವಾ

ತಾಯವ್ವ ॥ ಎಂದು ಎದೆ ತುಂಬಿ ಹಾಡುವರು.

ತಾಯಿ ಮಗುವನ್ನು ಆಡಿಸುವ ಸಂದರ್ಭದಲ್ಲಿ–

'ಹಡದ ಬಾಣತಿ ಒಳಗೇನ ಮಾಡತಿ'ಬಂದ ಬಂದವರಿಗೆ ಗಂಧವ ಕೊಡತಿ

ಜೋ ಜೋ ॥

ಬಂದ ಬಂದವರಿಗೆ ಗಂಧವ ಕೊಡತಿ। ಕಣ್ಣಿಗೆ ಕಾಡಿಗೆ ಹಚ್ಚಿ ಕಂದಗ ಮಲಿ

ಕುಡಸ್ತಿ।

ಅವರಾಯಿ ತಂದಾಳ ಚಾಯದ ಮುರಗಿ। ಅವರ ಮುತ್ಯಾ ತಂದಾನೊಂದು

ಮುತ್ತಿನ ಟೋಪಿಗಿ ಜೋ,, ಜೋ।"

ಎಂದು ಜೋಗುಳ ಹಾಡಿ ತಾಯಿಯನ್ನು ಸಂಪ್ರಿತಗೊಳಿಸುತ್ತಾರೆ.

ಚೆನ್ನದಾಸರ ಸಮುದಾಯದ ಹಾಡುಗಾರರು ಪರಂಪರೆಯ ಗೀತೆಗಳನ್ನು ತತ್ವಪದಗಳನ್ನು, ಜಾನಪದ ಗೀತೆಗಳನ್ನು ಅತ್ಯಂತ ಸುಮಧುರವಾಗಿ ಹಾಡುತ್ತಾರೆ. "ಕನ್ನಡ ನಾಡಿನ ಅಸಾಮಾನ್ಯ ಪರಾಕ್ರಮ ಮೆರೆದ ಚಾರಿತ್ರಿಕ ವ್ಯಕ್ತಿಗಳಾದ ಕಿತ್ತೂರು ಚನ್ನಮ್ಮಾ, ಬೆಳವಡಿ ಮಲ್ಲಮ್ಮ, ಮುಂಡರಗಿ ಭೀಮರಾಯ, ನರಗುಂದದ ಬಾಬಾಸಾಹೇಬ, ಸುರಪುರದ ವೆಂಕಟಪ್ಪನಾಯಕ, ಹಲಗಲಿಯ ಜಡಗಾ ಬಾಲಾರ ಕಥೆಗಳನ್ನು ಸುಂದರವಾಗಿ, ವೀರರಸ ಉಕ್ಕುವಂತೆ, ರೋಮಾಂಚ

ನಗೊಳ್ಳುವಂತೆ ಹಾಡು ಹೇಳುತ್ತಾರೆ."[೪೪] ಈ ರೀತಿ ಹಾಡು ಹಾಡುವ ಚೆನ್ನದಾಸರ ಸಮುದಾಯ ದವರನ್ನು ಬಿ.ಬಿ.ಮಹಿಷವಾಡಿಯವರು ವೃತ್ತಿಗಾಯಕರೆಂದು ಕರೆದಿರುವುದು ಯಥೋಚಿತವಾಗಿದೆ.

ಚೆನ್ನದಾಸರ ಸಮುದಾಯದ ವೃತ್ತಿಗಾಯಕರ ಕಲಾ ನೈಪುಣ್ಯತೆಯನ್ನು ಕುರಿತಾಗಿ ಕುಪ್ಪೆ ನಾಗರಾಜರು ಹೇಳಿದ್ದು ಹೀಗೆ,

"ತೂಗತದ ನೋಡ ಜೋಕಾಲಿ ಸದ್ಗುರುವಿನ ದಯದಿಂದ",

"ಏನಕೊಡ ಏನಕೊಡವಾ ಹುಬ್ಬಳ್ಳಿಮಠ ಎನಚಂದುಳ್ಳಕೊಡವಾ",

'ತನಿವಿನೊಳಗನುದಿನವಿದ್ದು ಎನ್ನಮನಕೊಂದು ಮಾತ ಹೇಳದೆ ಹೋದೆ ಹಂಸಾ' ಎಂಬಿತ್ಯಾದಿ ತತ್ವ ಪದಗಳು ತಂಬೂರಿ ಕಲಾವಿದರ ಅನುಭಾವದ ನೆಲೆ ಹಾಗೂ ಕಲಾಸಿದ್ದಿಗೆ ಸಾಕ್ಷಿಯಾಗಿವೆ. ವರಕವಿಯೆಂದೆ ಖ್ಯಾತರಾದ ದ. ರಾ. ಬೇಂದ್ರೆಯವರು "ಹಕ್ಕಿ ಹಾರುತಿದೆ ನೋಡಿದಿರಾ" ಎಂಬ ಸುಪ್ರಸಿದ್ಧ ಪದ್ಯದ ಮೂಲ ಉದಗಟ್ಟಿ ದಾಸಯ್ಯನ ಕಾಲವನ್ನು ಕುರಿತು ತತ್ವಪದ ಎಂಬುದನ್ನು ವಿಮರ್ಶಕರು ಈಗಾಗಲೇ ಗುರುತಿಸಿ ಹೇಳಿದ್ದಾರೆ. ಇಂಥ ಶ್ರೇಷ್ಠ ಕವಿಯನ್ನು ಪ್ರಭಾವಿಸಬಲ್ಲ ಪ್ರತಿಭಾ ಸಂಪನ್ನತೆ ಈ ಕಲಾವಿದರದು"[೪೫] ಎಂಬ ಮಾತು ಚೆನ್ನದಾಸರ ಸಮುದಾಯದ ಹಾಡುಗಾರರ ಹೆಗ್ಗಳಿಕೆಯಾಗಿದೆ. "ಕಳೆದ ಶತಮಾನದಲ್ಲಿ ಗೋವರ್‌ರವರು ಬಣ್ಣಿಸಿರುವ ದಾಸರೂ ಇವರೆ ಎಂಬುದರಲ್ಲಿ ಸಂಶಯವಿಲ್ಲ."[೪೬] ಎಂಬ ಡಾ. ಜೀ. ಶಂ. ಪರಮ ಶಿವಯ್ಯನವರು ಪ್ರಸ್ತಾಪಿಸಿರುವುದನ್ನಿಲ್ಲಿ ಸ್ಮರಿಸಬಹುದಾಗಿದೆ. ಚೆನ್ನದಾಸರ ಸಮುದಾಯದ ಉಪಪಂಗಡವೆನಿಸಿದ "ದೊಂಬಿದಾಸರಂತೂ, ಕಥೆ ಮತ್ತು ಹಾಡುಗಳ ಕಣಜವೆ ಆಗಿದ್ದಾರೆ."[೪೭] ಎಂದು ಹೇಳಿ ಅವರು ಸಂಪಾದಿಸಿರುವ ಪ್ರಮುಖ ಲಾವಣಿಗಳನ್ನು ದೊಂಬಿದಾಸರ ಲಾವಣಿಗಳೆಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ.

ಕುಪ್ಪೆ ನಾಗರಾಜರು ಪ್ರಸ್ತಾಪಿಸಿದ 'ಉದಗಟ್ಟಿ ದಾಸಯ್ಯ'ನು ಚೆನ್ನದಾಸರ ಸಮುದಾಯದಿಂದ ಬಂದವನು. ಈ ಉದಗಟ್ಟಿ ಗ್ರಾಮ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಒಂದು ಪುಟ್ಟ ಹಳ್ಳಿ. ಈತನ ಪೂರ್ತಿ ಹೆಸರು ಉದ್ದಪ್ಪ ಚಿಂತಾಮಣಿ ದಾಸರ. ಈಗ ಆತ ವಿಧಿವಶನಾಗಿದ್ದಾನೆ. ಸುಪ್ರಸಿದ್ಧ ಲಾವಣಿಕಾರನೆಂದು ಹೆಸರುವಾಸಿಯಾಗಿದ್ದವನು. ಬೆಳಗಾವಿ ಜಿಲ್ಲೆಯ ಕನ್ನಯ್ಯ ದಾಸರ, ಸಿದ್ದಾಪೂರದ ಸಣ್ಣದುರಗಪ್ಪ ದಾಸರ, ಇವನ ಮಗ ಭೀಮಪ್ಪ ಗಾಣಿಗೇರ, ಅರ್ಜುನವಾಡದ ತಾಯಪ್ಪ ದಾಸರ, ಯಂಕಪ್ಪ ದಾಸರ, ನರಸಿಂಗಪ್ಪ ದಾಸರ ಹಿಡಕಲ್ ಗ್ರಾಮದ ತಂಬೂರಿ ದುರ್ಗಪ್ಪ ಮೊದಲಾದವರು ಬೆಳಗಾವಿ ಜಿಲ್ಲೆಯ ಸುವಿಖ್ಯಾತ ವೃತ್ತಿಗಾಯಕರು.

ತುಮ್ಮರಗುದ್ದಿಯ ಮಾರೆಪ್ಪ ಮಾರೆಪ್ಪ ದಾಸರ ಅವರಷ್ಟೆ ಪ್ರಸಿದ್ದ ಕಲಾವಿದರು. "ಈ ಸಮುದಾಯದ ಕಥೆ ಮತ್ತು ಕಾವ್ಯದ ಸಾಹಿತ್ಯ ಮೌಖಿಕ ಪರಂಪರೆಯಲ್ಲಿ ಮೇಲ್ಪಂಕ್ತಿಯಲ್ಲಿದೆ. ಊರ ಮತ್ತು ಪಟ್ಟಣ ಪ್ರದೇಶಗಳ ಎಲ್ಲ ಭಾಗಗಳಲ್ಲಿ ಸಂಚರಿಸುವ ಇವರು ಮೇಲ್ಕಾಣಿಸಿದ ಸಾಹಿತ್ಯವನ್ನು ಮನೆ ಮನೆಗೆ ತಲುಪಿಸುವಲ್ಲಿ ಹೆಚ್ಚು ಯಶಸ್ವಿಯಾದ ವೃತ್ತಿಗಾಯಕರಿದ್ದಾರೆ. ಇವರು ಕಥೆ ಹೇಳುವ ಶೈಲಿ ಮತ್ತು ಸರಳವಾದ ಹಾಡಿನ ದಾಟಿ ಬಹುಸಂಖ್ಯಾತರರ ಮನಸ್ಸನ್ನು ಬಹುಬೇಗ ಆಕರ್ಷಿಸಿ ಬಹಳ ಕಾಲ ನೆಲೆ ನಿಲ್ಲುತ್ತವೆ. ಈ ಸಮುದಾಯದ ವೃತ್ತಿಗಾಯನ ಕಡಿಮೆಯಾಗಿರುವ ಇಂದಿನ ದಿನಮಾನದಲ್ಲಿ ಅವರ ಸಾಹಿತ್ಯದ ವಸ್ತು ಮತ್ತು ದಾಟಿ ಇಂದಿಗೂ ಹಳೆಯ ತಲೆಮಾರಿನ ಜನಪದರ ನಾಲಿಗೆಯ ಮೇಲಿರುವುದೆ ಅವರ ಜನಪರ ಮತ್ತು ಜನಪ್ರಿಯತೆಗೆ ಸಾಕ್ಷಿ"[೪೮] ಯಾಗಿ ನಿಲ್ಲುತ್ತವೆ.

೩.೧೨.೪. ಗಾದೆ ಮಾತು

ಗಾದೆ ಮಾತುಗಳು ಅಪಾರ ಅನುಭವದ ಖಣಿಗಳು. ಅದು ಸಮೂಹದ ಸೃಷ್ಟಿಯಾಗಿದೆ. ಗಾದೆ ಜನಪದ ಸಾಹಿತ್ಯದ ಅಮೂಲ್ಯ ಸಾಹಿತ್ಯ ಪ್ರಕಾರಗಳಲ್ಲಿ ಒಂದಾಗಿದೆ. ಎಲ್ಲ ಜನಾಂಗ ಮತ್ತು ಭಾಷೆಗಳಲ್ಲಿ ಗಾದೆಗಳು ಲಭಿಸುತ್ತವೆ. "ನಿತ್ಯದ ಭಾಷೆಯಂತೆಯೆ ಸಹಜವಾಗಿ, ಅನಿವಾರ್ಯವಾಗಿ, ಜನಜೀವನದೊಡನೆ ಗಾದೆ ಬೆಳೆದು ಬಂದಿದೆ. ಪ್ರತಿನಿತ್ಯದ ಜೀವನದ ಎಲ್ಲ ಸಂದರ್ಭಗಳಲ್ಲಿಯೂ ಅವಶ್ಯಕತೆಗಳಿಗೆ ಅನುಗುಣವಾಗಿ ಗಾದೆಗಳು ಪ್ರಯೋಗವಾಗುತ್ತಿರುತ್ತವೆ. ಕನ್ನಡದಲ್ಲಿ ಗಾದೆಗೆ ಸಂವಾದಿಯಾಗಿ 'ನಾಣ್ಣುಡಿ' ಎಂಬ ಅಚ್ಚಗನ್ನಡ ಪದ ಬಳಕೆಯಲ್ಲಿದೆ. ಗಾದೆಗಳಲ್ಲಿ ಉಪಮೆ, ವಿರೋಧಾಭಾಸ, ಅತ್ಯುಕ್ತಿ ಮೊದಲಾದ ಅಲಂಕಾರಗಳು, ಪ್ರಾಸ, ಅನುಪ್ರಾಸ, ಪುನರಾವರ್ತನೆ, ಸಮತೂಕ ಮೊದಲಾದ ವಿಶಿಷ್ಟ ಗುಣಗಳು ಅಡಕವಾಗಿರುತ್ತವೆ."[೪೯] "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ನಾಣ್ಣುಡಿಯು ಗಾದೆಯ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಚೆನ್ನದಾಸರ ಸಮುದಾಯದಲ್ಲಿಯೂ 'ಗಾದೆ ಮಾತುಗಳು' ಬಳಕೆಯಲ್ಲಿವೆ. ದಾಸರನ್ನೇ ಕುರಿತಾಗಿರುವ ಗಾದೆ ಮಾತುಗಳು ಲಭಿಸುತ್ತವೆ.[೫೦] ಮಾತ ಮನಾರ, ಕೆಲಸ ಸುಮಾರ', ಬಾಳ್ ಬಾಳ್ ಮಾತಾಡಿ ಬಾಳೊತ್ಯಾಗ ಹ್ವಾದರು', ಹಿಂದಿಂದ ನೆನಸಿ ಹಿತ್ಲಾಗ ಅತ್ತರು', 'ಬಿಕ್ಕಿ ಬೇಡಾಕ ರೊಕ್ಕಾ ಹತ್ತೊದುಲ್ಲಾ', ಇತ್ಯಾದಿ ನೂರಾರು ಗಾದೆಗಳು ಚಲಾವಣೆಯಲ್ಲಿವೆ.

ಇನ್ನು ದಾಸ ಸಮುದಾಯದ ಕುರಿತಾಗಿಯೂ ಕೆಲವು ಗಾದೆ ಮಾತುಗಳು ಸಮಾಜದಲ್ಲಿ ಬಳಕೆಯಲ್ಲಿವೆ. ಉದಾಹರಣೆಗೆ 'ಹಾಡಿದ್ದೇ ಹಾಡೋ ಕಿಸಬಾಯಿ ದಾಸ', 'ದಾಸರ

ಆಟವಲ್ಲ, ದೋಸೆಯ ಊಟವಲ್ಲ', 'ಅಲ್ಲೊ ದಾಸ ಅಂದ್ರೆ ಅದೆ ಪದಾರಿ ಗೌಡ್ರ ಅಂತಿದ್ನಂತ', 'ದಾಸ ಕೂಡಿ ಕೆಟ್ಟ, ಡೊಂಬ ಅಗಲಿ ಕೆಟ್ಟ' "ಈ ಗಾದೆಗಳು ಹಲವು ಬಗೆಯ ಕಾರ್ಯವನ್ನು ಸಮಾಜದಲ್ಲಿ ನಿರ್ವಹಿಸುತ್ತವೆ. ಮುಖ್ಯವಾಗಿ ಅನಕ್ಷರಸ್ಥ ಸಮಾಜದಲ್ಲಿ ತಿಳುವಳಿಕೆ ನೀಡುವ ಕೆಲಸವನ್ನು ಅವು ನಿರಂತರವಾಗಿ ಮಾಡುತ್ತ ಬಂದಿವೆ. ಪರಂಪರಾಗತವಾದ ತಿಳುವಳಿಕೆಯನ್ನು ಜನಗಳ ನೆನಪಿಗೆ ತರುವುದರಿಂದಾಗಿ ಒಂದು ಬಗೆಯ ಸಾಮಾಜಿಕ ಹತೋಟಿಯನ್ನು ಸಾಧಿಸುತ್ತವೆ. ಎಷ್ಟೋ ಗಾದೆ ಮಾತುಗಳು ಬುದ್ಧಿ ಮಾತುಗಳಾಗಿರುವುದರಿಂದ ಸಾಂಸ್ಕೃತಿಕ ಮೌಲ್ಯಗಳ ರಕ್ಷಣೆಯ ಕೆಲಸಗಳೂ ಸಹ ಗಾದೆಗಳ ಮೂಲಕ ನಡೆದು ಬಿಡುತ್ತವೆ. ಈ ಅರ್ಥದಲ್ಲಿ ಗಾದೆಗಳು ಸಾಂಸ್ಕೃತಿಕ ಮುಂದುವರಿಕೆಯ ಸಾಧನಗಳೂ ಹೌದು"[೫೧] ಈ ಮಾತುಗಳು ಗಾದೆಗಳ ಮಹತ್ವವನ್ನು ವಿವರಿಸುತ್ತವೆ.

ಚೆನ್ನದಾಸರ ಸಮುದಾಯದಲ್ಲಿ ಪ್ರಚಾರದಲ್ಲಿರುವ ಗಾದೆಗಳ ಅರ್ಥ, ಆ ಸಮುದಾಯಗಳ ಚಟುವಟಿಕೆಗಳನ್ನು ದಾಖಲಿಸುತ್ತವೆ. 'ಮಾತ ಮನಾರ ಕೆಲಸ ಸುಮಾರ' ಅಂದರೆ ಮಾತಿಗೆ ನಿಂತರೆ ಬೇಕಾದಷ್ಟು ಮಾತನಾಡುತ್ತಾರೆ. ಆದರೆ ಕಾರ್ಯ ಸರಿಯಾಗಿಲ್ಲ. ಅಥವಾ ಕೆಲಸ ಮಾಡುವುದೇ ಇಲ್ಲ. ಕೆಲಸ ಮಾಡಲು, ಮಹತ್ವದ ಕಾರ್ಯಕ್ಕೆ ದುಡ್ಡಿನ ಅವಶ್ಯಕತೆ ಇದ್ದೆ ಇರುತ್ತದೆ. ದುಡ್ಡು ಈ ಸಮುದಾಯದಲ್ಲಿ ಹೇರಳವಾಗಿಲ್ಲ. ಭಿಕ್ಷಾ ವೃತ್ತಿ ಮಾಡುವಲ್ಲಿ ಹೇಳಿದ್ದನ್ನು ಮಾಡಲು ಆಗುವುದಿಲ್ಲ ಎಂಬ ಅರ್ಥದಲ್ಲಿ ಈ ಗಾದೆ ಪ್ರಚಾರ ಪಡೆದಿರಬಹುದು. ಹಾಗೆಯೆ 'ಬಾಳ್ ಬಾಳ್ ಮಾತಾಡಿ ಬಾಳೊತ್ತ್ಯಾಗ (ಬಹಳ+ಹೊತ್ತು) ಹ್ವಾದರು' ಇದರ ಅರ್ಥವೂ ಸಹ ಮೊದಲಿನದನ್ನೆ ಧ್ವನಿಸುತ್ತದೆ. 'ಹಿಂದಿಂದ ನೆನಸಿ ಹಿತ್ಲಾಗ ಅತ್ತರು' ಹಿಂದೆ ನಡೆದ ಸಂಗತಿಗಳನ್ನು, ಹಿಂದಿನ ವೈಭವವನ್ನು, ಸಂತಸದ ಸಮಯವನ್ನು ನೆನಪಿಸಿ, ಸದ್ಯ ವಾಸ್ತವದಲ್ಲಿ ಅದು ಇಲ್ಲವೆಂದು ಕೊರಗುವುದಕ್ಕೆ ಈ ಅರ್ಥವಿದೆ. ಭೂತಕಾಲದ್ದು ಬರಿ ನೆನಪು ಮಾತ್ರ. ಮನುಷ್ಯ ಕೇವಲ ನೆನಪಿನಿಂದ ಬದುಕಲು ಸಾಧ್ಯವಿಲ್ಲ. ವರ್ತಮಾನದ ವಾಸ್ತವತೆಯ ಅರಿವಿರಬೇಕೆಂಬ ಎಚ್ಚರ ಈ ಗಾದೆಯಲ್ಲಿದೆ. 'ಬಿಕ್ಕಿ ಬೇಡಾಕ ರೊಕ್ಕಾ ಹತ್ತೋದಿಲ್ಲ' ಇದು ಆ ಸಮುದಾಯಕ್ಕೆ ನಿಖರವಾಗಿ ಅನ್ವಯಿಸುತ್ತದೆ. ಯಾವುದೇ ಕಾರ್ಯಕ್ಕೆ ದುಡ್ಡು ಬೇಕೇಬೇಕು. ದುಡ್ಡಿಲ್ಲದಿದ್ದರೆ ಏನೂ ನಡೆಯುವದಿಲ್ಲ. ಯಾವುದೆ ಕೆಲಸ ಹೇಳಿದಾಗ ಈ ಗಾದೆಯನ್ನು ಬಳಸುವುದುಂಟು. ಹೀಗೆ ಈ ಸಮುದಾಯದಲ್ಲಿ ಪ್ರಚಲಿತವಾಗಿರುವ ಗಾದೆಮಾತುಗಳು ಅವರ ಜನಾಂಗದ ಜೀವನ ವಿಧಾನವನ್ನು ತಿಳಿಯಲು ನೆರವಾಗುತ್ತವೆ.

ಪ್ರಸ್ತುತ ಅಧ್ಯಯನದ ವಿಷಯ ವಸ್ತುವಾದ ಚೆನ್ನದಾಸರ ಸಮುದಾಯವನ್ನೆ ದೃಷ್ಟಿಯಲ್ಲಿಟ್ಟುಕೊಂಡು ಕೆಲವು ಗಾದೆ ಮಾತುಗಳನ್ನು ಆಡಲಾಗುತ್ತದೆ. ಅವು ಈ ಸಮುದಾಯವನ್ನು

ಕುರಿತು ರಚನೆಯಾದ ಕೆಲವು ಗಾದೆ ಮಾತುಗಳು ಇಂದಿನ ಉಳಿದ ಸಮುದಾಯಗಳಲ್ಲಿ ಬಳಕೆಯಲ್ಲಿವೆ. ವಿಸ್ತೃತ ರೂಪ ಹೀಗಿದೆ.

ಹಾಡಿದ್ದೇ ಹಾಡೋ ಕಿಸಬಾಯಿ ದಾಸ

ಹಾಡಿದ ಹಾಡನ್ನೇ ಮತ್ತೇ ಮತ್ತೇ ಹಾಡುವವರು. ಹೇಳಿದ್ದನ್ನು ಪದೇ ಪದೇ ಹೇಳುವ, ಕೇಳುಗರಿಗೆ ಬೇಸರವಾದರೂ ಬಿಡದೆ ಹೇಳುವುದರಿಂದ ಈ ಗಾದೆ ಹುಟ್ಟಿಕೊಂಡಿದೆ. ಇತರರಿಗೆ ತಪ್ಪೆನಿಸಿದರೂ, ಅದು ಅವರಿಗೆ ಸರಿಯಾಗಿ ಕಾಣುತ್ತದೆ. ಹಾಡಿದ್ದನ್ನೇ ಮತ್ತೆ ಎತ್ತರದ ಧ್ವನಿಯಲ್ಲಿ ಹಾಡುವುದರಿಂದ ಈ ಸಮುದಾಯದ ಕುರಿತಾಗಿ ಈ ಗಾದೆಮಾತು ಪ್ರಚಾರವಾಗಿದೆ.

ದಾಸರ ಆಟವಲ್ಲ, ದೋಸೆಯ ಊಟವಲ್ಲ

ಈ ಸಮುದಾಯದವರು ಆಡುವ ಬಯಲಾಟ–ದಾಸರಾಟಕ್ಕೆ ಸಂಬಂಧಿಸಿದೆ. ದೋಸೆಯನ್ನು ಎಷ್ಟು ತಿಂದರೂ ಊಟ ಮಾಡಿದ ಸಂತೃಪ್ತಿ ಸಿಗುವುದಿಲ್ಲ. ದೋಸೆ ಉಪಹಾರವಾಗುತ್ತದೆ ಹೊರತು ಊಟವೆನಿಸುವುದಿಲ್ಲ. ಊಟದ ಸಂತೃಪ್ತಿ ದೋಸೆಯಿಂದ ಲಭಿಸುವುದಿಲ್ಲ. ಹಾಗೆಯೆ ಬಯಲಾಟಗಳನ್ನು ನೋಡುವಾಗ ದೊರೆಯುವ ಆನಂದ, ಲಭಿಸುವ ತೃಪ್ತಿ ದಾಸರಾಟದಿಂದ ಸಾಧ್ಯವಾಗುವುದಿಲ್ಲ. ದೋಸೆ ತಿಂಡಿಯೆನಿಸಿದಂತೆ, ದಾಸರಾಟ ಮನರಂಜನೆಯೆನಿಸಿಕೊಳ್ಳುತ್ತದೆ.

ಅಲ್ಲೊ ದಾಸ ಅಂದ್ರೆ, ಅದೇ ಪದಾರಿ ಗೌಡ್ರ ಅಂತಿದ್ನಂತ

ದಾಸರು ಒಂದು ರೀತಿಯಲ್ಲಿ ಜಿದ್ದಿನ ಜನಾಂಗ. ಹೇಳಿದ್ದನ್ನೇ ತಿರುಗಿ–ತಿರುಗಿ ಹೇಳುವಂಥವರು. ಬೇಡವೆಂದರೂ ಮಾಡಿದ್ದನ್ನೇ ಮತ್ತೆ ಮತ್ತೆ ಅದನ್ನೆ ಮಾಡುವ ಮೊಂಡು ಜನ. ಹೊಸದನ್ನು ಮಾಡಲಾರದ, ಹೊಸತನಕ್ಕೆ ಹಂಬಲಿಸುವವರಲ್ಲ. ತಾವು ಮಾಡಿದ್ದೆ ಸರಿಯೆಂದು, ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಸಮುದಾಯವಿದು. ಅವರ ಹಾಡು, ಅವರ ಸ್ವಭಾವ, ಅವರ ಚಟುವಟಿಕೆಗಳಿಗೆ ಈ ಗಾದೆ ಸೃಷ್ಟಿಯಾಗಿದೆ.

ದಾಸ ಕೂಡಿ ಕೆಟ್ಟ ಡೊಂಬ ಅಗಲಿ ಕೆಟ್ಟ

ಅಸಂಘಟಿತವಾದ ಈ ಸಮುದಾಯದಲ್ಲಿ ಒಗ್ಗಟ್ಟಿಲ್ಲ. ಇವರು ಕೂಡಿದರೆ ಜಗಳವಾಡುವುದು ಖಚಿತ. ಸಣ್ಣ-ಪುಟ್ಟ ಸಂಗತಿಗಳೆ ಜಗಳ, ಕಾದಾಟಕ್ಕೆ ಕಾರಣವಾಗಿ ಪರಿಣಮಿಸುತ್ತವೆ. ದಾಸರು ಕೂಡಿದರೆ ಜಗಳಾಡಿ, ಬಡಿದಾಡಿ ಹಾಳಾಗುವುದರಿಂದ ಈ ಗಾದೆ ಹುಟ್ಟಿಕೊಂಡಿದೆ. 'ಡೊಂಬ ಅಗಲಿ ಕೆಟ್ಟ' ಅಂದರೆ, ಡೊಂಬರು ತಮ್ಮ ಕಲೆ ಪ್ರದರ್ಶಿಸಲು ನಾಲ್ಕಾರು ಜನರು ಬೇಕೆ ಬೇಕು. ಡೊಂಬರ ವೃತ್ತಿಯೆ ಕಲೆಯ ಪ್ರದರ್ಶನ. ಇವರ ಕಲೆಯ ಪ್ರದರ್ಶನವೆಂದರೆ ಕಸರತ್ತಿನ ಪ್ರದರ್ಶನ. ಇವರು ಅಗಲಿ ಹೋದರೆ ಡೊಂಬರಾಟ ಆಡಲು ಸಾಧ್ಯವಾಗುವುದಿಲ್ಲ. ಆಟಕ್ಕೆ ಸಂಚಕಾರವಾದರೆ ಆದಾಯಕ್ಕೆ ಕಲ್ಲೇಟು. ಉಪಜೀವನ ಸಾಗಿಸಲು ಸಾಧ್ಯವಾಗುವುದಿಲ್ಲ. ಹಾಗಾಗಿ ಒಗ್ಗಟ್ಟೆ ಇವರ ಬಲವಾಗಿದೆ.

ಹೀಗೆ ಗಾದೆ ಮಾತುಗಳು ಚೆನ್ನದಾಸರ ಸಮುದಾಯದ ಜೀವನ ವಿಧಾನವನ್ನು ತಿಳಿಯಲು ಸಮುದಾಯದ ಸಾಮಾಜಿಕ ಅಂತಸ್ತು, ಸಾಂಸ್ಕೃತಿಕ ಬದುಕನ್ನು ಅರಿಯಲು ನೆರವಾಗುತ್ತವೆ.

೩.೧೨.೫. ನಂಬಿಕೆಗಳು

ನಂಬಿಕೆಗಳು, ಜಾತಿ-ಮತ, ಪಕ್ಷ, ಪಂಗಡಗಳ ಭೇದವಿಲ್ಲದೆ ಸಮಾಜದ ಎಲ್ಲ ಸ್ತರಗಳಲ್ಲಿಯೂ ಹರಡಿಕೊಂಡಿವೆ. ನಂಬಿಕೆಗಳು ಮಾನವನ ಸಮಸ್ತ ಚಟುವಟಿಕೆಗಳಲ್ಲಿಯೂ ಸೇರಿಕೊಂಡಿವೆ. ಜೀವನವನ್ನು ಮುನ್ನಡೆಸುವ ಮಾರ್ಗದರ್ಶಿ ಸೂತ್ರಗಳು ಆಗಿವೆ. "ಭಯ ಮತ್ತು ಭಾವನಾತ್ಮಕತೆ ಎಲ್ಲ ನಂಬಿಕೆಗಳ ಹಿನ್ನೆಲೆಯಲ್ಲಿದ್ದು, ಅನೇಕ ವಿಧಾನಗಳಲ್ಲಿ ನಂಬಿಕೆಗಳು ಮೂಡಿರಬೇಕು. ನಂಬಿಕೆಗಳೇ ಮಾನವನ ಜೀವನವನ್ನು ರೂಪಿಸುತ್ತವೆ. ಅದನ್ನೆ ಸಂಸ್ಕೃತಿಯ ತಿರುಳು ಎನ್ನಬೇಕಾಗುತ್ತದೆ. "ಜಗತ್ತಿನ ಶ್ರೇಷ್ಟ ವಿಜ್ಞಾನಿಗಳು ಸಹ ದಿನ ಬೆಳಗಾದರೆ ನಂಬಿಕೆಗಳಿಗೆ ಅಂಟಿಕೊಂಡಿರುತ್ತಾರೆ."[೫೨] ಎಂಬ ದೇ. ಜವರೆಗೌಡರ ಮಾತುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಿ ಕೊಳ್ಳಬಹುದು. ಎಲ್ಲ ಸಮುದಾಯಗಳಲ್ಲಿಯೂ ನಂಬಿಕೆಗಳಿರುವುವಂತೆ, ಚೆನ್ನದಾಸರ ಸಮುದಾಯ ದಲ್ಲಿಯೂ ಅವರದೆ ಆದ ನಂಬಿಕೆಗಳಿವೆ. ಮಾನವ ಜನಾಂಗವೆ ನಂಬಿಕೆಯ ಆಧಾರದ ಮೇಲೆ ಬದುಕುತ್ತಲಿದೆ. ನಂಬಿಕೆಗಳಲ್ಲಿ ಕೆಲವು ಮೂಢನಂಬಿಕೆಗಳೂ ಬೆರೆತಿವೆ. ಕೆಲವು ಅಜ್ಞಾನ

ಅನಕ್ಷರತೆಯಿಂದಲೂ ಕೂಡಿವೆ. ನಂಬಿಕೆಗಳು ಆಯಾ ಜನಾಂಗದ ಜೀವನ ವಿಧಾನವನ್ನು ಅರಿತುಕೊಳ್ಳಲು ನೆರವಾಗುತ್ತವೆ. ಅಧ್ಯಯನಕ್ಕೆ ಅನುಕೂಲವಾಗಲೆಂದು ನಂಬಿಕೆಗಳನ್ನು ಹೀಗೆ ವಿವರಿಸಬಹುದು.

ವೃತ್ತಿ

ಚೆನ್ನದಾಸರ ಸಮುದಾಯದ ವೃತ್ತಿಯೆ ಭಿಕ್ಷಾಟನೆ. ಬೆಳಗಾವಿ ಜಿಲ್ಲೆಯ ವೃತ್ತಿ ಗಾಯಕರು ಏಕತಾರಿ, ದಮ್ಮಡಿ, ತಾಳಗಳನ್ನು ಹಿಡಿದು ಭಿಕ್ಷೆಗೆ ಹೊರಡುತ್ತಾರೆ. ಗೋಪಾಳ ಬುಟ್ಟಿಯಲ್ಲಿ ಮೊದಲು ಭಿಕ್ಷೆಯನ್ನು ದಲಿತ (ಹೊಲೆ, ಮಾದಿಗ)ರಿಂದ ಪಡೆದುಕೊಳ್ಳುವುದು ಶುಭ ಸಂಕೇತವಂತೆ. ಹೊಲೆ-ಮಾದಿಗರು ನೀಡಿದರೆ, ಉಳಿದವರಿಂದ ಧಾರಾಳವಾಗಿ ಭಿಕ್ಷೆ ದೊರೆಯುತ್ತದೆ. ಅವರು ಸಂತೋಷದಿಂದ ಭಿಕ್ಷೆ ನೀಡುತ್ತಾರೆಂಬ ನಂಬಿಕೆ ಇದೆ. ಚೆನ್ನದಾಸರಲ್ಲಿ ಇಂದೂ ಕೂಡ ಪುರಾತನ ನಂಬಿಕೆ ಪ್ರಚಲಿತದಲ್ಲಿದೆ. ಆದ್ದರಿಂದ ಈ ಸಮುದಾಯದವರು ತಮ್ಮ ಮೊದಲ ಭಿಕ್ಷೆಗೆ ಹೋಗುವುದು ಮಾದಿಗರ ಮನೆಗೆ. ಅವರಿಲ್ಲದಿದ್ದರೆ ಹೊಲೆಯರ ಮನೆಗೆ ಭಿಕ್ಷೆಗೆ ಹೋಗುತ್ತಾರೆ. ತಮ್ಮ ಪ್ರತಿ ದಿನದ ವೃತ್ತಿ ಆರಂಭಿಸುವುದೆ ಇದೇ ರೀತಿ.

ದೇವರು

ಮೂರು ವರ್ಷಗಳಿಗೊಮ್ಮೆ 'ದುರಗಮ್ಮನ' ಜಾತ್ರೆ ಜರುಗುತ್ತದೆ. ಜಾತ್ರೆಗೆ ಮೊದಲ ಪಟ್ಟಿ (ದೇಣಿಗೆ)ಯನ್ನು ಹೊಲೆ-ಮಾದಿಗರ ಕೇರಿಯಿಂದ ಸಂಗ್ರಹಿಸಲು ಆರಂಭಿಸುತ್ತಾರೆ. ಇವರಿಂದ ಆರಂಭಿಸಿದರೆ, ಜಾತ್ರೆಯೂ ಸಂಭ್ರಮದಿಂದ ಜರುಗುತ್ತದೆ. ಜಾತ್ರೆಯಲ್ಲಿ ಯಾವ ಅಡೆ-ತಡೆಗಳು ಬರುವುದಿಲ್ಲವೆಂಬ ನಂಬಿಕೆ ಈ ಜನಾಂಗದ್ದಾಗಿದೆ. ಇದರ ಜೊತೆಗೆ ಪ್ರಾಚೀನ ಕಾಲದಿಂದ ಇಂದಿನವರೆಗೂ ಈ ಜನಾಂಗದಲ್ಲಿ ದೇವರ ಕುರಿತಾಗಿ ನಂಬಿಕೆಗಳು ಜಾರಿಯಲ್ಲಿವೆ.

* ದೇವರಿಗೆ ಬರುತ್ತೇವೆ ಎನ್ನಬಾರದು.
* ದೇವರ ಹರಕೆ ಹನ್ನೆರಡು ವರುಷ.
* ಮಂಗಳವಾರ-ಶುಕ್ರವಾರ ಹೆಣ್ಣು ದೇವರುಗಳ ವಾರ.
* ಹುಣ್ಣಿಮೆ ಹೆಣ್ಣು ದೇವರಿಗೆ ಸಂಬಂಧಿಸಿದೆ.

* ದೇವರು ಮೈತುಂಬಿ ಬೇಡುತ್ತಾನೆ.

* ಒಳ್ಳೆಯದ್ದು–ಕೆಟ್ಟದ್ದು ದೇವರಿಗೆ ಸೇರುತ್ತದೆ.

* ಎಲ್ಲಮ್ಮ ದೇವರಿಗೆ ಕೆಟ್ಟದಾಗಿ ನಡೆದುಕೊಂಡರೆ, ದೇವಿ ಕೋಪಿಸಿಕೊಂಡು ಅಂಥವರಿಗೆ ಸೀರೆಯುಡಿಸಿ 'ಜಗ' ಹೊರಿಸುತ್ತಾಳೆ.

* ಶನಿವಾರ ಮಾಂಸಾಹಾರ ನಿಷಿದ್ಧ, ಹನುಮಂತ ದೇವರ ವಾರವಾದ್ದರಿಂದ ಮಡಿಯನ್ನು ಪಾಲಿಸಬೇಕು.

ದೇವರಿಗೆ ಹರಕೆ ಹೊತ್ತು ಅದನ್ನು ತೀರಿಸಲು 'ಬಲಿ' ನೀಡುವಾಗ ಆ ಪ್ರಾಣಿ (ಆಡು–ಕುರಿ) ದಡವನ್ನು ಮೇಲೆತ್ತಬೇಕು. ಬಲಿಕೊಡುವಾಗ ದಡ ಮೇಲೆತ್ತಿದರೆ ದೇವರು ಸಂತೃಪ್ತ ಗೊಂಡಿದ್ದಾನೆ. ಹರಕೆ ಸ್ವೀಕೃತಗೊಂಡಿದೆಯೆಂದು ಅರ್ಥವಾಗುತ್ತದೆ. ಬಲಿಕೊಡುವ ಪ್ರಾಣಿ ತನ್ನ ದಡವನ್ನು ಮೇಲೆತ್ತದಿದ್ದರೆ ದೇವರಿಗೆ ಹಿಡಿಸಿಲ್ಲ, ದೇವರು ಸಂತೃಪ್ತಗೊಂಡಿಲ್ಲವೆಂಬ ಅರ್ಥ. ಆ ಸಮುದಾಯದಲ್ಲಿ ಹರಕೆ ನೀಡಿದವರು (ಬಲಿ ಸಮರ್ಪಿಸುವವರು) ದೇವರಲ್ಲಿ ಪ್ರಾರ್ಥಿಸಿಕೊಳ್ಳುವ ಸಂಪ್ರದಾಯವಿದೆ.

ಮಳೆ

ಚೆನ್ನದಾಸರ ಸಮುದಾಯದಲ್ಲಿ ಹಲವಾರು ನಂಬಿಕೆಗಳಿವೆ. ಅವುಗಳಲ್ಲಿ ಮಳೆಯ ಕುರಿತು ನಂಬಿಕೆಗಳು ಸಹ ಒಂದು. ಮಳೆಯ ಕುರಿತು ಈ ಸಮುದಾಯದಲ್ಲಿ ಹಲವಾರು ನಂಬಿಕೆಗಳಿವೆ.

* ರೋಹಿಣಿ ಮಳೆಯಾದರೆ ಓಣಿಯೆಲ್ಲ ಕಾಳು.

* ಇರುವೆಗಳು ಬಾಯಲ್ಲಿ ತತ್ತಿ ಹಿಡಿದುಕೊಂಡು ಸಾಲಾಗಿ ಹೊರಟರೆ ಮಳೆಯಾಗುತ್ತದೆ.

* ಗುಬ್ಬಚ್ಚಿಗಳು ನೆಲದ ಮೇಲೆ, ಮಣ್ಣಿನಲ್ಲಿ ಸ್ನಾನ ಮಾಡಿದರೆ ಮಳೆ ಬರುತ್ತದೆ.

* ಮೃಗ ಮಳೆ ಮಿಂಚಬಾರದು, ಆರಿದ್ರಾ ಗುಡಗಬಾರದು.

* ಸೂರ್ಯನಿಗೆ ಖಣ ಕಟ್ಟಿದರೆ, ಚಂದ್ರನಿಗೆ ಕೆರೆ ಕಟ್ಟಿದರೆ ಮಳೆ ಬರುತ್ತದೆ.

* ಪಾವೂಶಾಗುಕ್ (ಗಂಡು ಕೋಗಿಲೆ) ಮೂರುದಿನ ನಿರಂತರವಾಗಿ ಕೂಗಿದರೆ,
ಮಳೆಯಾಗುತ್ತದೆ.
* ಕಪ್ಪೆಗಳು ನಿರಂತರವಾಗಿ ಒಟಗುಟ್ಟಿದರೆ ಮಳೆ ಬರುತ್ತದೆ.
* ಸಾಕಿದ ಕೋಳಿ ರೆಕ್ಕೆ ಕೊಡವಿ, ಕಾಲು ಮೇಲೆ ಮಾಡಿ ಮಲಗಿದರೆ ಮಳೆ ಬರುತ್ತದೆ.
* ಕತ್ತೆ ಮದುವೆ ಮಾಡಿದರೆ ಮಳೆಯಾಗುತ್ತದೆ.
* ಸ್ವಾತಿ ಮಳೆ ಹತ್ತಿದರ ಸಾಯ್ತನಂದರೂ ಬಿಡದು.
* ಕುಡ್ಡಿ ಮಳೆ ಕಣ್ತೆರೆದಲ್ಲೆ ಬೀಳುತ್ತದೆ.
* ಸುಖಕ್ಕೆ ಹುಣಚಿ ಕಾಯಿ, ಬರಕ್ಕೆ ಬಾರಿ ಕಾಯಿ.
* ಆದರ ಹಸ್ತಾ, ಆಗದಿದ್ದರೆ ರೈತ ಹಲ್ಲ ಕಿಸ್ತಾ.
* ಗ್ರಹಣ ಹಿಡಿದಾಗ (ಸೂರ್ಯ–ಚಂದ್ರ ಯಾವುದೆ ಇರಲಿ) ಗರ್ಭಿಣಿ ಹೆಂಗಸರು
ಯಾವುದೇ ಕೆಲಸ ಮಾಡಬಾರದು.

ಪ್ರಾಣಿ ಪ್ರಪಂಚ

* ನಾಯಿಯೆಂದರೆ ದೇವರು, ಅದನ್ನು ಒದೆಯಬಾರದು.
* ನಾಯಿಗಳು ಅಳುತ್ತಿದ್ದರೆ ಅಪಾಯ ಸಂಭವಿಸುತ್ತದೆ.
* ಕುರಿಯೆಂದರೆ ಲಕ್ಷ್ಮೀ.
* ಕುರಿಯು ಕಳ್ಳನಿಗೆ ವಚನ ಕೊಟ್ಟಿದೆ, ತನ್ನನ್ನು ಕದ್ದೊಯ್ಯುವಾಗಲೂ ಅದು
ಒದರುವುದಿಲ್ಲ.
* ಮುಂಗಲಿ (ಮುಂಗೂಶಿಯ) ಮುಖ ನೋಡಿದರೆ ಒಳ್ಳೆಯದಾಗುತ್ತದೆ.
* ನರಿ ನೋಡಿದರೆ ಶುಭ ಸಂಕೇತ.
* ಆಕಳು ಕಣ್ಣೀರು ಹಾಕಿದರೆ ದೃಷ್ಟಿಯಾಗುತ್ತದೆ.

* ದನ–ಕರುಗಳು, ಆಡು–ಕುರಿಗಳು ಗೋಣು(ಕುತ್ತಿಗೆ) ಮುರಿದುಕೊಳ್ಳುತ್ತಿದ್ದರೆ ಹಾನಿಯಾಗುತ್ತದೆ.

* ನೂರು ಮಂದಿಯಿದ್ದರೂ ಮೊಲದ ಮಾಂಸದಲ್ಲಿ ಎಲ್ಲರಿಗೂ ಪಾಲು ಸಿಗುತ್ತದೆ. ಇತ್ಯಾದಿಗಳು ಪ್ರಾಣಿಗಳ ಕುರಿತಾಗಿ ಇರುವ ನಂಬಿಗೆಗಳಾಗಿವೆ.

ಪಕ್ಷಿ ಸುಂಕುಳ

* ಯುಗಾದಿ ದಿವಸ ಕುಂಬಾರ (ಶಂಬರ) ಕಾಗಿ (ರತ್ನ ಪಕ್ಷಿ) ನೋಡಿದರೆ ಶುಭವಾಗುತ್ತದೆ.

* ಮನೆಯಲ್ಲಿ ಬೆಳವು ಹೊಕ್ಕರೆ ಕೇಡಾಗುತ್ತದೆ. ಆರು ತಿಂಗಳು ಮನೆ ಬಿಟ್ಟರೆ ದೋಷದ ನಿವಾರಣೆಯಾಗುತ್ತದೆ.

* ರಾತ್ರಿಹೊತ್ತು ಮನೆ ಮೇಲೆ ಗೂಬೆ ಕೂಗಿದರೆ ಸಾವಿನ ಸುದ್ದಿ ಬರುತ್ತದೆ.

* ಮನೆ ಮುಂದೆ ಒಂಟಿ ಕಾಗೆ ಕೂಗಿದರೆ ನೆಂಟರು ಬರುತ್ತಾರೆ.

* ಕಾಗೆ ಮೆಟ್ಟು (ಸಮಾಗಮ)ನೋಡಿದರೆ ಅಪಾಯ. ಹಾಗೆ ನೋಡಿದರೆ ನೋಡಿದವರಿಗೆ ಅಫಾತವಾಗಿದೆಯೆಂದು ಸುದ್ದಿ ಹಬ್ಬಿಸಬೇಕು.

* ನವಿಲಿನ ಮಾಂಸ ತಿನ್ನುವಾಗ ಠಸಗಿ ಹತ್ತಿದರೆ ವಿಧಿವಶರಾಗುತ್ತಾರೆ.

* ಜೋಡಿ ಹಕ್ಕಿ ನೋಡಿದರೆ ಶುಭವಾಗುತ್ತದೆ.

* ರಾತ್ರಿ ಹೊತ್ತು ಟಂವಕ್ಕಿ ಕಿರುಚಿದರೆ ಅಪಘಾತದ ಸುದ್ದಿ ಬರುತ್ತದೆ.

ಭೂತ ಪಿಶಾಚಿ

* ಮಟ ಮಟ ಮಧ್ಯಾಹ್ನ ಒಬ್ಬರೆ ತಿರುಗಾಡಬಾರದು.

* ರವಿವಾರ ಅಮವಾಸ್ಯೆ, ಗಂಡು ಅಮವಾಸ್ಯೆ, ಭೂತಗಳ ಕಾಟ ಹೆಚ್ಚು.

* ಹುಣ್ಣಿಮೆ ದಿವಸ ಹೆಣ್ಣು ದೆವ್ವ, ಅಮವಾಸ್ಯೆಗೆ ಗಂಡು ದೆವ್ವ ತಿರುಗಾಡುತ್ತವೆ.

* ಲಿಂಬೆಹಣ್ಣು ಹತ್ತಿರವಿದ್ದರೆ ಭೂತದ ಕಾಟವಿರುವುದಿಲ್ಲ.

* ನೀರು ಇದ್ದರೆ, ಅಂಥವರನ್ನು ಭೂತ ಹಿಡಿದುಕೊಳ್ಳುವುದಿಲ್ಲ.

* ಭೂತ ಬಿಡಿಸಲು ಆರ (ಆಹಾರ) ಕೊಡಬೇಕು.

* ಬುಧವಾರ-ಶನಿವಾರ ಲಿಂಬು ಇಳುವಿ ಒಗೆದರೆ ದೆವ್ವ ಕಾಣುವುದಿಲ್ಲ.

* ಚಪ್ಪಲಿಯನ್ನು ಡಬ್ಬು(ಬೋರಲಾಗಿ)ಹಾಕಿದರೆ, ಆ ಮನೆ ಹತ್ತಿರ ಭೂತ ಸಂಚಾರವಿರದು, ಇತ್ಯಾದಿ.

ಮಾನವನ ಅಂಗಾಂಗಗಳು

* ಪುರುಷರಿಗೆ ಬಲಗಣ್ಣು, ಸ್ತ್ರೀಯರಿಗೆ ಎಡಗಣ್ಣು ಹಾರಿದರೆ ಶುಭ.

* ಅಂಗೈಯಲ್ಲಿ (ಹಸ್ತ ರೇಖೆಗಳಲ್ಲಿ) ಕತ್ತರಿಯಿದ್ದರೆ ದುಡ್ಡು ನಿಲ್ಲುವುದಿಲ್ಲ.

* ಊಟವನ್ನು, ಅಡುಗೆ ಪಾತ್ರೆ-ಪಗಡಗಳನ್ನು ದಾಟಬಾರದು.

* ಬೆಂಕಿ, ಅಡುಗೆ ಪಾತ್ರೆ ಒದೆಯಬಾರದು.

* ಕರಿನಾಲಿಗೆ ಇದ್ದರೆ ಅವರು ಹೇಳಿದ್ದು ನಿಜವಾಗುತ್ತದೆ.

* ನಾಲಿಗೆ ತುದಿ, ಬಲಗೈ ಉಂಗುರ ಬೆರಳಲ್ಲಿ ಮಚ್ಚೆ ಇದ್ದರೆ, ಅವರಾಡಿದ್ದು ಸತ್ಯವಾಗಿ ಬಿಡುತ್ತದೆ.

* ಎದೆಯ ಮೇಲೆ ರೋಮಗಳಿರದ ಪುರುಷ ನಂಬಿಕೆಗೆ ಯೋಗ್ಯನಲ್ಲ.

* ಅಂಗೈ ಅಗಲವಾಗಿದ್ದರೆ, ಅನ್ನ ಅಪಾರವಾಗಿರುತ್ತದೆ.

* ಕಿವಿಗಳು ದೊಡ್ಡದಾಗಿದ್ದರೆ, ಬುದ್ಧಿವಂತರಾಗುತ್ತಾರೆ. ಇತ್ಯಾದಿ.

ಶಕುನ (ಸಂಕೇತ)

* ರಾತ್ರಿಯಾಕಾಶದಲ್ಲಿ ಫಳ-ಫಳ ಹೊಳೆಯುವ ನಕ್ಷತ್ರಗಳು ಕಣ್ಣು ಕೋರೈಸುತ್ತ ಬಿದ್ದರೆ

ಬಹುದೊಡ್ಡ ವ್ಯಕ್ತಿಗೆ ಸಾವು ಬರುತ್ತದೆ.

* ರಾತ್ರಿಯ ವೇಳೆಯಲ್ಲಿ ನಾಯಿಗಳು ಅಳುತ್ತಿದ್ದರೆ ಅಪಘಾತವಾಗುತ್ತದೆ.

* ರಾತ್ರಿ ವೇಳೆಯಲ್ಲಿ ಮನೆಯ ಮೇಲೆ ಟಿಂವಕ್ಕಿ ಟಿಂವ್ ಗುಟ್ಟಿದರೆ ಮರಣದ ಸುದ್ದಿ ಬರುತ್ತದೆ.

* ತುಂಬಿದ ಕೊಡ ಎದುರಿಗೆ ಬಂದರೆ, ಒಲೆಯ ಮೇಲಿನ ಹಾಲು ಉಕ್ಕಿದರೆ, ದಾರಿಯಲ್ಲಿ ಅಂತ್ಯ ಸಂಸ್ಕಾರಕ್ಕೆ ಹೊರಟ ಶವ ಎದುರಾದರೆ, ನರಿಗಳು ಭೇಟಿಯಾದರೆ ಇವೆಲ್ಲವು ಶುಭ ಶಕುನಗಳು. ಹೋದ ಕೆಲಸವಾಗುತ್ತದೆ ಎಂಬ ನಂಬಿಕೆಗಳು ಚೆನ್ನದಾಸರ ಸಮುದಾಯದಲ್ಲಿ ಬಲವಾಗಿ ನೆಲೆಯೂರಿವೆ. ಇವರ ಈ ಶಕುನ ಅಥವಾ ಸಂಕೇತಗಳಲ್ಲಿ ನಂಬಿಕೆಗಳನ್ನು ಇಟ್ಟುಕೊಂಡಂತೆ, ಕೆಲವು ಘಟನೆಗಳು ಜರುಗಿದರೆ ಅವು ಅವರಿಗೆ ಅಶುಭವನ್ನು ಉಂಟು ಮಾಡುತ್ತವೆ.ಎಂಬುದನ್ನು ನಂಬಿದ್ದಾರೆ.

* ಬೆಕ್ಕು ಅಡ್ಡ ಬಂದರೆ ಕೆಲಸವಾಗದು.

* ಕ್ಷೌರಿಕ ಎದುರಾದರೆ ಹೋದ ಕೆಲಸಕ್ಕೆ ವಿಘ್ನವಾಗುತ್ತದೆ.

* ಕಾಗೆ ಅಡ್ಡ ಹೋದರೆ, ಒಂಟಿಸೀನು, ಎಲ್ಲಿ ಹೊರಟಿರುವಿರಿ? ಎಂದು ಕೇಳಿದರೆ ಅಪಶಕುನ.

ಇಂಥ ಮೇಲಿನ ಘಟನೆಗಳು ನಡೆದರೆ, ಹೋದ ಕೆಲಸವಾಗುವುದಿಲ್ಲ.

* ಕನಸಿನಲ್ಲಿ ಹಾವು ಕಚ್ಚಿದರೆ ಮರಣ ಭೀತಿ ದೂರಾಗುತ್ತದೆ.

* ಕನಸಿನಲ್ಲಿ ಆಕಳು, ಹಣ್ಣುಗಳು ಬಂದರೆ ಶುಭಶಕುನ.

* ಕನಸಿನಲ್ಲಿ ಮದುವೆ, ಜಾತ್ರೆ ನಡೆದರೆ, ಮರಣದ ಮುನ್ಸೂಚನೆ.

* ಕನಸಿನಲ್ಲಿ ಹಲ್ಲುಗಳು ಬಿದ್ದರೆ ಅಪಶಕುನ, ಅಪಾಯವಿರುತ್ತದೆ.

* ಕನಸಿನಲ್ಲಿ ಹಿರಿಯರು, ಗುರುಗಳು, ದೇವರು ಬಂದರೆ ಶುಭದ ಸಂಕೇತ. ಮುಂದೆ ಒಳ್ಳೆಯ ದಿನಗಳು ಬರುತ್ತವೆ.

* ಕನಸಿನಲ್ಲಿ ಊಟ ಮಾಡುತ್ತಿದ್ದರೆ ಆರೋಗ್ಯದಲ್ಲಿ ಏರು–ಪೇರಾಗುತ್ತದೆ. ಇತ್ಯಾದಿ.

ನಂಬಿಕೆಗಳು "ನಂಬಿದವರಿಗೆ ಮಾತ್ರ ಅವು ವಿಶ್ವಾಸದ ಪ್ರತೀಕ. ಕಾನೂನು–ಕಟ್ಟಳೆಗಳನ್ನು ಮೀರಬಹುದು ಅಥವಾ ಮುರಿಯಬಹುದು. ಆದರೆ ಸಮಾಜದ ಎಲ್ಲ ಸಮುದಾಯಗಳು ತಮ್ಮ ತಮ್ಮ ನಂಬಿಕೆಗಳನ್ನು ಶಿರಸಾವಹಿಸಿ ಪಾಲಿಸುತ್ತಾರೆ. ಈ ನಂಬಿಕೆಗಳು ಅವರ ದೃಷ್ಟಿಯಲ್ಲಿ ಪರಮ ಶ್ರೇಷ್ಠ ವಾಗ್ದಾನಗಳು, ಪವಿತ್ರ ಸಂದೇಶಗಳು. ಇಂಥ ಹಲವಾರು ನಂಬಿಕೆಗಳ ಹೆಮ್ಮರವಾಗಿದೆ. ಚೆನ್ನದಾಸರ ಸಮುದಾಯದ ಎಷ್ಟೋ ನಂಬಿಕೆಗಳು ಮತ್ತೊಂದು ಸಮುದಾಯದ ನಂಬಿಕೆಗಳು ಆಗಿರುತ್ತವೆ. ಇದು ಸಾಮಾಜಿಕ ಕೊಳ್ಳು ಕೊಡುವಿಕೆಯಾಗಿದೆ."[೫೩] ಎಂಬುದು ವಿಶೇಷವಾದ ಅಂಶವಾಗಿದೆ. ಚೆನ್ನದಾಸರ ಸಮುದಾಯದವರು ಇನ್ನೂಳಿದ ಸಮುದಾಯಗಳಿಗಿಂತ ಇಂಥಹ ನಂಬಿಕೆಗಳಲ್ಲಿ ವಿಶ್ವಾಸವಿಟ್ಟವರು. ಇವುಗಳನ್ನು ತಮ್ಮ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡು ಜೀವನ ಸಾಗಿಸುತ್ತಾರೆ. ಹಿಂದುಳಿದಿರುವ ಈ ಸಮುದಾಯವು ಇವುಗಳನ್ನು ತಮ್ಮ ಜೀವನದ ಒಂದು ಭಾಗವಾಗಿ ನೋಡುತಾರೆ.

ಹಚ್ಚೆ ಕುರಿತಾಗಿರುವ ನಂಬಿಕೆಗಳು

'ಹಚ್ಚೆ' ಯೊಂದು ಜನಪದ ಕಲೆ. ಪುರಾತನ ಕಾಲದಲ್ಲಿ ಹಚ್ಚೆ ಹಾಕಿಸಿಕೊಳ್ಳುವುದು ಸಮಾಜದಲ್ಲಿ ಕಡ್ಡಾಯವಾಗಿತ್ತು. ಹೆಣ್ಣು ಮಕ್ಕಳು ಈಗಲೂ ಕೂಡ ಕಟ್ಟು ನಿಟ್ಟಾಗಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಿಂದೆ ಹಚ್ಚೆ ಹಾಕಿಸಿಕೊಳ್ಳದ ಮಹಿಳೆಯರನ್ನು ಮದುವೆಯಾಗಲು ಒಪ್ಪಿಗೆಯಿರಲಿಲ್ಲವಂತೆ. ಅಂಥವರನ್ನು ಅನುಮಾನದಿಂದ ನೋಡಲಾಗುತ್ತಿತ್ತು.

ನಂದಿಕೋಲ, ಶಿವನ ಬಾಸಿಂಗ, ಪಗಡಿ ಬಜಾರ, ರಾಮನ ತೊಟ್ಟಿಲು, ಕೃಷ್ಣಚಕ್ರ, ಅಕ್ಕ–ತಂಗಿಯರ ಚಿತ್ರ, ನವಿಲು, ಚೇಳು, ಜರಿಗುಬ್ಬಿ ಮುಂತಾದವು ಹಚ್ಚೆಯ ವಿವಿಧ ಚಿತ್ರಗಳಾಗಿವೆ. ಇವುಗಳನ್ನು ಹಾಕಿಸಿಕೊಳ್ಳದಿದ್ದರೂ, ಹಣೆಯ ಮೇಲೆ ಚಿಕ್ಕಗುಬ್ಬಿ ಅಥವಾ ಚುಕ್ಕಿಯನ್ನು ಹಾಕಿಸಿಕೊಳ್ಳುವುದು ಕಡ್ಡಾಯವಾಗಿದೆ.

ಕೈಬೆರಳು, ಮುಂಗೈ, ಅಂಗೈ ಮೇಲಿನ ಭಾಗ, ಮುಂಗೈಯ ಒಳಭಾಗ ಮತ್ತು ಹೊರಭಾಗ, ಹಣೆ, ಹುಬ್ಬು, ಕೆನ್ನೆ, ಗಲ್ಲ, ಗದ್ದ, ಹುಬ್ಬಿನ ಕೊನೆ, ಕೆಳದುಟಿಯ ಕೆಳಭಾಗ ಮುಂತಾದ ಅಂಗಾಂಗಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುವ ಪರಿಪಾಠವಿದೆ.

ನಂದಿಕೋಲು ಹಚ್ಚೆ ಹಾಕಿಸಿಕೊಂಡರೆ, ದೇವರ ನಂದಿಕೋಲಿನಿಂದ ರಕ್ಷಣೆ ದೊರೆಯುತ್ತದೆ. ರಾಮನ ತೊಟ್ಟಿಲು ಹಚ್ಚೆ ಹಾಕಿಸಿಕೊಂಡರೆ ಬೇಗ ಮಕ್ಕಳಾಗುತ್ತವೆ. ಶಿವನ ಬಾಸಿಂಗದಿಂದ ಬೇಗ ಬಾಸಿಂಗದ ಬಲ ಕೂಡಿ ಬರುತ್ತದೆ. ಅಕ್ಕ–ತಂಗಿಯರ ಚಿತ್ರದ ಹಚ್ಚೆಯಿಂದ ಅಕ್ಕ–ತಂಗಿಯರಲ್ಲಿ ಅನ್ಯೋನ್ಯತೆಯಿದ್ದು, ಪರಸ್ಪರ ಅಗಲುವುದಿಲ್ಲ. ಪಗಡಿ–ಬಜಾರವು ಶಿವ–ಪಾರ್ವತಿ ಪಗಡೆಯಾಡುವುದರ ಸಂಕೇತ. ಗಂಡ–ಹೆಂಡತಿಯರಲ್ಲಿ ಪ್ರೀತಿಯಿದ್ದು, ಧೀರ್ಘಾಯುಷಿ ಗಳಾಗುತ್ತಾರೆ ಎಂಬ ನಂಬಿಕೆಗಳು ಈ ಜನ ಸಮುದಾಯದಲ್ಲಿವೆ.

ಹಣೆ ಮತ್ತು ಗದ್ದದ ಮೇಲೆ ಗುಬ್ಬಿಯ ಚಿತ್ರ, ಕಣ್ಣಿನ ಎಡಭಾಗ ಮತ್ತು ಹುಬ್ಬುಗಳ ಕೊನೆಯಲ್ಲಿ ಚಿಕ್ಕಿ–ಚಂದ್ರರ ಹಚ್ಚೆಗಳು, ಶಿವನ ಬಾಸಿಂಗ ಹಾಗೂ ಕೃಷ್ಣಚಕ್ರಗಳನ್ನು ಎರಡೂ ಕೈಗಳ ಅಂಗೈ ಮೇಲೆ ಹಾಕಿಸಿಕೊಂಡರೆ, ಪಗಡಿ ಬಜಾರ, ರಾಮನ ತೊಟ್ಟಿಲು, ನಂದಿಕೋಲು, ಅಕ್ಕ–ತಂಗಿಯರ ಹಚ್ಚೆಗಳನ್ನು ಒಂದೊಂದು ಕೈಗೆ ಎರಡೆರಡು ಚಿತ್ರಗಳಂತೆ ಮುಂಗೈಯ ಒಳಭಾಗದಲ್ಲಿ ಬಿಡಿಸಿಕೊಳ್ಳುತ್ತಾರೆ. ಅಂಗೈ ಹಿಂಭಾಗದಲ್ಲಿ ಒಂದು ಕಡೆ ಝುರಿ, ಮತ್ತೊಂದು ಕಡೆ ನಾಗರ ಅಥವಾ ಚೇಳಿನ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಈ ಹಚ್ಚೆ ಹಾಕಿಸಿಕೊಳ್ಳುವ ಸಂಪ್ರದಾಯ ಇಂದು ಯುವಕರಿಗೆ ಪ್ಯಾಶನ್ ಆಗಿ ಪರಿವರ್ತನೆಯಾಗಿದೆ.

ಹಚ್ಚೆ ಹಾಕಿಸಿಕೊಳ್ಳುವುದರಿಂದ ಮಹಿಳೆಯರಿಗೆ ದೃಷ್ಟಿಯಾಗುವುದಿಲ್ಲ. ಸುಂದರಿಯರಿಗೆ ಪರಪುರುಷನ ವಕ್ರದೃಷ್ಟಿ ತಾಗುವುದಿಲ್ಲ. ಕಪ್ಪು ಅಥವಾ ಹಸಿರು ಬಣ್ಣವು ದೃಷ್ಟಿ ನಿವಾರಣೆಗೆ ಇರುವ ಪರಿಹಾರ. ವ್ಯಕ್ತಿ ಸತ್ತಾಗ ಶವದ ಜೊತೆಗೆ ಯಾರೂ ಬರುವುದಿಲ್ಲ. ಸತ್ತಾಗ ಜೊತೆ–ಜೊತೆಗೆ ಬರುವುದು ಹಚ್ಚೆ ಮಾತ್ರ. ಹಚ್ಚೆ ಇರುವಲ್ಲಿ ದೇವರಿರುತ್ತಾನೆ. ದೇವರಿರುವಲ್ಲಿ ರಕ್ಷಣೆಯಿರುತ್ತದೆ. ಆದ್ದರಿಂದ ಕೆಟ್ಟದ್ದು ಸಂಭವಿಸಲಾರದೆಂಬ ನಂಬಿಕೆಯಿದೆ. ಹಚ್ಚೆ ಸೌಂದರ್ಯದ ಸಂಕೇತ, ಪ್ರೀತಿಯ ಪ್ರತೀಕ. ಹಚ್ಚೆ ಪರಿಸರ ಮತ್ತು ಪ್ರಕೃತಿಯ ಪ್ರತಿರೂಪವೆಂಬ ನಂಬಿಗೆಯೂ ಇದೆ.

ಹಚ್ಚೆ ಹಾಕಿಸುವುದರ ಹಿಂದೆ ಇಂದಿನ ಆಧುನಿಕರು ವಿವರಿಸುವ 'ಆಕ್ಯೂಪಂಕ್ಚರ್' (ವೈದ್ಯಕೀಯ ವಿಧಾನ)ವೂ ಅಡಗಿದೆ. ವೈದ್ಯಕೀಯ ಸಂಗತಿಗಳು ಈ ಸಮುದಾಯಕ್ಕೆ ಗೊತ್ತೇ ಇಲ್ಲ. ಪ್ರಾಚೀನ ಕಾಲದಿಂದಲೂ ಹಚ್ಚೆ ಹಾಕಿಸಿಕೊಳ್ಳುತ್ತ ಬರಲಾಗಿದೆ. ಈಗಲೂ ಅದನ್ನು ಮುಂದುವರೆಸಿದ್ದೇವೆ ಎಂಬುದಷ್ಟೆ ಇವರಿಗೆ ಗೊತ್ತಿರುವ ವಿಚಾರವಾಗಿದೆ.[೫೪] "ಅನೇಕ ನಂಬಿಕೆಗಳು ಈ ಸಮುದಾಯದಲ್ಲಿವೆ. ನಂಬಿದ ಘಟನೆಗಳು ಘಟಿಸಿದರೆ ಪರಿಹಾರೋಪಾಯಗಳನ್ನು ನೆರವೇರಿಸುವುದು, ವ್ರತ ಮಾಡುವುದು ಮಾಡುತ್ತಾರೆ. ದೇವರ ಮೇಲಿನ ನಂಬಿಕೆಯನ್ನೆ ನಂಬಿಕೆಗಳ ಮೇಲೂ ಇಟ್ಟಿರುವುದು ಅವುಗಳ ಶ್ರದ್ಧೆಗೆ ಹೆಗ್ಗುರುತಾಗಿದೆ."[೫೫] ಎಂಬ ಮಾತುಗಳು ಚೆನ್ನದಾಸರ ಸಮುದಾಯದ ನಂಬಿಕೆಗಳು ಅವುಗಳ ಹಿಂದಿರುವ ಸಾಂಸ್ಕೃತಿಕ ಚಟುವಟಿಕೆಗಳನ್ನು ವಿವರಿಸುತ್ತವೆ.

೩.೧೨.೬. ರಂಗಭೂಮಿ

ಚೆನ್ನದಾಸರು ಮೂಲತ: ಕಲಾವಿದರು. ಭಜನೆ, ಕೀರ್ತನೆ, ದಾಸರಾಟಗಳ ಮೂಲಕ ನಾಡಿನ ತುಂಬ ಚಿರಪರಿಚಿತರಾಗಿದ್ದಾರೆ. ದಾಸರಾಟದ ಮೂಲಕ ನಾಡಿನ ತುಂಬ ಚೆನ್ನದಾಸರ ಸಮುದಾಯವನ್ನು ಗುರುತಿಸುವ ಪ್ರಯತ್ನವೂ ಈ ಹಿಂದೆ ನಡೆದಿತ್ತು. "ತೀರಾ ಹಿಂದಿನ ಕಾಲದಲ್ಲಿ ಹಳ್ಳಿಗರ ಮನರಂಜನೆಗಾಗಿ ಆಟಕಟ್ಟಿ ಆಡುತ್ತಿದ್ದ 'ನಟುವರು' ಎಂಬ ಪಂಗಡಕ್ಕೆ 'ದಾಸರು' ಎಂಬ ಹೆಸರೂ ಇದ್ದಿತು. ಜಾತ್ರೆ, ಉತ್ಸವ, ಹಬ್ಬ-ಹರಿದಿನಗಳಲ್ಲಿ ಈ ದಾಸರ ಆಟಗಳು ನಡೆಯುತ್ತಿದ್ದವು. ಇವರ ಮೇಳ ಸ್ತ್ರೀ-ಪುರುಷ ಮಿಶ್ರಿತವಾದುದು."[೫೬] ಎಂದು ಎಚ್.ಕೆ. ರಂಗನಾಥ ಅವರು ವಿವರಿಸಿದ್ದಾರೆ. "ಕ್ರಿಸ್ತಶಕ ಆರಂಭದ ಶತಮಾನದಲ್ಲಿ ದಾಸರಾಟವನ್ನು ಹೋಲುವಂತಹ ಒಂದು ಆಟದ ವರ್ಣನೆಯು ತಮಿಳು 'ಶಿಲಪ್ಪದಿಗಾರಮ್'ದಲ್ಲಿ ಬರುತ್ತದೆ. ದೇಶಿಯ ಆಟದಲ್ಲಿ ಸ್ತ್ರೀಯರನ್ನು ಹೊಂದಿದ ಗುಂಪು, ದಾಸರ ಗುಂಪು ಬಿಟ್ಟರೆ ಬೇರೊಂದಿಲ್ಲ. ಕಾರಣ ರಾಜನನ್ನು ಸಂತಸಗೊಳಿಸಿದ ತಂಡವು 'ದಾಸರಾಟ'ದ ತಂಡವಾಗಿರಬಹುದು"[೫೭] ಎಂದು ಎಂ.ಟಿ.ಧೂಪದ ಅವರು ಅಭಿಪ್ರಾಯ ಪಡುತ್ತಾರೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಯವರು ಈ ಅಭಿಪ್ರಾಯವನ್ನು ಬೆಂಬಲಿಸಿದ್ದಾರೆ.

ಡಾ. ಚಂದ್ರಶೇಖರ ಕಂಬಾರ ಅವರು "ದಾಸರಾಟ ದ್ರಾವಿಡ ಬಯಲಾಟದ ಮುಂದುವರೆದ ರೂಪವಾಗಿರಬಹುದೇನೋ ಎಂದು ಅನಿಸುತ್ತದೆ."[೫೮] ಎಂದಿದ್ದಾರೆ. "ದಾಸರು ಒಳ್ಳೆಯ ಕುಶಲ ಕಲೆಗಾರರು ಎಂಬುದನ್ನು ಅವರಾಡುವ ದಾಸರಾಟದಿಂದ ಅರಿಯಬಹುದಾಗಿದೆ. ದಾಸರು ಹಾಡುವುದರಲ್ಲಿ ನಿಷ್ಣಾತರು. ದಾಸರಾಟವು ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಜನಪದ ರಂಗಭೂಮಿಗೆ ಸ್ತ್ರೀಯರು ಬಂದದ್ದು ದಾಸ ಜನಾಂಗದಿಂದಲೆ"[೫೯] ಎಂಬುದು ಗಮನಾರ್ಹವಾಗಿದೆ.

ಅಪ್ಪಟ ಹನುಮಂತನ ಭಕ್ತರಾದ ದಾಸರು ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ದಾಸರಾಟದ ಪ್ರದರ್ಶನ ನೀಡಲು ಹೋಗುತ್ತಾರೆ. ಈ ಆಟದ ಮುಖ್ಯಸ್ಥ ನಟುವರ. ಆಟ ಪ್ರದರ್ಶನದ ಸಂಪೂರ್ಣ ಜವಾಬ್ದಾರಿ ಇವನದೆ. ಈ ಮೇಳದಲ್ಲಿ ಸ್ತ್ರೀ-ಪುರುಷರಿಬ್ಬರೂ ಭಾಗವಹಿಸುತ್ತಾರೆ. ಎಲ್ಲರೂ ಹಾಡುವುದರಲ್ಲಿ, ಕುಣಿಯುವುದರಲ್ಲಿ ಪರಿಣಿತರು. ಆದರೆ ಓರ್ವ ನಾಯಕಿ ಮಾತ್ರ ಸುಶ್ರಾವ್ಯವಾಗಿ ಹಾಡಲು ಕಲಿತಿರುತ್ತಾಳೆ. ಇಡಿ ಮೇಳದ ಜನಪ್ರಿಯತೆ ಇವಳನ್ನೇ ಅವಲಂಭಿಸಿರುತ್ತದೆ"[೬೦] ಎಂಬ ವಿವರಣೆಯು ದಾಸರಾಟದ ವೈಶಿಷ್ಟ್ಯತೆಯನ್ನು ತಿಳಿಸುತ್ತದೆ.

ಇವೆಲ್ಲ ಮಾಹಿತಿಗಳಿಂದ ದಾಸರಾಟವು ತುಂಬ ಪ್ರಾಚೀನವು ದ್ರಾವಿಡ ಮೂಲದಿಂದ ಬಂದಿರುವುದು ಸ್ಪಷ್ಟವಾಗುತ್ತದೆ. ಕರ್ನಾಟಕದಲ್ಲಿ ದಾಸರಾಟಗಳು ಪ್ರಸಿದ್ಧವಾಗಿರುವಂತೆ ಬೆಳಗಾವಿ ಜಿಲ್ಲೆಯಲ್ಲಿಯೂ ದಾಸರಾಟ ತುಂಬಾ ಜನಪ್ರಿಯವಾದ ಜಾನಪದ ರಂಗಭೂಮಿಯ ಕಲೆಯಾಗಿದೆ.

ಗೋಕಾಕ ತಾಲೂಕಿನ ಕೊಣ್ಣೂರ ಕಂಪನಿಯಲ್ಲಿ 'ಯಲ್ಲೂಬಾಯಿ' ದಾಸರ ಪ್ರಸಿದ್ಧ ನಟಿಯಾಗಿದ್ದಳು. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಗುಳೇದಗುಡ್ಡ ಹತ್ತಿರದ ಅಲಕನೂರಿನ ಚೆನ್ನದಾಸರ ಸಮುದಾಯದವಳಾದ 'ಯಲ್ಲೂಬಾಯಿ'ಯು ಗೋಕಾಕದ ಕೊಣ್ಣೂರಿನ ಶಿವಮೂರ್ತಿ ಸ್ವಾಮಿಗಳ ಕಂಪನಿಯಲ್ಲಿ ಸುಧೀರ್ಘ ಸೇವೆ ಮಾಡಿದವಳು. ಕನ್ನಡ ಜನಪದ ಕಲಾವಿದೆಯೆಂಬ ಹೆಗ್ಗಳಿಕೆ ಪಡೆದುಕೊಂಡಿದ್ದಾಳೆ. ಇವಳ ಸಾಕು ಮಗಳಾದ 'ಗಂಗೂಬಾಯಿ'ಯು ಆರು ವರುಷದ ಬಾಲಕಿಯಾಗಿದ್ದಾಗ ಕೊಣ್ಣೂರ ಕಂಪನಿಯ ನಾಟಕ ಕ್ಯಾಂಪಿನಲ್ಲಿ 'ಹರಿಶ್ಚಂದ್ರ' ನಾಟಕದಲ್ಲಿ ತಾಯಿಯ ಜೊತೆ ಲೋಹಿತಾಶ್ವನ ಪಾತ್ರದಲ್ಲಿ ಭಾಗವಹಿಸಿ, ಪ್ರೇಕ್ಷಕರಿಗೆ ಮೋಡಿ ಮಾಡಿದಳು. ಮುಂದೆ ಖ್ಯಾತ ಕಲಾವಿದೆಯಾಗಿ ೧೯೨೫ ರಿಂದ ೧೯೩೨ರವರೆಗೆ ಏಳು ವರುಷ ನಾಟಕ ಕಂಪನಿಯ ಒಡತಿಯಾಗಿ ಅದನ್ನು ಯಶಸ್ವಿಯಾಗಿ ಮುನ್ನಡೆಸಿದವಳು. ಹಾರೂಗೇರಿ, ಸಂಕೋನಟ್ಟಿ, ಉದಗಟ್ಟಿ, ಕೌಜಲಗಿ, ಖಣದಾಳ, ಜಾಲಿಕಟ್ಟಿ ಮುಂತಾದ ಗ್ರಾಮಗಳಲ್ಲಿ ದಾಸರಾಟದ ಮೇಳಗಳಿವೆ. ಆಧುನಿಕತೆಯ ಪ್ರಭಾವದಿಂದಾಗಿ ಮೊದಲಿನ ಮಹತ್ವ ಇವುಗಳಿಗಿಲ್ಲ. ಕೇವಲ ದಾಸರಾಟದಿಂದ ಉಪಜೀವನ ನಡೆಯುವುದಿಲ್ಲ. ಆದರೂ ಜಾತ್ರೆ, ಉತ್ಸವಗಳ ಸಂದರ್ಭದಲ್ಲಿ ಹಳ್ಳಿ ಹಳ್ಳಿಗಳಲ್ಲಿ ಈ ಆಟ ಆಡಿಸಲಾಗುತ್ತದೆ.

ದಾಸರಾಟದಂತೆಯೆ "ಶ್ರೀಕೃಷ್ಣ ಪಾರಿಜಾತ"ಕ್ಕೂ ಚೆನ್ನದಾಸರ ಕೊಡುಗೆ ಅಪಾರವಾಗಿದೆ. ಕೌಜಲಗಿ, ಬಡಚಿ, ಹೊಸಟ್ಟಿ, ಯಲ್ಪಾರಟ್ಟಿ, ಮುಳ್ಳೂರಗಳಲ್ಲಿ ಪಾರಿಜಾತ ಕಂಪನಿಗಳಿವೆ. ಇಡೀ ಪಾರಿಜಾತ ತಂಡದ ಕಲಾವಿದರು ದಾಸ ಸಮುದಾಯದವರಾಗಿದ್ದಾರೆ. ಮತ್ತೆ ಕೆಲವೆಡೆ ರುಕ್ಮೀಣಿ, ಸತ್ಯಭಾಮೆ, ಕೊರವಂಜಿ, ಗೊಲ್ಲತಿ ಮುಂತಾದ ಸ್ತ್ರೀ ಪಾತ್ರಗಳನ್ನು ಚೆನ್ನದಾಸರ ಸಮುದಾಯದ ಮಹಿಳೆಯರು ನಿರ್ವಹಿಸುತ್ತಾರೆ.

ದಾಸರಾಟ, ಶ್ರೀಕೃಷ್ಣಪಾರಿಜಾತಗಳಂತೆ, 'ಬಯಲಾಟ'ಗಳನ್ನು ದಾಸ ಸಮುದಾಯ ದವರು ಆಡುತ್ತಾರೆ. ರೇಣುಕಾಯಲ್ಲಮ್ಮ, ಭಸ್ಮಾಸೂರ, ರತಿಕಲ್ಯಾಣ, ಸತ್ಯವೃತ ಮುಂತಾದ ಬಯಲಾಟ ಗಳನ್ನು ಆಡುತ್ತಾರೆ. "ಬಿಜಾಪೂರ ಶ್ರೀಕೃಷ್ಣ ಪಾರಿಜಾತ ಮೇಳ, ಬಾಗಲಕೋಟೆ ಜಿಲ್ಲೆಯ ದಾಸರಾಟ ಮೇಳದವರು, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಬಯಲಾಟದವರು ಪ್ರಮುಖ ಮೇಳ ಕಲಾವಿದರಾಗಿರುವರು"[೬೧] ಎಂಬ ಸಂಗತಿಯು ಗಮನಾರ್ಹವಾಗಿದೆ.

ಭಜನೆ

ಮನರಂಜನೆಗಾಗಿ ಹಿಂದಿನಿಂದಲೂ ಉಳಿದುಕೊಂಡು ಬಂದಿರುವ ಭಜನೆ ಜನಪದ ಕಲೆಗಳಲ್ಲಿ ಇದು ಒಂದು. ಇದು ದೇವರನ್ನು ಹಾಡಿನ ಮೂಲಕ ಸ್ತುತಿಸುವ ಒಂದು ಪರಿ. ಚೆನ್ನದಾಸರ ಸಮುದಾಯದಲ್ಲಿ ಕಂಡು ಬರುವ ಪ್ರಮುಖ ತಂಡವೆಂದರೆ, 'ಭಜನಾ ಮೇಳ'. ಇದರಲ್ಲಿ ಎರಡು ಪರಂಪರೆಗಳಿವೆ. ಒಂದು ಹರಿ ಭಜನೆ ಮತ್ತೊಂದು ಹರಭಜನೆ. ಒಂದು ವಿಷ್ಣುವಿನ ಪರವಾದರೆ, ಮತ್ತೊಂದು ಶಿವನ ಪರವಾಗಿರುವಂಥದ್ದು. ಚೆನ್ನದಾಸರು ಹರಿಭಜನೆಗೆ ಸೇರಿದ್ದಾರೆ. ಆದರೆ ಇವರಲ್ಲಿಯೂ ಹರ(ಶಿವ) ಭಜನೆಯ ಮೇಳದವರು ಇದ್ದಾರೆ. ಎರಡೂ ಪರಂಪರೆಯ ಭಜನಾ ಮೇಳಗಳು ಬೆಳಗಾವಿ ಜಿಲ್ಲೆಯ ಬಹುಪಾಲು ತಾಲೂಕುಗಳಲ್ಲಿವೆ. ಬೆಳಗಾವಿ ಜಿಲ್ಲೆಯ ಅಡಿವೆಪ್ಪ ಹುಲ್ಲೆನ್ನವರ ಭಜನಾ ಮೇಳದ ಪ್ರಮುಖ ಕಲಾವಿದನಾಗಿ ಗಮನ ಸೆಳೆದಿದ್ದಾನೆ. ಬೆಳಗಾವಿ ತಾಲೂಕಿನ ಬೆನ್ನಾಳಿ, ಗೋಕಾಕ ತಾಲೂಕಿನ ರಂಗಾಪೂರ, ಹೊಸಟ್ಟಿ, ಉದಗಟ್ಟಿ, ರಾಯಬಾಗ ತಾಲೂಕಿನ ಹಿಡಕಲ್, ಹುಕ್ಕೇರಿ ತಾಲೂಕಿನ ಕೊಟಬಾಗಿಗಳಲ್ಲಿ ಭಜನೆ ಮೇಳಗಳು ಈಗಲೂ ಕಾಣಸಿಗುತ್ತವೆ.

ವಾದ್ಯ ಪರಿಕರಗಳು

ರಂಗಭೂಮಿ ಎಂದಾಗ ವಾದ್ಯ ಮತ್ತು ವಾದ್ಯಪರಿಕರಗಳು ಮುಖ್ಯ. ಇವುಗಳಿಲ್ಲದೆ ರಂಗಭೂಮಿಯನ್ನು ಕಲ್ಪಿಸಿಕೊಳ್ಳಲು ಸಹ ಸಾಧ್ಯವಿಲ್ಲ. ವೃತ್ತಿರಂಗಭೂಮಿಯಿರಲಿ, ಜನಪದರಂಗ ಭೂಮಿಯಿರಲಿ, ಹವ್ಯಾಸಿರಂಗಭೂಮಿಯಿರಲಿ ಅಲ್ಲಿ ವಾದ್ಯ ಮತ್ತು ವಾದ್ಯಪರಿಕರಗಳು ಅತ್ಯಾವಶ್ಯಕವಾದವುಗಳು. "ಜನಪದ ಕಲೆಗಳಲ್ಲಿ ವಾದ್ಯಗಳಿಗೆ ಅಗ್ರ ತಾಂಬೂಲವಿದೆ. ಗಾಯನ ಪ್ರಧಾನ ಕಲೆಯಿರಲಿ, ನರ್ತನ ಪ್ರಧಾನ ಕಲೆಯಿರಲಿ ಅವುಗಳಿಗೆ 'ವಾದ್ಯ'ವೇ ಜೀವ–ಜೀವಾಳ. ಜನಪದ ವಾದ್ಯಗಳನ್ನು ಊದುವ ವಾದ್ಯ ಮತ್ತು ಬಾರಿಸುವ ವಾದ್ಯ.ಗಳೆಂದು ಸ್ಥೂಲವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು."[೨] ಕೆಲವು ವಾದ್ಯಗಳನ್ನು ಬಾಯಿಯಿಂದ ಊದಿ (ಉಸುರಿನ ಮೂಲಕ) ಸ್ವರವನ್ನು ಹೊರಡಿಸುತ್ತಾರೆ.

ಶಹನಾಯಿ, ಕೊಳಲು, ತುತ್ತೂರಿ, ಶಂಖ, ಸಾರಂಗ, ಪುಂಗಿ,ಕಹಳೆ, ಕೊಂಬು ಮುಂತಾದವುಗಳು ಊದುವ ವಾದ್ಯಗಳಾಗಿವೆ. ತಾಳ, ಸಮಾಳ, ತುಂತುಣಿ, ಡಪ್ಪು, ಕಣಿ, ದಮಡಿ,ಗಂಟೆ, ಜಾಗಟಿ, ಕರಡಿ, ದಿಮ್ಮು, ಹಲಗೆ, ರಣಹಲಗೆ, ಮದ್ದಳೆ, ಡೊಳ್ಳು,ಕೋಲು, ಏಕತಾರಿ,

ಜಾಂಜ್‌ಪಥಾಕ್ ಮುಂತಾದವುಗಳು ಕೈಗಳಿಂದ ಬಾರಿಸುವುದರಿಂದ ಅವುಗಳನ್ನು ಬಾರಿಸುವ ವಾದ್ಯಗಳೆನ್ನುವರು. ಹಾಗೆ "ವಾದ್ಯ ಪರಿಕರಗಳನ್ನು ಸೂಕ್ಷ್ಮವಾಗಿ ಚರ್ಮವಾದ್ಯಗಳು, ಕಾಷ್ಠ ವಾದ್ಯಗಳು, ತಂತಿವಾದ್ಯಗಳು, ಲೋಹವಾದ್ಯಗಳು ಮತ್ತು ಉಸಿರು ವಾದ್ಯಗಳು ಎಂದು ವಿಂಗಡಿಸಬಹುದು"[೬೩] ಎಂದು ಡಾ. ಅಶೋಕ ನರೊಡೆಯವರು ಸೂಚಿಸಿದ್ದಾರೆ.

ಚೆನ್ನದಾಸರ ಸಮುದಾಯದವರು ತಮ್ಮ ವೃತ್ತಿಗೆ ಅನುಕೂಲವೆನಿಸಿದ ವಾದ್ಯ ಪರಿಕರಗಳನ್ನು ಬಳಸುತ್ತಾರೆ. ತತ್ವಪದಕಾರರು, ಬಯಲಾಟ ಆಡುವವರು, ಹರಿಸ್ತೋತ್ರ ಮಾಡುವ ಆಧಾರದ ಮೇಲಿಂದ ಮೂರು ರೀತಿಯಾಗಿ ವಾದ್ಯ ಬಳಸುವುದನ್ನು ಕಾಣುತ್ತೇವೆ. ಹರಿಸ್ತೋತ್ರ ಮಾಡುತ್ತ ಭಿಕ್ಷಾವೃತ್ತಿ ಕೈಕೊಳ್ಳುವವರು ಶಂಖ, ಜಾಗಟೆ, ಭೋಂಕಿ(ಅಥವಾ ಚೆನ್ನು) ವಾದ್ಯಗಳನ್ನು ಸಾಮಾನ್ಯವಾಗಿ ಬಳಸುತ್ತಾರೆ. ತತ್ವಪದಕಾರರು ಏಕತಾರಿ, ತಂಬೂರಿ ಅಥವಾ ದಂಡಿಗೆಗಳನ್ನು ಮುಖ್ಯವಾಗಿ ಬಳಸುತ್ತಾರೆ. ಒಬ್ಬರೆ ಭಿಕ್ಷೆ ಬೇಡುವಾಗ, ಏಕತಾರಿ ಅಥವಾ ತಂಬೂರಿಯಿರುತ್ತದೆ. ಭುಜಕ್ಕೆ ಜೋತು ಬಿದ್ದಿರುವ ಜೋಳಿಗೆ, ಕೈಯಲ್ಲಿ ಏಕತಾರಿ ಹಿಡಿದಿರುತ್ತಾರೆ. ಮೂರು ಜನ ಸೇರಿ ಒಟ್ಟಾಗಿ ಭಿಕ್ಷಾಟನೆ ಮಾಡುತ್ತಿದ್ದರೆ, ಒಬ್ಬರು ಏಕತಾರಿ, ಮತ್ತೊಬ್ಬ ಶಂಖ, ಮಗದೊಬ್ಬರು ಜಾಗಟೆಯನ್ನು ಹಿಡಿದಿರುತ್ತಾರೆ. ತಂಬೂರಿ ನುಡಿಸುವಾತ ಹಾಡುತ್ತಿದ್ದರೆ, ಉಳಿದವರಿಬ್ಬರು ತಮ್ಮ ತಮ್ಮ ವಾದ್ಯಗಳನ್ನು ನುಡಿಸುತ್ತ ಕೊನೆಯಲ್ಲಿ ಹಾಡಿನ ಪಲ್ಲವಿ ಹೇಳುತ್ತ, ಸಂದರ್ಭಕ್ಕನುಸಾರವಾಗಿ ಶಂಖ ಊದುವ, ಜಾಗಟೆ ಬಾರಿಸುವುದನ್ನು ಮಾಡುತ್ತಾರೆ. ಸವದತ್ತಿ ತಾಲೂಕಿನ ಹಂಚನಾಳ ಗ್ರಾಮದ ಭೀಮಶಿ ರಂಗಪ್ಪ ಚೆನ್ನದಾಸರ ಹಾಗೂ ಮಾನಪ್ಪ ಕೃಷ್ಣಪ್ಪ ಚೆನ್ನದಾಸರ ಇವರಿಬ್ಬರು ಖ್ಯಾತ ತತ್ವಪದ ಹಾಡುಗಾರರು ಹಾಗೂ ಗೀಗೀಪದ ಹಾಡುಗಾರರಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ.

ಬಯಲಾಟವಾಡುವಾಗ, ದಾಸರಾಟ, ಶ್ರೀಕೃಷ್ಣಪಾರಿಜಾತ ಯಾವುದೆ ಇದ್ದರೂ ಪೇಟಿ,(ಹಾರ್ಮೋನಿಯಂ) ತಬಲಾ, ಡಪ್ಪು, ಕೈತಾಳ ಪ್ರಮುಖ ವಾದ್ಯಪರಿಕರಗಳನ್ನು ಬಳಸುತ್ತಾರೆ ಈ ಮೂರು ಬಗೆಯ ವಾದ್ಯಗಳನ್ನು ಬಳಸುವ ಕಲಾವಿದರು ಬೆಳಗಾವಿ ಜಿಲ್ಲೆಯ ವಿವಿಧ ಮೇಳಗಳಲ್ಲಿ ದೊರೆಯುತ್ತಾರೆ. "ಚೆನ್ನದಾಸರ ಸಮುದಾಯದ ವಾದ್ಯಗಳನ್ನು ಶೃತಿ ವಾದ್ಯಗಳಲ್ಲಿ–ತಂತಿ ವಾದ್ಯಗಳಾದ ಏಕತಾರಿ, ದಂಡಿಗೆ, ತಂಬೂರಿ. ಇನ್ನೊಂದು ರೀತಿಯ ಶೃತಿ ವಾದ್ಯ ಪೇಟಿ ಅಥವಾ ಹಾರ್ಮೋನಿಯಂ, ಗಾಳಿ ವಾದ್ಯಗಳಲ್ಲಿ ಶಂಖ, ಚೆನ್ನು ಅಥವಾ ಬೋಂಕಿ. ಲೋಹವಾದ್ಯಗಳಲ್ಲಿ ಡಪ್ಪು, ದಮ್ಮಡಿ, ಚಕ್ರವಾದ್ಯ, ಮೃದಂಗ"[೬೪] ವೆಂದು ನಾಲ್ಕು ರೀತಿಯಲ್ಲಿ ವಿಂಗಡಿಸಿರುವುದನ್ನು ಕಾಣುತ್ತೇವೆ.

ಬೆಳಗಾವಿ ಜಿಲ್ಲೆಯ ಚೆನ್ನದಾಸರು ಭಿಕ್ಷಾಟನೆ ಸಂದರ್ಭದಲ್ಲಿ ಮತ್ತು ಆಟ–ಬಯಲಾಟ ಪ್ರದರ್ಶನದಲ್ಲಿ ಈ ವಾದ್ಯಪರಿಕರಗಳನ್ನು ಬಳಸುತ್ತಾರೆ. ಆಧುನಿಕ ಜೀವನ ಶೈಲಿಯ

ಒತ್ತಡಗಳಿದ್ದಾಗಲೂ, ಜಾಗತೀಕರಣದ ಪ್ರಭಾವವಿದ್ದರೂ ಈ ಸಮುದಾಯ ಪರಂಪರಾಗತ ವಾದ್ಯ ಪರಿಕರಗಳನ್ನು ಬಳಸುತ್ತಿರುವುದು ವಿಶೇಷವಾಗಿದೆ. ಒಂದು ಬದಲಾದ ಕಾಲಕ್ಕೆ ಸ್ಪಂದಿಸದಿರುವುದು, ಹಳೆಯ ಪರಂಪರಾಗತ ಆಚರಣೆಗಳಿಂದ ಹೊರಬಾರದಿರುವುದು ಸಮುದಾಯದ ಮುಗ್ಧತೆಯನ್ನು ಸೂಚಿಸುತ್ತದೆ.

ಪ್ರಸ್ತುತ ಅಧ್ಯಾಯದಲ್ಲಿ ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ವೈಶಿಷ್ಟ್ಯತೆಗಳನ್ನು ದಾಖಲಿಸಲಾಗಿದೆ. ಈ ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯನ್ನು ಚರ್ಚಿಸಿ, ಸದರಿ ಸಮುದಾಯದ ಪ್ರಸಾರದ ನೆಲೆಗಳನ್ನು ಗುರುತಿಸಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಕಂಡುಕೊಂಡ ಬಳಿ ಅಥವಾ ಬೆಡಗುಗಳನ್ನು ನಿರುಪಿಸಲಾಗಿದೆ. ಈ ಸಮುದಾಯದ ಜನಸಂಖ್ಯೆ, ಸಾಕ್ಷರತಾ ಪ್ರಮಾಣವನ್ನು ಅಂಕಿ–ಅಂಶಗಳ ಮುಖಾಂತರ ದಾಖಲಿಸಲಾಗಿದೆ. ಸಾಂದರ್ಭಿಕವಾಗಿ ಕೋಷ್ಠಕಗಳನ್ನು ಅಳವಡಿಸಲಾಗಿದೆ. ಚೆನ್ನದಾಸರ ಸಮುದಾಯದ ಸಾಹಿತ್ಯವನ್ನು ಪರಿಚಯಿಸುತ್ತ ಅವರ ಭಾಷೆ, ಹಾಡು, ಕಥೆ, ಗಾದೆಮಾತುಗಳು, ನಂಬಿಕೆಗಳು, ಹಚ್ಚೆ, ಮತ್ತು ರಂಗಭೂಮಿಯ ಚಟುವಟಿಕೆಗಳನ್ನು ವಿವೇಚನೆಗೆ ಒಳಪಡಿಸಲಾಗಿದೆ. ಒಟ್ಟಾರೆ, ಸದರಿ ಸಮುದಾಯದ ವೈಶಿಷ್ಟ್ಯತೆಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಕಟ್ಟಿಕೊಡಲಾಗಿದೆ.

ಟಿಪ್ಪಣಿಗಳು

----

೧. ಲಕ್ಕಪ್ಪಗೌಡ ಜೆ. ಎಚ್. 'ಜಾನಪದ ಕೈಪಿಡಿ', ಪುಟ–೫೧೬, ೧೯೯೭

೨. ಲಕ್ಕಪ್ಪಗೌಡ ಜೆ. ಎಚ್. 'ಜಾನಪದ ಕೈಪಿಡಿ', 'ಸಮುದಾಯ', ಪುಟ–೫೧೮, ೧೯೯೭

೩. ಹಿಮ್ಮಡಿ ಯಲ್ಲಪ್ಪ–'ಚೆನ್ನದಾಸರ', ಪುಟ–೧೭, ೨೦೦೮

೪. ಹಿರೇಮಠ ಎಸ್.ಎಸ್.– 'ಕೆಳವರ್ಗದ ಚರಿತ್ರೆ', ಪುಟ–೧೨, ೨೦೦೧

೫. ಹಿಮ್ಮಡಿ ಯಲ್ಲಪ್ಪ– 'ಚೆನ್ನದಾಸರ', ಪುಟ–೨೨, ೨೦೦೮

೬. ಮುಂಬಯಿ ಗೆಝೆಟಿಯರ್(ಕರ್ನಾಟಕ ಭಾಗ), ೧೯೮೪

೭. ಹಿಮ್ಮಡಿ ಯಲ್ಲಪ್ಪ– 'ಚೆನ್ನದಾಸರ', ಪುಟ–೧೯, ೨೦೦೮

೮. ಮಲಶೆಟ್ಟಿ ಬಸವರಾಜ– 'ಜಾನಪದ ಕೈಪಿಡಿ– 'ದಾಸರಾಟ', ಪುಟ–೨೫೭, ೧೯೯೭

೯. ಗೋಳಸಂಗಿ ಅರ್ಜುನ– 'ದಲಿತ ಲೋಕದ ಶೋಧ–ಜಾನಪದೀಯ ಅಧ್ಯಯನ',
ಪುಟ–೩೯, ೧೯೯೮

೧೦. ಅಯ್ಯರ ಅನಂತಕೃಷ್ಣನ್– 'ದಿ ಮೈಸೂರ್ ಟ್ರೈಬ್ಸ್ ಆಂಡ್ ಕಾಸ್ಟ್', ೧೯೯೮

೧೧. ಹಿಮ್ಮಡಿ ಯಲ್ಲಪ್ಪ– 'ಚೆನ್ನದಾಸರ', ಪುಟ–೨೫, ೨೦೦೮

೧೨. ಅದೇ, ಪುಟ–೨೫

೧೩. ಅದೇ, ಪುಟ–೨೯

೧೪. ಧೂಪದ ಎಂ.ಟಿ.–'ಕರ್ನಾಟಕ ಜನಪದ ರಂಗಭೂಮಿ', ಪುಟ–೨೧೬–೧೭, ೧೯೭೧

೧೫. ಗೋಳಸಂಗಿ ಅರ್ಜುನ–'ದಲಿತ ಲೋಕದ ಶೋಧ:ಜನಪದೀಯ ಅಧ್ಯಯನ',
ಪುಟ–೩೫, ೧೯೯೮

೧೬. ಧೂಪದ ಎಂ.ಟಿ.–'ಕರ್ನಾಟಕ ಜನಪದ ರಂಗಭೂಮಿ', ಪುಟ–೨೧೭, ೧೯೭೧

೧೭. ಗುಂಜೆಟ್ಟಿ ಬಿ. ವ್ಹಿ.–ಜನಪದ ಸಾಹಿತ್ಯ ದರ್ಶನ, ಭಾಗ–೭, ಪುಟ–೮೫, ೧೯೮೬

೧೮. ಉಡುಪ ಯಜ್ಞನಾರಾಯಣ–'ಪುರಾಣ ಭಾರತ ಕೋಶ', ಪುಟ–೨, ೧೯೮೧

೧೯. ಸುಂಕಾಪೂರ ಎಂ.ಎಸ್.(ಸಂ),– 'ಜಾನಪದ ಸಾಹಿತ್ಯ ದರ್ಶನ', ಪುಟ–೮೬,

೨೦. ಅದೇ, ಪು–೮೬

೨೧. ಹಿಮ್ಮಡಿ ಯಲ್ಲಪ್ಪ– 'ಚೆನ್ನದಾಸರ', ಪುಟ–೩೨, ೨೦೦೮

೨೨. ಚಂದ್ರಗುಪ್ತ ಅ. ರಾ.–'ಭಾರತದ ಗೆಝೇಟಿಯರ್', –೨

೨೩. ಧೂಪದ ಎಂ.ಟಿ.–'ಕರ್ನಾಟಕ ಜನಪದ ರಂಗಭೂಮಿ', ಪುಟ–೨೧೬, ೧೯೭೧

೨೪. ಅದೇ, ಪುಟ–೨೧೭

೨೫. ಅದೇ, ಪುಟ–೨೧೭

೨೬. ಹಕಾರಿ ದೇವೇಂದ್ರಕುಮಾರ–'ಜಾನಪದ ಸಾಹಿತ್ಯ ದರ್ಶನ' ಪುಟ–೧೭, ೧೯೮೭

೨೭. ಬಿಳಿಮಲೆ ಪುರುಷೋತ್ತಮ–'ದಲಿತ ಜಗತ್ತು', ಪುಟ–೫, ೧೯೮೯

೨೮. ಬಾಬಾಸಾಹೇಬ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು, ಸಂ–೭, ಪುಟ–೪೦೫–೦೬, ಕ.ಸಂ.ಇ., ೧೯೯೧

೨೯. ಅದೇ, ಪುಟ–೪೦೬

೩೦. ಅದೇ, ಪುಟ–೪೦೬

೩೧. ಹಿಮ್ಮಡಿ ಯಲ್ಲಪ್ಪ–'ಚೆನ್ನದಾಸರ, ಪುಟ–೫೯, ೨೦೦೮

೩೨. ಇದು ಮೂಲ ಕಂಚಿನ ಪತ್ರದಲ್ಲಿತ್ತು. ೨೦೦೭ರ ಸಮೀಕ್ಷೆಯ ಪ್ರಕಾರ ಹೊನ್ನಹುಲ್ಲೆನ್ನವರ ಬೆಡಗಿನವರನ್ನು ಹುಲ್ಲೆನ್ನವರ ಪುಲ್ಲೋಳ್ಳು ಎಂದು ದಾಖಲಿಸಿರುವುದು ಗಮನಾರ್ಹವಾಗಿದೆ.

೩೩. ಹಿಮ್ಮಡಿ ಯಲ್ಲಪ್ಪ–'ಚೆನ್ನದಾಸರ', ಪುಟ–೬೮, ೨೦೦೮

೩೪. ಪ್ರಭಾಕರ ಎ.ಎಸ್–'ಹೆಳವರು', (ಅಲೆಮಾರಿ ಸಮುದಾಯಗಳ ಅಧ್ಯಯನ ವರದಿ), ಪುಟ–೪೬, ೨೦೧೦

೩೫. ೨೦೧೧ರಲ್ಲಿ ಕ್ಷೇತ್ರ ಕಾರ್ಯ ಕೈಕೊಂಡ ಸಂದರ್ಭದಲ್ಲಿ ಲಭಿಸಿರುವ ಅಂಕಿ–ಅಂಶಗಳು

೩೬. ಹಿಮ್ಮಡಿ ಯಲ್ಲಪ್ಪ–'ಚೆನ್ನದಾಸರ', ಪುಟ–೧೭೨, ೨೦೦೮

೩೭. ಅದೇ, ಪುಟ–೧೭೩

೩೮. ಥರ್ಸ್ಟನ್–'ಎಥ್ನೋಗ್ರಾಫಿಕ್ ನೋಟ್ಸ್ ಆನ್ ಸೌಥರ್ನ ಇಂಡಿಯಾ', ಪುಟ–೧೧೮, ೧೯೦೬, ೧೯೭೫,

೩೯. ಗೊಳಸಂಗಿ ಅರ್ಜುನ–'ದಲಿತ ಲೋಕದ ಶೋಧ : ಜನಪದೀಯ ಅಧ್ಯಯನ', ಪುಟ–೩೭, ೧೯೯೮

೪೦. ಹಿಮ್ಮಡಿ ಯಲ್ಲಪ್ಪ–'ಚೆನ್ನದಾಸರ', ಪುಟ–೧೩೩, ೨೦೦೮

೪೧. ಮೇತ್ರಿ ಕೆ. ಎಂ.–'ಮರಗು ಭಾಷೆ', ಪುಟ–೨೬, ೨೦೦೨

೪೨. ಮಹಿಷವಾಡಿ ಬಿ.ಬಿ.–'ಕನ್ನಡ ಜಾನಪದ ಸಾಹಿತ್ಯ', ಪುಟ–೨೪, ೧೯೬೨

೪೩. ಗುಂಜೆಟ್ಟಿ ಬಿ.ವ್ಹಿ.– 'ಜಾನಪದ ಸಾಹಿತ್ಯ ದರ್ಶನ', ಭಾಗ–೬, ಪುಟ–೧೩, ೧೯೮೬

೪೪. ಮಹಿಷವಾಡಿ ಬಿ.ಬಿ.– 'ಕನ್ನಡ ಜಾನಪದ ಸಾಹಿತ್ಯ', ಪುಟ–೨೪, ೧೯೭೮

೪೫. ಮೈಸೂರು : ದೊಂಬಿದಾಸರ ಕ್ಷೇಮಾಭಿವೃದ್ಧಿ ಸಂಘ, ಪುಟ–೨೫, ೨೦೦೩

೪೬. ಪರಶಿವಯ್ಯ ಜಿ.ಶಂ.– 'ದೊಂಬಿದಾಸರ ಲಾವಣಿಗಳು' ಪುಟ–೨೪, ೧೯೮೧

೪೭. ಅದೇ, ಪುಟ–೨೬೨

೪೮. ಹಿಮ್ಮಡಿ ಯಲ್ಲಪ್ಪ–'ಚೆನ್ನದಾಸರ', ಪುಟ–೧೩೦, ೨೦೦೮

೪೯. ಲಕ್ಕಪಗೌಡ 'ಜಾನಪದ ಕೈಪಿಡಿ', ಪುಟ–೯೬–೯೭, ೧೯೯೭

೫೦. ಮಾಹಿತಿದಾರರಿಂದ ಸಂಗ್ರಹಿಸಲಾಗಿದೆ.

೫೧. ಲಕ್ಕಪಗೌಡ 'ಜಾನಪದ ಕೈಪಿಡಿ', ಪುಟ–೯೮, ೧೯೯೭

೫೨. ಜವರೇಗೌಡ ದೇ.– 'ಜಾನಪದ ಅಧ್ಯಯನ', ಪುಟ–೩೪೨, ೧೯೮೬

೫೩. ಹಿಮ್ಮಡಿ ಯಲ್ಲಪ್ಪ, 'ಚೆನ್ನದಾಸರ', ಪುಟ–೧೦೦, ೨೦೦೮

೫೪. ಮಾಹಿತಿದಾರರಿಂದ ತಿಳಿದು ಬಂದ ಸಂಗತಿಯಿದು

೫೫. ಡಾ.ಹಿಮ್ಮಡಿ ಯಲ್ಲಪ್ಪ– 'ಚೆನ್ನದಾಸರ', ಪುಟ–೧೦೩, ೨೦೦೮

೫೬. ರಂಗನಾಥ ಕೆ.ಎಚ್.–'ಕನ್ನಡ ನಾಟಕ ಕಲೆ', ಪುಟ–೨೫, ೧೯೭೨

೫೭. ಧೂಪದ ಎಂ.ಟಿ.–'ಕರ್ನಾಟಕ ಜನಪದ ರಂಗಭೂಮಿ', ಪುಟ–೨೧೯–೨೨೦, ೧೯೭೧

೫೮. ಕಂಬಾರ ಚಂದ್ರಶೇಖರ.–'ಕನ್ನಡ ಜನಪದ ವಿಶ್ವಕೋಶ' ಪುಟ–೨೭, ೧೯೮೫

೫೯. ಗುಂಜೆಟ್ಟಿ ಬಿ.ವ್ಹಿ.–'ಜಾನಪದ ಸಾಹಿತ್ಯ ದರ್ಶನ', ಪುಟ–೯೬, ೧೯೮೦

೬೦. ಗೊಳಸಂಗಿ ಅರ್ಜುನ–'ದಲಿತಲೋಕದ ಶೋಧ–ಜನಪದೀಯ ಅಧ್ಯಯನ', ಪುಟ–೩೮, ೧೯೯೮

೬೧. ಹಿಮ್ಮಡಿ ಯಲ್ಲಪ್ಪ–'ಚೆನ್ನದಾಸರ', ಪುಟ–೧೪೭, ೨೦೦೮

೬೨. ನರೋಡೆ ಅಶೋಕ–'ಜನಪದ ವಸುಧಾವಲಯಂ', ಪುಟ–೯೫, ೨೦೧೦

೬೩. ಅದೇ, ಪುಟ–೯೬.

೬೪. ಹಿಮ್ಮಡಿ ಯಲ್ಲಪ್ಪ–'ಚೆನ್ನದಾಸರ', ಪುಟ–೧೬೦, ೨೦೦೮

ಅಧ್ಯಾಯ ನಾಲ್ಕು

ಚೆನ್ನದಾಸರ ಸಮುದಾಯದ ದೈವಗಳು–ಸಾಮಾಜಿಕ ಜೀವನ ವಿಧಾನ

ಹಾಗೂ

ಆರ್ಥಿಕ–ರಾಜಕೀಯ ಸ್ಥಿತಿಗತಿ

ಅ) ಚೆನ್ನದಾಸರ ಸಮುದಾಯದ ದೈವಗಳು–ಸಾಮಾಜಿಕ ಜೀವನ ವಿಧಾನ

೪.೧. ದೈವಗಳು

೪.೨. ಹಬ್ಬಗಳು

೪.೨.೧ ಯುಗಾದಿ

೪.೨.೨. ನಾಗರ ಪಂಚಮಿ

೪.೨.೩. ವಿಜಯದಶಮಿ (ದಸರಾ)

೪.೨.೪. ದೀಪಾವಳಿ

೪.೨.೫. ಹಿರಿಯರ ಹಬ್ಬ

೫.೨.೬. ಮಸುಬಾಸಾಮಾಜಿಕ ಜೀವನ ವಿಧಾನ

೪.೩. ಸಂಪ್ರದಾಯಗಳು

೪.೩.೧. ಜನನ

೪.೩.೨. ನಾಮಕರಣ

೪.೩.೩. ಜವುಳ ತೆಗೆಸುವುದು

೪.೩.೪. ಋತುಮತಿ (ದೊಡ್ಡವಳಾಗುವುದು)

೪.೩.೫. ಮದುವೆ

೪.೩.೬ ಸೀಮಂತ

೪.೩.೭. ಮರಣ

೪.೪. ಆಚರಣೆಗಳು

೪.೫. ನ್ಯಾಯ ಪದ್ಧತಿ

೪.೫.೧. ನ್ಯಾಯ ಪಂಚಾಯತಿ

೪.೫.೨. ಪಂಚಾಯತಿಯ ಜವಾಬ್ದಾರಿ

೪.೫.೩. ನ್ಯಾಯ ನಿರ್ಣಯದ ತೀರ್ಪುಗಳು

೪.೫.೪. ಶಿಕ್ಷೆಯ ವಿಧಾನಗಳು

೪.೫.೫. ಮೂಲ ನ್ಯಾಯ ಸ್ಥಾನದೊಡನೆ ಸಂಪರ್ಕ

೪. ೬. ವೈದ್ಯ ಪದ್ಧತಿ

೪. ೭. ವೇಷ ಭೂಷಣಗಳು

ಬ) ಚೆನ್ನದಾಸರ ಸಮುದಾಯದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ

ಆರ್ಥಿಕ ಸ್ಥಿತಿಗತಿ

೪.೮. ಕಸುಬುಗಳು

೪.೮.೧. ಭಿಕ್ಷಾಟನೆ

೪.೮.೨. ಬೇಟೆಯಾಡುವುದು

೪.೮.೩. ಕೌದಿ ಹೊಲಿಯುವದು

೪.೮. ೪. ಕೂಲಿ

೪.೯. ಉಪಕಸುಬುಗಳು

೪.೧೦. ಇತರ ಕಸುಬುಗಳು

೪.೧೧. ಉದ್ಯೋಗ

೪.೧೨. ರಾಜಕೀಯ

೪.೧೨.೧. ಮತದಾರರಾಗಿ ಬಲವರ್ಧನ

೪.೧೨.೨. ಪ್ರಜ್ಞೆ ಮತ್ತು ಪ್ರಯತ್ನ

ಅಧ್ಯಾಯ ನಾಲ್ಕು

ಚೆನ್ನದಾಸರ ಸಮುದಾಯದ ದೈವಗಳು–ಸಾಮಾಜಿಕ ಜೀವನ ವಿಧಾನ

ಹಾಗೂ

ಆರ್ಥಿಕ–ರಾಜಕೀಯ ಸ್ಥಿತಿಗತಿ

ಅ) ಚೆನ್ನದಾಸರ ಸಮುದಾಯದ ದೈವಗಳು–ಸಾಮಾಜಿಕ ಜೀವನ ವಿಧಾನ

ಪ್ರತಿಯೊಂದು ಸಮುದಾಯಕ್ಕೆ ತನ್ನದೆ ಆದ ದೈವಗಳು, ದೇವರು, ಆಚರಣೆಗಳು ಇರುತ್ತವೆ. ದೇವರು, ದೇವರ ಕುರಿತಾದ ನಂಬಿಕೆ, ವಿಶಿಷ್ಟ ಆಚರಣೆಗಳ ಮೂಲಕ ಸಮುದಾಯದ ತನ್ನ ಅಸ್ಮಿತೆ ಮತ್ತು ಅನನ್ಯತೆಗಳನ್ನು ಕಾಪಾಡಿಕೊಂಡು ಬರುತ್ತದೆ. ಬಿದ್ದವರನ್ನು ಮೇಲೆತ್ತುವುದೇ ನಿಜವಾದ ದೈವಗಳು. ದೈವಗಳು ಎಂಬುದು ವಿಶಾಲ ಅರ್ಥ ವ್ಯಾಪ್ತಿಯುಳ್ಳ ಪದವಾಗಿದೆ. ಪ್ರಕೃತಿಯಲ್ಲಾಗುವ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿದ ಮಾನವ, ಅವುಗಳ ಹಿಂದೆ ಯಾವುದೋ ಅಗೋಚರ ಶಕ್ತಿ ಇದೆಯೆಂದು ನಂಬುತ್ತ ಬಂದಿದ್ದಾನೆ. ಅಗೋಚರ ಶಕ್ತಿಯನ್ನೆ ನಂಬಿ ಭಯ ಭಕ್ತಿಯಿಂದ ಆರಾಧಿಸುತ್ತ ಬಂದಿದ್ದಾನೆ. ಭಯದಿಂದಾಗಿಯೇ ಆತನಲ್ಲಿ ಭಕ್ತಿಯುಂಟಾಗಿದೆ. ಭಕ್ತಿಯು ತನ್ನನ್ನು ರಕ್ಷಿಸುವ ಸಾಧನವೆಂದು ತಿಳಿದ ಆ ಕಲ್ಪನೆಯೇ ಹಲವು ಬಗೆಯ ಚಿಂತನೆಗೆ ದಾರಿ ಮಾಡಿತು. ಹೀಗೆಯೆ ಭಯ ಮೂಲವಾಗಿ ಬೆಳದು ಬಂದ ಭಕ್ತಿ ಧರ್ಮದ ಆಸರೆ ಪಡೆಯಿತು.

ದೈವ ಅನಾಧಿಕಾಲದಿಂದಲೂ ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿದೆ. ಆಯಾ ಸಂಸ್ಕೃತಿಯ ಭಾಗವಾಗಿದೆ. ಲೌಕಿಕ ಮತ್ತು ಪಾರಲೌಕಿಕಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸಿದೆ. ವ್ಯಕ್ತಿ ಅಥವಾ ಸಮುದಾಯ ನಂಬಿರುವ ಮೋಕ್ಷ ಸಾಧನೆಯ ದಾರಿಯೇ ದೈರ್ವವೆಂದು ತಿಳಿಯಲಾಗಿದೆ. ಧಾರ್ಮಿಕ ಉಪಾಸನೆ ಮಾನವನನ್ನು ಇಹದ ಬದುಕಿನಿಂದ ಮುಕ್ತಗೊಳಿಸುವುದೆಂಬ ನಂಬಿಕೆ ಬಲವತ್ತರವಾಗಿದೆ. ಧರ್ಮ ಪದವನ್ನು ಸಾಮಾನ್ಯ ಅರ್ಥದಲ್ಲಿ ಬಳಸಲಾಗಿದ್ದರೂ ಅದು ಸೀಮಿತ ಅರ್ಥಕ್ಕೆ ನಿಲ್ಲದೆ ವಿಶಾಲಾರ್ಥದಲ್ಲಿ ಅನಾವರಣಗೊಳ್ಳುತ್ತದೆ.

ಒಂದು ಸಮುದಾಯ ಒಪ್ಪಿಕೊಂಡಿರುವ ವೈವಿಧ್ಯಮಯವಾದ ಕಟ್ಟುಪಾಡುಗಳು, ಆಚಾರ-ವಿಚಾರಗಳು, ಜಾತ್ರೆ-ಉತ್ಸವಗಳು, ಆರಾಧನೆಗಳು ಇತ್ಯಾದಿಗಳ ಹಿಂದೆ ದೈವಗಳ ಅಂಶ ಕಾರ್ಯ ನಿರ್ವಹಿಸುತ್ತದೆ. ಯಾವ ಕಾನೂನು ಕಟ್ಟಳೆಗಳು ಮಾಡಲಾಗದ್ದನ್ನು ಧಾರ್ಮಿಕ ನಂಬಿಕೆ ಸಹಜವಾಗಿ ನೇರವೇರಿಸಬಲ್ಲದು. ದೈವದ ಮೇಲಿರುವ ನಂಬಿಕೆಯ ಕಾರಣವಾಗಿಯೇ ಮಾನವ ಸರಿದಾರಿಯಲ್ಲಿದ್ದಾನೆ. ಈ ಮಾತು ಎಲ್ಲ ಸಮುದಾಯಗಳಿಗೂ ಅನ್ವಯಿಸುತ್ತದೆ.

ದೈವವು ಅನಾಧಿಕಾಲದಿಂದಲೂ ಸಮುದಾಯವನ್ನು ಮುನ್ನಡೆಸುತ್ತ ಬಂದಿದೆ. ಅದರಲ್ಲೂ ವಿಶೇಷವಾಗಿ ಬುಡಕಟ್ಟುಗಳಲ್ಲಿ ದೈವ-ದೈವಾರಾಧನೆ, ದೇವರು ಧಾರ್ಮಿಕ ವಿಚಾರಗಳಲ್ಲಿ ಗಾಢವಾದ ನಂಬಿಕೆ ಇದೆ. ತಮ್ಮನ್ನು ಕಾಪಾಡುವ, ಕಷ್ಟಗಳಲ್ಲಿ ಸಂರಕ್ಷಿಸುವ, ಒಳ್ಳೆಯ ಬದುಕನ್ನು ಕರುಣಿಸುವುದು ತಮ್ಮ ಕುಲದೈವವೆಂದು ಬಡಕಟ್ಟು ಸಮುದಾಯಗಳು ನಂಬಿವೆ. ಧಾರ್ಮಿಕ ಉತ್ಸವಗಳನ್ನು ಭಕ್ತಿ-ಶ್ರದ್ಧೆಯಿಂದ ಆಚರಿಸುತ್ತ ಬಂದಿರುವುದನ್ನು ಕಾಣುತ್ತೇವೆ. ಇಂತಹ ಧಾರ್ಮಿಕ ಚಟುವಟಿಕೆಗಳಲ್ಲಿ ನಂಬಿಕೆಯಿರಿಸಿದ ಸಮುದಾಯಗಳಲ್ಲಿ ಚೆನ್ನದಾಸರ ಸಮುದಾಯವು ಒಂದಾಗಿದೆ.

೪.೧. ದೈವಗಳು

ದಾಸರೆಲ್ಲರೂ ವೈಷ್ಣವ ದೈವವನ್ನು ಅನುಸರಿಸುತ್ತಾರೆ. ತಿರುಪತಿ ತಿಮ್ಮಪ್ಪ, ನರಸಿಂಹ ಮತ್ತು ಹನುಮಂತ ಮುಂತಾದ ವಿಷ್ಣು ಪರವಾದ ದೇವತೆಗಳನ್ನು ಆರಾಧಿಸುತ್ತಾರೆ. ಸನಾತನಿಗಳು ವೈಷ್ಣವ ಪುರೋಹಿತರೆ ಇವರಿಗೆ ಗುರುಗಳು. ಅವರು ಹೇಳಿ ಕೊಟ್ಟ ಅಷ್ಟಾಕ್ಷರ ಸ್ತೋತ್ರ ಪಠಿಸುತ್ತಾರೆ. ಶಂಕ-ಚಕ್ರಗಳ ಮುದ್ರೆಗಳನ್ನು ದೇಹದ ಮೇಲೆ ಧರಿಸುತ್ತಾರೆ. ತುಳಸಿಮಣಿ, ಜಪಮಾಲೆಗಳನ್ನು ಗುರುಗಳಿಂದ ಸ್ವೀಕರಿಸುತ್ತಾರೆ. ಪುರೋಹಿತರಿಗೆ ಪ್ರಿಯವಾದ ಮಂಗ, ಗರುಡ, ಜಿಂಕೆ, ಅಳಿಲುಗಳನ್ನು ಪೂಜಿಸುತ್ತಾರೆ. ಇವುಗಳ ಶವವನ್ನು ಕಂಡರೆ ಅವುಗಳನ್ನು ವಿಧಿವತ್ತಾಗಿ ಸಂಸ್ಕಾರ ಮಾಡುತ್ತಾರೆ. ಭಕ್ತಿಯಿಂದ ಅಂತ್ಯ ವಿಧಿ ಪೂರೈಸುತ್ತಾರೆ. ಇವರಿಗೆ ಶನಿವಾರ ಅತ್ಯಂತ ಪವಿತ್ರವಾದ ವಾರವಾಗಿದೆ. ಅಂದು ಸ್ನಾನ ಮಾಡಿ ಶುಚಿರ್ಭೂತರಾಗಿ ದೇವರನ್ನು ಪೂಜಿಸುತ್ತಾರೆ. ಗರುಡಗಂಭ ಮತ್ತು ಇನ್ನುಳಿದ ಸಂಕೇತಗಳನ್ನು ಧರಿಸಿ ಅನ್ನದ ನೈವೇದ್ಯವನ್ನು ಸಮರ್ಪಿಸುತ್ತಾರೆ. ಶನಿವಾರ ಉಪವಾಸ ವ್ರತ ಮಾಡುವುದು, ಒಪ್ಪತ್ತು ಮಾಡುವ ವಾಡಿಕೆಯೂ ಇದೆ. ಶಂಕ, ಚಕ್ರ, ಗರುಡಗಂಭ ಮತ್ತು ದೇವರುಗಳ ಸಾಕ್ಷಿಯಾಗಿ ಪ್ರಮಾಣ ಮಾಡುವ ಪರಿಪಾಠವಿದೆ.

ದೈವಗಳು

ಚೆನ್ನದಾಸರ ಸಮುದಾಯದಲ್ಲಿ ಎರಡು ರೀತಿಯ ದೈವಗಳ ಆರಾಧನೆ ನಡೆಯುತ್ತದೆ. ಮೊದಲು ಮನೆ ದೇವರು ನಂತರ ಕುಲದೇವರು. ಮನೆ ದೇವರನ್ನಾಗಿ ಸ್ತ್ರೀ ದೇವತೆಗಳನ್ನು ಪೂಜಿಸುತ್ತಾರೆ. ಯಲ್ಲಮ್ಮ, ದುರಗಮ್ಮ, ಮಾರಮ್ಮ, ಮರುಗಮ್ಮ, ತಾಯವ್ವ, ಭಾಗಮ್ಮ, ಉದ್ದವ್ವ ಮತ್ತು ಹುಲಿಗೆಮ್ಮ ಇವು ಚೆನ್ನದಾಸರ ಸಮುದಾಯದವರ ಮನೆ ದೇವತೆಗಳು. ಈ ಸಮುದಾಯದವರಲ್ಲಿ ಮಾತೃ ದೇವತೆಗಳ ಆರಾಧನೆಯಿದೆ. ಮಾತೃ ದೇವತೆಗಳ ಆರಾಧನೆಯು ಆದಿಮ ಸಂಸ್ಕೃತಿಯ ಲಕ್ಷಣಗಳಲ್ಲಿ ಒಂದಾಗಿದೆ. ಮಂಗಳವಾರ ಮತ್ತು ಶುಕ್ರವಾರ ಈ ದೇವತೆಗಳ ಆರಾಧನೆಯ ದಿನಗಳೆಂದು ಪರಿಗಣಿಸುತ್ತಾರೆ. ಗೌರಿಹುಣ್ಣಿಮೆಯ ಸಂದರ್ಭದಲ್ಲಿ ಜಾತ್ರೆಗಳು ಜರುಗುತ್ತವೆ. ಈ ಹುಣ್ಣಿಮೆಗಳು ವಿಶೇಷ ಹುಣ್ಣಿಮೆಗಳೆಂದು ತಿಳಿದಿರುವುದೆ ಜಾತ್ರೆ, ಉತ್ಸವಗಳ ಸಂಘಟನೆಗೆ ಮೂಲ ಪ್ರೇರಣೆಯಾಗಿದೆ. ಜಾತ್ರೆಯಲ್ಲಿ ಚೆನ್ನದಾಸರ ಸಮುದಾಯದವರು ಇತರ ಸಮುದಾಯದವರಂತೆಯೇ ಹುಟಗಿ ಉಡುತ್ತಾರೆ.

ಸ್ತ್ರೀ ದೇವತೆಗಳಿಗೆ ಪ್ರಾಣಿ ಬಲಿಕೊಡುವ ಸಂಪ್ರದಾಯ ಜಾರಿಯಲ್ಲಿದೆ. ವರ್ಷಕ್ಕೊಮ್ಮೆ ಅಥವಾ ಮೂರು ವರ್ಷಕ್ಕೊಂದು ಬಾರಿ ಪ್ರಾಣಿ ಬಲಿ ನಡೆಯುತ್ತದೆ. ಯುಗಾದಿ ಅಥವಾ ವಿಜಯ ದಶಮಿಯಂದು ನಡೆಯುವ ಜಾತ್ರಾ ಮಹೋತ್ಸವದಲ್ಲಿ ಬಲಿ ಕೊಡುವ ಸಂಪ್ರದಾಯವುಂಟು. ಸರಕಾರ ಪ್ರಾಣಿಬಲಿಯನ್ನು ನಿಷೇಧಿಸಿ ಕಾಯ್ದೆ–ಕಾನೂನು ರೂಪಿಸಿದ್ದರೂ ಕೂಡ, ಈ ಸಮುದಾಯದಲ್ಲಿ ಪ್ರಾಣಿಬಲಿ ಕೊಡುವುದು ಅವ್ಯಾಹತವಾಗಿ ಮುಂದುವರೆದಿದೆ.

ಬಲಿಕೊಡುವ, ಜಾತ್ರೆಯಾಚರಿಸುವ ಸಂಪ್ರದಾಯವಿರುವಲ್ಲಿ ಒಂದು ವಾರ ಮುಂಚೆ ತಮ್ಮ ಮನೆ ದೇವತೆಗೆ ಮುತ್ತೈದೆಯರು ಸೇರಿ ಉಡಿ ತುಂಬುವ ಕಾರ್ಯವನ್ನು ಪೂರೈಸುತ್ತಾರೆ. ಉಡಿ ತುಂಬದೆ ಜಾತ್ರೆ ಮಾಡಲು ಬರುವುದಿಲ್ಲವೆಂಬ ನಂಬಿಕೆಯಿದೆ. ಉಡಿ ತುಂಬಿದ ಮೇಲೆ ಒಂದು ವಾರದಲ್ಲಿ ಬರುವ ಶುಕ್ರವಾರ ಅಥವಾ ಮಂಗಳವಾರ ಜಾತ್ರೆಯನ್ನು ಆಚರಿಸುತ್ತಾರೆ. ಯಾವುದೇ ಕಾರಣಕ್ಕೂ ಜಾತ್ರೆಯನ್ನು ಮುಂದೂಡುವುದಿಲ್ಲ. ಸಾವು–ನೋವು, ದುರಂತ, ದುರ್ಘಟನೆ ಸಂಭವಿಸಿದರೂ ಜಾತ್ರೆಯನ್ನು ವಿಧಿವತ್ತಾಗಿ ಆಚರಿಸುತ್ತಾರೆ. ಜಾತ್ರೆಗೆಂದೆ ಬೇರೆ ಬೇರೆ ಊರುಗಳಿಂದ ನೆಂಟರಿಷ್ಟರು, ಬಂಧು–ಬಳಗದವರನ್ನು, ಸಂಬಂಧಿಕರನ್ನು ಕರೆಸಿಕೊಳ್ಳುತ್ತಾರೆ. ಪ್ರಾಣಿ ಬಲಿಕೊಟ್ಟ ಸಂಜೆ, ಸಾಮೂಹಿಕವಾಗಿ ಮಾಂಸಾಹಾರ ಊಟದ ವ್ಯವಸ್ಥೆಯಿರುತ್ತದೆ. ಅದು ಪೂರೈಸಿದ ಬಳಿಕ ಮನರಂಜನೆ ಕಾರ್ಯಕ್ರಮ ಏರ್ಪಾಟಾಗಿರುತ್ತದೆ. ಆಟ–ಬಯಲಾಟ, ನಾಟಕ, ಗೀಗೀ ಪದಗಳು

ಮುಂತಾದವುಗಳು ಪ್ರದರ್ಶನಗೊಳ್ಳುತ್ತವೆ. ಈ ಸಮುದಾಯದವರು ಸೇರಿ ರಾತ್ರಿಯಿಡಿ ಆಟ-ಬಯಲಾಟ ನೋಡಿ ಆನಂದಿಸುತ್ತಾರೆ.

ಬಹಳ ವರುಷಗಳವರೆಗೆ ಮಕ್ಕಳಾಗದವರು ಜಾತ್ರೆಯಲ್ಲಿ ಮನೆ ದೇವರಿಗೆ ಹರಕೆ ಹೊತ್ತಿರುತ್ತಾರೆ. ಹರಕೆ ಹೊತ್ತ ನಂತರದಲ್ಲಿ ಹುಟ್ಟಿದ ಮಕ್ಕಳಿಗೆ ಆಯಾ ದೇವರುಗಳ ಹೆಸರನ್ನಿಡುತ್ತಾರೆ. ಉದಾಹರಣೆಗಾಗಿ, ಉದ್ದಪ್ಪ-ಉದ್ದವ್ವಾ, ದುರಗಪ್ಪ-ದುರಗವ್ವಾ, ಭಾಗಪ್ಪ-ಭಾಗವ್ವ ಯಲ್ಲಪ್ಪ-ಯಲ್ಲವ್ವಾ, ತಾಯಪ್ಪ-ತಾಯವ್ವ, ಮಾರೆಪ್ಪ-ಮಾರೆವ್ವಾ, ಹುಲಿಗೆಪ್ಪ-ಹುಲಿಗೆವ್ವಾ ಗಂಗಪ್ಪ-ಗಂಗವ್ವಾ ಇತ್ಯಾದಿ.

ಕುಲದೇವರನ್ನಾಗಿ 'ತಿರುಪತಿ ತಿಮ್ಮಪ್ಪ'ನನ್ನು ಸ್ವೀಕರಿಸಿ ಅವನಿಗೆ ನಡೆದುಕೊಳ್ಳುತ್ತಾರೆ. ಕಾರ್ತಿಕಮಾಸದಲ್ಲಿ ವಿಶೇಷ ಹರಕೆ ತೀರಿಸುತ್ತಾರೆ. ಶನಿವಾರ ವ್ರತ ಆಚರಿಸುತ್ತಾರೆ. ಅಂದು ಗೋಪಾಳಬುಟ್ಟಿ ಹೊತ್ತು ಭಿಕ್ಷಾಟನೆ ಮಾಡುತ್ತಾರೆ. ಪ್ರತಿ ಶನಿವಾರ ಕುಲದೇವರ ವಾರವಾಗಿರುವುದರಿಂದ ಮಾಂಸಾಹಾರ ಸ್ವೀಕರಿಸುವುದಿಲ್ಲ. ಹನುಮಂತನನ್ನು ಚೆನ್ನದಾಸರ ಸಮುದಾಯ ತಿರುಪತಿ ತಿಮ್ಮಪ್ಪನ ಅವತಾರವೆಂದು ಭಾವಿಸಿದ್ದಾರೆ. ತಿರುಪತಿಗೆ ಹೋಗಲಾಗದವರು, ತಮ್ಮ ಸಮೀಪದ ಹನುಮಂತನಿಗೆ ನಡೆದುಕೊಳ್ಳುತ್ತಾರೆ. ಶನಿವಾರ 'ವಾರ' ಮಾಡುತ್ತಾರೆ. ಒಪ್ಪತ್ತು ಮಾಡುತ್ತಾರೆ. ಮಾಂಸಸೇವನೆ ಮಾಡುವುದಿಲ್ಲ. ಶನಿವಾರ ದಿವಸ ಮದ್ಯ ಮತ್ತು ಮಾಂಸ ಸೇವನೆ ಎರಡೂ ನಿಷಿದ್ಧವಾಗಿರುತ್ತವೆ. ಉಳಿದ ದಿವಸ ಮದ್ಯ-ಮಾಂಸ ಸೇವನೆ ಮಾಡಿದಾಗ, ಹನುಮಂತ ದೇವರ ದೇವಸ್ಥಾನದೊಳಗೆ ಪ್ರವೇಶಿಸುವುದಿಲ್ಲ.

ಪ್ರತಿವರ್ಷ ದೀಪಾವಳಿ ಮುಗಿದ ಏಳನೆಯ ಶನಿವಾರದಂದು ಕಾರ್ತಿಕ ಮಾಸದಲ್ಲಿ ಹನುಮಂತ ದೇವರ ಜಾತ್ರೆ ವಿಜೃಂಭಣೆಯಿಂದ ಜರಗುತ್ತದೆ. ಕೆಲವು ಕಡೆ ಏಳನೆಯ ಶನಿವಾರ ಮತ್ತೆ ಕೆಲವು ಕಡೆ ಏಂಟನೆಯ ಶನಿವಾರ ಜಾತ್ರೆ ನಡೆಯುತ್ತದೆ. ಮತ್ತೆ ಕೆಲವೆಡೆ ಎರಡು ಬಾರಿ ಜಾತ್ರೆಗಳಾಗುವುದುಂಟು. ಏಳನೆಯ ಶನಿವಾರ ಸಣ್ಣ ಜಾತ್ರೆಯಾದರೆ, ಏಂಟನೆಯ ಶನಿವಾರ ದೊಡ್ಡ ಜಾತ್ರೆಯಾಗುತ್ತದೆ. ಹನುಮಂತನ ಗುಡಿಗೆ ಬರುವ ಭಕ್ತರು ತಮ್ಮ ಮನೆಯಿಂದಲೆ' ವೆಂಕಟರಮಣಾ ಗೋವಿಂದಾ$_{sss}$ ಗೋವಿಂದಾ$_{sss}$ ಎಂದು ಉಗ್ಗಡಿಸುತ್ತ ಬರುತ್ತಾರೆ. ದೇವರಿಗೆ ತೆಂಗಿನಕಾಯಿ, ಕರ್ಪೂರ ಅರ್ಪಿಸುತ್ತಾರೆ. ಪ್ರತಿ ಶನಿವಾರ ಹನುಮಂತನಿಗೆ ಉಪ್ಪು ಮತ್ತು ಎಣ್ಣೆ ಹಾಕುವ ಸಂಪ್ರದಾಯವಿದೆ. ಜಾತ್ರಾ ಮಹೋತ್ಸವದಲ್ಲಿ ಗುಡಿಯ ಮುಂದಿರುವ ಗೋಪಾಳಬುಟ್ಟಿಗೆ ಹರಕೆಯ ಮುಡಿಪು ಹಾಕುತ್ತಾರೆ. ದೇವರ ಹೆಸರಿನಲ್ಲಿ ಕಟ್ಟಿಟ್ಟ ದುಡ್ಡನ್ನು ಹಾಕಿ ಹರಕೆ ಪೂರೈಸುತ್ತಾರೆ. ಮತ್ತೆ ಕೆಲವರು ದೇವಾಲಯದಲ್ಲಿರುವ ಗೋಪಾಳ ಬುಟ್ಟಿಯನ್ನೆ ಹೆಗಲಿಗೆ ಧರಿಸಿ ಜಾತ್ರೆಯಲ್ಲಿ ಸಂಚರಿಸಿ,

ವೆಂಕಟರಮಣನ ಹೆಸರು ಹೇಳಿ ಐದು ಜನರಿಂದ ಭಿಕ್ಷೆ ಬೇಡಿ ಬಂದ ಹಣವನ್ನು ದೇವರಿಗೆ ಸಮರ್ಪಿಸುತ್ತಾರೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕಲ್ಲೋಳಿಯ ಹನುಮಂತ, ಅಥಣಿ ತಾಲೂಕಿನ ಖವಟಕೊಪ್ಪ ಹನುಮಂತ, ಸುಪ್ರಸಿದ್ಧ ದೈವಗಳು. ಅಲ್ಲಿ ಜಾತ್ರೆ ಕಾರ್ತಿಕೋತ್ಸವ ಅದ್ಧೂರಿಯಾಗಿ ಜರುಗುತ್ತವೆ.

ತಿರುಪತಿ ತಿಮ್ಮಪ್ಪನ ಬೆಟ್ಟವೇ ಚೆನ್ನದಾಸರ ಸಮುದಾಯದ ಮೂಲ ಧಾರ್ಮಿಕ ಕೇಂದ್ರವಾಗಿದೆ. ಅದೇ ಅವರ ಶ್ರದ್ಧಾ ಕೇಂದ್ರವೂ ಹೌದು. ತಿರುಪತಿಗೆ ಹೋಗಲು ಆಗದವರು ಸಮೀಪದ ಹನುಮಂತ ದೇವರ ದೇವಸ್ಥಾನಗಳಿಗೆ ಹೋಗುತ್ತಾರೆ. ಅವುಗಳನ್ನೆ ತಮ್ಮ ಧಾರ್ಮಿಕ ಕೇಂದ್ರಗಳೆಂದು ಪರಿಗಣಿಸುತ್ತಾರೆ. ಶೃದ್ಧಾ ಕೇಂದ್ರಗಳೆಂದು ನಂಬಿ ದೇವರಿಗೆ ನಡೆದುಕೊಳ್ಳುತ್ತಾರೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ 'ಕಲ್ಲೋಳಿ ಹನುಮಂತ' ಈ ಸಮುದಾಯದ ಸುಪ್ರಸಿದ್ಧ ದೈವ. ಆದ್ದರಿಂದ ಕಲ್ಲೋಳಿ ಚೆನ್ನದಾಸರ ಸಮುದಾಯದ ಧಾರ್ಮಿಕ ಕೇಂದ್ರವಾಗಿ, ಶೃದ್ಧಾ ಕೇಂದ್ರವಾಗಿ ರೂಪುಗೊಂಡಿದೆ. ಜಾತ್ರೆ, ಕಾರ್ತಿಕೋತ್ಸವ, ಓಕುಳಿಯ ಸಂದರ್ಭದಲ್ಲಿ ಕುಲಬಾಂಧವರೆಲ್ಲ ಸೇರುತ್ತಾರೆ. ಉಳಿದ ವರುಷವಿಡಿ ತಮ್ಮೂರಿನ ಹನುಮಂತ ದೇವರಿಗೆ ನಡೆದುಕೊಳ್ಳುತ್ತಾರೆ. ಕುಲದೇವರ ಹೆಸರುಗಳನ್ನು ತಮ್ಮ ಮಕ್ಕಳಿಗೆ ಇಡುವ ಸಂಪ್ರದಾಯವಿದೆ. ಗಂಡು ಮಕ್ಕಳಾದರೆ ಹನುಮಪ್ಪ, ಹನುಮಂತ, ವೆಂಕಪ್ಪ(ಯಂಕಪ್ಪ), ಮೂಡಲಗಿರಿಯಪ್ಪ, ಬಾಳಪ್ಪ, ಬಾಳಕೃಷ್ಣ, ಬಾಲಾಜಿ, ಮಾರುತಿ, ಆಂಜನೇಯ, ರಾಮಪ್ಪ, ಲಶಮಪ್ಪ, ತಾತೆಪ್ಪ ಇತ್ಯಾದಿ ಹೆಸರುಗಳನ್ನು ಇಡುತ್ತಾರೆ. ಹೆಣ್ಣು ಮಕ್ಕಳಿಗೆ ಹನಮವ್ವ, ಬಾಳವ್ವ, ಯಂಕವ್ವ, ಲಶಮವ್ವ ಇತ್ಯಾದಿಯಾಗಿವೆ. ಮಕ್ಕಳ ಜಡೆಯನ್ನು (ಜೌಳ) ಕುಲದೇವರ ದೇವಾಲಯಗಳಲ್ಲಿ ತೆಗೆಯುವುದುಂಟು. ಧರ್ಮ ಮತ್ತು ದೇವರುಗಳು ಚೆನ್ನದಾಸರ ಸಮುದಾಯವನ್ನು ಆಳುತ್ತ ಬಂದಿವೆ. ಆ ಕುರಿತ ನಂಬಿಕೆಗಳೆ ಈ ಜನಸಮುದಾಯದ ಜೀವನ ವಿಧಾನ ರೂಪಿಸಿವೆ.

೪.೨. ಹಬ್ಬಗಳು

ಸಂಸ್ಕೃತದ 'ಪರ್ವ'ದ ತದ್ಭವ ರೂಪವೇ ಕನ್ನಡದ 'ಹಬ್ಬ'ವಾಗಿದೆ. ಹಬ್ಬವೆಂದರೆ ಜನಾಂಗದ ಕುಲಬಾಂಧವರು ಒಂದೆಡೆ ಸೇರಿ ಉಭಯ ಕುಶಲೋಪರಿಯಲ್ಲಿ ತೊಡಗುವುದಕ್ಕೆ ಲಭಿಸಿದ ಸದಾವಕಾಶ. "ನಂಬಿಕೆ ಮತ್ತು ಸಂಪ್ರದಾಯಗಳ ಕ್ರಿಯಾರೂಪಗಳೆ ಹಬ್ಬಗಳು. ಅವುಗಳು ಬೇರು ಮಟ್ಟಗಳಲ್ಲಿ ಅವಿತಿವೆ. ನಿಸರ್ಗಾರಾಧನೆಯಲ್ಲಿ ಪಸರಿಸಿವೆ. ಕೃಷಿ ಸಂಸ್ಕೃತಿಯಲ್ಲಿ ಸ್ಪಷ್ಟ ರೂಪವನ್ನು ಪಡೆದು, ಕಾಲಾನಂತರದಲ್ಲಿ ವಿಕಾಸಗೊಳ್ಳುತ್ತ, ಜಟೀಲವಾದುದ್ದುಂಟು. ಪ್ರತಿಯೊಂದು

ಯುಗದ ಜನರು ಆಯಾ ಕಾಲದ ಅಭಿರುಚಿ ಮನೋಧರ್ಮಗಳಿಗೆ ಅನುಗುಣವಾಗಿ, ತಂತಮ್ಮ ಕಲ್ಪನೆಗಳಿಗೆ ಅನುಸಾರವಾಗಿ ಅವುಗಳ ರೂಪ ಸ್ವರೂಪಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡಿದ್ದುಂಟು. ಹೊಸ ಹೊಸ ವಿಧಿ-ನಿಷೇಧಗಳನ್ನು, ಉಪಾಸನೆ ವಿಧಾನಗಳನ್ನು ಸೇರಿಸಿದ್ದುಂಟು. ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟಿಕೊಂಡವು"[೧] ಎಂದು ಸುವಿಖ್ಯಾತ ಜಾನಪದ ವಿದ್ವಾಂಸ ರಾದ ಡಾ. ದೇ. ಜವರೇಗೌಡರು ವ್ಯಾಖ್ಯಾನಿಸಿದ್ದಾರೆ. ಅವರೆ ಮುಂದುವರೆದು "ಹಲವು ಸಂಪ್ರದಾಯಗಳ ಮೊತ್ತವೆ ಹಬ್ಬವಾಗುತ್ತದೆ" ಎಂದು ವಿವರಿಸಿದ್ದಾರೆ.

ಚೆನ್ನದಾಸರ ಸಮುದಾಯದಲ್ಲಿಯೂ ಹಬ್ಬಗಳಿಗೆ ವಿಶೇಷ ಸ್ಥಾನ-ಮಾನವಿದೆ. ಯುಗಾದಿ, ನಾಗರ ಪಂಚಮಿ, ವಿಜಯದಶಮಿ, ದೀಪಾವಳಿ ಮುಂತಾದ ಹಬ್ಬಗಳು ಮುಖ್ಯವಾಗಿ ಆಚರಿಸಲ್ಪಡುತ್ತವೆ.

೪.೨.೧ ಯುಗಾದಿ

ಯುಗಾದಿ ವರುಷದ ಆರಂಭದಲ್ಲಿ ಬರುವ ದೊಡ್ಡ ಹಬ್ಬ. ಇದು ಹೊಸ ವರುಷದ ಆರಂಭ. ಭಾರತೀಯರಿಗೆ ಹೊಸ ವರುಷ ಆರಂಭವಾಗುವುದು ಯುಗಾದಿಯಿಂದಲೆ. ಯುಗಾದಿಯು ಚೆನ್ನದಾಸರ ಸಮುದಾಯದ ಬಹುದೊಡ್ಡ ಹಬ್ಬವಾಗಿದೆ. ಮದುವೆಯಾಗಿ ಗಂಡನ ಮನೆಯಲ್ಲಿರುವ ಹೆಣ್ಣು ಮಕ್ಕಳು ಯುಗಾದಿ ಹಬ್ಬದ ಸಲುವಾಗಿ ತವರುಮನೆಗೆ ಬರುತ್ತಾರೆ. ಯುಗಾದಿ ಮುನ್ನಾದಿನ ಅಮವಾಸ್ಯೆ. ಅದನ್ನು ಯುಗಾದಿ ಅಮವಾಸ್ಯೆಯೆಂದೇ ಕರೆಯತ್ತಾರೆ. ಮರುದಿನ ಯುಗಾದಿ ಪಾಡ್ಯ. ರಾತ್ರಿ ಕಡಲೆ ಬೇಳೆಯನ್ನು ನೀರಿನಲ್ಲಿ ನೆನೆಯಲು ಇಡುತ್ತಾರೆ. ಬೆಳಗ್ಗೆ ಎದ್ದು ಬೇವಿನ ತೊಪ್ಪಲು ಬೆರಿಸಿದ ನೀರಿನಿಂದ ಸ್ನಾನ ಮಾಡುತ್ತಾರೆ. ಬೇವು ರೋಗ ನಿರೋಧಕ ಶಕ್ತಿಯುಳ್ಳ ತಪ್ಪಲು. ಬೇವಿನ ಹೂವು, ನೆನೆಯಿಟ್ಟ ಕಡಲಿಬೇಳೆ, ಬೆಲ್ಲ ಮತ್ತು ಕೊಬ್ಬರಿ ಸಮಪ್ರಮಾಣದಲ್ಲಿ ಬೆರೆಸಿ, ಹದವಾಗಿ ಕುಟ್ಟಿ 'ಬೇವು-ಬೆಲ್ಲ' ತಯಾರಿಸುತ್ತಾರೆ. ದೇವರಿಗೆ ನಮಸ್ಕಾರ ಮಾಡಿ, ಸೂರ್ಯದೇವನಿಗೆ ಉತ್ತರಾಣಿ ಕಡ್ಡಿಯ ದೀಪ ಬೆಳಗಿಸಿ, ಬೇವು ಬೆಲ್ಲ ಸೇವಿಸುತ್ತಾರೆ. ಕಷ್ಟ-ಸುಖ ಸಮ-ಸಮನಾಗಿ ಹಂಚಿಕೊಳ್ಳಬೇಕೆಂಬ ಆಶಯ ಬೇವು ಬೆಲ್ಲದ ಮಿಶ್ರಣದಲ್ಲಿರುತ್ತದೆ. ಪರಸ್ಪರ ಯುಗಾದಿಯ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಾರೆ. ದೊಡ್ಡವರಿಗೆ ಚಿಕ್ಕವರು ನಮಿಸುತ್ತಾರೆ. ಹಿರಿಯರು ಕಿರಿಯರಿಗೆ ಆಶೀರ್ವಾದ ಮಾಡುತ್ತಾರೆ. ಅಮವಾಸ್ಯೆ ದಿವಸ ಹೋಳಿಗೆಯೂಟ ಇರುತ್ತದೆ. ಯುಗಾದಿಯಂದು ಸ್ಯಾವಿಗೆ

ಪಾಯಸ ಮಾಡಿ ದೇವರಿಗೆ ಎಡೆ ಹಿಡಿಯುತ್ತಾರೆ. ಮಧ್ಯಾಹ್ನ ಮನೆದೇವರಿಗೆ ಬಲಿಯ ಕಾರ್ಯಕ್ರಮ. ಸಂಜೆ ಮಾಂಸ ದೂಟ, ರಾತ್ರಿಯಿಡಿ ಆಟ-ಬಯಲಾಟದ ಪ್ರದರ್ಶನಗಳಿರುತ್ತವೆ.

೪.೨.೨. ನಾಗರ ಪಂಚಮಿ

ಯುಗಾದಿ ನಂತರ ಬರುವ ಹಬ್ಬವೆ ನಾಗರಪಂಚಮಿ. ಈ ನಾಗರ ಪಂಚಮಿಯ ಮೊದಲ ದಿವಸ ಹುತ್ತಿನ ಮಣ್ಣನ್ನು ತಂದು, ನೀರಿನಲ್ಲಿ ತೋಯಿಸಿ, ಹದಗೊಳಿಸಿ ಮಣ್ಣಿನ ನಾಗಪ್ಪನ ಮೂರ್ತಿ ತಯಾರಿಸುತ್ತಾರೆ. ಅದರ ಬದಿಯಲ್ಲಿ ಸಣ್ಣದೊಂದು ಹೊಂಡಮಾಡಿ, ಆ ಹೊಂಡದಲ್ಲಿ ನಾಗಪ್ಪನಿಗೆ ಹಾಲು ಸುರಿಯುತ್ತಾರೆ. ಚೆನ್ನದಾಸರ ಸಮುದಾಯಕ್ಕೆಲ್ಲ ಒಂದೇ ನಾಗಪ್ಪ, ಅದಕ್ಕಾಗಿ ಎಲ್ಲ ಮನೆಯವರು ಅಂದು ರಾತ್ರಿ ನೂಲಿನ ಎಳೆಗಳನ್ನು ತಯಾರಿಸಿ, ಅರ್ಧ ನಾಗಪ್ಪನಿಗೆ ಹಾಕಿದರೆ; ಇನ್ನೂಳಿದ ಅರ್ಧವನ್ನು ಮನೆ-ಮಂದಿಯೆಲ್ಲ ಧರಿಸಿಕೊಳ್ಳುತ್ತಾರೆ. ಹುರಿದ ಯಳ್ಳು (ಅರಳು), ತಂಬಿಟ್ಟು, ನವಣೆಯುಂಡಿ, ಹಾಲು ನಾಗಪ್ಪನಿಗೆ ನೈವೇದ್ಯ ಹಿಡಿಯು ತ್ತಾರೆ. ನಾಗಪ್ಪನ ಮೇಲೆ ಕೊಬ್ಬರಿ ಬಟ್ಟಲು ಮುರಿಯುವುದುಂಟು, ಮರುದಿವಸ ನಾಗಪ್ಪನಿಗೆ ಹಾಕಿದ ದಾರವನ್ನು ಅಥವಾ ಮನೆಯಲ್ಲಿ ತಂದಿರಿಸಿದ ದಾರವನ್ನು ಕೊರಳಲ್ಲಿ ಹಾರದಂತೆ ಧರಿಸಿಕೊಳ್ಳುತ್ತಾರೆ. ಪುರುಷರು ಬಲಗೈ ಮಣಿಕಟ್ಟಿಗೆ ದಾರ ಕಟ್ಟಿಕೊಳ್ಳುತ್ತಾರೆ. ನಾಗಪ್ಪನ ದಾರವನ್ನು ಹಾರವಾಗಿ ಸ್ತ್ರೀಯರು ಧರಿಸುವುದು, ಪುರುಷರು ಬಲಗೈಗೆ ಕಟ್ಟಿಕೊಳ್ಳವುದರಿಂದ ನಾಗಪ್ಪನ ಕೃಪೆಗೆ ಪಾತ್ರರಾಗುತ್ತಾರೆ. ಹಾವುಗಳು ಕಚ್ಚುವುದಿಲ್ಲವೆಂಬ ನಂಬಿಕೆ ಜನಸಮುದಾಯದಲ್ಲಿದೆ. ಭಯದ ಮೂಲವಾಗಿ ಈ ಹಬ್ಬ ಆಚರಣೆಯಲ್ಲಿದೆಯೆನಿಸುತ್ತದೆ.

ನಾಗರ ಪಂಚಮಿ ನಾರಿಯರಿಗೆ ಸಡಗರವನ್ನುಂಟು ಮಾಡುವ ಹಬ್ಬ. ತವರಿಗೆ ಬಂದ ಹೆಣ್ಣುಮಕ್ಕಳು ತಮ್ಮ ಅಣ್ಣ-ತಮ್ಮಂದಿರಿಗೆ ಆರತಿ ಬೆಳಗಿ ಶುಭ ಹಾರೈಸುತ್ತಾರೆ. ಮಹಿಳೆಯರೂ ಹೊಸಸೀರೆಯನ್ನುಟ್ಟು ಸಂಭ್ರಮಿಸುತ್ತಾರೆ. ಗಿಡ-ಮರಗಳರೆಂಬೆ-ಕೊಂಬೆಗಳಿಗೆ ಕಟ್ಟಿದ ಜೋಕಾಲಿ ಗಳನ್ನು ಜೀಕಿ ಸಂತಸಪಡುತ್ತಾರೆ. ಮಹಿಳೆಯರೆಲ್ಲ ಒಂದೆಡೆ ಸೇರಿ ಸುಖ-ದು:ಖವನ್ನು ಹಂಚಿ ಕೊಳ್ಳುವ ಹಬ್ಬವಿದು.

ಜೋಕಾಲಿ ಜೀಕುವುದು ಒಂದೆಡೆಗಿದ್ದರೆ; ಸಾಹಸ ಪ್ರವೃತ್ತಿಯವರಿಗೆ ವಿವಿಧ ಸ್ಪರ್ಧೆಗಳಿರುತ್ತವೆ. ಮರದ ಕೊಂಬೆಗೆ ಎತ್ತರದಲ್ಲಿ ತೂಗುಹಾಕಿದ ನೋಟು ಮತ್ತು ಕೊಬ್ಬರಿ ಬಟ್ಟಲುಗಳನ್ನು ತರಬೇಕು ಅಷ್ಟು ಎತ್ತರಕ್ಕೆ ಜೋಕಾಲಿಯನ್ನು ಏರಿಸಿ, ಬಾಯಿಂದ ಕಚ್ಚಿ ಕೊಬ್ಬರಿ

ಬಟ್ಟಲು ಮತ್ತು ನೋಟುಗಳನ್ನು ತೆಗೆಯಬೇಕು. ಸ್ತ್ರೀ ಪುರುಷರಿಬ್ಬರೂ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ನೋಡುಗರಿಗೆ ಆಕರ್ಷಕವೆನಿಸಿ, ರೋಮಾಂಚನಕಾರಿಯಾದರೂ ಹೆಚ್ಚು ಕಡಿಮೆ ಆಯತಪ್ಪಿದರೆ ಅಪಾಯವು ಕಟ್ಟಿಟ್ಟ ಬುತ್ತಿ. ಆದರೂ ಸಾಹಸಿಗರು ಭಾಗವಹಿಸಿ ಬಹುಮಾನ ಪಡೆಯುತ್ತಾರೆ.

ರಾತ್ರಿಯಾದ ಮೇಲೆ ಎಲ್ಲರೂ ಮಲಗಿದ ತರುವಾಯ ಪೂಜಾರಿ ಮಣ್ಣಿನ ನಾಗಪ್ಪನನ್ನು ಮುರಿದು ಮುಚ್ಚುತ್ತಾನೆ. ಆ ಸ್ಥಳದಲ್ಲಿ ಬುಟ್ಟಿಯೊಂದನ್ನು ಡಬ್ಬುಹಾಕಿ, ಅದರ ಮೇಲೆ ಕೊಬ್ಬರಿ ಚೂರು ತೂರುತ್ತಾನೆ. ತೋಡಿದ ಹೊಂಡವನ್ನು ಮುಚ್ಚುತ್ತಾನೆ. ಹೀಗೆ ನಾಗರಪಂಚಮಿಯನ್ನು ವಿಶಿಷ್ಟವಾಗಿ ಆಚರಿಸುತ್ತಾರೆ.

೪.೨.೩. ವಿಜಯದಶಮಿ (ದಸರಾ)

ವಿಜಯದಶಮಿಯನ್ನು 'ಮಹಾನವಮಿ' ಅಥವಾ 'ದಸರಾ' ಎಂದು ಕರೆಯುತ್ತಾರೆ. ವಿಜಯದಶಮಿಯ ಮುನ್ನಾದಿನ ತಮ್ಮ ಗುಡಿಸಲು, ಮನೆ–ಮನೆಗಳನ್ನು ಶುಚಿಗೊಳಿಸಿ ಸಾರಣೆ ಮಾಡುತ್ತಾರೆ. ಬಟ್ಟೆಗಳನ್ನು ತೊಳೆದು ಮಡಿ ಮಾಡುತ್ತಾರೆ. ಮರುದಿನ ತಾವು ಬಳಸುವ ಆಯುಧಗಳು, ಮನೆಬಳಕೆಯ ವಸ್ತುಗಳನ್ನು ಒಗ್ಗೂಡಿಸಿ ತೊಳೆದು ಶುಚಿಗೊಳಸಿ ಪೂಜೆ ಮಾಡುತ್ತಾರೆ. ಹುಗ್ಗಿ–ಹೋಳಿಗೆ ನೈವೇದ್ಯ ತೋರಿಸುತ್ತಾರೆ. ಎಲ್ಲರೂ ಸೇರಿ ಮಧ್ಯಾಹ್ನ ಭೋಜನ ಸವಿಯುತ್ತಾರೆ. ಸಂಜೆಯ ಸಮಯದಲ್ಲಿ ಸಮುದಾಯದವರೆಲ್ಲರೂ ಸೇರಿ, ಊರ ಹೊರಗಿರುವ ಬನ್ನಿ ಮರಕ್ಕೆ ಪೂಜೆ ಸಲ್ಲಿಸುತ್ತಾರೆ. ಬನ್ನಿ ಎಲೆಗಳಿರುವ ಸಣ್ಣ–ಸಣ್ಣ ಟೊಂಗೆಗಳನ್ನು ಕತ್ತರಿಸಿ ದೇವರಿಗೆ ಏರಿಸುತ್ತಾರೆ. ಇದಕ್ಕೆ ' ಬನ್ನಿ ಮುಡಿಯುವುದು' ಎಂದು ಕರೆಯುತ್ತಾರೆ. ದೇವರು ಬನ್ನಿ ಮುಡಿದ ಮೇಲೆ, ಸೇರಿದ ಸಮುದಾಯದವರು ಪರಸ್ಪರ ಶುಭಾಶಯ ಕೋರುತ್ತಾರೆ. ಒಬ್ಬರಿಗೊಬ್ಬರು "ಬನ್ನಿ ಕೊಟ್ಟು ಬಂಗರಾದಂತಿರೋಣ" ಎಂದು ಹೇಳುತ್ತಾರೆ. ಮನೆಗೆ ಬಂದು ಬಂಧು–ಬಳಗಕ್ಕೆಲ್ಲ ಬನ್ನಿ ಕೊಡುತ್ತಾರೆ. ಹಿರಿಯರ ಪಾದಗಳಿಗೆ ಕಿರಿಯರು ನಮಸ್ಕರಿಸುವುದು, ಬನ್ನಿ ಪಡೆದ ಹಿರಿಯರು ಕಿರಿಯರಿಗೆ ಆಶೀರ್ವಾದ ಮಾಡುತ್ತಾರೆ.

ಕೆಲವು ಕಡೆ ವಿಜಯದಶಮಿಯಂದು ತಮ್ಮ ಗುಡಿಸಲು ಅಥವಾ ಮನೆಯ ಮುಂದಿರುವ ಅಂಗಳಲ್ಲಿ ಆಡು, ಎಮ್ಮೆ, ಕೋಣಗಳನ್ನು ಕಟ್ಟುವ ಗೂಟಕ್ಕೆ ಪೂಜೆ ಸಲ್ಲಿಸುತ್ತಾರೆ.

ಹರಕೆ ಹೊತ್ತವರು ವಿಜಯದಶಮಿಯಂದೆ ಆಡು-ಕುರಿ-ಕೋಳಿಗಳನ್ನು ಹಿರಿಯರ ಹೆಸರಿಗೆ ಬಲಿ ನೀಡಿ, ಅದನ್ನು ಅಡುಗೆ ಮಾಡಿ ಸಾಮೂಹಿಕವಾಗಿ ಭೋಜನ ಸ್ವೀಕರಿಸುತ್ತಾರೆ.

೪.೨.೪. ದೀಪಾವಳಿ

ದೀಪಾವಳಿಯು ಅಣ್ಣ-ತಂಗಿಯರ ಪ್ರೀತಿ-ವಾತ್ಸಲ್ಯದ ಹಬ್ಬ. ಮದುವೆಯಾದ ಹೆಣ್ಣು ಮಕ್ಕಳನ್ನು ತವರುಮನೆಗೆ ಕರೆತರುವುದು ಸಂಪ್ರದಾಯ. ಹೆಣ್ಣುಮಕ್ಕಳಿಲ್ಲದಿದ್ದರೆ ಹಬ್ಬಕ್ಕೆ ಶೋಭೆ ಬರುವುದಿಲ್ಲ. ದೀಪಾವಳಿಯ ಮುಂಜಾನೆ ಹೆಣ್ಣುಮಕ್ಕಳು ತಮ್ಮ ಸಹೋದರರಿಗೆ ಎಣ್ಣೆ ಹಚ್ಚಿ ಬಿಸಿನೀರಿನಿಂದ ತಲೆಯ ಮೇಲೆ ಮಜ್ಜನ ಮಾಡಿಸುತ್ತಾರೆ. ಸಿಹಿ ಅಡುಗೆ ಮಾಡಿ ಬಡಿಸುತ್ತಾರೆ. ಸಾಯಂಕಾಲದ ಹೊತ್ತಿನಲ್ಲಿ ಮಹಿಳೆಯರು ದೇವರಿಗೆ ಆರತಿ ಮಾಡಿದ ನಂತರ ತಮ್ಮ ಸಹೋದರರಿಗೆ ಆರತಿ ಮಾಡುವ ಸಡಗರದ ಕಾರ್ಯಕ್ರಮ. ಮನೆಯಲ್ಲಿರುವ ಪುರುಷರನ್ನೆಲ್ಲ ಸಾಲಾಗಿ ಕುಳ್ಳಿರಿಸಿ, ಮನೆಯ ಹೆಣ್ಣುಮಕ್ಕಳು ತಂದೆ, ಅಣ್ಣ-ತಮ್ಮಂದಿರುಗಳಿಗೆ ಆರತಿ ಮಾಡಿ, ಹಣೆಗೆ ತಿಲಕವಿಟ್ಟು ಧೀರ್ಘಾಯುಷಿಗಳಾಗಿರಿ ಎಂದು ಹಾರೈಸುತ್ತಾರೆ. ಆರತಿ ಮಾಡಿದ ಮೇಲೆ, ಪುರುಷರು ತಮ್ಮ ಸಹೋದರಿಯರಿಗೆ ಸೀರೆ, ಕುಪ್ಪಸ ಖಣ, ಬ್ಲೌಸಪೀಸ್, ಮತ್ತು ಹಣವನ್ನು ಕೊಡುಗೆಯಾಗಿ ನೀಡುತ್ತಾರೆ. ಚಿಕ್ಕಮಕ್ಕಳಿಗೆ ಹೊಸಬಟ್ಟೆ ಕೊಡಿಸುತ್ತಾರೆ. ಎಲ್ಲರೂ ಸೇರಿ ಸಾಮೂಹಿಕ ಭೋಜನ ಸ್ವೀಕರಿಸುತ್ತಾರೆ. ರಾತ್ರಿ ಹೊತ್ತು ಲಕ್ಷ್ಮೀಯ ಪೂಜೆ ಮಾಡುತ್ತಾರೆ. ಹಣ್ಣು-ಕಾಯಿಗಳ ನೈವೇದ್ಯ ಹಿಡಿದು ಧನ-ಧಾನ್ಯ ನೀಡಬೇಕೆಂದು ದೇವಿಯನ್ನು ಪ್ರಾರ್ಥಿಸುತ್ತಾರೆ. ಕೆಲವೆಡೆ 'ಲಕ್ಷ್ಮೀಪೂಜೆ'ಯನ್ನು ಸಾಮೂಹಿಕವಾಗಿ ಆಚರಿಸುತ್ತಾರೆ. ಮಹಾಲಕ್ಷ್ಮೀ ಪೂಜೆ ನೆರವೇರಿಸಿದ ಸಮುದಾಯದ ಸ್ತ್ರೀ ಪುರುಷರು ಒಬ್ಬರಾದ ಮೇಲೊಬ್ಬರು ಪದ ಹಾಡುತ್ತಾರೆ, ಲಕ್ಷ್ಮೀಗೆ ಸಂಬಂಧಿಸಿದ ವಿವಿಧ ಪದಗಳು, ಸ್ತುತಿಗಳು, ಗುಣಗಾನಗಳು ಇದರಲ್ಲಿ ಸೇರಿರುತ್ತವೆ. ಹೀಗೆ ದೀಪಾವಳಿಯನ್ನು ಆಚರಿಸುತ್ತಾರೆ.

೪.೨.೫. ಹಿರಿಯರ ಹಬ್ಬ

ಚೆನ್ನದಾಸರ ಸಮುದಾಯದಲ್ಲಿ ಯುಗಾದಿ, ನಾಗರಪಂಚಮಿ, ವಿಜಯದಶಮಿ, ದೀಪಾವಳಿ ಹಬ್ಬಗಳನ್ನು ಆಚರಿಸುವಂತೆಯೆ ಹಿರಿಯರ ಹಬ್ಬಗಳನ್ನು ಆಚರಿಸುತ್ತಾರೆ. ಇದು ಧಾರ್ಮಿಕ ಪೂಜೆಯಲ್ಲಿ ಪ್ರಮುಖವಾಗಿದೆ. ಹಿರಿಯರು ಮರಣ ಹೊಂದಿದ ಮೇಲೆ, ಆಯಾ ಮನೆಯವರು ಹಿರಿಯರನ್ನು ದೈವದಲ್ಲಿ ಸೇರಿಸಿಕೊಂಡು ದೇವರೆಂದು ಭಾವಿಸಿ ಬೆಳ್ಳಿಯ, ಅಥವಾ

ಇನ್ನೂಳಿದ ಲೋಹದ ಪದಕಗಳನ್ನು ಮಾಡಿಸಿ, ದೇವರೆಂದು ಪ್ರತಿಷ್ಠಾಪಿಸುತ್ತಾರೆ. ಕುಲದೇವರ ನಂತರ ಹಿರಿಯರನ್ನೇ ದೇವರೆಂದು ನಂಬುತ್ತಾರೆ. ವರುಷಕ್ಕೆ ಒಂದು ಸಾರಿ, ಮೂರು ವರುಷಕ್ಕೆ ಒಂದು ಸಾರಿ ಹಿರಿಯರ ಮಣ್ಣಿನ ಮೂರ್ತಿಗಳನ್ನು ಮಾಡಿ ಪೂಜಿಸುತ್ತಾರೆ. ಪ್ರಾಣಿ ಬಲಿ(ಆಡು, ಕುರಿ, ಕೋಳಿ)ಯ ಮುಖಾಂತರ ಭಕ್ತಿಯನ್ನು ಸಮರ್ಪಿಸುತ್ತಾರೆ.[೨] ಎಂದು ಡಾ.ವಾಯ್.ಬಿ. ಹಿಮ್ಮಡಿಯವರು ಹಿರಿಯರ ಹಬ್ಬದ ಕುರಿತಾಗಿ ವಿವರಿಸಿದ್ದಾರೆ. ಅದೇ ಸಮುದಾಯದಿಂದ ಬಂದಿರುವ ಡಾ ಹಿಮ್ಮಡಿಯವರ ವಿವರಣೆ ಸಮರ್ಪಕವಾಗಿದೆ.

೫.೨.೬. ಮಸುಬಾ

ಚೆನ್ನದಾಸರ ಸಮುದಾಯದಲ್ಲಿ ಹನುಮಂತ (ಆಂಜನೇಯ) ದೇವರನ್ನು ಬಿಟ್ಟರೆ 'ಮಸುಬಾ' ಎನ್ನುವ ಪುರುಷ ದೇವರನ್ನು ಮನೆದೇವರನ್ನಾಗಿ ಆರಾಧಿಸುವ ಪದ್ಧತಿಯಿದೆ. ಈ ದೇವರನ್ನು ಉಗ್ರ ಸ್ವರೂಪದ ದೇವರೆಂದು ಇಡೀ ಸಮುದಾಯ ಭಾವಿಸುತ್ತದೆ. ತಮ್ಮ ಮಕ್ಕಳಿಗೆ ಈಗಲೂ ಮಸೆಪ್ಪ, ಮಸೆಮ್ಮ, ಇಲ್ಲವೆ ಮಸೆವ್ವ ಎಂದು ಹೆಸರಿಡುತ್ತಾರೆ. ಈ ದೇವರ ವಿಶೇಷವೆಂದರೆ, ಈ ಸಮುದಾಯದವರು ಈ ದೇವರಿಗೆ ಗುಡಿಯನ್ನು ಎಲ್ಲೂ ಕಟ್ಟಿರದಿರುವುದು. ಚೆನ್ನದಾಸರ ಕುಲದೈವ ಹನುಮಂತನಾದರೆ, ಮನೆದೇವರು 'ಮಸುಬಾ' ಒಬ್ಬನೆ. ಬೇರೆ ಪುರುಷ ದೇವರನ್ನು ಈ ಸಮುದಾಯ ಹೊಂದಿಲ್ಲ. ಮಸುಬಾ ದೇವರನ್ನು ಚೆನ್ನದಾಸರು ಸಮುದಾಯ ಹೊರತುಪಡಿಸಿದರೆ ಅಸ್ಪೃಶ್ಯ ಜಾತಿಗಳಾದ ಹೊಲೆಯರು ಮತ್ತು ಮಾದಿಗರ ಸಮುದಾಯದವರು ಜಿಲ್ಲೆಯ ಕೆಲವು ಕಡೆ ಪೂಜಿಸುವ ಪದ್ಧತಿಯಿದೆ. ಹುಕ್ಕೇರಿ ತಾಲೂಕಿನ ಇಟ್ನಿ, ಚಿಕ್ಕೋಡಿ ತಾಲೂಕಿನ ಬೋಜ ಮತ್ತು ಮಲ್ಲಿಕವಾಡ ಗ್ರಾಮಗಳಲ್ಲಿ ಈ ದೇವರ ಸಣ್ಣ ಗುಡಿಗಳಿವೆ. ಈ ಚೆನ್ನದಾಸರ ಸಮುದಾಯದವರು ಇಟ್ನಿ ಗ್ರಾಮದ ದೇವರಿಗೆ ನಡೆದುಕೊಳ್ಳುತ್ತಾರೆ. ಒಟ್ಟಿನಲ್ಲಿ ಮಸುಬಾ ದೇವರು ಅಸ್ಪೃಶ್ಯ ಸಮುದಾಯದ ದೇವರೆಂದು ತಿಳಿದು ಬರುತ್ತದೆ.

ಆರಾಧನಾ ಪದ್ಧತಿ

ಚೆನ್ನದಾಸರ ಸಮುದಾಯದವರು 'ಮಸುಬಾ' ದೇವರನ್ನು ಪೂಜಿಸುವ ವಾರ ಬುಧವಾರ. ದೇವರಿಗೆ ನೈವೇದ್ಯವನ್ನಾಗಿ ಬಾಳೆಹಣ್ಣು, ಸಕ್ಕರೆ, ರೊಟ್ಟಿ ಮತ್ತು ಪಲ್ಯ ಇಲ್ಲವೆ ಸಾದಾ ರೊಟ್ಟಿ ಮತ್ತು ಅಂಬಲಿ. ಜಾತ್ರೆ ಮಾಡುವವರು, ವಿಶೇಷವಾಗಿ ನಡೆದುಕೊಳ್ಳುವವರು ಪ್ರಾಣಿ ಬಲಿ

ಕೊಡುತ್ತಾರೆ. ಪ್ರಾಣಿ ಬಲಿ ಯಾವುದನ್ನೇ ಕೊಟ್ಟರೂ ಅದು ಗಂಡಾಗಿರಬೇಕು. ಅಂದರೆ ಹುಂಜ, ಹೋಂತು, ಕೋಣ, ಹಂದಿಗಳನ್ನು ಬಲಿಕೊಡಲಾಗುತ್ತದೆ. ಆದರೆ ಈ ಸಮುದಾಯ ಹೆಚ್ಚಾಗಿ ಹಂದಿಗಳನ್ನು ಬಲಿಕೊಡುತ್ತಾರೆ.

ಚೆನ್ನದಾಸರ ಸಮುದಾಯದವರು ಈ ದೇವರಿಗೆ ಗುಡಿಯನ್ನು ಕಟ್ಟಿಕೊಂಡಿರುವುದಿಲ್ಲ. ವರುಷಕ್ಕೆ ಒಂದು ಸಾರಿ ಜಾತ್ರೆ ಮಾಡುತ್ತಾರೆ. ನಡುವೆ ಈ ದೇವರಿಗೆ ನಡೆದುಕೊಳ್ಳಬೇಕೆನಿಸಿದರೆ ಹುಕ್ಕೇರಿ ತಾಲೂಕಿನ ಇಟ್ನಗೆ ಹೋಗುತ್ತಾರೆ. ದೇವರ ಜಾತ್ರೆ ಮಾಡಬೇಕು ಎಂದು ಒಂದು ತಿಂಗಳು ಮೊದಲೆ ತೀರ್ಮಾನಿಸಿ ತಮ್ಮ ಬಂಧು-ಬಳಗದವರಿಗೆ ಬರಲು ಹೇಳುತ್ತಾರೆ. ಜಾತ್ರೆಯ ದಿನ ಅಂದರೆ ದೇವರಿಗೆ ಮಾಡುವ ದಿನ ಬುಧವಾರ ತಾವು ವಾಸವಿರುವ ವಾಸಸ್ಥಾನದಿಂದ ದೂರದಲ್ಲಿ ಹಳ್ಳದ ಪ್ರದೇಶ ಅಥವಾ ಕಾಡು ಪ್ರದೇಶದಲ್ಲಿ ಜನವಸತಿ ಇರದ ಜಾಗದಲ್ಲಿ ದೇವರ ಜಾಗ ನಿಗದಿ ಮಾಡುತ್ತಾರೆ. ಏರು ಹೊತ್ತಿಗೆ ಅಂದರೆ ಸೂರ್ಯ ಏರುವ ಹೊತ್ತು, ಬೆಳಿಗ್ಗೆ ಹತ್ತರ ನಂತರ ಅಲ್ಲಿಗೆ ಹೋಗಿ ಮನೆಯ ಯಜಮಾನ ಒಂದು ಗುಂಡಾದ ಕಲ್ಲನ್ನು ಅಲ್ಲಿಯೇ ಹುಡುಕಿ ತರುತ್ತಾನೆ. ಅದನ್ನು ಚೆನ್ನಾಗಿ ತೊಳೆದು ನೀರೆಲ್ಲ ಆರಿದ ನಂತರ ಅದಕ್ಕೆ ಅಡುಗೆ ಎಣ್ಣೆಯಿಂದ ಎರೆಯುತ್ತಾರೆ. ಎಣ್ಣೆ ಹಿಂಗಿದ ನಂತರ ಚಂದ್ರ ಎನ್ನುವ ಕೆಂಪು ಬಣ್ಣದ ಪುಡಿಯನ್ನು ಹಚ್ಚಿ ಅದನ್ನು ತಿಕ್ಕಿ ಕೆಂಪಾಗಿಸುತ್ತಾರೆ. ಇದರಿಂದಾಗಿ ಆ ಕಲ್ಲು ಕಣ್ಣು ಕುಕ್ಕುವ ಹಾಗೆ ಹೊಳೆಯುತ್ತಿರುತ್ತದೆ. ಅದನ್ನು ಸರಿಯಾಗಿ ಒಂದು ಕಡೆ ನಿಲ್ಲಿಸುತ್ತಾರೆ. ಆ ಮೇಲೆ ಸುಣ್ಣದಿಂದ ದೊಡ್ಡದಾದ ಎರಡು ಕಣ್ಣುಗಳನ್ನು ಕೊರೆಯಲಾಗುತ್ತದೆ. ಆ ದೇವರು ವಿಕಾರವಾಗಿ ಕಾಣುತ್ತದೆ. ಅದರ ಮಗ್ಗುಲಲ್ಲಿ ಒಂದು ಕುಡಗೋಲು ಅಥವಾ ಕುರುಪಿಯನ್ನು ಇಡಲಾಗುತ್ತದೆ. ಅದಾದ ಬಳಿಕ ಅರಿಷಿಣ ಕುಂಕುಮ ಹಾಕಿ ಊದಿನ ಕಡ್ಡಿಗಳನ್ನು ಹಚ್ಚುತ್ತಾರೆ. ಉಡಿಯಕ್ಕಿಯನ್ನು ವಿಗ್ರಹದ ಮುಂದೆ ಇಡಲಾಗುತ್ತದೆ. ಬಾಳೆ ಹಣ್ಣನ್ನು ಇಟ್ಟು ಕರ್ಪೂರ ಹಚ್ಚಲಾಗುತ್ತದೆ. ಮನೆಯ ಯಜಮಾನ ಈ ಎಲ್ಲ ಕಾರ್ಯಗಳನ್ನು ಮಾಡುತ್ತಾನೆ. ಹೆಣ್ಣು ಮಕ್ಕಳು ಈ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ.

ಇದಾದ ಬಳಿಕ ಬಂಧು-ಬಳಗದವರ ಸಮ್ಮುಖದಲ್ಲಿ ದೇವರ ಮುಂದೆ ಹಂದಿ ಮರಿಯೊಂದನ್ನು ಬಲಿಕೊಟ್ಟು ದೇವರ ಮುಂದೆ ತೋಡಿದ ಹೊಂಡದಲ್ಲಿ ಅದನ್ನು ಮುಚ್ಚುತ್ತಾರೆ. ನಂತರ ಮತ್ತೊಂದು ದೊಡ್ಡ ಹಂದಿಯನ್ನು ಬಲಿಕೊಡುತ್ತಾರೆ. ಅದರ ಮಾಂಸವನ್ನು ಅಡುಗೆ ಮಾಡುತ್ತಾರೆ. ಮನೆಯಿಂದ ತಂದ ಅಕ್ಕಿಯನ್ನು ಕುದಿಸಿ ಅನ್ನ ಮಾಡುತ್ತಾರೆ. ಅಂದರೆ ಮನೆಯಿಂದ ಏನನ್ನು ತಯಾರಿಸಿಕೊಂಡು ಬರುವುದಿಲ್ಲ. ಎಷ್ಟು ಅಡುಗೆ ಪದಾರ್ಥಗಳು ಬೇಕೊ ಅಷ್ಟನ್ನು ಮಾತ್ರ ಕೊಂಡು ತಂದಿರುತ್ತಾರೆ. ಪಾತ್ರೆಗಳನ್ನು ತಂದಿರುತ್ತಾರೆ.

ಅಡುಗೆ ಸಿದ್ಧವಾದ ನಂತರ ದೇವರಿಗೆ ನೈವೇದ್ಯ ಸಲ್ಲಿಸಿ ಮತ್ತೊಮ್ಮೆ ಊದಿನಕಡ್ಡಿ ಹಚ್ಚಿ ಕರ್ಪೂರ ಉರಿಸಿ, ಎಲ್ಲರೂ ನಮಸ್ಕರಿಸಿ ಬೇಡಿಕೊಳ್ಳುತ್ತಾರೆ. ಈ ಎಲ್ಲ ಕ್ರಿಯೆಗಳಾದ ನಂತರ ಮಾಡಿದ ಅಡುಗೆಯನ್ನು ಸಾಮೂಹಿಕವಾಗಿ ಉಣ್ಣುತ್ತಾರೆ. ಎಲ್ಲ ಅಡುಗೆಯನ್ನು ಇಲ್ಲಿಯೇ ತಿಂದು ಮುಗಿಸಬೇಕು. ಮನೆಗೆ ಮರಳಿ ಏನನ್ನು ಒಯ್ಯುವಂತಿಲ್ಲ. ಅಡುಗೆಯಾಗಲೀ, ಪದಾರ್ಥಗಳಾಗಲಿ ಉಳಿದರೆ ದೇವರ ಮುಂದೆ ಇಟ್ಟು ಹೋಗುತ್ತಾರೆ. ಮನೆಯಿಂದ ತಂದ ನೀರಿನಿಂದ ಪಾತ್ರೆಗಳನ್ನು ತೊಳೆದುಕೊಂಡು ಪಾತ್ರೆಗಳನ್ನು ಮಾತ್ರ ಒಯ್ಯುತ್ತಾರೆ. ಮನೆಗೆ ಹೋದ ನಂತರ ಸ್ನಾನ ಮಾಡಿ ಮಡಿಯಾಗುತ್ತಾರೆ. ಇತ್ತೀಚೆಗೆ ಈ ಮಡಿ ಮೈಲಿಗೆ ಪಾಲಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ರಾಯಬಾಗ ತಾಲೂಕಿನ ಹಿಡಕಲ್ ಗ್ರಾಮದ ಸಾಲಿ ದೊಡ್ಡತಾಯಪ್ಪ ತಾತೆಪ್ಪ ಅಕ್ಕೆನ್ನವರ (ವಯಸ್ಸು-೬೫) ವಿಷಾದ ವ್ಯಕ್ತಪಡಿಸುತ್ತಾರೆ. ಮಸುಬಾ ಮನೆದೇವರಾದರೂ ಮನೆಯಿಂದ ದೂರವಿರುವ ಅಡವಿಗೆ ಹೋಗಿ ಅಲ್ಲಿಯ ಕಲ್ಲನ್ನೇ ಮೂರ್ತಿ ಮಾಡಿ, ಬಲಿಕೊಟ್ಟು ಅಲ್ಲಿಯೇ ಊಟ ಮಾಡಿ ಏನೂ ತಿರುಗಿ ತರದೆ ಮನೆಗೆ ಬರುವ ಪದ್ಧತಿಯನ್ನು ಈಗಲೂ ಈ ಸಮುದಾಯ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆಂದು ಅವರು ಹೇಳುತ್ತಾರೆ. ಈ ಪದ್ಧತಿಯನ್ನು ಪಾಲಿಸದಿದ್ದರೆ ದೇವರು ಕೇಡು ಬಗೆಯುತ್ತಾನೆ. ಆದ್ದರಿಂದ ಮಸುಬಾ ದೇವರ ವಿಷಯದಲ್ಲಿ ಕಟ್ಟು ನಿಟ್ಟು ಈಗಲೂ ಪಾಲಿಸಲಾಗುತ್ತದೆ, ಹಾಗೆ ಪಾಲಿಸಲು ಆಗದಿದ್ದರೆ ದೇವರಿಗೆ ಮಾಡುವುದನ್ನು ಒಂದೊಂದು ಸಾರಿ ಬಿಡುತ್ತೇವೆ ಎಂದು ಹೇಳುತ್ತಾರೆ.

ಮಸುಬಾ ಹಿನ್ನಲೆ

ಈ ಸಮುದಾಯದ ಬಹುತೇಕರಿಗೆ ಮಸುಬಾ ತಮ್ಮ ಮನೆದೇವರು, ಅದೊಂದು ಉಗ್ರದೇವರು ಎಂಬುದಷ್ಟೇ ಗೊತ್ತು. ದೇವರ ಚರಿತ್ರೆಯಾಗಲಿ, ಕುಲ ಪುರಾಣವಾಗಲಿ ಗೊತ್ತಿಲ್ಲ. ಕೇಳಿದರೆ ಹಿಂದಿನಿಂದ ಬಂದ ಪದ್ಧತಿ ಎಂದು ಹೇಳುತ್ತಾರೆ. ಈ ಕುರಿತು ಇದರ ಮಾಹಿತಿಯನ್ನು ಆ ಸಮುದಾಯದ ಕುರಿತು ಅಧ್ಯಯನ ಮಾಡಿದ ಸಾಹಿತಿ ಡಾ. ಯಲ್ಲಪ್ಪ ಹಿಮ್ಮಡಿಯರನ್ನು ಸಂಪರ್ಕಿಸಿದಾಗ ಅವರು ಹೇಳಿದ್ದನ್ನು ಹೀಗೆ ಸಂಗ್ರಹಿಸಲಾಗಿದೆ.

"ಮಸುಬಾ" ಎನ್ನುವುದು ಮರಾಠಿ ಮೂಲದಿಂದ ಬಂದಿರುವ ಪದ. ಮಹಿಷಾಸುರ +ಅಬಾ ಎಂಬುದು ಮಹಿಷಾಸುರಬಾ> ಮಹಿಸೂಬಾ> ಮಸುಬಾ ಎಂದಾಗಿದೆ. ಕನ್ನಡದಲ್ಲಿ ಮಹಿಷಪ್ಪ ಇದ್ದುದ್ದು ಮಸೆಪ್ಪ ಎಂದಾಗಿದೆ. ನಾವು ಹೆಸರಿನ ಮುಂದೆ ಅಪ್ಪ, ಅಮ್ಮ ಹಚ್ಚುವ ಹಾಗೆ ಮರಾಠಿಯಲ್ಲಿ 'ಅಬಾ' ಹಚ್ಚಲಾಗಿದೆ. ಅಬಾ ಎಂದರೆ 'ಅಪ್ಪ' ಎಂದರ್ಥ. ಮಹಿಷಾಸುರ ಅಬಾ

ಎಂಬುದರ ಸಂಕ್ಷಿಪ್ತ ರೂಪವೇ "ಮಸುಬಾ". ಅಂದರೆ ಈ ದೇವರು ಮಹಿಷಾಸುರ. ಮೈಸೂರಿನ ಚಾಮುಂಡಿಬೆಟ್ಟದ ಮಹಿಷಾಸುರನೇ ಈ 'ಮಸುಬಾ'. 'ಮಹಿಷ' ಒಬ್ಬ ಅಸುರ. (ರಾಕ್ಷಸ ಅಥವಾ ದಸ್ಸು, ದಾಸ) ದಸ್ಸು ಅಥವಾ ದಾಸ ಕುಲದವನು. ಅಂಬೇಡ್ಕರ್ ಅವರು ತಮ್ಮ ಸಂಶೋಧನೆ ಯಲ್ಲಿ ಮಹಿಷಾಸುರ ಒಬ್ಬ ದಸ್ಸು ಕುಲದವನು. ದ್ರಾವಿಡ ದೊರೆ. ವಿಷ್ಣುವಿನ ಹತ್ತು ಅವತಾರ ಗಳಿಂದ ನಾಶವಾದವರೆಲ್ಲ ದ್ರಾವಿಡ ದೊರೆಗಳು, ಅವರ ವಂಶಸ್ಥರೇ ಈಗಿನ ಅಸ್ಪೃಶ್ಯ ಸಮುದಾಯ ಎಂದು ಪ್ರತಿಪಾದಿಸಿದ್ದಾರೆ. ಮಸುಬಾ ದೇವರನ್ನು ಈ ಸಮುದಾಯ ಮನೆದೇವರನ್ನಾಗಿ ಮಾಡಿಕೊಂಡಿರುವುದರ ಹಿಂದೆ ಮಹಿಷಾಸುರ ತಮ್ಮ ಕುಲದ ಮೂಲ ಪುರುಷ ಎನ್ನುವ ಅಂಶ ಈ ದಾಸ ಅಥವಾ ಚೆನ್ನದಾಸರ ಸಮುದಾಯಕ್ಕಿದೆ.

ಚಿಕ್ಕೋಡಿ ತಾಲೂಕಿನ ಮಲ್ಲಿಕವಾಡ ಗ್ರಾಮದ ಗುಡಿಯಲ್ಲಿ ಗುಂಡಾದ ತಲೆಯ ಮಸುಬಾ ಮೂರ್ತಿಯಿದೆ. ಉಗ್ರವಾದ ಕಣ್ಣು, ಮೀಸೆಯಿದೆ. ದೇಹವಿಲ್ಲ. ಅಂದರೆ ಪೂರ್ಣದೇಹಾಕೃತಿ ಮೂರ್ತಿಯಿಲ್ಲ. ಹಿಂದೆ ದೊಡ್ಡದಾದ ಸರ್ಪ(ನಾಗ)ವಿದೆ. ಮತ್ತೊಂದು ಕಡೆ ಖಡ್ಗವಿದೆ. ಅದನ್ನು ನೋಡಿದ ತಕ್ಷಣವೇ ಒಂದು ಕೈಯಲ್ಲಿ ಸರ್ಪ ಹಿಡಿದಿರುವ ಮತ್ತೊಂದು ಕೈಯಲ್ಲಿ ಖಡ್ಗ ಹಿಡಿದಿರುವ ಚಾಮುಂಡಿ ಬೆಟ್ಟದ ಮಹಿಷಾಸುರನ ನೆನಪಾಗುತ್ತದೆ. ಕೈಯಲ್ಲಿರುವ ಸರ್ಪ(ನಾಗ) ನಾಗಕುಲವನ್ನೂ, ಮತ್ತೊಂದು ಕೈಯಲ್ಲಿರುವ ಖಡ್ಗ ರಾಜ್ಯಬಾರ ಮಾಡುವ ದೊರೆತನವನ್ನು ಸಂಕೇತಿಸುತ್ತದೆ. ನಾಗ ಕುಲದ ಈ ಅಸುರನಾದ ಮಹಿಷ ಆ ಸಮುದಾಯದ ದೊರೆ. ದೊರೆಯಾದವನು ಗತಿಸಿದ ನಂತರ ದೇವರಾಗುವ, ಪೂಜೆಗೊಳ್ಳುವ ಪರಂಪರೆಯಾಗಿ ಈ ಮಹಿಷಾಸುರ 'ಮಸುಬಾ' ಆಗಿ ಈ ಚೆನ್ನದಾಸರ ಸಮುದಾಯದ ದೇವರಾಗಿ, ಕುಲದ ಕೊಂಡಿಯಾಗಿ ಈ ರೂಪದಲ್ಲಿ ಇನ್ನೂ ಉಳಿದುಕೊಂಡಿದೆ.

ಈ ದೇವರಿಗೆ ಬಲಿಯನ್ನಾಗಿ 'ಹಂದಿ'ಯನ್ನು ಕೊಡುವುದು ಚೆನ್ನದಾಸರ ಸಮುದಾಯ ದಲ್ಲಿ ಮಾತ್ರ, ಇತರ ದಲಿತ ಸಮುದಾಯಗಳು ಹುಂಜ ಮತ್ತು ಹೋಂತ(ಗಂಡು ಮೇಕೆ)ನ್ನು ಬಲಿಕೊಡುವ ಪದ್ಧತಿಯನ್ನಿಟ್ಟುಕೊಂಡಿವೆ. ಬಹುಶ: ವೈದಿಕ ವಿರೋಧಿಯಾದ ಮಹಿಷಾಸುರ ವಿಷ್ಣು ಅವತಾರ ಒಂದರಿಂದ ನಾಶವಾಗಿರುವುದರ ವಿರೋಧವಾಗಿ, ವಿಷ್ಣುವಿನ ಒಂದು ಅವತಾರವಾದ ಹಂದಿಯನ್ನು ಬಲಿಕೊಡುವ ಮೂಲಕ ವಿಷ್ಣು ಅಥವಾ ವೈದಿಕತ್ವವನ್ನು ಬುಡಮೇಲು ಮಾಡುವ ಕ್ರಿಯೆಯ ರೂಪ ಇದಾಗಿರಬೇಕು. ಈ ದಾಸ ಸಮುದಾಯ ದ್ರಾವಿಡ ಮೂಲದ್ದಾಗಿರುವುದರಿಂದ 'ಮಸುಬಾ'ನನ್ನು ಮನೆ ದೈವವನ್ನಾಗಿ ಈ ಸಮುದಾಯ ಮಾಡಿಕೊಂಡು ಆರಾಧಿಸುವುದು, ನಾವು ಮಹಿಷಾಸುರನ ಒಕ್ಕಲು ಅಥವಾ ವಂಶಸ್ಥರು ಎನ್ನುವ ಸಂಬಂಧವನ್ನು ಸೂಚಿಸುತ್ತದೆ.

ಬೆಳಗಾವಿ ಜಿಲ್ಲೆಯ ರಾಯಬಾಗ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ ತಾಲೂಕಿನ ಸಮುದಾಯದವರಲ್ಲಿ 'ಮಸುಬಾ'ನನ್ನು ಆರಾಧಿಸುವುದು ಹೆಚ್ಚು ಮತ್ತು ನಿಯಮಿತವಾಗಿ ಇರುವುದು ಕಂಡು ಬರುತ್ತದೆ.

"ವರುಷಕ್ಕೊಮ್ಮೆ ಬರುವ ಹಬ್ಬಗಳು ಜೀವನದ ರಸನಿಮಿಷಗಳು. ಬಾಳಿಗೆ ತಂಪೆರೆಯುವ ಅಮೃತಬಿಂದುಗಳು, ಪ್ರತಿಯೊಂದು ಹಬ್ಬವೂ ಸಂಪ್ರದಾಯವೇ ಹೌದು, ಆತ್ಮೋದ್ಧಾರದ ಸಾಧನವೂ ಹೌದು. ಹೃದಯ ಹೃದಯಗಳನ್ನೊಟ್ಟುಗೂಡಿಸುವ ಸೇತುಶಕ್ತಿಯೂ ಹೌದು. ಅದು ಐಕ್ಯದ ಮಹತ್ವವನ್ನು ಪ್ರಕಟಪಡಿಸುತ್ತದೆ. ವಿಶ್ವಶಕ್ತಿಯಲ್ಲಿನ ವಿಶ್ವಾಸವನ್ನು ಬಲಪಡಿಸುತ್ತದೆ. ಲೌಕಿಕ ಮತ್ತು ಪಾರಮಾರ್ಥಿಕಗಳ ಸಂಗಮ ಸ್ಥಾನವದು, ಸಾಂಸ್ಕೃತಿಕ ಸಂವರ್ಧನೆ ಹಾಗೂ ಸಂರಕ್ಷಣೆಗಳಲ್ಲಿ ಹಬ್ಬದ ಪಾತ್ರ ಮಹತ್ವ ಪೂರ್ಣವಾದದ್ದು"[3] ಹಬ್ಬಗಳು ಕೇವಲ ಹಬ್ಬಗಳಾಗದೆ, ಚೆನ್ನದಾಸರ ಸಮುದಾಯದ ದೈವರಾಧನೆಗಳೂ ಆಗಿ ಪರಿಣಮಿಸಿವೆ.

ಈ ರೀತಿಯಾಗಿ ಸದರಿ ಸಮುದಾಯ ಧರ್ಮ ಮತ್ತು ದೇವರುಗಳಲ್ಲಿ ಅಪಾರ ನಂಬಿಕೆ ಭಕ್ತಿ ಮತ್ತು ಶ್ರದ್ಧೆಯನ್ನು ಇರಿಸಿಕೊಂಡವರು. ಈ ಸಮುದಾಯವು ಮಾತೃಪ್ರಧಾನವಾಗಿದ್ದು, ಸ್ತ್ರೀ ದೇವತೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದೆ. ಜಾತ್ರೆಗಳಲ್ಲಿ ಪ್ರಾಣಿಬಲಿ ಸಾಮನ್ಯ ಸಂಗತಿಯಾಗಿದೆ. ಯುಗಾದಿ, ನಾಗರಪಂಚಮಿ, ವಿಜಯದಶಮಿ, ದೀಪಾವಳಿ ಮುಂತಾದ ಹಬ್ಬಗಳನ್ನು ಇತರರಂತೆ ಆಚರಿಸುತ್ತಾರೆ. ಆದರೆ ಹಿರಿಯರ ಹಬ್ಬ ಚೆನ್ನದಾಸರ ಸಮುದಾಯದ ಅಸ್ಮಿತೆ ಮತ್ತು ಅನನ್ಯತೆಯನ್ನು ಕಟ್ಟಿಕೊಡುತ್ತದೆ. ಇತರ ಯಾವ ಸಮುದಾಯಗಳಲ್ಲಿ ಕಂಡು ಬಾರದ 'ಮಸುಬಾ' ದೇವರ ಆರಾಧನ ಪದ್ಧತಿ ತುಂಬ ವಿಶಿಷ್ಟವಾಗಿದೆ. ಪ್ರಸ್ತುತ ಚೆನ್ನದಾಸರ ಸಮುದಾಯದ ಧಾರ್ಮಿಕ ನಂಬಿಕೆಗಳು, ಹಬ್ಬಗಳು ಹಾಗೂ ದೈವಾರಾಧನೆಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂದರ್ಶಿಸಿ ಸಮುದಾಯದ ಜೊತೆಗೆ ಸಂವಾದಿಸಿ, ಪ್ರತ್ಯಕ್ಷ ದರ್ಶನದಿಂದ ಕಂಡುಕೊಂಡಿರುವ ಅಂಶಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ಸಾಮಾಜಿಕ ಜೀವನ ವಿಧಾನ

ಒಂದು ಸಮಾಜದ ಸ್ಥಿರತೆ–ಅಸ್ಥಿರತೆ, ಪರಿವರ್ತನೆಯ ರೀತಿ ಮತ್ತು ಅಗಾಧತೆ, ಸ್ವಂತಿಕೆಯ ಅಳಿವು ಉಳಿವುಗಳು, ಸಾಂಸ್ಕೃತಿಕ ಆಳ ಎತ್ತರ ವಿಸ್ತಾರಗಳು ಸಾಮಾಜಿಕ ಪ್ರಬುದ್ಧತೆಯನ್ನು ಅವಲಂಬಿಸಿರುತ್ತದೆ. ಅನಾದಿಕಾಲದಿಂದಲೂ ಮಾನವನ ಬದುಕಿನಲ್ಲಿ ಒಂದಿಲ್ಲಾ ಒಂದು ರೀತಿಯಲ್ಲಿ ಸಾಮಾಜಿಕ ವ್ಯವಸ್ಥೆ ಅಸ್ಥಿತ್ವದಲ್ಲಿತ್ತು. ಗುಹೆಯಲ್ಲಿ ವಾಸಿಸುವಲ್ಲಿ, ಬೇಟೆಯಾಡುವಲ್ಲಿ, ಕೃಷಿ ಕಾಯಕದಲ್ಲಿ ಹೀಗೆ ಪ್ರತಿಯೊಂದು ಘಟ್ಟದಲ್ಲಿಯೂ ಸಾಮಾಜಿಕ ವ್ಯವಸ್ಥೆ

ಮನುಕುಲವನ್ನು ಮುನ್ನಡೆಸುವ ಸಾಧನವಾಗಿತ್ತು. ಮಾನವ ವಿಕಾಸ ಹೊಂದುತ್ತ ಬಂದಂತೆ, ಆತನ ಜೀವನ ವಿಧಾನವೂ ಬದಲಾವಣೆಗೊಳಗಾಯಿತು. ಮುಂದೆ ಹಂತ ಹಂತವಾಗಿ ಪ್ರವರ್ಧಮಾನಕ್ಕೆ ಬಂದ ಮಾನವ ತನ್ನದೆ ಆದ ನಾಗರಿಕತೆಯನ್ನು ಹುಟ್ಟು ಹಾಕಿದನು. ಜನಾಂಗದ ಜೀವನ ವಿಧಾನವು ಸಂಸ್ಕೃತಿಯಾದರೆ, ಆತ ರೂಪಿಸಿಕೊಂಡಿದ್ದು ನಾಗರಿಕತೆಯಾಗಿದೆ. ಸಂಸ್ಕೃತಿ ಮತ್ತು ನಾಗರಿಕತೆ ಎರಡರಲ್ಲೂ ಸಾಮಾಜಿಕ ವ್ಯವಸ್ಥೆ ಅಸ್ಥಿತ್ವದಲ್ಲಿತ್ತು. ನಂತರ ಸಮಾಜದಲ್ಲಿ ವರ್ಣ, ವರ್ಗ, ಕುಟುಂಬ, ಸಂಘ–ಸಂಸ್ಥೆ, ಧರ್ಮ ಕಾನೂನು ಕಟ್ಟಳೆಗಳು ಬೆಳೆದು ಬಂದವು. ಸಾಮಾಜಿಕ ವ್ಯವಸ್ಥೆಯಲ್ಲಿ ರೂಢಿ ಸಂಪ್ರದಾಯಗಳು ಕಾಲಮಾನಕ್ಕೆ ತಕ್ಕಂತೆ ಪರಿವರ್ತನೆಗೊಂಡವು.

ಸಮಾಜದಲ್ಲಿ ಕೌಟುಂಬಿಕ ರಚನೆ, ಜಾತಿ ವ್ಯವಸ್ಥೆ, ಸ್ತ್ರೀಯರ ಸ್ಥಾನಮಾನ, ವಿದ್ಯಾಭ್ಯಾಸ ಮುಂತಾದವುಗಳ ಜೊತೆಗೆ ನ್ಯಾಯ–ಅನ್ಯಾಯಗಳ ತೀರ್ಪುಗಳು ಕೂಡ ಸಮಾಜದ ಮೌಲ್ಯಗಳಾದವು. ವೇದ ಯುಗದ ಪೂರ್ವದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣ ವ್ಯವಸ್ಥೆ ಅಸ್ತಿತ್ವದಲ್ಲಿ ಇರಲಿಲ್ಲ. ತದನಂತರ ವರ್ಣ ವ್ಯವಸ್ಥೆ ಜಾರಿಗೆ ಬಂದಿತು. ಮಾನವ ಬದುಕಿಗೆ ರೂಪಿಸಿಕೊಂಡ ವೃತ್ತಿಗಳು ಮುಂದೆ ಜಾತಿಗಳಾಗಿ ಪಲ್ಲಟಗೊಂಡವು. ವರ್ಣವ್ಯವಸ್ಥೆ ತನ್ನ ಹತೋಟಿಯನ್ನು ಸ್ಥಾಪಿಸಿತು. ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಹಾಗೂ ಶೂದ್ರ ಎಂಬ ನಾಲ್ಕು ವರ್ಣಗಳು ಕಟ್ಟುನಿಟ್ಟಾಗಿ ಪಾಲನೆಗೊಂಡವು. ಈ ನಾಲ್ಕು ವರ್ಗಗಳಲ್ಲದೆ ಇವರಿಗೆ ಸೇವೆ ಸಲ್ಲಿಸಲು ಪಂಚಮ ಮತ್ತು ಚಾಂಡಾಲ ಎಂಬ ವರ್ಗ ಸೃಷ್ಠಿಯಾಯಿತು. ಪ್ರಾರಂಭದಲ್ಲಿ ವರ್ಣವ್ಯವಸ್ಥೆ ಕಟ್ಟುನಿಟ್ಟಾಗಿರಲಿಲ್ಲ. ಶೂದ್ರ ಪಂಚಮರನ್ನುಳಿದು ಮೇಲಿನ ಮೂರು ವರ್ಣಿಯರು ತಮ್ಮಿಷ್ಟದಂತೆ ಯಾವ ವರ್ಗವನ್ನಾದರೂ ಸೇರಿಕೊಳ್ಳಲು ಆಸ್ಪದವಿತ್ತು. ಚಾತುರ್ವರ್ಣಕ್ಕೆ ಆಳರಸರ ಬೆಂಬಲ ದೊರೆತ ಮೇಲೆ ಪುರೋಹಿತಶಾಹಿಗಳು ತಮ್ಮನ್ನೆ ತಾವು ಭೂ–ಸುರರು ಎಂದು ಕರೆದುಕೊಂಡು ಉಳಿದವರೆಲ್ಲ ತಮ್ಮ ಸೇವೆ ಮಾಡಬೇಕೆಂದು ಹುನ್ನಾರು ಮಾಡಿದರು. ವ್ಯವಸ್ಥಿತವಾಗಿ ಉಳಿದವರನ್ನು ಶೋಷಣೆಗೆ ಒಳಪಡಿಸಿದರು. ಶೂದ್ರರು, ಪಂಚಮರು ಮತ್ತು ಸ್ತ್ರೀಯರಿಗೆ ಯಾವುದೆ ಸ್ವಾತಂತ್ರ್ಯವಿರಲಿಲ್ಲ. ತುಂಬ ನಿಷ್ಕೃಷ್ಟವಾಗಿ ಮತ್ತು ಅಮಾನವೀಯವಾಗಿ ಅವರನ್ನು ನಡೆಸಿಕೊಳ್ಳಲಾಯಿತು. ಇನ್ನೂ ಆದಿವಾಸಿ ಹಾಗೂ ಬುಡಕಟ್ಟು ಸಮುದಾಯಗಳನ್ನು ತೀರಾ ಕಡೆಗಣಿಸಲಾಯಿತು. ಶ್ರೇಣಿಕೃತ ವ್ಯವಸ್ಥೆಯಲ್ಲಿ ಬುಡಕಟ್ಟು ಸಮುದಾಯಗಳು ನಲುಗಿ ಹೋದವು. ಭೂ ಒಡೆತನ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಈ ಸಮುದಾಯಗಳು ಆತ್ಮವಿಶ್ವಾಸ ಕಳೆದುಕೊಂಡು ಕೀಳರಿಮೆಗೆ ಒಳಗಾದವು. ಸಾಮಾಜಿಕವಾಗಿ ಈ ಸಮುದಾಯಗಳಿಗೆ ನಾಗರಿಕ ಸಮಾಜದಲ್ಲಿ ಗೌರವದಿಂದ ಬದುಕಲು ಆಸ್ಪದವಿರಲಿಲ್ಲ. ಚಾತುರ್ ವರ್ಣವ್ಯವಸ್ಥೆಯಲ್ಲಿ ಬುಡಕಟ್ಟು ಸಮುದಾಯಗಳು ತಮ್ಮ ಆತ್ಮವಿಶ್ವಾಸವನ್ನು ಕಳೆದುಕೊಂಡವು. ಅತ್ಯಂತ ದಯನೀಯ ಸ್ಥಿತಿಯಲ್ಲಿ ಬದುಕಬೇಕಾಯಿತು. ಇಂಥ ಸಮುದಾಯಗಳಲ್ಲಿ ಚೆನ್ನದಾಸರ

ಸಮುದಾಯವೂ ಒಂದಾಗಿದೆ. ಮುಂದುವರೆದು ಪ್ರಸ್ತುತ ಅಧ್ಯಯನದ ವಸ್ತುವಾದ 'ಬೆಳಗಾವಿ ಜಿಲ್ಲೆಯ ಚೆನ್ನದಾಸರು: ಸಮುದಾಯ ಅಧ್ಯಯನ'ದ ಅಡಿಯಲ್ಲಿ ಈ ಸಮುದಾಯದ ಸಾಮಾಜಿಕ ಜೀವನ ವಿಧಾನವನ್ನು ಕಟ್ಟಿಕೊಡಲಾಗುವುದು.

೪.೩. ಸಂಪ್ರದಾಯಗಳು

ನಮ್ಮ ದೇಶದಲ್ಲಿ ಸಂಪ್ರದಾಯಗಳು ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿವೆ. "ನೈಸರ್ಗಿಕ ಶಕ್ತಿಯನ್ನು ವೃದ್ಧಿಗೊಳಿಸುವ, ನಿಸರ್ಗದೊಡನೆ ಗೆಳೆತನ ಬೆಳೆಸುವ ಉದ್ದೇಶದಿಂದ ವಿಧಿ-ಕ್ರಿಯೆಗಳು ಉಗಮಗೊಳ್ಳುತ್ತವೆ. ಭಿತ್ತನೆ, ಕಟಾವು, ಒಕ್ಕಣೆ ಋತುಮಾನಸಾರಿಯಾಗಿದ್ದ ರಿಂದ ಅವು ವಿಧಿಕ್ರಿಯೆಗಳಾದವು. ಆ ಕೃಷಿ ಕರ್ಮಗಳಿಗೆ ಸಂಬಂಧಿಸಿದ ಕುಣಿತ, ಹಾಡು, ಹಬ್ಬ-ಹರಿದಿನಗಳು ಮುಂದೆ ಸಂಪ್ರದಾಯಗಳಾಗುತ್ತವೆ"[೪] ಎಂದು ಡಾ. ಜವರೇಗೌಡರು ವಿವರಿಸುತ್ತಾರೆ. ಮತ್ತೆ ಮುಂದುವರೆದು "ಸಮಾಜವನ್ನು ನಿಯಂತ್ರಿಸುವ ಮತ್ತು ಅದನ್ನು ಸರಿಯಾದ ದಾರಿಯಲ್ಲಿ ಕೊಂಡೊಯ್ಯುವ ಶಕ್ತಿ ಸಂಪ್ರದಾಯಕ್ಕಿದೆ. ಎಂತಹ ದರ್ಪಿಷ್ಟನಾದ ವ್ಯಕ್ತಿಯು ಅದಕ್ಕೆ ತಲೆಬಾಗಲೇಬೇಕು. ಇಲ್ಲವಾದರೆ ಅವನು ನಿಶ್ಚಿಂತೆಯಿಂದ ನಿರಾಂತಕವಾಗಿ ಬಾಳು ನಡೆಸುವುದು ಕಷ್ಟವಾಗುತ್ತದೆ. ಅವನಿಗೆ ಸಮಾಜದಲ್ಲಿ ಬೆಲೆಯಿಲ್ಲವಾಗುತ್ತದೆ. ಸಂಪ್ರದಾಯಗಳಿಗೆ ವಿರೋಧವಾಗಿ ವರ್ತಿಸುವ ವ್ಯಕ್ತಿ ಬಹಿಷ್ಕಾರಕ್ಕೆ ಗುರಿಯಾಗುತ್ತಾನೆ. ಆಧುನಿಕ ಸಮಾಜಕ್ಕಿಂತ ಆದಿಮಾನವ ಸಮಾಜದಲ್ಲಿ, ನಾಗರೀಕ ಜನಾಂಗಗಳಿಗಿಂತ ಬುಡಕಟ್ಟು ಜನರಲ್ಲಿ, ಪಟ್ಟಣಗಳಿಗಿಂತ ಹಳ್ಳಿಗಳಲ್ಲಿ ಸಂಪ್ರದಾಯಗಳು ಪ್ರಬಲವಾಗಿರುತ್ತವೆ"[೫] ಎಂದು ವಿಶ್ಲೇಷಿಸಿದ್ದಾರೆ. ಮಾನವನ ಜನನದಿಂದ ಮರಣದವರೆಗೆ ನಡೆಯುವ ಚಟುವಟಿಕೆಗಳಲ್ಲಿ ತಪ್ಪದೆ ಸಂಪ್ರದಾಯವನ್ನು ಪಾಲಿಸುತ್ತಾರೆ. ಎಲ್ಲ ಸಮುದಾಯಗಳಲ್ಲಿಯು ಸಂಪ್ರದಾಯಕ್ಕೆ ತನ್ನದೆ ಆಗಿರುವ ಮನ್ನಣೆಯಿದೆ.

ಚೆನ್ನದಾಸರ ಸಮುದಾಯದಲ್ಲಿ "ಸಂಪ್ರದಾಯ"ಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಜನನ, ನಾಮಕರಣ, ಋತುಮತಿ, ಮದುವೆ, ಸೀಮಂತ, ಮರಣ ಮುಂತಾದವು ಮುಖ್ಯವಾಗಿವೆ.

೪.೩.೧. ಜನನ

ಚೆನ್ನದಾಸರ ಸಮುದಾಯದಲ್ಲಿ ಮೊದಲ ಹೆರಿಗೆ ಸಾಮಾನ್ಯವಾಗಿ ತವರು ಮನೆಯಲ್ಲಿ ಜರುಗುವುದು ಸಂಪ್ರದಾಯವಾಗಿದೆ. ಮಗು ಜನಿಸಿದ ತರುವಾಯ ಮಾಸ (ಮಗುವಿನ ರಕ್ಷಣಾ ಪೊರೆ)ಯನ್ನು ಕುಣಿ ತೆಗೆದು ಹೂಳುವ ರೂಢಿ ಇದೆ. ಬೆಳಗಾವಿ ಜಿಲ್ಲೆಯಲ್ಲಿ ಮಗುವಿನ ಮಾಸನ್ನು

ಮಣ್ಣಿನ ಮಡಿಕೆಯಲ್ಲಿ ಹಾಕಿ ಮೂರು ದಿವಸ ಇಡುತ್ತಾರೆ. ಮಗು ಜನಿಸಿದ ಮೂರನೆ ದಿನಕ್ಕೆ ಹಿತ್ತಲಲ್ಲಿ ನಾಲ್ಕು ಜನ ಮಹಿಳೆಯರು ಕೌದಿ ಹಿಡಿದು ಆಸರೆ ಮಾಡಿ, ಅದರ ಆಸರೆಯಲ್ಲಿ ತಾಯಿ ಮತ್ತು ಮಗುವಿಗೆ ಬಿಸಿನೀರ ಸ್ನಾನ ಮಾಡಿಸಿ, ಗಡಿಗೆಯಲ್ಲಿ ತುಂಬಿಟ್ಟ ಮಾಸವನ್ನು ಅಲ್ಲಿಯೇ ನೆಲ ಬಗೆದು ಮುಚ್ಚುತ್ತಾರೆ. ಕೆಲವಡೆ ಮಗು ಜನಿಸಿದ ದಿನವೆ ಮಾಸವನ್ನು ಗಡಿಗೆಯಲ್ಲಿ ತುಂಬಿ, ತಾಯಿಗೆ ನೀರು ಹಾಕುವ ಸ್ಥಳದಲ್ಲಿ ಹೂತಿಡುವುದಿದೆ. ಮತ್ತೆ ಕೆಲವೆಡೆ ಮಾಸನ್ನು ಮೂರು ದಿನಗಳಲ್ಲಿ ಹೂಳುತ್ತಾರೆ. ಮಾಸನ್ನು ಬಿಡಿಸಿದ ಸೂಲಗಿತ್ತಿಯರಿಗೆ ಎಲೆ, ಅಡಿಕೆ, ಕುಂಕುಮ, ಕೊಬ್ಬರಿ, ಕಾರಿಕ್ ಅರಿಷಿನ ಮುಂತಾದವುಗಳಿಂದ ಉಡಿ ತುಂಬುತ್ತಾರೆ. ಕುಪ್ಪಸಖಣ, ಆರ್ಥಿಕವಾಗಿ ಸ್ಥಿತಿವಂತರಾಗಿದ್ದರೆ ಸೂಲಗಿತ್ತಿಯರಿಗೆ ಸೀರೆ ಉಡಿಸುತ್ತಾರೆ. ಬಾಣಂತಿತನವನ್ನು ಮಾಡಿದ ಸೂಲಗಿತ್ತಿಯರು ಮೂರುದಿನ ಇಲ್ಲವೇ ಐದು ದಿನ ಮುಟ್ಟಿಸಿಕೊಳ್ಳದೆ ಇರುತ್ತಾರೆ. ಮಗುವಿನ ಮಾಸನ್ನು ಹೂತಿರುವ ಸ್ಥಳದಲ್ಲಿ ಪೂಜೆ ಮಾಡುವುದುಂಟು. ಹಾಗೆ ಮಾಸಿಗೆ ಪೂಜೆ ಮಾಡುವುದರಿಂದ ಮಕ್ಕಳಾಗದವರಿಗೆ ಮಕ್ಕಳಾಗುತ್ತವೆಂಬ ನಂಬಿಕೆ ಈ ಜನಾಂಗದಲ್ಲಿದೆ.

ಮಗು ಹುಟ್ಟಿದ ಮೂರು ದಿವಸ ಅಥವಾ ಐದು ದಿವಸ ಸೂತಕವನ್ನು ಆಚರಿಸುತ್ತಾರೆ. ಐದನೆಯ ದಿವಸ ಮಗು ಜನಿಸಿದ ಸ್ಥಳದಲ್ಲಿ ಕೋಳಿ ಕೊಯ್ದು, ಎಲ್ಲರ ಸಮ್ಮುಖದಲ್ಲಿ ಮಾಸನ್ನು ಹೂಳಿ, ಅನ್ನದ ಮುದ್ದೆ ಹಾಕಿ ಪೂಜಿಸುವ ವಾಡಿಕೆ ಇದೆ. ಇದಕ್ಕೆ 'ಈರ್ಲ' ವೆಂದು ಕರೆಯುತ್ತಾರೆ. ಕೂಸಿನ ತಾಯಿ ಒಂಭತ್ತು ದಿನಗಳವರೆಗೆ ಮುಡಚಟ್ಟ(ಯಾರನ್ನು ಮುಟ್ಟಬಾರದು) ನಲ್ಲಿ ಇರುತ್ತಾಳೆ. ತದನಂತರ ಗಂಗಾ ಪೂಜೆ ಮಾಡುತ್ತಾರೆ. ಇದಕ್ಕೆ 'ಸೀತಾಳಪೂಜೆ' ಎಂದು ಕರೆಯುವುದುಂಟು. ಗಂಗಾಪೂಜೆ ಮಾಡಿ ನೀರು ಮುಟ್ಟಿದ ಮೇಲೆ ಅವಳು ಎಂದಿನಂತೆ ಸರ್ವರನ್ನು ಸಂಪರ್ಕಿಸಬಹುದು. ದೈನಂದಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬಹುದು. ಅಲ್ಲಿಗೆ ಸೂತಕ ಕಳೆಯಿತು. ಮಗುವಿನ ಹಣೆಬರಹ ಚೆನ್ನಾಗಿರಲೆಂಬ ಆಶಯದಿಂದ 'ಶೆಟವಿ' ಪೂಜೆಯನ್ನು ಮಾಡುತ್ತಾರೆ.

ಮಗು ಮತ್ತು ತಾಯಿ (ಬಾಣಂತಿ)ಗೆ ಐದು ದಿನಗಳವರಗೆ ಬಿಸಿ ನೀರಿಗೆ ಬೇವಿನ ತೊಪ್ಪಲು ಬೆರಿಸಿ, ಮೈಗೆ ಅರಿಷಿನ ಹಚ್ಚಿ ಸ್ನಾನ ಮಾಡಿಸುತ್ತಾರೆ. ಮಗುವನ್ನು ಎರಡು ಹೊತ್ತು ಎಣ್ಣಿ ಹಚ್ಚಿ ಎರೆಯುತ್ತಾರೆ. ಕೆಲವಡೆ ಲಕ್ಕಿತಪ್ಪಲು, ಬಣಜೂರಿಗೆ ತಪ್ಪಲು ಹಾಕಿ ನೀರು ಕುದಿಸಿ ಬಿಸಿನೀರಿನಿಂದ ಬಾಣಂತಿ ಮತ್ತು ಮಗುವನ್ನು ಎರೆಯುತ್ತಾರೆ. ಕೂಸು ಹುಟ್ಟಿದ ಐದನೆಯ ದಿವಸಕ್ಕೆ ಹೊರಸಿನ ಕಾಲಿಗೆ ಹಗ್ಗ ಕಟ್ಟಿ ಜೋಳಿಗೆ ಮಾಡಿ ಕೂಸನ್ನು ಮಲಗಿಸುತ್ತಾರೆ. ಮಗುವಿಗೆ ಐದು ದಿನವಾದಾಗ ಪುಟ್ಟ ಸಮಾರಂಭ ಏರ್ಪಡಿಸುತ್ತಾರೆ. ಅದನ್ನು ' ಐದೇಶಿ' ಯೆಂದು ಕರೆಯುತ್ತಾರೆ.

ಬಾಣಂತಿಗೆ ಬಿಸಿಯೂಟ, ಸಿಹಿತಿನಿಸು (ಖೊಬ್ಬರಿಕಾರ) ಕೊಡುತ್ತಾರೆ. ಸತ್ವಯುತವಾದ ಆಹಾರ ಕೊಡಬೇಕೆಂದು ತಿಳುವಳಿಕೆಇದರ ಹಿಂದಿದೆ.

೪.೩.೨. ನಾಮಕರಣ

ಹುಟ್ಟಿದ ಮಗುವಿಗೆ ಸಾಮಾನ್ಯವಾಗಿ ಒಂಭತ್ತನೆಯ ದಿವಸಕ್ಕೆ ನಾಮಕರಣ ಮಾಡುವುದುಂಟು. ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದಲ್ಲಿ ಹೆಣ್ಣು ಮಗುವಿಗೆ ಹನ್ನೆರಡನೆಯ ದಿವಸಕ್ಕೆ, ಗಂಡು ಮಗುವಾದರೆ ಹದಿಮೂರನೆಯ ದಿವಸಕ್ಕೆ ಹೆಸರಿಡುತ್ತಾರೆ. ಇದಕ್ಕೆ ನಾಮಕರಣ ಸಮಾರಂಭವೆಂದು ಶಿಷ್ಟರು ಕರೆಯತ್ತಾರೆ. ಮಗುವಿಗೆ ನಾಮಕರಣ ಮಾಡುವಾಗ ಜಿಲ್ಲಿಡಾರು(ಅಂದರೆ ಎಕ್ಕೆ ಹೂವಿನಿಂದ ಮಾಡಿದ ದಾರವನ್ನು ಮಗುವಿಗೆ ತೊಡಿಸುತ್ತಾರೆ. ಗಂಡು ಮಗುವಾಗಿದ್ದರೆ ಉಡದಾರದಂತೆ ಕಟ್ಟುತ್ತಾರೆ. ಮೂರು ದಿನಗಳವರೆಗೆ ಮಗುವಿನ ಮೈಮೇಲಿರುತ್ತದೆ. ಮೂರು ದಿನಗಳ ಬಳಿಕ ಬಿಚ್ಚಿ ಅದರ ಬದಲಾಗಿ ಕಾಶಿ(ಕರಿ)ದಾರ ಕಟ್ಟುತ್ತಾರೆ. ನಾಮಕರಣಕ್ಕೆ ಬಂಧು, ಬಳಗದವರು, ಸಂಬಂಧಿಕರನ್ನು ಕರೆಸಿಕೊಳ್ಳುತ್ತಾರೆ. ತೊಟ್ಟಿಲುಕಟ್ಟಿ, ಅದಕ್ಕೆ ಪೂಜೆಸಲ್ಲಿಸಿ, ಜೋಗುಳ ಪದಗಳನ್ನು ಹಾಡಿ, ಸೋದರಮಾವನಿಂದ ಮಗುವಿಗೆ ನಾಮಕರಣ ಮಾಡಿಸುತ್ತಾರೆ.

ಮಗುವಿಗೆ ಸೋದರಮಾವನಾಗುವವ ಇಲ್ಲದೆ ಹೋದರೆ, ಮಾವ ಆಗುವ ವ್ಯಕ್ತಿಯಿಂದ ಹೆಸರಿಡಿಸುತ್ತಾರೆ. ಮಗುವಿಗೆ ಹೆಸರು ಹೇಳುವ ಮೊದಲು ಮನೆದೇವರ ಹೆಸರಿನಿಂದ ಕರೆಯು ವುದು, ಕುಲದೇವರ ಹೆಸರಿನಿಂದ ಕೂಗುವುದು ಇದಾದ ಮೇಲೆ ನಿಜವಾದ ಹೆಸರನ್ನು ಕರೆಯುತ್ತಾರೆ. ಮಗುವಿಗೆ ಇಡಬೇಕಾದ ಹೆಸರನ್ನು ಮೂರು ಬಾರಿ ಕೂಗುತ್ತಾರೆ. ಮಗುವಿನ ಕಿವಿಯಲ್ಲಿ ಸಾವಕಾಶವಾಗಿ ಹೇಳವುದು. ಎರಡು ಬಾರಿ ಮೆಲ್ಲಗೆ ಹೇಳಿ ಕೊನೆಗೆ 'ಕುರ್ರ್ರ' ಎಂದು ಜೋರಾಗಿ ಕೂಗುವ ವಾಡಿಕೆಯಿದೆ. ಮಗುವಿನ ಕಿವಿಯಲ್ಲಿ ಕೂಗಿ ಹೇಳುವಾಗ, ಬಾಗಿದ ಬೆನ್ನಿಗೆ ಎಲ್ಲರೂ ಬಡಿಯುತ್ತಾರೆ. ಮೂರು ಬಾರಿ ಇದು ಪುನರಾವರ್ತನೆಗೊಳ್ಳತ್ತದೆ.

ಹೆಸರಿಟ್ಟ ನಂತರ ತೊಟ್ಟಿಲಲ್ಲಿ ಶಿಶುವಿನ ಹತ್ತಿರವಿಟ್ಟಿರುವ ಗಂಟು ಮಾವನಿಗೆ ಸೇರಿದ್ದು. ಗುಗ್ಗುರಿಕಾಳು, ಚುರುಮರಿ, ಚಿಲ್ಲರೆ ಹಣ ಇತ್ಯಾದಿ ಸಾಮಗ್ರಿಗಳನ್ನು ಬಿಳಿಬಟ್ಟೆಯಲ್ಲಿ ಕಟ್ಟಿದ್ದನ್ನು ಮಾವನಾದವನು ತೆಗೆದುಕೊಳ್ಳುವನು. ಅದನ್ನು ಸೋದರಮಾವನ ಚಾಜು, ಸೋದರಮಾವನ ಗಂಟು ಅಥವಾ 'ಮ್ಯಾನಮಾಮಗಂಟು'ಎಂದು ಕರೆಯುತ್ತಾರೆ.

ನಾಮಕರಣವಾಗಿ ಸೊದರಮಾವ ತನ್ನ ಚಾಜ ಪಡೆದ ಮೇಲೆ ಬಂದವರಿಗೆಲ್ಲ ಗುಗ್ಗರಿ, ಚುರುಮರಿ ಹಂಚುತ್ತಾರೆ. ಆರ್ಥಿಕವಾಗಿ ಸಬಲರಾದವರು ಊಟವನ್ನು ಬಡಿಸುತ್ತಾರೆ. ಹೆಸರಿಡಲು ಬರಿಗೈಲಿ ಬರಬಾರದು. ಮಗುವಿಗೆ ಬಟ್ಟೆ, ಬಾಣಂತಿಗೆ ಬ್ಲೌಜು, ರಕ್ತಸಂಬಂಧಿಗಳು ಆಭರಣ ತಂದಿರುತ್ತಾರೆ. ಆಯರಿ (ಅಥವಾ ಮುಯ್ಯಿ) ಮಾಡುವ ಪರಿಪಾಠವಿದೆ.

೪.೩.೩. ಜವುಳ ತೆಗೆಸುವುದು

ಮಗು ಜನಿಸಿದ ಮೂರು ತಿಂಗಳಲ್ಲಿ ಅಥವಾ ಐದು ತಿಂಗಳಲ್ಲಿ ತಲೆಕೂದಲು ತೆಗೆಸುವುದುಂಟು. ಅದಕ್ಕೆ 'ಜವಳಾ' (ಜಡೆ) ತೆಗೆಯುವುದೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ನಾಲ್ಕು, ಆರು, ಎಂಟು, ಹತ್ತು ಹೀಗೆ ಸರಿ ತಿಂಗಳಲ್ಲಿ, ಗಂಡು ಮಗುವಾದರೆ ಮೂರು, ಐದು, ಏಳು, ಒಂಭತ್ತು, ಹನ್ನೊಂದು ಹೀಗೆ ಬೆಸ ತಿಂಗಳಲ್ಲಿ ಜಡೆ ತೆಗೆಯವುದುಂಟು. ಮಗುವಿಗೆ ವರುಷ ತುಂಬುವುದರಲ್ಲಿ ಜವುಳ ತೆಗೆಯಿಸಬೇಕು. ಇಲ್ಲದಿದ್ದರೆ ಮೂರನೆಯ ವರುಷದವರೆಗೆ ಕಾಯಬೇಕು. ಮನೆದೇವರ ಗುಡಿಯಲ್ಲಿ ಜವುಳ ತೆಗೆಯುವ ವಾಡಿಕೆಯಿದೆ. ಹರಕೆ ಹೊತ್ತವರಿಗೆ ಹರಕೆ ಹೊತ್ತ ದೇವಸ್ಥಾನದಲ್ಲಿ ಈ ಕಾರ್ಯಕ್ರಮ. ಇಲ್ಲವಾದರೆ, ಮನೆ ದೇವರಿಗೆ ಎಲೆ-ಕತ್ತರಿ ಕೊಟ್ಟು ಬಂದು, ಮನೆಯಲ್ಲಿ ಈ ಕಾರ್ಯ ಮುಗಿಸುವರು. ಜಡೆ ತೆಗೆಯಲು ಮಗುವಿನ ಸೋದರ ಮಾವನೆ ಬೇಕು. ಇದೊಂದು ಕೌಟುಂಬಿಕ ಆಚರಣೆ. ಸರಳವಾಗಿ ಆಚರಿಸುವುದುಂಟು. ಸೋದರಮಾವ ಮಗುವಿಗೆ ಆಯಾರ ಮಾಡುವುದು ಸಂಪ್ರದಾಯ. ಜಡೆ ತೆಗೆದ ಮೇಲೆ ಮಗುವಿನ ಕೂದಲನ್ನು ಕಟ್ಟಿ ಹೊಳೆಯೊಳಗೆ ಬಿಡುತ್ತಾರೆ.

ಜಡೆ ತೆಗೆಯುವ ಕಾರ್ಯಕ್ರಮವನ್ನು ಪ್ರೊ. ಬಿ.ವ್ಹಿ. ಗುಂಜೆಟ್ಟಿಯವರು ಹೀಗೆ ವಿವರಿಸಿದ್ದಾರೆ. "ಚೌಲಕರ್ಮ ಮಾಡುವಾಗ, ಹನುಮಂತ ದೇವರ ಗುಡಿಯಲ್ಲಿ ಪೂಜಾರಿಯ ತೊಡೆಯ ಮೇಲೆ ಮಗುವನ್ನು ಮಲಗಿಸಿ, ಅವನ ಕೈಲಿಂದಲೆ ಎರಡು ಕೂದಲನ್ನು ಕತ್ತರಿಸಿ ತೆಗೆಯುವರು. ಅನಂತರ ಸೋದರಮಾವ ಮಗುವಿನ ಕೂದಲನ್ನು ಕತ್ತರಿಸುವನು. ೧೦-೧೧ ವರುಷದವರೆಗೆ 'ಮುಂಜವಿ' ಎನ್ನುವ ವಿಧಿ ಮುಗಿಯುವವರೆಗೂ ಸಮುದಾಯದ ಬಳಗದವರೆ ಮಗುವಿನ ಕೂದಲನ್ನು ಕತ್ತರಿಸುವರು. ಮುಂಜವಿ ನಂತರ ನಾವಿದನಿಂದ(ನಾವಲಿಗ) ಕೂದಲನ್ನು ತೆಗೆಯಿಸಬಹುದಾಗಿದೆ."[೬] ಇದು ಜಡೆ ತೆಗೆಯುವ ವಿಧಿವಿಧಾನಗಳನ್ನು ಸ್ಪಷ್ಟಗೊಳಿಸುತ್ತದೆ.

೪.೩.೪. ಋತುಮತಿ (ದೊಡ್ಡವಳಾಗುವುದು)

ಚೆನ್ನದಾಸರ ಸಮುದಾಯದಲ್ಲಿ ಹೆಣ್ಣು ಋತುಮತಿಯಾದರೆ, 'ದೊಡ್ಡವಳಾಗುವುದು' ಎನ್ನುತ್ತಾರೆ. ಋತುಮತಿಯಾದ ಸಂದರ್ಭದಲ್ಲಿ ಮೊದಲಿನ ಐದು ದಿವಸ ಅವಳು ಏನೂ ಮುಟ್ಟಬಾರದು. ಮನೆಯವರೂ ಅವಳನ್ನು ಮುಟ್ಟುವಂತಿಲ್ಲ. ಪ್ರತ್ಯೇಕವಾಗಿ ಕುಳ್ಳಿರಿಸುವರು. ಮನೆ ಬಿಟ್ಟು ಹೊರಗೆ ಹೋಗುವಂತಿಲ್ಲ. ಹೊರಗೆ ಹೋಗಲೆಬೇಕಾದರೆ ತಲೆಯ ಮೇಲೆ ಮುಸುಕು ಹಾಕಿಕೊಂಡು, ಕೈಯೊಳಗೆ ಬೇವಿನ ತೊಪ್ಪಲು, ಲಿಂಬೆಹಣ್ಣು ಹಿಡಿದೆ ಹೋಗಬೇಕು. ಭೂತ-ಪಿಶಾಚಿಗಳ ಕಾಟ ತಪ್ಪಿಸಲು, ಕೆಟ್ಟ ದೃಷ್ಟಿಯಿಂದ ರಕ್ಷಿಸಿಕೊಳ್ಳಲು ಮಾಡಿದ ಉಪಾಯವಿದು. ಊಟದ ತಟ್ಟೆ, ನೀರು ಕುಡಿಯುವ ತಂಬಿಗೆ ಪ್ರತ್ಯೇಕವಾಗಿ ಇಡುವುದುಂಟು. ಊಟವನ್ನು ದೂರದಿಂದಲೆ ಎತ್ತಿಕೊಡುತ್ತಾರೆ. ಏನೇ ಕೊಟ್ಟರೂ ಎತ್ತಿಯೇ ಕೊಡಬೇಕು. ಅವಳು ಮುಟ್ಟದೆ ನೆಲಕ್ಕಿಟ್ಟ ಮೇಲೆ ಸ್ವೀಕರಿಸಬೇಕು. ಮುಟ್ಟಿದರೆ ಮೈಲಿಗೆಯಾಗುತ್ತದೆ ಎಂಬ ನಂಬಿಕೆಯಿದೆ.

ಋತುಮತಿಯಾದಾಗ ಸೋದರ ಮಾವನು ಅವಳ ತಲೆಯ ಮೇಲೆ ಕೊಬ್ಬರಿ ಗಿಟಕನ್ನು ಮುರಿಯುವನು. ಕೊಬ್ಬರಿ, ಖಾರಿಕ, ತುಪ್ಪ, ಬೆಲ್ಲ, ಗೋಡಂಬಿ, ಮಣೂಕ ಎಲ್ಲವನ್ನು ಬೆರೆಸಿ ಸಿಹಿ ತಿನಿಸು ಮಾಡಿ ಕೊಡುವರು. ಪೌಷ್ಠಿಕ ಆಹಾರ ದೊರೆಯಲೆಂಬ ಆಶಯ ಇದರ ಹಿಂದೆ ಅಡಗಿದೆ. ಐದು ದಿವಸ ಸೂತಕ ಕಳೆದ ಮೇಲೆ, ಐದು ಜನ ಮುತ್ತೈದೆಯರು ಅವಳಿಗೆ ತಲೆಯ ಮೇಲೆ ನೀರು ಹಾಕಿ ಮಜ್ಜನ ಮಾಡಿಸುವರು. ಆ ಮೇಲೆ ಉಡಿ ತುಂಬುವ ಕಾರ್ಯಕ್ರಮ. ಸೋದರ ಮಾವನಿಂದ ಉಡಿ ತುಂಬಿಸುವರು. ಈ ನಡುವೆ ಬಳಗದವರು ಎಡೆ ಕೊಡುವ (ಸಿಹಿಯೂಟ) ಕಾರ್ಯಕ್ರಮ ನಡೆಯುತ್ತದೆ. ಕಂಬಳಿ ಹಾಸಿ, ಶಾಸಕ್ಕಿ ಹೊಯ್ದು, ಅದರ ಮೇಲೆ ಕುಳ್ಳಿರಿಸಿ ಸೋದರ ಮಾವನಿಂದ ಉಡಿ ತುಂಬಿಸಿದ ಮೇಲೆ ಐದು ಜನ ಮುತ್ತೈದೆಯರು ಆರತಿ ಮಾಡುವರು. ಕುಳ್ಳಿರಿಸಿದ ಆರಂಭದ ದಿವಸದಿಂದ ಮೊದಲುಗೊಂಡು ಐದನೆಯ ದಿನದವರೆಗೆ ಅಂದರೆ ಎಬ್ಬಿಸುವವರೆಗೂ ದಿನಂಪ್ರತಿ ಸಾಯಂಕಾಲ ಸೋಬಾನೆ ಪದಗಳನ್ನು ಹಾಡುವುದು ವಾಡಿಕೆ. ಮುತ್ತೈದೆಯರು ಐದು ಜನ ಸೇರಿ ಆರತಿ ಮಾಡಿ, ತಮ್ಮ ಗಂಡನ ಹೆಸರು ಹೇಳಿ, ಕುಳ್ಳಿರಿಸಿದ ಹುಡುಗಿಯನ್ನು ಎಬ್ಬಿಸುತ್ತಾರೆ.

ಬೆಳಗಾವಿ ಜಿಲ್ಲೆಯಲ್ಲಿ ವಿಶೇಷವಾಗಿ ಮಹಾರಾಷ್ಟ್ರದ ಗಡಿಭಾಗದಲ್ಲಿ ಕಡೆಯ ದಿವಸ ಸೋದರ ಮಾವ ಸೀರೆ, ಕುಪ್ಪಸ, ಹೂವಿನ ದಂಡೆ, ತೆಂಗು, ಬಾಳೆ, ಉಡಿಯಕ್ಕಿ ತಂದು ಹುಡುಗಿಯ ಉಡಿ ತುಂಬುವನು. ಬ್ಯಾಟಿ (ಕೋಳಿ)ಕೊಯ್ದು, ರಕ್ತದಲ್ಲಿ ಅದ್ದಿದ ಬೊಟ್ಟನ್ನು ಸೋದರಮಾವನು ಹುಡಗಿಯ ಹಣೆಗೆ ತಿಲಕವಿಡುವನು. ನಂತರ ಬ್ಯಾಟಿಯ ಅಡುಗೆ ಮಾಡಿ, ಮನೆಯವರು ಸೇರಿ

ಊಟ ಮಾಡುತ್ತಾರೆ. ಇದಾದ ಮೇಲೆ ಋತುಮತಿಯಾದವಳ (ಮೈನೆರೆದವಳ) ಸೂತಕ ಕಳೆಯುತ್ತದೆ. ನಂತರ ಅವಳು ದೈನಂದಿನ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾಳೆ.

೪.೩.೫. ಮದುವೆ

ಮದುವೆಯು ಆಧುನಿಕ ನಾಗರಿಕ ಜಗತ್ತಿನ ಸಾಮಾಜಿಕ ಸಂಸ್ಥೆಗಳಲ್ಲಿ ಮಹತ್ತರ ಸ್ಥಾನ ಪಡೆದಿದೆ. ಮಾನವನಿಗೆ ಹಸಿವು, ನಿದ್ದೆ, ಲೈಂಗಿಕ ಅಪೇಕ್ಷೆಗಳು ಮೂಲ ಪ್ರವೃತ್ತಿಗಳಾಗಿವೆ. ಆ ಲೈಂಗಿಕ ಅಪೇಕ್ಷೆಯನ್ನು ಪೂರೈಸುವ ಕಾರ್ಯವನ್ನು ಸಮಾಜದ ವತಿಯಿಂದ ಆಗಬೇಕಾಗುತ್ತದೆ. ಆದುದರಿಂದ ಇಂತಹ ಪ್ರಭಲ ಪ್ರವೃತ್ತಿಯನ್ನು ವ್ಯವಸ್ಥಿತವಾಗಿ ಪೂರೈಸಿ ಕೊಳ್ಳಲು ವ್ಯಕ್ತಿಗಳಿಗೆ ಅನುವು ಮಾಡಿಕೊಡುವ ಸದುದ್ದೇಶದಿಂದ ಸಮಾಜವು ಕೆಲವು ಕಟ್ಟುಪಾಡುಗಳನ್ನು ರೂಪಿಸಿರುತ್ತದೆ. ಅಂತಹ ಕಟ್ಟು ಪಾಡುಗಳಲ್ಲಿ ಮದುವೆಯೂ ಒಂದು.

ಧರ್ಮ ಸಂತಾನೋತ್ಪತ್ತಿ ಮತ್ತು ಕಾಮ ತೃಪ್ತಿಯ ಶಾರೀರಿಕ, ಸಾಮಾಜಿಕ ಮತ್ತು ಅಧ್ಯಾತ್ಮಿಕ ಉದ್ದೇಶಗಳಿಗಾಗಿ ಪುರುಷ ಮತ್ತು ಸ್ತ್ರೀ ಶಾಶ್ವತವಾದ ರೀತಿ ಸಂಬಂಧವುಳ್ಳವರಾಗುವ ಧಾರ್ಮಿಕ ಸಂಸ್ಕಾರವನ್ನು ಮದುವೆ ಎಂದು ಕರೆಯಲಾಗುತ್ತದೆ. ಭಾರತೀಯರ ದೃಷ್ಟಿಯಲ್ಲಿ ಮದುವೆ ಎಂಬುದು ಆತ್ಮ ವಿಕಾಸದ ಹಾದಿಯಲ್ಲಿ ಒಂದು ಪ್ರಮುಖವಾದ ಹೆಜ್ಜೆಯೆನಿಸಿ ಕೊಳ್ಳುತ್ತದೆ. ಮದುವೆಯು ಮೂರು ಮುಖ್ಯ ಉದ್ದೇಶಗಳನ್ನು ಒಳಗೊಂಡಿರುತ್ತದೆ. ಒಂದು, ಧಾರ್ಮಿಕ ಕರ್ತವ್ಯಗಳ ನಿರ್ವಹಣೆ, ಎರಡು, ಸಂತಾನೋತ್ಪತ್ತಿ, ಮೂರು, ಕಾಮತೃಪ್ತಿ. "ಹಿಂದೂ ವಿವಾಹವು ಕೇವಲ ಸಾಮಾಜಿಕ ಒಪ್ಪಂದವಾಗಿರದೆ ಧಾರ್ಮಿಕ ಸಂಸ್ಕಾರವಾಗಿದೆ. ಅದು ಪುರುಷ ಮತ್ತು ಸ್ತ್ರೀಯರ ನಡುವೆ ಬಹುಮಟ್ಟಿಗೆ ಶಾಶ್ವತವಾದ ವೈವಾಹಿಕ ಬಾಂಧವ್ಯವನ್ನು ಉಂಟು ಮಾಡುತ್ತದೆ. ವಿವಾಹವು ಕೇವಲ ಕಾಮ ತೃಪ್ತಿಯನ್ನು ಹೊಂದುವ ಕಾರ್ಯವಾಗಿರದೆ ಸಾಮಾಜಿಕ ಮಹತ್ವದ್ದಾಗಿರುವುದು. ಹಿಂದೂಗಳ ನಂಬಿಕೆಯಂತೆ ಅವಿವಾಹಿತ ಸ್ತ್ರೀ–ಪುರುಷರು ಅಪೂರ್ಣ ರಾಗಿದ್ದು, ವಿವಾಹದ ನಂತರ ಪೂರ್ಣರಾಗುವರು"[೭] ಎಂಬ ನಂಬಿಕೆ ಬಲವಾಗಿದೆ. ಈ ಮದುವೆಯು ಪ್ರಾಚೀನ ಕಾಲದಿಂದಲೂ ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿ ಹೊರಹೊಮ್ಮಿದೆ. ಇದು ಹಿಂದೂ ಸಂಸ್ಕಾರಗಳಲ್ಲಿ ಪ್ರಮುಖವಾಗಿದೆ. ಮದುವೆಯು ಹಲವು ಸದುದ್ದೇಶಗಳನ್ನಿಟ್ಟುಕೊಂಡು ಉಪಯುಕ್ತವಾದ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಿದೆ.

ಮದುವೆಯು ಮಾನವನ ಪ್ರಮುಖ ಅವಶ್ಯಕತೆಯಾದ ಲೈಂಗಿಕ ಸಂಬಂಧಗಳಿಗೆ ಸಾಮಾಜಿಕ ಮನ್ನಣೆಯನ್ನು ನೀಡುತ್ತದೆ. ಮಕ್ಕಳಿಗೆ ಜನ್ಮ ನೀಡುವುದು. ಇದರ ಮೂಲಕ ವಂಶವನ್ನು ಅಧೀಕೃತವಾಗಿ ಅಭಿವೃದ್ಧಿಪಡಿಸಲು ಅನುವು ಮಾಡಿ ಕೊಡುವುದು. ವಿವಾಹ ನಂತರ ಪತಿಪತ್ನಿಯರಲ್ಲಿ ಸಹಾನುಭೂತಿಯ ಭಾವನೆ ಬೆಳೆಸುವುದು. ಕುಟುಂಬಕ್ಕೆ ಮೂಲ ಆಧಾರವಾಗಿ ಕೌಟುಂಬಿಕ ಜೀವನಕ್ಕೆ ಅಡಿಪಾಯ ಹಾಕುತ್ತದೆ. ಮುಂದುವರೆದು, ಸಂಬಂಧಗಳಲ್ಲಿ ಸ್ಥಿರತೆಯನ್ನುಂಟು ಮಾಡುತ್ತದೆ. ಅಂತಿಮವಾಗಿ ವಿವಾಹವು ವ್ಯಕ್ತಿಗಳ ಸಂತತಿಯನ್ನು ನೆಲೆಗೊಳಿಸುತ್ತದೆ. ಹೀಗೆ ವಿವಾಹವು ತನ್ನದೆ ಆದ ಕಾರ್ಯಗಳನ್ನು ನಿರ್ವಹಿಸುತ್ತದೆ.

ದೇಶ, ಕಾಲ ಮತ್ತು ಪರಿಸ್ಥಿತಿಗಳಿಗೆ ಅನುಗುಣವಾಗಿ ವಿವಾಹ ಪದ್ಧತಿಯಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಅದರ ಜೊತೆಗೆ ವಿವಾಹಗಳಲ್ಲಿ ಬ್ರಾಹ್ಮಣ, ದೈವ, ಆರ್ಷ, ಪ್ರಜಾಪಿತ, ಅಸುರ, ಗಂಧರ್ವ, ರಾಕ್ಷಸ ಮತ್ತು ಪೈಶಾಚ ಎಂಬ ಎಂಟು ಪ್ರಕಾರಗಳಿವೆಯೆಂದು ಸಮಾಜಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಮದುವೆಯ ಕುರಿತು ಸಮಾಜಶಾಸ್ತ್ರಜ್ಞರು ವ್ಯಾಖ್ಯಾನಿಸಿದ್ದು ಹೀಗಿದೆ.

ವೆಸ್ಟರ್ ಮಾರ್ಕ್ ಅವರು, "ವಿವಾಹವು ಸಂತತಿಯ ಜನನದ ನಂತರವೂ ಉಳಿದುಕೊಳ್ಳುವ ಸ್ತ್ರೀಪುರುಷರ ಹೆಚ್ಚು ಕಡಿಮೆ ಸ್ಥಿರ ರೂಪದ ಸಂಬಂಧವಾಗಿದೆ" ಎನ್ನುತ್ತಾರೆ. ಜೇಕಬ್ ಮತ್ತು ಸ್ಟೇರ್ನ್ ಪ್ರಕಾರ "ವಿವಾಹವು ಪತಿಪತ್ನಿಯರು ಇಲ್ಲವೇ ಬಹು ಸಂಖ್ಯಾತ ದಂಪತಿಗಳ ಸಾಮಾಜಿಕ ಸಂಬಂಧವನ್ನು ಹಾಗೂ ವೈವಾಹಿಕ ಸಂಗಾತಿಗಳ ಸಂಯೋಗ ಆಚರಣೆಯನ್ನು ಸೂಚಿಸುವ ಪದವಾಗಿದೆ." ಎ.ಜೆ.ಕೆಲ್ಲರ್ ಅವರ ಪ್ರಕಾರ "ವಿವಾಹ ಸಂಸ್ಥೆಯು ಸ್ತ್ರೀ ಪುರುಷರಲ್ಲಿ ನೈತಿಕ ಸಂಬಂಧವನ್ನು ನಿರ್ಮಿಸುವ ಸಾಂಸ್ಕೃತಿಕ ವ್ಯವಸ್ಥೆ. ಅದರ ಮುಖ್ಯ ಉದ್ದೇಶಗಳು ಮಕ್ಕಳಿಗೆ ಜನ್ಮ ಕೊಡುವುದು ಮತ್ತು ಅವುಗಳನ್ನು ಪೋಷಿಸುವುದು" ಎಂದಿದ್ದಾರೆ. ಮ್ಯಾಲಿನೌಸ್ಕಿರವರು "ವಿವಾಹವು ಸ್ತ್ರೀ ಪುರುಷರ ನಡುವೆ ಲೈಂಗಿಕ ಅಪೇಕ್ಷೆಯ ಪೂರೈಕೆಗಾಗಿ ಮತ್ತು ಸಂತಾನೋತ್ಪತ್ತಿಗಾಗಿ ಉದ್ದೇಶಪೂರ್ವಕವಾಗಿ ಏರ್ಪಡಿಸಿಕೊಂಡ ಒಪ್ಪಂದವಾಗಿದೆ." ಲುಂಡ್ ಬರ್ಗ್ ಅವರ ಪ್ರಕಾರ " ವಿವಾಹವು ಪತಿಪತ್ನಿಯರು ಪರಸ್ಪರ ಹೊಂದಿರಬೇಕಾದ ಹಕ್ಕು, ಕರ್ತವ್ಯ ಹಾಗೂ ಸವಲತ್ತುಗಳನ್ನು ವ್ಯಾಖ್ಯಾನಿಸುವ ನಿಯಮ ನಿಬಂಧನೆಗಳನ್ನು ಒಳಗೊಂಡಿರುತ್ತದೆ." ಗಿಲಿನ್ ಮತ್ತು ಗಿಲಿನ್ ಇವರ ಪ್ರಕಾರ "ಸಂತಾನೋತ್ಪತ್ತಿ ಮಾಡುವ ಕುಟುಂಬವನ್ನು ಸ್ಥಾಪಿಸಲು ಸಮಾಜದಿಂದ ಮನ್ನಣೆ ಪಡೆದ ಮಾರ್ಗವೇ ವಿವಾಹ." ಎಂದಿದ್ದಾರೆ. ಹೀಗೆ ಸುಪ್ರಸಿದ್ಧ ಸಮಾಜಶಾಸ್ತ್ರಜ್ಞರು ವಿವಾಹದ ಅರ್ಥ ಮತ್ತು ಲಕ್ಷಣಗಳ ಕುರಿತಾಗಿ ತಮ್ಮದೆ ಆದ ವ್ಯಾಖ್ಯೆಗಳನ್ನು ನೀಡಿದ್ದಾರೆ.

ಮದುವೆಯು ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿದೆ. ಪ್ರಸ್ತುತ ಎಲ್ಲ ವ್ಯಾಖ್ಯೆಗಳನ್ನು ಒಗ್ಗೂಡಿಸಿ, ಪ್ರೊ. ಕೆ. ಬೈರಪ್ಪನವರು ಮದುವೆಯ ಕುರಿತಾಗಿ ಟಿಪ್ಪಣಿ ಮಾಡುವುದು ಈ ರೀತಿಯಾಗಿದೆ. "ವಿವಾಹಕ್ಕೆ ಸಂಪ್ರದಾಯ ಇಲ್ಲವೆ ಕಾನೂನುಗಳ ಮೂಲಕ ದೊರೆತ ಸಾಮಾಜಿಕ ಮನ್ನಣೆಯ ಅಗತ್ಯವಿರುತ್ತದೆ. ವಿವಾಹವು ಗಂಡು ಹೆಣ್ಣುಗಳು ಗಂಡ ಹೆಂಡತಿಯಾಗುವುದನ್ನು ಸೂಚಿಸುತ್ತದೆ. ಅದು ಮಾನವ ಲೈಂಗಿಕ ಜೀವನಕ್ಕೆ ಅಧಿಕೃತವಾಗಿ ಅಧಿಕಾರ ಕೊಟ್ಟು ಅವನ ಮೇಲೆ ಹೊಣೆಗಾರಿಕೆ ಹೇರುತ್ತದೆ. ಅದು ಲೈಂಗಿಕ ಸಂಬಂಧದ ಅವ್ಯವಸ್ಥೆಯಿಂದ ಉಂಟಾಗಬಹುದಾದ ಸಾಮಾಜಿಕ ರೋಗ-ರುಜಿನಗಳನ್ನು ತಡೆಗಟ್ಟಿ ಸಮಾಜದ ಸ್ವಾಸ್ಥ್ಯವನ್ನು ಸಂರಕ್ಷಿಸುವುದು. ಮಾನವನ ಲೈಂಗಿಕ ಅಪೇಕ್ಷೆ ಅಥವಾ ಕಾಮವನ್ನು ಧಾರ್ಮಿಕ ಕಟ್ಟುಪಾಡುಗಳಿಗೆ ಒಳಪಡಿಸಿ, ಸ್ತ್ರೀ ಪುರುಷರ ಕಾಮ ಜೀವನವನ್ನು ಸಂಸ್ಕಾರಗೊಳಿಸುವುದು. ತನ್ಮೂಲಕ ಸಮಾಜದಲ್ಲಿ ನೀತಿ ನೆಲೆಸಲು ನೆರವಾಗುವುದು. ಸಂತಾನೋತ್ಪತ್ತಿಗೆ ಮತ್ತು ಮಕ್ಕಳ ಪಾಲನೆ ಪೋಷಣೆಗೆ ಅವಕಾಶ ಕಲ್ಪಿಸುವುದು"[8] ಎಂಬ ಮಾತುಗಳು ಮೌಲಿಕವಾಗಿವೆ. ಈ ಹಿನ್ನೆಲೆಯಲ್ಲಿ ಚೆನ್ನದಾಸರ ಸಮುದಾಯದ ಮದುವೆಯನ್ನು ನೋಡಬಹುದಾಗಿದೆ.

ಚೆನ್ನದಾಸರ ಸಮುದಾಯದಲ್ಲಿ ಅಕ್ಕನ ಮಗಳೊಡನೆ ಅಥವಾ ಸೋದರತ್ತೆಯ ಮಗಳೊಂದಿಗೆ ವಿಶೇಷವಾಗಿ ಮದುವೆಗಳಾಗುತ್ತವೆ. ಕರಳುಬಳ್ಳಿಯ ಸಂಬಂಧಗಳಲ್ಲಿ ಮದುವೆ ಮಾಡಲು ಹಿರಿಯರು ಮುಂದಾಗುತ್ತಾರೆ. ಬೆಡಗು ನೋಡಿ ಕನ್ಯೆ ತರುವುದು ವಾಡಿಕೆಯಾಗಿದೆ. ಮೊದಲಬಾರಿಗೆ ಮದುವೆಯಾಗುವಾಗ ಹುಡುಗಿ ಬೇರೆಯವರೊಡನೆ ಬೆರೆತಿರಬಾರದು, ಶೀಲಗೆಟ್ಟಿರಬಾರದು, ದೇಹಸಂಬಂಧ ಬೆಳೆಸಿರಬಾರದು. ತೊನ್ನು, ಬಿಳುಪು ಅಥವಾ ಯಾವುದೇ ವಾಸಿಯಾಗದ ರೋಗಿಯಾಗಿರಬಾರದು. ಲಕ್ಷಣವಾಗಿರಬೇಕು. ಸುಳಿ ಒಳ್ಳೆಯದಾಗಿರಬೇಕು ಮುಂತಾದ ಅಂಶಗಳನ್ನು ಗಮನಿಸಿ ಕನ್ಯೆ ತೆಗೆದುಕೊಳ್ಳುವ ಸಂಪ್ರದಾಯವಿದೆ.

ವಧು ನೋಡಲು ಹೊರಡುವ ಮೊದಲು ಅವಳ ಕುರಿತಾಗಿ ಎಲ್ಲ ವಿಚಾರಗಳನ್ನು ತಿಳಿದುಕೊಂಡು ಸೂಕ್ತವೆನಿಸಿದರೆ ಹೆಣ್ಣು ನೋಡುವ ಸಮಾಚಾರವನ್ನು ಮುಂಚಿತ ಹೇಳಿ ಕಳುಹಿಸುತ್ತಾರೆ. ಹೆಣ್ಣಿನ ಪಕ್ಷದವರು ತಮ್ಮ ಬಂಧುಗಳನ್ನು ತಮ್ಮ ಪಂಗಡದ ಗುಡೆಗಾಡನನ್ನು ಮುಂಚಿತವಾಗಿ ಕರೆಸಿಕೊಳ್ಳುತ್ತಾರೆ.

ವಧು ನಿಶ್ಚಿತಾರ್ಥಕ್ಕೆ ಗಂಡಿನ ಪಕ್ಷದವರು ಹೆಣ್ಣಿನ ಮನೆಗೆ ಬಂದು, ಮನೆಯ ಹಿರಿಯರನ್ನು ಕುರಿತು "ನಾವು ನಿಮ್ಮ ಮನೆಗೆ ಬೇಳೆ, ಅನ್ನವನ್ನು (ಪಪ್ಪು ವಂಡ ಕರಮು)

ಕೇಳಲು ಬಂದಿದ್ದೇವೆ" ಎಂದು ಹೇಳುತ್ತಾರೆ. ಕನ್ಯಾ ಕೊಡುವ ಮನಸಿದ್ದರೆ, ಮನೆಯವರ ಒಪ್ಪಿಗೆಯಿದ್ದರೆ ಮುಖ್ಯಸ್ಥನಾದವನು ಆಯ್ತು ಕೊಡುತ್ತೇವೆ ತಗೊಳ್ಳಿ" ಎಂದುತ್ತರಿಸುವವನು. ಆಗ ಹೆಣ್ಣಿಗೆ ಓಂ–ಕೂಲಿ (ತೆರವು ಮತ್ತು ಖರ್ಚು) ಕೊಡುವುದರ ಕುರಿತಾಗಿ ಚರ್ಚೆಯಾಗುತ್ತದೆ. ತಮ್ಮ ತಮ್ಮಲ್ಲಿ ಮಾತುಕತೆಯಾದ ಬಳಿಕ ವರನ ಪಕ್ಷದವರು ವಧುವಿಗೆ ತೆರ, ಕುಲಸ್ಥರ ತೆರ ಕೊಡಲು ಒಪ್ಪುತ್ತಾರೆ. ಕೂಲಿಯಾಗಿ ಸೀರೆ–ಕುಪ್ಪಸ, ಇತ್ಯಾದಿ ಖರ್ಚಿಗೆ ಹಣ ಕೊಡಬೇಕೆಂದು ಹಿರಿಯರು ತಿಳಿಸುತ್ತಾರೆ. ಅಲ್ಲದೆ ದೈವದ ಖುಷಿಗಾಗಿ ಗಂಡಿನವರು ಹಣಕೊಡಬೇಕು. ಅದರ ಅರ್ಧದಷ್ಟು ಹೆಣ್ಣಿನವರು ಕೊಡಬೇಕೆಂದು ತೀರ್ಮಾನವಾಗುತ್ತದೆ. ಆಗ ವರನ ಪಕ್ಷದಿಂದ ಬಂದಿರುವ ಮುತ್ತೈದೆಯರು ವಧುವಿಗೆ ಹಸಿರು ಸೀರೆಯುಡಿಸಿ, ಮಣಿಯ ಮೇಲೆ ಕೂಡ್ರಿಸಿ ಉಡಿ ತುಂಬುತ್ತಾರೆ. ಉಡಿಯಕ್ಕಿ, ಬಾಳೆ, ಎಲೆ, ಅಡಕಿ ಮುಂತಾವುಗಳಿಂದ ಉಡಿತುಂಬಿ ಅರಿಷಿಣ, ಕುಂಕುಮ ಹಚ್ಚುತ್ತಾರೆ. ಇದನ್ನು "ಸಾಕಲು ಶಾಸ್ತ್ರ"ವೆಂದು ಕರೆಯುತ್ತಾರೆ. ಮದುವೆಯ ದಿವಸವನ್ನು ಅಂದೇ ತೀರ್ಮಾನಿಸುತ್ತಾರೆ. ಇತರ ಸಂಗತಿಗಳು, ಕೊಡು–ತೆಗೆದುಕೊಳ್ಳುವುದರ ಕುರಿತಾಗಿಯೂ ಚರ್ಚಿಸುತ್ತಾರೆ. ಉಡಿತುಂಬುವಾಗ ಗಂಡಿನವರು ಹದಿನೈದು ರೂಪಾಯಿ ಮತ್ತು ಬಳೆಗಳಿಗೆ ಐವತ್ತು ರೂಪಾಯಿಗಳನ್ನು ಕೊಡುವುದು ವಾಡಿಕೆಯಿದೆ. ನಿಶ್ಚಯದ ಕಾರ್ಯವಾದ ಬಳಿಕ ಸೇರಿರುವ ಸಮುದಾಯದ ಹೆಂಗಳೆಯರು ಸೋಬಾನೆ ಪದಗಳನ್ನು ಹಾಡುತ್ತಾರೆ. ಹಿರಿಯರಿಗೆ ಮತ್ತು ಕೂಡಿದ ಬಳಗ ಸುರಪಾನ ಮಾಡಿ ಊಟ ಮಾಡುತ್ತಾರೆ.

ಮದುವೆಗಳು ಮೊದಲು ಐದು ದಿವಸಗಳವರೆಗೆ ನಡೆಯುತ್ತಿದ್ದುವಂತೆ. ಒಂದೊಂದು ದಿನ ಒಂದೊಂದು ಕಾರ್ಯಕ್ರಮ. ಮೊದಲ ದಿವಸ ಮನೆ ದೇವರು ಮತ್ತು ಶಕ್ತಿ ಪೂಜೆ ನಡೆಯುತ್ತದೆ. ದುರುಗಮ್ಮ, ಮಾರಮ್ಮ, ಲಕ್ಕಮ್ಮ, ಯಲ್ಲಮ್ಮ ಮುಂತಾದ ಮಾತೃದೇವತೆಯ ಪೂಜೆಯಾಗುತ್ತದೆ. ದೇವಿಗೆ ಬ್ಯಾಟಿ (ಬಲಿ) ಅರ್ಪಿಸುವುದೇ ಶಕ್ತಿ ಪೂಜೆಯ ವೈಶಿಷ್ಟ್ಯ. ಬ್ಯಾಟಿಯನ್ನು ಕೊಯ್ದು ಅಡುಗೆ ಮಾಡಿ ಬಂಧು ಬಾಂಧವರೊಂದಿಗೆ ಭೋಜನ ಮಾಡುವುದರ ಮೂಲಕ ಮದುವೆಯೂ ಅಧಿಕೃತವಾಗಿ ಆರಂಭವಾಗುತ್ತದೆ. ಎರಡನೆಯ ದಿವಸ ಮಣ್ಣಿನ ಪುತ್ಥಳಿಮಾಡಿ, ಬೆಳ್ಳಿ ಅಥವಾ ಕಂಚಿನ ರೂಪಗಳನ್ನಿಟ್ಟು ಹಿರಿಯರ ಆರಾಧನೆ ಮಾಡುತ್ತಾರೆ. ಮನೆಯಲ್ಲಿ ಗತಿಸಿದ ಮನೆತನದ ಹಿರಿಯರ ನೆನಪಿಗಾಗಿ ಇದನ್ನು ಆಚರಿಸುತ್ತಾರೆ. ಇದರಿಂದ ಹಿರಿಯರಿಗೆ ತೃಪ್ತಿ ಸಿಗುತ್ತದೆಂಬ ನಂಬಿಗೆಯು ಈ ಸಮುದಾಯದಲ್ಲಿದೆ.

ಮೂರನೆಯ ದಿವಸ ಮನೆಯ ಮುಂದೆ ಹಂದರ ಹಾಕುವ ಚಟುವಟಿಕೆ ಜರುಗುತ್ತದೆ.

ಸಮುದಾಯದ ತರುಣರೆಲ್ಲ ಸೇರುತ್ತಾರೆ. ಊರವರ ಕಡೆಯಿಂದ ಎತ್ತಿನ ಬಂಡಿಯ ನೊಗಗಳನ್ನು ಬೇಡಿಕೊಂಡು, ಅವುಗಳಿಗೆ ಚಾಜು ಹಚ್ಚಿ, ಸುಣ್ಣ-ಬಣ್ಣ, ಹುಲಮಂಜಿನಿಂದ ಶೃಂಗರಿಸುತ್ತಾರೆ. ಅವುಗಳಿಗೆ ಕಂಕಣಕಟ್ಟಿ ಮದುವೆ ಮಂಟಪಕ್ಕಾಗಿ ನಾಲ್ಕು ಕುಣಿಗಳನ್ನು ತೋಡುತ್ತಾರೆ. ತದನಂತರ ತೋಡಿರುವ ಕುಣಿಗಳಲ್ಲಿ ಕಿಚಡಿ ಬಾನ(ಅನ್ನದ) ಮುದ್ದೆಗಳನ್ನಿಟ್ಟು ಪೂಜೆ ಸಲ್ಲಿಸಿದ ನಂತರ ನೊಗಗಳನ್ನು ನೆಡುತ್ತಾರೆ. ನಾಲ್ಕು ಕಂಬಗಳ ಜೊತೆಗೆ ಐದನೆಯದಾಗಿ "ಹಾಲಗಂಭ" ಅಥವಾ "ಪಾಳಕ್ಕೊಮ್ಮ"ವನ್ನು ಔದುಂಬರ ವೃಕ್ಷದ (ಹತ್ತಿಹಣ್ಣಿನ ಮರದ) ಟೊಂಗೆಯನ್ನು ನೆಡುತ್ತಾರೆ.

ಹಂದರದ ಮೇಲೆ ಐದು ಸೂಡು ಜೋಳದ ಕಣಿಕೆ ಹಾಕಿ, ಹುಲಗಲು ಗಿಡದ ತಪ್ಪಲು, ಮಾವಿನ ತೊಳಲು, ಬಸರಿಗಿಡದ ತೊಪ್ಪಲು ಹಾಕಿ ನೆರಳು ಮಾಡುತ್ತಾರೆ. ಹಂದರ ಹಾಕಿದ ದಿವಸ ಮಾಂಸಾಹಾರ ಇರುವುದಿಲ್ಲ. ಅಂದು ವೆಂಕಟರಮಣನ ಪೂಜೆಯನ್ನು ಮಾಡುತ್ತಾರೆ. ಸರ್ವರೂ ಸ್ನಾನ ಮಾಡಿ ಶುಚಿಭೂತರಾಗಿ, ಹುತ್ತಿನ ಮಣ್ಣು ತಂದು ಹಂದರದ ಕೆಳಗೆ ಒಂಭತ್ತು ಕಾಲುಗಳ ಶಾಸಿ ನಿರ್ಮಿಸುತ್ತಾರೆ. ವಿವಿಧ ಬಣ್ಣಗಳ ಹೂ, ಹಣ್ಣು, ಎಲೆ, ಕಾಯಿಗಳನ್ನು ಒಣಗಿಸಿ ಪುಡಿ ಮಾಡಿದ ಪದಾರ್ಥದಿಂದ ರಂಗೋಲಿ ಬರೆಯುತ್ತಾರೆ. ಶಾಸಿಕಟ್ಟೆಯ ಮೇಲೆ ರಂಗೋಲಿಯಿಂದ ರಂಗು-ರಂಗಿನ ಚಿತ್ತಾರ ಬಿಡಿಸುತ್ತಾರೆ. ಮಾವಿನ ಎಲೆಗಳಿಂದ ತಳಿರು-ತೋರಣ ಮಾಡಿ ಕಟ್ಟಿರುತ್ತಾರೆ.

ನಾಲ್ಕನೆಯ ದಿವಸ ಮುಂಜಾನೆ ಐರಾಣಿ (ಕೊಡ) ತರುವ ಕಾರ್ಯಕ್ರಮವಿರುತ್ತದೆ. ಅಂದರೆ, ಐರಾಣಿ (ಮಣ್ಣಿನ ಕೊಡಗಳಿಂದ) ನೀರು ತರಲು ಹೋಗುವುದಕ್ಕಿಂತ ಮುಂಚೆ ಕುಂಬಾರ ಗಡಿಗೆ ಮಾರಾಟದ ಅಣಕು ಪ್ರದರ್ಶನವನ್ನು ಮಾಡಿ, ಮಕ್ಕಳು, ಬಳಗವೆಲ್ಲ ಕೂಡಿಕೊಂಡು ಗಂಗಾಮಾತೆಗೆ (ಜಲಪೂಜೆ) ಪೂಜೆ ಸಲ್ಲಿಸಿ, ನೀರು ತುಂಬಿ ತರುವುದು. ನಾಲ್ಕು ದೊಡ್ಡ ಗಡಿಗೆ, ನಾಲ್ಕು ಚಿಕ್ಕ ಮಗಿಗಳು, ಒಂದು ತಂಬಿಗೆ ಒಟ್ಟು ಸೇರಿ ಒಂಭತ್ತು ಮಡಿಕೆಗಳಲ್ಲಿ ನೀರು ತುಂಬಿಸಿ ಅವುಗಳಿಗೆ ಪೂಜೆ ಸಲ್ಲಿಸುತ್ತಾರೆ. ತದನಂತರ ಮದುವೆ ಮನೆಗೆ ಬಂದು ಐರಾಣಿ (ಕೊಡಗಳನ್ನು) ಸ್ಥಾಪಿಸುತ್ತಾರೆ.

ಅದೇ ದಿವಸ ಅಕ್ಷತಾರೋಪಣ ಮತ್ತು ಮಾಂಗಲ್ಯಧಾರಣ ಕಾರ್ಯಕ್ರಮವಿರುತ್ತದೆ. ಮದುಮಕ್ಕಳಿಗೆ ಹಂದರದ ಮುಂದೆ ಒನಕೆಯನ್ನಿಟ್ಟು ಅದರ ಮೇಲೆ ಪೂರ್ವಾಭಿಮುಖವಾಗಿ ಕುಳ್ಳಿರಿಸಿ, ನೀರು ಎರೆದು, ಹೊಸ ಬಟ್ಟೆಯುಡಿಸಿ ಹಂದರ ಮಧ್ಯ ಶಾಸಿಕಟ್ಟೆ(ಮದುವೆ ಮಂಟಪ)ಯ ಮೇಲೆ ಮದುಮಕ್ಕಳನ್ನು ಕುಳ್ಳಿರಿಸುತ್ತಾರೆ. ಸಮುದಾಯದ ಎಲ್ಲ ಹಿರಿಯರು ಸಂಪ್ರದಾಯದಂತೆ

ವಿಧಿವತ್ತಾಗಿ ಮಾಂಗಲ್ಯಧಾರಣೆ ಮಾಡುತ್ತಾರೆ. ಕೂಡಿದ ಜನಸ್ತೋಮ ಮದುಮಕ್ಕಳಿಗೆ ಅಕ್ಷತೆ ಹಾಕಿ ಶುಭಹಾರೈಸುತ್ತಾರೆ.

ಅಕ್ಷತೆ ಮುಗಿದ ನಂತರ ಬಳಗದವರಿಗೆ ಭರ್ಜರಿ ಭೋಜನದ ವ್ಯವಸ್ಥೆಯಿರುತ್ತದೆ. ಮಾಂಗಲ್ಯಧಾರಣೆಯಾದ ನಂತರ ಮದುಮಕ್ಕಳು ಹಾಲಿನಲ್ಲಿ ಅಥವಾ ನೀರಿನೊಳಗೆ ಮುತ್ತು ಹುಡುಕುವ ಶಾಸ್ತ್ರ ಮಾಡುತ್ತಾರೆ. ಆಮೇಲೆ ಸಭೂಶಾನಿ (ಅಂದರೆ ಮುಯ್ಯಿ ಇಡುವುದು) ನಡೆಯುತ್ತದೆ. ಮೆರವಣಿಗೆ, ಗ್ರಾಮದೇವರ ಪೂಜೆ, ಹನುಮಂತ ದೇವರ ಪೂಜೆಯನ್ನು ನವದಂಪತಿಗಳು ಮಾಡುತ್ತಾರೆ.

ಐದನೆಯ ದಿವಸ (ಕೊನೆಯ ದಿವಸ) 'ನಾಗೋಲಿ' ಮಾಡುತ್ತಾರೆ. ನಾಗೋಲಿಯೆಂದರೆ ಬೀಗರು ಬೇಟೆಯನ್ನು ಹಿಡಿದು ತರಬೇಕು. ಹಂದರದಲ್ಲಿ ಶಾಸಿಕಟ್ಟೆಯ ಮೇಲೆ ಬೇಟೆಯನ್ನು ಕತ್ತರಿಸುತ್ತಾರೆ. ಮದುವೆಗೆ ಬಂದವರೆಲ್ಲ ರಕ್ತವನ್ನು ನೋಡಬೇಕು ಎಂಬುದು ಈ ಸಮುದಾಯ ಆಚರಣೆಗಳಲ್ಲಿ ಒಂದು. ರಕ್ತದರ್ಶನದ ಬಳಿಕ ಮದುಮಕ್ಕಳು ಹಂದರ ತಪ್ಪಲನ್ನು ಸಾಂಕೇತಿಕವಾಗಿ ಇಳುಹುತ್ತಾರೆ. ತದನಂತರ ಸೇರಿದ ಸಮುದಾಯದವರು ಉಳಿದದ್ದನ್ನು ತೆಗೆಯುತ್ತಾರೆ. ಹಂದರಕ್ಕೆ ಧಕ್ಕೆ ಹತ್ತಬಾರದೆಂದು ಆದಷ್ಟು ಬೇಗ ಇಳುಹುತ್ತಾರೆ.

ಸಂಜೆ ಮಾಂಸದ ಅಡುಗೆಯನ್ನು ತಯಾರಿಸುತ್ತಾರೆ. ರಾತ್ರಿ ಎರಡೂ ಕಡೆಯವರು ಭರ್ಜರಿಯಾಗಿ ಮಾಂಸದೂಟ ಮಾಡುತ್ತಾರೆ. ಮದ್ಯದ ಸಮಾರಾಧನೆ ಯಥೇಚ್ಚವಾಗಿ ನಡೆಯುತ್ತದೆ. ಇದರೊಂದಿಗೆ ಮದುವೆಯ ಐದು ದಿವಸಗಳ ಕಲಾಪಗಳು ವಿಧಿವತ್ತಾಗಿ ಮುಕ್ತಾಯಗೊಳ್ಳುತ್ತವೆ. ಸಂಪ್ರದಾಯಬದ್ಧವಾಗಿ ಎಲ್ಲ ಚಟುವಟಿಕೆಗಳು ಮುಗಿದ ಬಳಿಕ ಮರುದಿವಸ ತಮ್ಮ ತಮ್ಮ ಊರುಗಳಿಗೆ ಎಲ್ಲರೂ ಹೊರಟು ಹೋಗುತ್ತಾರೆ.

ಆಧುನಿಕವಾಗಿ ಇಂದು ಮದುವೆಗಳು ಐದು ದಿನಗಳವರೆಗೆ ನಡೆಯುವುದಿಲ್ಲ. ಆದರೆ ಐದು ದಿವಸ ನಡೆಯಬೇಕಾದ ಎಲ್ಲ ಸಂಪ್ರದಾಯಗಳು ಒಂದೇ ದಿವಸದಲ್ಲಿ ಪಾಲಿಸಲ್ಪಡುತ್ತವೆ.

ಚೆನ್ನದಾಸರ ಸಮುದಾಯದಲ್ಲಿ ಬಾಲ್ಯವಿವಾಹಗಳು ಜರುಗುತ್ತವೆ. ಕೂಡು ಕುಟುಂಬದಲ್ಲಿ ದೊಡ್ಡವನ ಮದುವೆ ಏರ್ಪಾಟಾಗಿದ್ದರೆ, ಅದೇ ಖರ್ಚಿನಲ್ಲಿ ಸಣ್ಣವನ ಮದುವೆಯನ್ನು ಮಾಡುತ್ತಾರೆ. ಎರಡು–ನಾಲ್ಕು ಮದುವೆಗಳು ಏಕಕಾಲಕ್ಕೆ ಒಂದೇ ಹಂದರದಲ್ಲಿ ನಡೆಯುವುದುಂಟು. ವಯಸ್ಸಾದ ತಂದೆ ತಾಯಿಗಳಿಗೆ, ಸಾವಿನ ಸಮೀಪವಿರುವ ಅಜ್ಜ–ಅಜ್ಜಿಗೆ ಮಕ್ಕಳ–ಮೊಮ್ಮಕ್ಕಳ ಮದುವೆಯನ್ನು ಕಣ್ತುಂಬ ನೋಡುವ ಮಹದಾಸೆ. ಹೀಗಾಗಿ ಬಾಲ್ಯ ವಿವಾಹಗಳು ಜರುಗುತ್ತಿದ್ದವು.

ಇತ್ತೀಚಿಗೆ ಜಾಗೃತಿ ಉಂಟಾದ ಮೇಲೆ, ಪರಿಸರದ ಪ್ರಭಾವದಿಂದಾಗಿ ನಾಗರಿಕ ಕಾನೂನುಗಳಿಗೆ ಹೆದರಿ ಬಾಲ್ಯವಿವಾಹಗಳು ಕಡಿಮೆಯಾಗಿವೆ.

ವಿಧವಾ ವಿವಾಹ

"ಸತಿ ಪದ್ಧತಿಯ ನಿಷೇಧದ ಫಲವಾಗಿ ಬದುಕಿ ಉಳಿಯ ತೊಡಗಿದ ವಿಧವೆಯರ ಸ್ಥಿತಿಗತಿಗಳನ್ನು ಸುಧಾರಣೆ ಮಾಡುವ ನಿಟ್ಟಿನಲ್ಲಿ ೧೮೫೬ರಲ್ಲಿ ಹಿಂದೂ ವಿಧವಾ ಪುನರ್ ವಿವಾಹ ಕಾಯಿದೆಯನ್ನು ಜಾರಿಗೆ ತರಲಾಯಿತು. ತನ್ಮೂಲಕ ವಿಧವೆಯರು ಕಷ್ಟಗಳಿಗೆ ಒಳಗಾಗುವುದು, ಅಸಡ್ಡೆ, ಅನಾಧರಗಳನ್ನು ಅನುಭವಿಸುವುದು, ಹಿಂಸೆ, ಶೋಷಣೆಗಳಿಗೆ ಬಲಿ ಯಾಗುವುದನ್ನು ತಪ್ಪಿಸಲು ಕ್ರಮ ಕೈಕೊಳ್ಳಲಾಯಿತು.ಈ ಶಾಸನದ ಜಾರಿಗಾಗಿ ಸಮಾಜ ಸುಧಾರಕ ಈಶ್ವರಚಂದ್ರ ವಿದ್ಯಾಸಾಗರ ಅಪಾರವಾಗಿ ಶ್ರಮಿಸಿದರು" ಎಂಬ ವಿಚಾರವು ಭಾರತೀಯ ವಿಧವೆಯರ ಸ್ಥಿತಿಗತಿಯನ್ನು ಎತ್ತಿ ತೋರಿಸುತ್ತದೆ.

ಚೆನ್ನದಾಸರ ಸಮುದಾಯದಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿದೆ. ಪತಿಯ ಮರಣದ ತರುವಾಯ ಮಹಿಳೆಯು ಬಯಸಿದರೆ ಮರು ಮದುವೆಯಾಗಬಹುದು. ಇದಕ್ಕೆ "ಉಡಿಕೆ" (ಕೂಡಿಕೆ) ವಿಧಾನದಿಂದ ಮದುವೆಯಾಗಲು ಅವಕಾಶ ಕಲ್ಪಿಸಲಾಗಿದೆ. ತನ್ನ ಗಂಡನಾಗಿದ್ದವನ ಸಹೋದರನನ್ನು ಹೊರತು ಪಡಿಸಿ, ತನಗೆ ಬೇಕಾದವನನ್ನು ಮೆಚ್ಚಿ, ಮದುವೆಯಾಗಬಹುದಾಗಿದೆ. ಇಂಥ ಮದುವೆ ಸಾಮಾನ್ಯವಾಗಿ ರಾತ್ರಿಯ ವೇಳೆ ನಡೆಯುತ್ತವೆ. ಸಣ್ಣಮಕ್ಕಳು, ಮದುವೆಯಾಗದವರು ಇದರಲ್ಲಿ ಭಾಗವಹಿಸಬಾರದು. 'ಬುದ್ಧತಾಳಿ' ಎಂಬುದನ್ನು ಕಟ್ಟುವರು. ಹಿರಿಯರ ಸಮ್ಮುಖದಲ್ಲಿ ಮರುಮದುವೆ ನಡೆಯುತ್ತದೆ. ಅವಳಿಗೆ ಮೊದಲ ಗಂಡನ ಆಸ್ತಿಯಲ್ಲಿ ಪಾಲು ಇರುವುದಿಲ್ಲ ಅಷ್ಟೇ ಅಲ್ಲ ಆಸ್ತಿಯ ಮೇಲೆ ಯಾವುದೆ ರೀತಿಯ ಹಕ್ಕು ಉಳಿಯುವುದಿಲ್ಲ.

ವಿವಾಹ ವಿಚ್ಛೇದನ

ಭಾರತ ಸರಕಾರವು ವಿವಾಹ, ವಿಧವಾ ವಿವಾಹ ಹಾಗೂ ವಿವಾಹ ವಿಚ್ಛೇದನಗಳಿಗೆ ಕಾಯ್ದೆ ಕಾನೂನುಗಳನ್ನು ರೂಪಿಸಿದೆ. ಕಾಲ, ಪರಿಸ್ಥಿತಿಯ ಅಗತ್ಯಗಳಿಗೆ ತಕ್ಕಂತೆ ನಿಯಮಾವಳಿ ಗಳಲ್ಲಿ ಕೆಲವು ಬದಲಾವಣೆಗಳು ಆಗಿವೆ. ೧೮೬೯ರಲ್ಲಿ ಭಾರತ ಸರಕಾರವು ವಿವಾಹ ವಿಚ್ಛೇದನ

ಕಾಯ್ದೆಯನ್ನು ಜಾರಿಗೆ ತಂದಿದೆ. ಈ ಕಾಯಿದೆ ಪ್ರಕಾರ ದಾಂಪತ್ಯ ಜೀವನ ಅಯಶಸ್ವಿಯಾದಾಗ ಪತಿ ಪತ್ನಿಯರು ವಿವಾಹ ವಿಚ್ಛೇದನ ಪಡೆಯಲು ಪ್ರಥಮ ಬಾರಿಗೆ ಈ ಕಾಯ್ದೆಯ ಮೂಲಕ ಅವಕಾಶ ಕಲ್ಪಿಸಲಾಗಿದೆ.

ಸಾಮಾನ್ಯವಾಗಿ ವಿಚ್ಛೇದನಗಳು ಕಡಿಮೆ. ಆದರೂ ಅಲ್ಲೊಂದು ಇಲ್ಲೊಂದು ನಡೆಯುತ್ತವೆ. ಗಂಡನು ಹೆಂಡತಿಯ ದುರ್ನಡತೆಯ ಆಧಾರದ ಮೇಲೆ ಅವಳೊಂದಿಗೆ ವಿವಾಹ ವಿಚ್ಛೇದನ ಪಡೆಯುಬಹುದು. ಆಗ ಜಾತಿಯ ಹಿರಿಯರಿಗೆ ತಪ್ಪುದಂಡ ಕೊಡಬೇಕಾಗುತ್ತದೆ. ಆಕೆ ವಿಚ್ಛೇದಿತ ಮಹಿಳೆಯು ಮನಸ್ಸು ಮಾಡಿದರೆ, ಮರಳಿ ಮದುವೆ ಮಾಡಿಕೊಳ್ಳಬಹುದು. ಅವಳನ್ನು ಮದುವೆಯಾಗುವವನು, ಅವಳ ಮೊದಲಿನ ಗಂಡನಿಗೆ ಮದುವೆಯ ವೆಚ್ಚವನ್ನು ಕೊಡಬೇಕಾಗುವುದು. ವಿವಾಹಿತ ಸ್ತ್ರೀಯಿಂದ ಆಚಾತುರ್ಯವಾಗಿ ದಾರಿತಪ್ಪಿದ್ದರೆ, 'ಲಘುಧರ್ಮ'ವೆಂಬ ದಂಡವನ್ನು ಕಟ್ಟಿದರೆ, ಸಮುದಾಯ ಕ್ಷಮಿಸುವುದು. ದಾರಿತಪ್ಪಿದ ಹೆಣ್ಣು ಗಂಡಿಗೆ ಧಾರ್ಮಿಕ ಶುದ್ಧಿಕ್ರಿಯೆ ನಡೆಯುತ್ತದೆ. ವಿಧಿ ವಿಧಾನ ಪೂರೈಸಿ, ತಪ್ಪು ದಂಡಕೊಟ್ಟರೆ ಅವರಿಗೂ ಸಮುದಾಯ ದಲ್ಲಿ ಎಲ್ಲರಂತೆ ಬದುಕುವ ಹಕ್ಕು ಲಭಿಸುತ್ತದೆ.

೪.೩.೬ ಸೀಮಂತ

'ಸೀಮಂತ' ಕಾರ್ಯವೆಂದು ಶಿಷ್ಟರು ಹೇಳುವ ಮಾತಾಗಿದೆ. ಇದಕ್ಕೆ ಪೂಸಂವಹನ, ಹೂಮುಡಿಸುವ ಕಾರ್ಯವೆಂತಲೂ ಕರೆಯುತ್ತಾರೆ. ಬೆಳಗಾವಿ, ಬಿಜಾಪೂರ ಸರಹದ್ದಿನಲ್ಲಿ ಕುಬಸದ ಕಾರ್ಯಕ್ರಮವೆಂದು ಹೇಳುತ್ತಾರೆ. ಹೆಸರು ಬೇರೆ ಬೇರೆಯಾದರೂ ಆಚರಣೆ ಒಂದೇ ಆಗಿದೆ. ಮಹಿಳೆಯ ಋತುಚಕ್ರ ನಿಂತು "ಬಸುರಿ" ಯೆಂದು ಖಚಿತವಾದ ಮೇಲೆ ಮೂರು ತಿಂಗಳಿನಿಂದ ಐದು ತಿಂಗಳು ಒಳಗಾಗಿ ತವರು ಮನೆಯುವರು ಬಂದು "ಕಳ್ಳಕುಬಸ" ಮಾಡುತ್ತಾರೆ. ಹಸಿರು ಬಳೆ, ಹಸಿರು ಸೀರೆಯುಡಿಸಿ, ಹೂ ಮುಡಿಸಿ, ಆರತಿ ಬೆಳಗಿ ಶುಭಕೊರುತ್ತಾರೆ. ಇದಾದ ಮೇಲೆ ಉಳಿದವರು ನೆಂಟರಿಷ್ಟರು, ಬಂಧು ಬಳಗದವರು ಓಣಿಯ ಜನರು ಕುಬುಸದ ಕಾರ್ಯಕ್ರಮ ಮಾಡುತ್ತಾರೆ. ತಮ್ಮ ತಮ್ಮ ಮನೆಗೆ ಕರೆದುಕೊಂಡು ಹೋಗಿ ಸಿಹಿಯೂಟ ಮಾಡಿಸಿ ಅತ್ತೆಗೆ ಕುಪ್ಪಸ ಖಣ, ಸೊಸೆಗೆ ಜಂಪರ್ ಪೀಸ್ ಕೊಟ್ಟು ಹರಸುತ್ತಾರೆ. ಇದು ಹೆರಿಗೆ ಆಗುವವರೆಗೆ ಜರುಗುತ್ತದೆ. ಏಳು ತಿಂಗಳು ಅಥವಾ ಒಂಭತ್ತು ತಿಂಗಳಲ್ಲಿ ದೊಡ್ಡ ಕುಬಸದ ಕಾರ್ಯಕ್ರಮ ಜರುಗುತ್ತದೆ.

ಗಂಡಿನ ಮನೆಯಿಂದ ಏರ್ಪಾಡಾದ ಕಾರ್ಯಕ್ರಮದಲ್ಲಿ ಬೀಗರು ಕಳ್ಳಬಳ್ಳಿಯವರೆಲ್ಲ ಪಾಲುಗೊಳ್ಳುತ್ತಾರೆ. ಊಟದ ವ್ಯವಸ್ಥೆಯಿರುತ್ತದೆ. ಆಯಾರಿ ಮಾಡುತ್ತಾರೆ ಈ ಕಾರ್ಯಕ್ರಮ ಮುಗಿದ ಮೇಲೆ ಬಸುರಿ ಹೆಣ್ಣು ಮಗಳನ್ನು ತವರಿಗೆ ಕರೆದುಕೊಂಡು ಹೋಗುತ್ತಾರೆ.

ಹೆಂಡತಿ ಗರ್ಭಧರಿಸಿದ ಮೇಲೆ ಗಂಡನಾದವನು ಪ್ರಾಣಿಹಿಂಸೆ ಮಾಡುವುದಿಲ್ಲ. ಸಾಮೂಹಿಕ ಬೇಟೆಯಲ್ಲಿ ತನ್ನ ಸಮುದಾಯದೊಡನೆ ಪಾಲುಗೊಳ್ಳುವುದಿಲ್ಲ. ಶವವನ್ನು ಹೊರುವುದಿಲ್ಲ. ಹಾವುಗಳನ್ನು ಬಡಿಯುವುದಿಲ್ಲ. ಬಸುರಿಯಾದವಳಿಗೆ ಸುರಕ್ಷಿತ ಹೆರಿಗೆಗೆಂದು ತಾಯಿತ ಕಟ್ಟಿಸುವುದು. ಲಿಂಬೆ ಹಣ್ಣು ಇಳುವಿ ಒಗೆಯುವುದು ಇತ್ಯಾದಿಗಳನ್ನು ಮಾಡುತ್ತಾರೆ. ಕೆಲವು ಕಡೆಗಳಲ್ಲಿ ಬಂದೂಕಿನಿಂದ ಫೈರಿಂಗ್ ಮಾಡುವುದು, ಕೈಯಿಂದ ಕೈಗೆ ನೀರಿನ ಪಾತ್ರೆ ದಾಟಿಸುತ್ತ ಬಂದು ಸಾಲಿನಲ್ಲಿ ನಿಂತಿರುವ ಗರ್ಭಿಣಿಯ ತಲೆಯ ಮೇಲೆ ನೀರನ್ನು ಹಣಿಸುವ ಸಂಪ್ರದಾಯಗಳಿವೆ. ಇವೆಲ್ಲ ಶುಭ ಮತ್ತು ಸುರಕ್ಷಿತ ಹೆರಿಗೆಯ ಮುಂಜಾಗ್ರತೆಗೆಂದು ಆ ಜನಾಂಗದ ತಿಳುವಳಿಕೆಯಾಗಿದೆ. ಹೆರಿಗೆಯಾದ ಮೇಲೆ ಬಾಣಂತಿಯರಿಗೆ ಬಿಸಿ ನೀರು ಹಣಿಸಿ ಚಾಪೆಯ ಮೇಲೆ ಕೌದಿಹಾಸಿ ಮಲಗಿಸುವುದು. ಬಾಣಂತಿಗೆ ಉತ್ತೇಜಕವೆಂದು ಶುದ್ಧ 'ನೀರಾ' ಅಥವಾ ನೀರು ಬೆರೆಸಿದ ಸಿಂಧಿ ಕುಡಿಸುವರು. ಹಳೆಯ ಚಪ್ಪಲಿ, ಕಸಬರಿಗೆಯಿಂದ ನಿವಾಳಿ ತೆಗೆಯುವುದು, ಹೆರಿಗೆಯಾದ ಐದು, ಏಳು ಅಥವಾ ಒಂಭತ್ತನೆಯ ದಿವಸಕ್ಕೆ ನೀರು ಹಣಿಸಿ ಮಡಿಗೊಳಿಸುವರು. ಅಲ್ಲಿಗೆ ಬಾಣಂತಿತನದ ಸೂತಕ ಕಳೆಯುತ್ತದೆ.

೪.೩.೭. ಮರಣ

ಈ ಸಮುದಾಯದಲ್ಲಿ ಶವವನ್ನು ಹೂಳುವ ಪದ್ಧತಿ ಜಾರಿಯಲ್ಲಿದೆ. ಅಪಘಾತ, ಅನಾಹುತಕ್ಕೆ ಸಂಬಂಧಿಸಿದ್ದರೆ, ಬಾಣಂತಿಯಾಗಿದ್ದರೆ, ವಾಸಿಯಾಗದ ಕಾಯಿಲೆಯಿಂದ ಮಡಿದ ಸಂದರ್ಭದಲ್ಲಿ ಮಾತ್ರ ಸುಡುವ ಕಾರ್ಯ ಮಾಡುತ್ತಾರೆ. ಹಳೆಯ ಕೌದಿ, ಕಳ್ಳಿಕಟ್ಟಿಗೆ ಇತ್ಯಾದಿಗಳಿಂದ ಚಟ್ಟ ಕಟ್ಟಿ ಶವವನ್ನು ಸಾಗಿಸುತ್ತಾರೆ. ಶವವನ್ನು ಅಂತ್ಯ ಸಂಸ್ಕಾರ ಮಾಡುವ ಸಂದರ್ಭದಲ್ಲಿ ಕೋಳಿ ತತ್ತಿಗಳನ್ನು ಒಯ್ದು, ಶವದ ಕಂಕುಳಲ್ಲಿ ಡುತ್ತಾರೆ. ಮನೆಯಿಂದ ಹೊರಡುವಾಗ ನೀರು ತುಂಬಿದ ಗಡಿಗೆ (ಮಡಿಕೆ)ಯನ್ನು ಒಯ್ಯುತ್ತಾರೆ. ಐದು ಸುತ್ತು ಪ್ರದಕ್ಷಿಣೆ ಹಾಕಿ ಪೂರ್ವ ದಿಕ್ಕಿಗೆ ಎತ್ತರದ ದಡದ ಮೇಲೆ ಶವವನ್ನು ಇರಿಸಿ, ಆಮೇಲೆ ತೋಡಿದ ತಗ್ಗಿನಲ್ಲಿ ಇರಿಸುತ್ತಾರೆ. ಕುತ್ತಿಗೆಯವರೆಗೆ ಮುಚ್ಚಿ,

ಅಂತಿಮ ದರುಶನ ಪಡೆಯುತ್ತಾರೆ. ಕೂಡಿದವರೆಲ್ಲರು ಕೈಜೋಡಿಸಿ ಮಣ್ಣು ಮಾಡುತ್ತಾರೆ. ಕುಣಿಯನ್ನು ಪೂರ್ತಿಯಾಗಿ ಮುಚುತ್ತಾರೆ. ಸುತ್ತ ಮುತ್ತಲಿನ ಮಣ್ಣನ್ನು ಕೆದರಿಹಾಕಿ ಎತ್ತರ ಮಾಡುತ್ತಾರೆ. ಎರಡು ದೊಡ್ಡ ಕಲ್ಲು ತಂದು ಗೋರಿಯ ನಡುವೆಯೊಂದು, ಕಾಲಕಡೆ ಮತ್ತೊಂದು ಇಡುತ್ತಾರೆ. ಮೃತರಾದವರ ಹಿರಿಯ ಮಗ 'ತಲೆಗೋರಿ' ಕೊಡುವ ಸಂಪ್ರದಾಯವಿದೆ.

ಹಿರಿಯ ಮಗ ನೀರು ತುಂಬಿದ ಮಣ್ಣಿನ ಕೊಡಹೊತ್ತು ಐದು ಸುತ್ತು ಹಾಕಬೇಕು. ಪ್ರತಿ ಸುತ್ತಿಗೊಂದು ಸಲ ಮಡಿಕೆಗೆ ಕುರುಪಿ ಅಥವಾ ಕೊಡಲಿಯಿಂದ ಹೊಡೆದು ಛಿದ್ರ(ರಂಧ್ರ) ಮಾಡುತ್ತಾರೆ. ಉತ್ತರ ದಿಕ್ಕಿಗೆ ತಿರುಗಿದಾಗ, ಹಿಂದಿರುವ ಸಹಾಯಕರು ನೆಲಕ್ಕೆ ಉಗಿದು ಮಣ್ಣಿನ ಕೊಡ ಒಡೆಯುತ್ತಾರೆ. ಮಡಿಕೆಯನ್ನು ಚೂರು-ಚೂರು ಮಾಡುತ್ತಾರೆ. ಮಡಿಕೆ ಒಡೆದ ಚೂರಿನಲ್ಲಿ ನೀರು ನಿಲ್ಲದಂತೆ ಅತಿ ಸಣ್ಣ ಸಣ್ಣ ತುಣುಕು ಮಾಡುತ್ತಾರೆ. ಮಳೆಯಾದ ಮೇಲೆ ಒಡೆದ ಮಡಕೆ ಚೂರಿನಲ್ಲಿ ನೀರು ನಿಲ್ಲಬಾರದು. ನಿಂತರೆ ಮನೆಯವರಿಗೆ ಕಂಟಕವೆಂದು ಭಾವಿಸುತ್ತಾರೆ. ಅಂತ್ಯಸಂಸ್ಕಾರ ಮುಗಿದ ಮೇಲೆ ಸಮುದಾಯದವರು ಸತ್ತವರ ಮನೆಯ ದೀಪವನ್ನು ನೋಡಿ, ತಮ್ಮ ತಮ್ಮ ಮನೆಗಳಿಗೆ ಮರಳುತ್ತಾರೆ. ನಿಧನರಾದವರ ಮನೆಯಲ್ಲಿದ್ದ ನೀರನ್ನು ಚೆಲ್ಲಿ, ಬೇರೆ ನೀರು ತಂದು ಸರ್ವರೂ ಸ್ನಾನ ಮಾಡುತ್ತಾರೆ. ಮೈಲಿಗೆ ಬಟ್ಟೆಗಳನ್ನು ಕಳಚುತ್ತಾರೆ. ದೈವದ ಆಳು, ಇನ್ನುಳಿದವರಮನೆಗಳಿಗೆ ತಿರುಗಾಡಿ ಆಹಾರ ಸಂಗ್ರಹಿಸಿ ನಿಧನ ಸಂಭವಿಸಿದವರ ಮನೆಗೆ ಮುಟ್ಟಿಸುತ್ತಾರೆ. ಮೂರು ದಿವಸ ಸತ್ತವರ ಮನೆಯಲ್ಲಿ ಒಲೆ ಹೊತ್ತಿಸುವುದಿಲ್ಲ.

ನಿಧನರಾದವರ ಹೆಸರಿನಲ್ಲಿ, ಅವರಿಗಿಷ್ಟವಾದ ಆಹಾರ ಪದಾರ್ಥಗಳನ್ನು ಅನ್ನ, ಹಣ್ಣುಗಳು, ತತ್ತಿ ಇತ್ಯಾದಿಗಳನ್ನು ಮೂರನೆಯ ದಿವಸ ಮೂಡೊದ್ದಲ(ಆಹಾರ)ವೆಂದು, ಗೋರಿಯನ್ನು ಪೂಜಿಸಿ, ಗೋರಿಯ ಮಧ್ಯಭಾಗದಲ್ಲಿ ಪಿಂಡಕೂಡು(ಸಣ್ಣಕುಣಿ) ಮಾಡಿ, ಆಹಾರ ಪದಾರ್ಥಗಳಿನ್ನಿಡುವರು. ಪೂಜೆ ಮಾಡಿ ಆಹಾರ ಸಮರ್ಪಿಸಿ, ಉಳಿದ ಅನ್ನ ಆಹಾರ ಪದಾರ್ಥವನ್ನೆಲ್ಲ ಗೋರಿಯ ಮೇಲೇರಿಸಿ ದೂರ ಬಂದು ಕುಳಿತುಕೊಳ್ಳುತ್ತಾರೆ. ಕಾಗೆ ಬಂದು ತಿಂದರೆ ಅವನ ಇಷ್ಟಾರ್ಥ ಈಡೇರಿತೆಂದು ಆತ ದೈವದಲ್ಲಿ ಕೂಡಿದನೆಂದು ಭಾವಿಸಿ ಸ್ಮಶಾನದಿಂದ ಹಿಂದಿರುಗುತ್ತಾರೆ. ಸ್ನಾನ ಮಾಡಿ ದೈವದವರು ಕೂಡಿಸಿದ ಹಣದಿಂದ ಪಡಿ-ಪದಾರ್ಥ ತಂದು, ಅಡುಗೆ ಮಾಡಿ ಬೀಗರು ಕಹಿಬಾಯಿ (ವಿಷದಬಾಯಿ) ತೊಳೆಸುತ್ತಾರೆ.

ಸತ್ತವರನ್ನು ಮಣ್ಣು ಮಾಡಿದ ಮೇಲೆ "ಗೋರಿಯ ಮೇಲೆ ತುಳಸಿ ಗಿಡದ ಸಸಿಯನ್ನು ಇರಿಸುವರು. ಗೋರಿಯ ಮೇಲೆ ಸಮುದಾಯದ ಪೂಜಾರಿಯನ್ನು ನಿಲ್ಲಿಸಿ ಅವನ ಪಾದಗಳನ್ನು ತೊಳೆದು ಕಡಾವಿಗೆಗಳನ್ನು ಕಾಣಿಕೆಯಾಗಿ ಕೊಡುವರು. ಸೂತಕದ ಅವಧಿ ವಂಶಿಕರಿಗೆ ಅಥವಾ ಸಗೋತ್ರಿಗಳಿಗೆ ಹನ್ನೊಂದು ದಿನ. ಸಮೀಪದ ಸಂಬಂಧಿಕರಿಗೆ ಅವರ ಮಕ್ಕಳಿಗೆ ಮೂರು ದಿನ, ಸೋದರ ಮಾವ, ಅತ್ತೆ, ಭಾವ, ಮೈದುನ ಇಂಥ ಸಮೀಪದ ಆಪ್ತರು ಮಡಿದರೆ ಸೂತಕವನ್ನು ಪಾಲಿಸುವದಿಲ್ಲ"[೧೦] ಮೂರನೆಯ ದಿವಸದ ಕಾರ್ಯ ಮುಗಿದ ಮೇಲೆ ಸೂತಕ ನಿವಾರಣೆಯಾಗುತ್ತದೆ.

ಮದುವೆಯಾದ ಮಹಿಳೆಯರು ಮರಣ ಹೊಂದಿದರೆ "ಇರಗಾರ" ರಾಗುತ್ತಾರಂತೆ. ಅವರಿಗೆ ಮೂರನೆಯ ದಿವಸ ವಿಶೇಷ ಸಂಸ್ಕಾರವಿಧಿ ನೆರವೇರಿಸುವರು. ಕೆಲವೊಮ್ಮೆ ಇರಗಾರುವಿನ ಹೆಸರಿನಲ್ಲಿ ದೇವರಲ್ಲಿ ಪ್ರತಿಷ್ಠಾಪಿಸಿ, ಭಾದ್ರಪದ ಮಾಸದ ಕೃಷ್ಣಪಕ್ಷ ಅಥವಾ ವಿಜಯದಶಮಿಯಲ್ಲಿ ವರ್ಷಕ್ಕೊಂದು ಬಾರಿ ಕುಟುಂಬದ ದೇವರುಗಳಿಗೆ ಪೂಜೆ ಸಲ್ಲಿಸುವರು. ನಿಧನ ಹೊಂದಿದ ಹಿರಿಯರನ್ನು ಒಂದು ಕಲಶದ ಮುಖಾಂತರ ಸಂಕೇತಿಸಿ ಅವರನ್ನು ದೇವರೆಂದು ಭಾವಿಸಿ ಪೂಜಿಸುವ ಪರಿಪಾಠವಿದೆ.

೪.೪. ಆಚರಣೆಗಳು

ಒಂದು ಸಮುದಾಯದ ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳು ಆ ಸಮುದಾಯದ ಆಚರಣೆಗಳಾಗುತ್ತವೆ. ಈ ಮೇಲೆ ಚರ್ಚಿಸಿದ ಧರ್ಮ, ಧಾರ್ಮಿಕ ಆಚರಣೆಗಳು, ದೈವ- ದೈವರಾಧನೆಗೆ ಸಂಬಂಧಿಸಿದ ವಿಧಿ-ವಿಧಾನಗಳು, ಹಬ್ಬ-ಹರಿದಿನಗಳು ಮತ್ತು ಆಯಾ ಹಬ್ಬ-ಹರಿದಿನಗಳಿಗೆ ಸಂಬಂಧಿಸಿದ ಸಂಪ್ರದಾಯಗಳು ಅವುಗಳಿಗೆ ಅನುಸಾರವಾಗಿ ಆಚರಿಸುವ ಪದ್ಧತಿಗಳು ಇವೆಲ್ಲವೂ ಆಚರಣೆಗಳಲ್ಲಿ ಸಮಾವೇಶಗೊಳ್ಳುತ್ತವೆ. ಧಾರ್ಮಿಕ, ಸಾಮಾಜಿಕ, ಕೌಟುಂಬಿಕ ಎಲ್ಲ ರಂಗಗಳಲ್ಲಿಯೂ ವಿಶಿಷ್ಟ ಆಚರಣೆಗಳು ಇತರ ಸಮುದಾಯಗಳಲ್ಲಿ ಇರುವಂತೆಯೇ ಪ್ರಸ್ತುತ ಚೆನ್ನದಾಸರ ಸಮುದಾಯದಲ್ಲಿಯೂ ಇವೆ. ಈ ಮೇಲಿನ ಭಾಗದಲ್ಲಿ ಸಾಂದರ್ಭಿಕವಾಗಿ ಆಚರಣೆಗಳನ್ನು ವಿವರಿಸುತ್ತ, ಚರ್ಚಿಸಲಾಗಿದೆ. ಪುನರಾವರ್ತನೆ ಆಗುವುದರಿಂದ ಚರ್ವಿತಚರ್ವಣಗೊಳಿಸ ಬಾರದೆಂದು ಪ್ರಸ್ತಾಪಿಸುವುದಿಲ್ಲ.

೪.೫. ನ್ಯಾಯ ಪದ್ಧತಿ

ಪ್ರತಿಯೊಂದು ಬುಡಕಟ್ಟು ಸಮುದಾಯ ಮತ್ತು ಅಲೆಮಾರಿ ಸಮುದಾಯಗಳು ತಮ್ಮದೆ ಆದ ಜೀವನ ನಡೆಸಲು ಕೆಲವು ಕಟ್ಟು ಪಾಡುಗಳನ್ನು ಹಾಕಿರುತ್ತದೆ. ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ಪಾಲಿಸಿಕೊಂಡು ಬರುತ್ತದೆ. ಅವುಗಳ ಮೂಲಕ ತಮ್ಮ ಅಸ್ತಿತ್ವ ಕಾಪಾಡುವುದು, ಅಸ್ಮಿತೆ ಉಳಿಸಿಕೊಳ್ಳುವುದು, ಅನನ್ಯತೆಯನ್ನು ಎತ್ತಿ ತೋರಿಸುವುದಾಗಿರುತ್ತದೆ. ಸಮಾಜದ ಸುವ್ಯವಸ್ಥೆಗೆ ಸಮುದಾಯ ಮುನ್ನಡೆಸಲು ವ್ಯವಸ್ಥೆಯನ್ನು ರೂಪಿಸುತ್ತಾರೆ. ಚೆನ್ನದಾಸರ ಸಮುದಾಯದಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಕಾಪಾಡಲು, ಆ ಸಮುದಾಯದ ಹಿತಾಸಕ್ತಿಯನ್ನು ರಕ್ಷಿಸಲು "ನ್ಯಾಯ ಪಂಚಾಯತಿ" ವ್ಯವಸ್ಥೆಯೊಂದು ಅಸ್ತಿತ್ವದಲ್ಲಿದೆ.

೪.೫.೧. ನ್ಯಾಯ ಪಂಚಾಯತಿ

ತಮ್ಮ ಸಮುದಾಯದ ಅನ್ಯಾಯ-ಅಸಮಾನತೆಗಳನ್ನು ನಿವಾರಿಸುವುದು, ಕಟ್ಟು ಪಾಡುಗಳನ್ನು ಉಲ್ಲಂಘಿಸಿದವರಿಗೆ ಎಚ್ಚರಿಸಲು, ಅಗತ್ಯವಾದರೆ ಶಿಸ್ತುಕ್ರಮ ಜರುಗಿಸಲು, ಬೇರೊಬ್ಬರ ಮೇಲಾಗುವ ದೌರ್ಜನ್ಯ, ದಬ್ಬಾಳಿಕೆ ತಡೆಯಲು ಚೆನ್ನದಾಸರ ಸಮುದಾಯ ದಲ್ಲಿ 'ನ್ಯಾಯ ಪಂಚಾಯತಿ'ಯು ಅಸ್ತಿತ್ವದಲ್ಲಿದೆ. ಆದಿ ಕಾಲದಿಂದಲೂ ಜಾರಿಯಲ್ಲಿರುವ ನ್ಯಾಯ ಪದ್ಧತಿಯ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯ ಕುರಿತಾಗಿ ಅನಂತಕೃಷ್ಣ ಅಯ್ಯರ್ ಅವರು- "ದಾಸರಿಗಳು ಕಟ್ಟೆಮನೆಯೆಂಬ ಕುಲಸಭೆಯನ್ನು ಹೊಂದಿದ್ದಾರೆ. ಈ ಪ್ರತಿ ಸಭಾಮನೆಗಳನ್ನು ಪಿನ್ನಪೆದ್ದ(ಹಿರಿಯ ಅಥವಾ ಕಿರಿಯ) ಗುಡಿಗಾಡನು ಅಲಂಕರಿಸುತ್ತಾನೆ. ಗುಡಿಗಾಡು ದೇವಸ್ಥಾನದ ಸೇವಕರು, ಕುಲಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಅವಲೋಕನ ಮಾಡುತ್ತಾರೆ. ಅಲ್ಲದೆ ಇವರ ಸಹೋದ್ಯೋಗಿಯಾದ ಪಿನ್ನ ಪೆದ್ದ ವರದಿಯನ್ನು ನೀಡುತ್ತಾನೆ. ಪಿನ್‌ಪೆದ್ದನು ಜನರನ್ನು ಒಂದೆಡೆ ಸೇರಿಸಿ, ವಿವಾದವನ್ನೊಳಗೊಂಡ ವಿಷಯವನ್ನು ಮತಗಳ ಸಂಖ್ಯೆಯಿಂದ ನಿರ್ಧರಿಸುತ್ತಾನೆ. ಮತಗಳು ಸಮನಾಗಿದ್ದರೆ ತಮ್ಮ ಸಭೆಯಲ್ಲಿ ವಿಷಯುವನ್ನು ನಿರ್ಧರಿಸಲು ಪ್ರಮಾಣದ ಅವಧಿಯಲ್ಲಿ ಗುರುವಿಗೆ ಬಿಡುತ್ತಾರೆ ಗುರುವು ಕಟ್ಟೆ ಮನೆಯನ್ನು ವಿಚಾರಿಸಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ."[೧೧] ಎಂದು ಹೇಳಿದ್ದಾರೆ.

ಕೆ.ಎಸ್. ಸಿಂಗ್ ಅವರು–"ಸಾಂಪ್ರದಾಯಿಕ ಜಾತಿ ಸಮಿತಿ ಅವರಲ್ಲಿದ್ದು ಅದನ್ನು ಕಟ್ಟೆಮನೆ ಎಂದು ಕರೆಯುತ್ತಾರೆ. ೧೫ ರಿಂದ ೨೦ ಸದಸ್ಯರು, ಮುಖ್ಯಸ್ಥರನ್ನು ದೊಡ್ಡ ಯಜಮಾನ ಎಂದು ಕರೆಯುತ್ತಾರೆ. ಈ ದೊಡ್ಡ ಯಜಮಾನನನ್ನು ಧ್ವನಿಮತದಿಂದ ಆಯ್ಕೆ ಮಾಡುತ್ತಾರೆ. ಸಮುದಾಯದ ಸಾಮಾಜಿಕ ನಿಯಂತ್ರಣ ಮಾಡುವ ಹಾಗೂ ಕಲಹಗಳ ವಿಚಾರಣೆ ಈ ಸಮಿತಿಯ ವ್ಯಾಪ್ತಿಗೆ ಒಳಪಡುತ್ತದೆ. ಅಪರಾಧ ಮಾಡಿದವರಿಗೆ ದಂಡ ಹಾಕುವ, ಶಿಕ್ಷೆ ವಿಧಿಸುವ ಮತ್ತು ಸಾಮಾಜಿಕ ಬಹಿಷ್ಕಾರ ಹಾಕುವ ಅಧಿಕಾರ ಈ ಪಂಚಾಯತಿಗಿರುತ್ತದೆ."[೧೨] ಎಂದು ವಿವರಿಸಿದ್ದಾರೆ. 'ದಾಸರಲ್ಲಿ ಕಟ್ಟೆ–ಮನೆಗಳೆನ್ನುವ ಕುಲ ಪಂಚಾಯತಿಗಳಿರುತ್ತವೆ. ದಾಸರಲ್ಲಿ ಕಟ್ಟೆಮನೆಗೆ "ಗುಡಿಗಾಡು" ಎನ್ನುವ ಅಧ್ಯಕ್ಷನಿರುತ್ತಾನೆ. ಅವನ ಕೆಳಗೆ ಪಿನ್ನಪೆದ್ದನೆನ್ನುವ ಹಿರಿಯ ಅಥವಾ ಕಿರಿಯನೊಬ್ಬ ಸಹಾಯಕನಿರುತ್ತಾನೆ. ಗುಡಿಗಾಡು ಅಧ್ಯಕ್ಷ ಜಾತಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಗಮನಿಸುತ್ತಾನೆ. ಅವರನ್ನು ಕೂಡಿಸುವ ಪಿನ್ನಪೆದ್ದಿಗೆ ಮುಖ ಅಥವಾ ಆದೇಶಗಳನ್ನು ಹೊರಡಿಸುತ್ತಾನೆ. ವಿವಾದಕ್ಕೊಳಗಾದ ವಿಷಯವನ್ನು ಮತಗಳಾಧಾರದಿಂದ ನಿರ್ಣಯಿಸಲಾಗುವುದು. ಕೆಲವು ದಂಡಗಳನ್ನು ವಿಧಿಸುವರು.[೧೩] ಎಂದು ಪ್ರೊ ಬಿ. ವ್ಹಿ. ಗುಂಜೆಟ್ಟಿಯವರು ವಿವರಿಸಿದ್ದಾರೆ.

ಚೆನ್ನದಾಸರ ಸಮುದಾಯದಲ್ಲಿ ಇಂದಿಗೂ ಕೂಡ ವಿಶಿಷ್ಟವಾದ "ನ್ಯಾಯ ಪಂಚಾಯತಿ" ವ್ಯವಸ್ಥೆ ಜಾರಿಯಲ್ಲಿ ಉಳಿದುಕೊಂಡು ಬಂದಿದೆ. ಈ ಸಮುದಾಯದ ಅನುಭವಸ್ಥ ಹಿರಿಯನಾದ ಮತ್ತು ಜಾಣನಾದ ನಿಷ್ಪಕ್ಷಪಾತ ದೃಷ್ಟಿಯುಳ್ಳವರನ್ನು ಕುಲದವರೆಲ್ಲ ಕೂಡಿ ಆರಿಸುತ್ತಾರೆ. ಕೆಲವು ಪ್ರದೇಶಗಳಲ್ಲಿ ವಂಶಪರಂಪರಾಗತವಾಗಿ ಇದು ಮುಂದುವರೆದು ಕೊಂಡು ಬರುತ್ತದೆ. ಬೆಳಗಾವಿ ಜಿಲ್ಲೆಯ ಪರಿಸರದ ಚೆನ್ನದಾಸರ ಸಮುದಾಯದಲ್ಲಿ ಇವೆರಡೂ ಪರಂಪರೆಗಳು ಜಾರಿಯಲ್ಲಿವೆ. "ಕುಲಸಭೆಯ ಮುಖ್ಯಸ್ಥನನ್ನು ಪ್ರಾದೇಶಿಕವಾಗಿ ಗುಡೇಗಾಡು, ಕಟ್ಟೆಮನೆ, ಪಿನ್ನಪೆದ್ದ, ಕೊಂಡಿಕೋಲ, ಗುರಿಕಾರ, ಸಮೀಲು ಎಂದು ಕರೆಯುವ ವಾಡಿಕೆಯಿದೆ. ಮುಖ್ಯಸ್ಥನಿಗೆ ಸಹಕಾರಿಯಾಗಿ ಕೆಲಸ ನಿರ್ವಹಿಸಲು ತಳವಾರನನ್ನು ನೇಮಿಸಲಾಗುತ್ತದೆ. ಈತ ಪಂಚಾಯತಿಯ ಆದೇಶದಂತೆ ಸಭೆ ನಡೆಸುವ, ಸಮುದಾಯದ ಎಲ್ಲ ಜನರಿಗೂ ಪಂಚಾಯತಿಯ ಸಂದೇಶ ತಲುಪಿಸುವ ಕೆಲಸ ಮಾಡುತ್ತಾನೆ. ಇದಲ್ಲದೆ ಒಂದೊಂದು ಬೆಡಗಿನ ಹಿರಿಯರ ಸಲಹಾಸಮಿತಿಯಿದ್ದು ಪಂಚಾಯತಿಯ ತೀರ್ಮಾನಗಳನ್ನು ಜಾರಿಗೆ ತರಲು ಅದು ಕಾರ್ಯ ನಿರ್ವಹಿಸುತ್ತದೆ"[೧೪] ಎಂಬುದು ಗಮನಾರ್ಹವಾಗಿದೆ. ಇದು ಈ ಸಮುದಾಯದ ವಿಶಿಷ್ಟವಾದ ನ್ಯಾಯ ವ್ಯವಸ್ಥೆ.

೪.೫.೨. ಪಂಚಾಯತಿಯ ಜವಾಬ್ದಾರಿ

ಸಮುದಾಯದ ಸಾಮಾಜಿಕ ನಿಯಂತ್ರಣ ಮಾಡುವ, ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ, ಸಾಂಘಿಕ ಒಕ್ಕಟ್ಟು ಕಾಯುವ ಗುರುತರವಾದ ಜವಾಬ್ಧಾರಿ ನ್ಯಾಯ ಪಂಚಾಯತಿಗೆ ಇರುತ್ತದೆ. ಸಮುದಾಯದಲ್ಲಿ ಯಾರು ಏಷ್ಟೇ ದೊಡ್ಡವರಿರಲಿ, ಶ್ರೀಮಂತರಿರಲಿ, ನ್ಯಾಯ ಪಂಚಾಯತಿಗಿಂತ ಯಾರು ದೊಡ್ಡವರಲ್ಲ. ಅವರಿಗಿಂತ ಕುಲಸಭೆಯೆ ದೊಡ್ಡದೆಂಬ ತಿಳುವಳಿಕೆಯಿದೆ. ಅಲ್ಲದೆ ಗುಂಪಿನ ನಡುವೆ ಜಗಳ, ಕದನಗಳಾಗಿದ್ದರೆ, ಅವುಗಳನ್ನು ನಿಭಾಯಿಸುವ, ಅಪರಾಧಿಗಳಿಗೆ ಶಿಕ್ಷೆಗೊಳಪಡಿಸುವ, ಕೊಲೆ, ಸುಲಿಗೆ ಮಾಡಿದವರಿಗೆ, ಕಳ್ಳತನ ಮಾಡಿದವರಿಗೆ, ಅತ್ಯಾಚಾರವೆಸಗಿದವರಿಗೆ ದಂಡ ಹಾಕುವ, ಅಪರಾಧ ಮಾಡಿ ಶಿಕ್ಷೆಯನ್ನು ವಿರೋಧಿಸುವ, ಪಂಚಾಯತಿ ಅಧಿಕಾರವನ್ನು ತಿರಸ್ಕರಿಸುವ, ಕುಲಸಭೆಗೆ ಮಾನ್ಯತೆ ನೀಡದವರಿಗೆ ದಂಡ ವಿಧಿಸುವ, ಸಾಮಾಜಿಕ ಬಹಿಷ್ಕಾರ ಹಾಕುವ ಅಧಿಕಾರ ನ್ಯಾಯ ಪಂಚಾಯತಿಗೆ ಇರುತ್ತದೆ.

ಮದುವೆಯಂಥ ಕೌಟುಂಬಿಕ ಕಾರ್ಯಗಳನ್ನು ನ್ಯಾಯ ಪಂಚಾಯತಿ ನಡೆಸಿಕೊಡುತ್ತದೆ. ವಿವಾಹವು ಸಮುದಾಯದ ಸಾಮಾಜಿಕ ಸಂಪ್ರದಾಯಕ್ಕೆ ಅನುಸಾರವಾಗಿ, ಪರಂಪರೆಗಳನ್ನು ಪರಿಪಾಲಿಸುವ ನಿಬಂಧನೆಗಳಿಗೆ ಒಳಪಟ್ಟು ನಡೆಯುವಂತೆ ನೋಡಿಕೊಳ್ಳುವ ಜವಾಬ್ಧಾರಿಯು ನ್ಯಾಯ ಪಂಚಾಯತಿಯದೆ ಆಗಿರುತ್ತದೆ. ಸೋದರ ಸಂಬಂಧಿ ವಿವಾಹ ನಿರ್ಬಂಧಿಸುವ, ಅಂತರ ಜಾತೀಯ ವಿವಾಹವನ್ನು ವಿರೋಧಿಸುವ, ಬಹುಪತಿತ್ವವನ್ನು ತಡೆಗಟ್ಟುವ ಜವಾಬ್ಧಾರಿಯು ನ್ಯಾಯ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆ.

ಜಾತ್ರೆ, ಉತ್ಸವ, ಹಬ್ಬಗಳಂಥ ಧಾರ್ಮಿಕ ಚಟುವಟಿಕೆಗಳನ್ನು ವಿಧಿವತ್ತಾಗಿ ನಡೆಸುವುದು, ಜಾತ್ರೆಯ ಖರ್ಚುವೆಚ್ಚಗಳನ್ನು ಸರಿದುಗಿಸಲು ಸಮುದಾಯದ ಎಲ್ಲ ಕುಟುಂಬಗಳು, ಮುಖ್ಯಸ್ಥರ ಹತ್ತಿರ ಜಾತ್ರೆಯ ನೇತೃತ್ವ ವಹಿಸಿರುವ ಮುಖಂಡರು ಪಟ್ಟಿ (ಹಣ) ಕೂಡಿಸುವುದು, ಎಷ್ಟು ವಂತಿಗೆ ಎತ್ತಬೇಕು, ಯಾರು ಯಾವ ಕಾರ್ಯ ಮಾಡಬೇಕು, ಮನೋರಂಜನೆಗೆಂದು ಏರ್ಪಡಿಸುವ ಆಟ, ಬಯಲಾಟ ಯಾವುದಿರಬೇಕು, ಯಾವ ಕಂಪನಿ ಕರೆಯಿಸಬೇಕು ಮುಂತಾದವುಗಳನ್ನು ತೀರ್ಮಾನಿಸುವುದು; ಅವುಗಳನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆಯು ನ್ಯಾಯ ಪಂಚಾಯತಿಯ ಸುಪರ್ದಿಗೆ ಒಳಪಡುತ್ತದೆ.

ಊರಿಗೆ ಬರಗಾಲ ಬಿದ್ದಾಗ, ಕಾಲರಾ, ಪ್ಲೇಗ್‌ದಂತಹ ಭೀಕರ ರೋಗಗಳು ಬಂದಾಗ, ಸಮುದಾಯದಲ್ಲಿ ದುರ್ಮರಣ ಸಂಭವಿಸಿದರೆ, ಬೇರೆ ಜನಾಂಗದೊಡನೆ ಮಾರಾಮಾರಿಯಾದರೆ ಅವುಗಳ ಪರಿಹಾರಕ್ಕೆ ನ್ಯಾಯ ಪಂಚಾಯತಿಯೇ ಸೂಕ್ತ ತೀರ್ಮಾನಕೈಗೊಳ್ಳುತ್ತದೆ. ಇವೆಲ್ಲ ಸಂದರ್ಭಗಳಲ್ಲಿ ನ್ಯಾಯ ಪಂಚಾಯತಿಯು ಸಭೆ ಸೇರುತ್ತದೆ. ಹಿರಿಯರು ತಳವಾರನ ಮುಖಾಂತರ ಪಂಚಾಯತಿ ಸೇರಿಸುತ್ತಾರೆ. ಆಯಾ ವಿಷಯಗಳಿಗೆ ಸಂಬಂಧ ಪಟ್ಟವರಿಂದ ಹೇಳಿಕೆ ಪಡೆದು, ಎರಡು ಪಕ್ಷದವರ ವಿಚಾರ ಮಂಡನೆಗೆ ಅವಕಾಶ ಕಲ್ಪಿಸಿ, ಸಾರಾಸಾರ ತೂಗಿನೋಡಿ ನ್ಯಾಯನಿರ್ಣಯವನ್ನು ಕೊಡುವುದು ವಾಡಿಕೆ. ಸಮಸ್ಯೆ ಸಂಕೀರ್ಣವಾಗಿದ್ದರೆ ಕೆಲವೊಮ್ಮೆ ಅತ್ಯಂತ ಜಟಿಲ ವಾಗಿದ್ದರೆ, ಒಂದೇ ದಿನದಲ್ಲಿ ಪಂಚಾಯತಿ ಸಭೆಯಲ್ಲಿ ನ್ಯಾಯ ನಿರ್ಣಯವಾಗದೇ ಹೋಗಬಹುದು. ಸಮಸ್ಯೆಗೆ ಅನುಗುಣವಾಗಿ ಕೆಲವೊಮ್ಮೆ ಒಂದು ದಿವಸದಿಂದ ವಾರಪರ್ಯಂತರ ಮುಂದುವರಿಯಬಹುದಾಗಿದೆ.

೪.೫.೩. ನ್ಯಾಯ ನಿರ್ಣಯದ ತೀರ್ಪುಗಳು

ನ್ಯಾಯ ಪಂಚಾಯತಿಯ ತೀರ್ಪುಗಳು ಆಯಾ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿಭಿನ್ನ ರೀತಿಯಲ್ಲಿರುತ್ತವೆ. ಸಮುದಾಯದ ಜನರಲ್ಲಿಯೆ ಜಗಳಗಳು ನಡೆದಾಗ, ಸಣ್ಣಪುಟ್ಟ ತಪ್ಪುಗಳು ಘಟಿಸಿದಾಗ, ಸಮುದಾಯದ ಹಿರಿಯರು ಅವುಗಳನ್ನು ಬಗೆಹರಿಸುತ್ತಾರೆ. ಮತ್ತೊಮ್ಮೆ ಅಂಥ ತಪ್ಪು ಮಾಡದಿರುವಂತೆ ಎಚ್ಚರಿಕೆ ನೀಡುತ್ತಾರೆ. ಎರಡು ಪಕ್ಷದವರಿಗೆ ಕಿವಿಮಾತು ಹೇಳಿ ಸರಳವಾದ ತೀರ್ಪು ನೀಡುತ್ತಾರೆ. ಅಣ್ಣ, ತಮ್ಮಂದಿರಲ್ಲಿ, ತಂದೆ-ಮಕ್ಕಳಲ್ಲಿ ಆಸ್ತಿಗೆ ಸಂಬಂಧಿಸಿದ ವ್ಯಾಜ್ಯವನ್ನು ಕೂಡ ಸರಳವಾಗಿ ಬಗೆಹರಿಸುತ್ತಾರೆ. ನ್ಯಾಯ ಪಂಚಾಯತಿ ಕೂಡಿಸಿದವರು ಅಂದಿನ ಖರ್ಚಿನ ವೆಚ್ಚ ಭರಿಸಬೇಕಾಗುವುದು.

ಮಹಿಳೆಯರಿಗೆ, ಹಿರಿಯರಿಗೆ ಅಗೌರವ ತೋರಿ ಅಪಮಾನಿಸಿದ್ದರೆ, ಕಳವು, ಲೂಟಿಯಂಥ ಅಪರಾಧವೆಸಗಿದ್ದರೆ ಅಂಥವರಿಗೆ ದಂಡ ವಿಧಿಸುವ ತೀರ್ಪು ತೆಗೆದು ಕೊಳ್ಳಲಾಗುತ್ತದೆ. ದಂಡವು ಹಣದ ರೂಪದಲ್ಲಿರುತ್ತದೆ. ಅಪರಾಧದ ಪ್ರಮಾಣದ ಮೇಲೆ ದಂಡ ತೆರಬೇಕಾದ ಹಣ ನಿಗಧಿಯಾಗುತ್ತದೆ. ಅದನ್ನು ನ್ಯಾಯ ಪಂಚಾಯತಿಯೇ ತೀರ್ಪು ನೀಡುತ್ತದೆ.

ಅತ್ಯಾಚಾರವೆಸಗಿದ್ದರೆ, ಕೊಲೆಗೈದಿದ್ದರೆ, ಬೇರೊಬ್ಬರ ಹೆಂಡತಿಯನ್ನು ಅಪಹರಿಸಿದ್ದರೆ, ಬೇರೊಬ್ಬಳ ಜೊತೆಗೆ ಓಡಿಹೋಗಿದ್ದರೆ, ಧಾರ್ಮಿಕ ಚಟುವಟಿಕೆಗಳಿಗೆ ಅಡ್ಡಿಪಡಿಸಿದ್ದರೆ, ದೇವರ ವಿಷಯದಲ್ಲಿ ತಪ್ಪೆಸಗಿದ್ದರೆ ಇಂಥವು ಭೀಕರ ಅಪರಾಧಗಳೆಂದು ಸಾಬೀತಾದರೆ, ಅಂಥವರನ್ನು ಕುಲದಿಂದ ಬಹಿಷ್ಕರಿಸುವ ಕಠಿಣ ತೀರ್ಮಾನವನ್ನು ಸಭೆಯು ತೆಗೆದುಕೊಳ್ಳುತ್ತದೆ. ಅಪರಾಧದ ಪ್ರಮಾಣ ಮತ್ತು ಸಭೆಯು ನಡವಳಿಕೆಗೆ ಅನುಸಾರವಾಗಿ ತೀರ್ಪು ನಿರ್ಣಯವಾಗುತ್ತದೆ.

ನ್ಯಾಯ ಪಂಚಾಯತಿ ಸೇರಿದಾಗ, ವಿಷಯವು ಜಟಿಲವಾಗಿದ್ದು, ಇತ್ಯರ್ಥವಾಗದೆ ಹೋದರೆ, ಪಂಚಾಯತಿಯ ಮುಖ್ಯಸ್ಥನು 'ಕಡ್ಡಿಮುರಿಯುವ' ಮೂಲಕ ಅಂತಿಮ ತೀರ್ಪು ನೀಡುವ ನ್ಯಾಯಾಂಗದ ಪದ್ಧತಿ ಈ ಸಮುದಾಯದಲ್ಲಿದೆ.

೪.೫.೪. ಶಿಕ್ಷೆಯ ವಿಧಾನಗಳು

ಸಮುದಾಯ ವ್ಯಕ್ತಿಯು ಮಾಡಿದ ಅಪರಾಧದ ಪ್ರಮಾಣಕ್ಕೆ ಅನುಗುಣವಾಗಿ ವಿಭಿನ್ನವಾದ ಶಿಕ್ಷೆಗಳನ್ನೂ ವಿಧಿಸಲಾಗುತ್ತದೆ. ಸಾಮಾನ್ಯವಾದ ಮತ್ತು ಸಾಧಾರಣವಾದ ಅಪರಾಧವಾಗಿದ್ದರೆ ತಪ್ಪಿತಸ್ಥನು ನ್ಯಾಯ ಪಂಚಾಯತಿಯ ಕ್ಷಮೆ ಕೇಳಿ, ತನ್ನಿಂದ ತಪ್ಪಾಯಿತೆಂದು ಹಿರಿಯರ ಕಾಲುಹಿಡಿಯಬೇಕು. ನ್ಯಾಯ ಪಂಚಾಯತಿಯ ಸಭೆಯ ಖರ್ಚು ಭರಿಸಬೇಕು, ಸಭೆಯಲ್ಲಿದ್ದವರಿಗೆಲ್ಲ ಚಹಾಪಾನಿ ಅಥವಾ ಸಾರಾಯಿ ವಿತರಣೆ ಇಲ್ಲವೆ ಊಟಕ್ಕಾಗುವಷ್ಟು ಮೊತ್ತದ ಹಣವನ್ನು ಕೊಡಬೇಕಾಗುವುದು.

ಸಮುದಾಯದ ಪಂಗಡಗಳಲ್ಲಿ ಭೀಕರವಾದ ಮಾರಕಾಸ್ತ್ರಗಳಿಂದ ಹೊಡೆದಾಡಿದ್ದರೆ, ಚಪ್ಪಲಿ, ಕೆರವಿನಿಂದ ಹೊಡೆದಿದ್ದರೆ, ಹೆಣ್ಣು ಮಕ್ಕಳಿಗೆ, ಹಿರಿಯರಿಗೆ ಅವಮಾನಗೊಳಿಸಿದ್ದರೆ, ಅನ್ಯಾಯಕ್ಕೆ ಒಳಗಾದವರು ಕೂಡಲೆ ಹೋಗಿ ನ್ಯಾಯ ಪಂಚಾಯತಿಗೆ ಫಿರ್ಯಾದೆ (ತಕರಾರು) ದಾಖಲಿಸಿ, ನ್ಯಾಯ ಪಂಚಾಯತಿ ಸೇರಿಸಿದರೆ, ಆ ಘಟನೆಗೆ ಕಾರಣರಾದವರಿಗೆ ತಕ್ಷಣಕ್ಕೆ ನ್ಯಾಯ ನಿರ್ಣಯಿಸಿ ಶಿಕ್ಷೆ ವಿಧಿಸಲಾಗುತ್ತದೆ. ತದನಂತರ ನ್ಯಾಯ ಪಂಚಾಯತಿಯಂತೆ ಸಭೆ ಜರುಗಿ ಅಪರಾಧ ಸಾಭೀತಾದರೆ ಎರಡು ಪಟ್ಟು ಹೆಚ್ಚಿನ ದಂಡ ವಿಧಿಸಿ, ಕಟ್ಟುನಿಟ್ಟಾಗಿ ವಸೂಲಿ ಮಾಡಿಕೊಳ್ಳಲಾಗುವುದು. ದಂಡದ ರೊಕ್ಕದಲ್ಲಿ

ಸರಿಯಾಗಿ ಎರಡು ಭಾಗಮಾಡಿ, ಒಂದನ್ನು ಅನ್ಯಾಯಕ್ಕೆ ಒಳಗಾದ ಶೋಷಿತರಿಗೆ, ಇನ್ನೂಳಿದ ಅರ್ಧ ಹಣವನ್ನು ನ್ಯಾಯ ಪಂಚಾಯತಿಗೆ ಸಂದಾಯ ಮಾಡಲಾಗುತ್ತದೆ.

ಬೇರೊಬ್ಬನ ಹೆಂಡತಿಯನ್ನು ಓಡಿಸಿಕೊಂಡು ಹೋಗಿದ್ದರೆ, ವಿವಾಹಿತ ಮಹಿಳೆಯ ಮೇಲೆ ಅತ್ಯಾಚಾರವೆಸಗಿದ್ದರೆ, ಇದನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಭೀಕರ ಅಪರಾಧಕ್ಕಾಗಿ ಕೊಡುವ ಶಿಕ್ಷೆಯನ್ನು 'ಮೋಗಿನಾಲು ಧರ್ಮ'ವೆಂದು ಕರೆಯುತ್ತಾರೆ. ಈ ಶಿಕ್ಷೆಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಒಬ್ಬ ವ್ಯಕ್ತಿ ಮತ್ತೊಬ್ಬನ ಹೆಂಡತಿಯನ್ನು ಬಲಾತ್ಕರಿಸಿದರೆ, ಓಡಿಸಿಕೊಂಡು ಹೋಗಿದ್ದರೆ ಅತನನ್ನು ಸಮುದಾಯದಿಂದ ಹೊರ ಹಾಕುತ್ತಾರೆ. ಕುಲದಿಂದ ಬಹಿಷ್ಕಾರ ಹಾಕುತ್ತಾರೆ. ಬಹಿಷ್ಕೃತನಾದವನು ಪುನಃ ಸಮುದಾಯದಲ್ಲಿ ಪ್ರವೇಶ ಪಡೆಯಬೇಕಾದರೆ ನಾಲ್ವತ್ತೆಂಟು ರೂಪಾಯಿಗಳ ತಪ್ಪುದಂಡ ಕೊಡಬೇಕು. ಅರ್ಧ ಹಣ ಮಾನಭಂಗಕ್ಕೊಳಗಾದವಳ ಪಾಲಿಗೆ ಸಂದಾಯವಾದರೆ, ಇನ್ನೂಳಿದ ಅರ್ಧ ಹಣ ಕುಲಸ್ಥನಿಗೆ, ಉಳಿದದ್ದು ಕುಲಗುರುವಿಗೆ ಸಂದಾಯವಾಗುತ್ತದೆ.

ಪರಸ್ಪರ ಮೆಚ್ಚಿ, ಇಷ್ಟ ಪಟ್ಟು ಓಡಿ ಹೋದವರು ಮದುವೆಯಾಗ ಬಯಸಿದರೆ, ಮೊದಲ ಪತಿಗೆ ಮದುವೆಗೆ ಖರ್ಚಾದ ಹಣವನ್ನು ಮೊದಲು ಕೊಡಬೇಕು. ನ್ಯಾಯ ಪಂಚಾಯತಿಗೆ ದಂಡ ಕಟ್ಟಬೇಕು. ಇದನ್ನೊಪ್ಪಿದರೆ ಕುಲದೊಳಗೆ ಪ್ರವೇಶ ಲಭಿಸುತ್ತದೆ.

ನ್ಯಾಯ ಪಂಚಾಯತಿಯ ತೀರ್ಪನ್ನು ಅಪರಾಧಿಗಳು ಮನ್ನಿಸದಿದ್ದರೆ, ಕುಲಸಭೆಯ ತೀರ್ಮಾನಗಳನ್ನು ನಿರಾಕರಿಸಿದರೆ, ಅಥವಾ ತೀರ್ಪು ನೀಡುವಲ್ಲಿ ಅನುಮಾನ ಗೊಂದಲಗಳು ಇದ್ದರೆ ಮತ್ತೇ ವಿಶೇಷ ನ್ಯಾಯ ಪಂಚಾಯತಿಯು ಸಭೆ ಸೇರುತ್ತದೆ. ಪಂಚಾಯತಿ ಪದ್ಧತಿಯಂತೆ ಪಂಚರು ಸಭೆಯನ್ನು ದೂರದ ಪ್ರಶಸ್ತವಾದ ಸ್ಥಳದಲ್ಲಿ ಸಭೆ ಸೇರುತ್ತಾರೆ. ಊರ ಹೊರಗಿರುವ ದೇವಸ್ಥಾನದಲ್ಲಿಯು ಸಭೆ ಸೇರುವುದುಂಟು. ಈ ವಿಶೇಷವಾದ ಸಭೆಗೆಂದೆ ಬೇರೆ ಬೇರೆ ಗ್ರಾಮಗಳ ಸಮುದಾಯದ ಹಿರಿಯರನ್ನು ಕರೆದು ನ್ಯಾಯ ತೀರ್ಮಾನಿಸಿ ತೀರ್ಪು ನೀಡುತ್ತಾರೆ. ಈ ವಿಶೇಷ ಪಂಚಾಯತಿ ಸಭೆಯ ನ್ಯಾಯ ನಿರ್ಣಯಕ್ಕೆ ಕಾಲಮಿತಿ ಇರುವುದಿಲ್ಲ. ಅದು ನಡೆದಷ್ಟು ದಿವಸದ ಖರ್ಚು, ವೆಚ್ಚವನ್ನು ದೋಷಾರೋಪಿತರು ಶಿಕ್ಷೆಯ ದಂಡದ ಹಣವನ್ನಲ್ಲದೆ, ಪ್ರತ್ಯೇಕವಾಗಿ ಕೊಡಬೇಕಾಗುವುದು. ದಂಡದ ಮೊತ್ತದ ಅರ್ಧಭಾಗ ಅನ್ಯಾಯ ಕ್ಕೊಳಗಾದವರಿಗೆ ಕೊಡುತ್ತಾರೆ. ಇನ್ನೂಳಿದ

ಮೊತ್ತದಲ್ಲಿ ಒಂದು ಪಾಲು ನ್ಯಾಯ ಪಂಚಾಯತಿಗೆ, ಒಂದು ಪಾಲು ಗುರುಗಳಿಗೆ, ಉಳಿದದ್ದು ದೇವಕಾರ್ಯ, ಧಾರ್ಮಿಕ ಚಟುವಟಿಕೆಗೆ ಬಳಕೆಯಾಗುತ್ತದೆ.

ಇದು ಸಮುದಾಯದ ಒಳಗಿನ ಮಾತಾಯಿತು. ಇನ್ನು ಬೇರೆ ಸಮುದಾಯದ ವರೊಡನೆ ತಮ್ಮ ಸಮುದಾಯದವಳು ಓಡಿ ಹೋಗಿದ್ದರೆ? ಅಥವಾ ಬೇರೆ ಸಮುದಾಯದ ಹೆಣ್ಣನ್ನು ಈ ಸಮುದಾಯದ ವ್ಯಕ್ತಿ ಓಡಿಸಿಕೊಂಡು ಬಂದಿದ್ದರೆ? ಅದಕ್ಕೂ ನ್ಯಾಯ ಪಂಚಾಯತಿ ತೀರ್ಪನ್ನು ಪ್ರಕಟಿಸಿದೆ. ಅಂಥ ವ್ಯಕ್ತಿಗಳನ್ನು ಸಮು ದಾಯವು ಬಹಿಷ್ಕರಿಸುತ್ತದೆ. ಬಹಿಷ್ಕೃತರು ಪುನ: ಸಮುದಾಯದೊಳಗೆ ಸೇರಲು ಬಯಸಿದರೆ, ನ್ಯಾಯ ಪಂಚಾಯತಿ ತೀರ್ಪಿನಂತೆ ತಪ್ಪುದಂಡ ವಿಧಿಸಲಾಗುತ್ತದೆ. ಮರಳಿ ಪ್ರವೇಶ ಪಡೆದವರನ್ನು ನಾಲಿಗೆ ಸುಡಿಸಿ (ಚಿನ್ನದುಂಗುರ ಅಥವಾ ತಾಮ್ರದ ದುಡ್ಡಿನಿಂದ ನಾಲಿಗೆಗೆ ಬರೆ ಹಾಕಿಸಿ) ಮತ್ತೆ ಸಮುದಾಯದೊಳಗೆ ಸೇರಿಸಿಕೊಳ್ಳುತ್ತಾರೆ.

ಚೆನ್ನದಾಸರ ಸಮುದಾಯದೊಳಗೆ ಏನೇ ಜಗಳ ಕದನವಾದರೂ ಹೊಡೆದಾಟ ಬಡಿದಾಟ ಆಗಬಾರದ ಅನಾಹುತಗಳು ನಡೆದರೂ ಈ ಜನಾಂಗ ಪೋಲೀಸ್ ಸ್ಟೇಶನ್‌ಗಳಿಗೆ ಹೋಗುವುದು ಅಪರೂಪ. "ಈ ಜನರು ಕೋರ್ಟು-ಕಛೇರಿಗಳಿಗೆ ಹೋಗುವುದು ಕಡಿಮೆ. ಕುಲಸಭೆಯ ಮುಖ್ಯಸ್ಥನೇ ಅಂತಿಮ ತೀರ್ಪುಗಾರ. ಸಮುದಾಯದ ಗುಡೇಕಾರ ಅಥವಾ ಅಧ್ಯಕ್ಷ ನ್ಯಾಯ ಪಂಚಾಯತಿ ಸಂದರ್ಭದಲ್ಲಿ ಕಡ್ಡಿಮುರಿದು ಆದೇಶ ಮಾಡಿದರೆ ಅದನ್ನು ಯಾರು ಮೀರುವಂತಿಲ್ಲ. ಮೀರಿದವರು ದಂಡ ತೆರಬೇಕು ಇಲ್ಲವೆ ಬಹಿಷ್ಕಾರಕ್ಕೆ ಒಳಗಾಗಬೇಕು"[೧೫] ಹೀಗಾಗಿ ಎಲ್ಲರೂ ನ್ಯಾಯ ಪಂಚಾಯತಿ ಆದೇಶವನ್ನು ಪಾಲಿಸುವರು.

೪.೫.೫. ಮೂಲ ನ್ಯಾಯ ಸ್ಥಾನದೊಡನೆ ಸಂಪರ್ಕ

ಸಮುದಾಯದ ನ್ಯಾಯ ಪಂಚಾಯತಿಗಳಲ್ಲಿ ವ್ಯಾಜ್ಯ ನಿರ್ಣಯವಾಗದೆ ಇರುವಾಗ, ವಿಶೇಷ ನ್ಯಾಯ ಪಂಚಾಯತಿ ಕರೆಯುತ್ತಾರೆ. ಆ ಸಭೆಯಲ್ಲಿಯೂ ಇತ್ಯರ್ಥವಾಗದೆ ಹೋದಾಗ, ಸಮುದಾಯದ ನ್ಯಾಯ ಕೇಂದ್ರವಾದ ತಮ್ಮ ತಮ್ಮ ಪವಿತ್ರ ದೇವಸ್ಥಾನಗಳಿಗೆ ವರ್ಗಾಯಿಸುತ್ತಾರೆ. ಸಮುದಾಯದ ನ್ಯಾಯ ಕೇಂದ್ರವಾದ ತಮ್ಮ ತಮ್ಮ ಪವಿತ್ರ ದೇವಸ್ಥಾನಗಳಿಗೆ ವರ್ಗಾಯಿಸುತ್ತಾರೆ.

ಕೇಳುವ ಕಟ್ಟ ಕಡೆಯ ಸ್ಥಳಗಳಿವು. ಪ್ರಸ್ತುತ "ರಾಯಚೂರು ಜಿಲ್ಲೆಯ ಕುದರಿಮೋತಿ, ಮಹಾರಾಷ್ಟ್ರದ ವಿಶಾಳಗಡ ಅಂತಹ ಕೇಂದ್ರಗಳಾಗಿವೆ."[೧೬] ಅಲ್ಲಿ ಹೋದಾಗ ಯಾವುದಾದರೂ ಒಂದು ತೀರ್ಮಾನ ಬಂದೇ ಬರುತ್ತದೆ. ದೇವರ ಮೇಲೆ ಪ್ರಮಾಣ ಮಾಡುವುದು, ದೇವಾಲಯದ ಪವಿತ್ರ ವಸ್ತುವನ್ನು ಮುಟ್ಟಿ ಪ್ರಮಾಣಗೈವುದು ಮುಂತಾದವುಗಳ ಮೂಲಕ ನ್ಯಾಯದ ನಿರ್ಣಯವಾಗುತ್ತದೆ.

ಈ ರೀತಿ ಚೆನ್ನದಾಸರ ಸಮುದಾಯದಲ್ಲಿ ನ್ಯಾಯ ವ್ಯವಸ್ಥೆ ವಿಶೇಷತೆಯಿಂದ ಕೂಡಿದೆ. ಪರಂಪರಾಗತ ನಂಬಿಕೆಗಳಿಂದ ಬದುಕುವ ಜನಾಂಗವಿದು. ಆಧುನಿಕತೆಯ ಸೆಳವಿಗೆ ಬೀಳದಿರುವು ದರಿಂದ ಕೋರ್ಟು, ಕಛೇರಿಗಳ ಮೆಟ್ಟಿಲು ಹತ್ತುವುದಿಲ್ಲ. ಇದರಿಂದ ಬುಡಕಟ್ಟುಗಳಲ್ಲಿ ಐಕ್ಯತೆಯಿದೆ. ತನ್ನ ಮೂಲ ಅಸ್ತಿತ್ವ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಚೆನ್ನದಾಸರ ಸಮುದಾಯ ಕಾಪಾಡಿಕೊಳ್ಳಲು ಸಾಧ್ಯವಾಗಿದೆ.

೪. ೬. ವೈದ್ಯ ಪದ್ಧತಿ

ಇತರ ಸಮುದಾಯಗಳಲ್ಲಿ ಇಲ್ಲದೆ ಇರುವ ವೈದ್ಯಕೀಯ ಜ್ಞಾನ ಚೆನ್ನದಾಸರ ಸಮುದಾಯದಲ್ಲಿದೆ. ಪರಂಪರಾಗತವಾದ ಇತರ ಸಮುದಾಯಗಳಲ್ಲಿ ಇಲ್ಲದೆ ಇರುವ ವೈದ್ಯಕೀಯ ಜ್ಞಾನವಿದೆ. ದಿನನಿತ್ಯದ ಜೀವನದಲ್ಲಿ ಆರೋಗ್ಯದ ಸಮಸ್ಯೆಗಳು ಎದುರಾಗುವದು ಸಹಜ. ಪ್ರಕೃತಿಯೊಂದಿಗೆ ಬಾಳಿದ ಈ ಸಮುದಾಯ ನಿಸರ್ಗದಲ್ಲಿ ಔಷಧಿಯ ಗುಣಗಳನ್ನು ಕಂಡು ಕೊಂಡರು. ಹತ್ತು ಹಲವು ರೋಗಗಳಿಗೆ ತುತ್ತಾದಾಗ ಜನಪದರು ಪರಿಹಾರ ಕಂಡುಕೊಳ್ಳಲು ಮುಂದಾದರು. "ಪ್ರಕೃತಿಯಲ್ಲಿ ದೊರೆಯುವ ಬಗೆ-ಬಗೆಯ ಎಲೆಗಳನ್ನು, ನಾರು, ಬೇರುಗಳು, ಹೂವು, ಹಣ್ಣುಗಳು, ಮರದ ತೊಗಟೆಗಳು, ದಿನಬಳಕೆಯ ಸಾಮಾನ್ಯವಾದ ವಸ್ತುಗಳು ಎಲ್ಲವನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡು ರೋಗಗಳನ್ನು ಪರಿಹರಿಸಿಕೊಂಡರು. ಒಂದೊಂದು ಕಾಯಿಲೆಯನ್ನು ಗುಣಪಡಿಸಲು ಒಂದೊಂದು ಔಷಧಿ ಬಳಸುವುದನ್ನು ಕಂಡುಕೊಂಡರು. ತಲೆಮಾರಿನಿಂದ ತಲೆಮಾರಿಗೆ ಈ ವಿದ್ಯೆಯು ವರ್ಗಾವಣೆಯಾಯಿತು. ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ ವಿದ್ಯೆ ಪ್ರಸಾರವಾಯಿತು. ಈ ವಿದ್ಯೆಯಲ್ಲಿ ಪಾರಂಗತರಾದವರು ಆಯಾ ಪರಿಸರದಲ್ಲಿ ಹೆಚ್ಚು ಗೌರವ ಹಾಗೂ ಪ್ರಯೋಜನಗಳನ್ನು ಪಡೆದರು. ಜಾನಪದ ವೈದ್ಯವಿದ್ಯೆ ಹುಟ್ಟಿ ಬೆಳೆದು ಈವರೆಗೆ ಉಳಿದು ಬಂದ ಕ್ರಮ ಹೀಗಿದೆ"[೧೭] ಎಂಬುದನ್ನು ಗಮನಿಸಿದರೆ ಇದರ ಹುಟ್ಟುಬೆಳವಣಿಗೆ ಕುರಿತಾಗಿ ಸುಳಿವು ಸಿಗುತ್ತದೆ.

ಚೆನ್ನದಾಸರ ಸಮುದಾಯದ ಜನರು ವೈದ್ಯ ವೃತ್ತಿಯಲ್ಲಿ ನಿಪುಣರಾಗಿದ್ದಾರೆ. ಬೇಟೆಯಾಡಲು ಅಡವಿಯಲ್ಲಿ ತಿರುಗಾಡುವಾಗ ಅಮೂಲ್ಯ ಗಿಡಮೂಲಿಕೆಗಳಾದ ಬಜೆ, ಕೇರಕಾಯಿ, ಹೊಡಮೂರಕಾಯಿ, ಕೋನ್‌ಕುಸ ಮುಂತಾದವುಗಳನ್ನು ಸಂಗ್ರಹಿಸುತ್ತಾರೆ. ಪೋಲಿಯೋ ಬಾರದಂತೆ ಎಲುಬಿನ ಮಣಿಗಳನ್ನು ಹಾಗೂ ಕಾಮಾಲೆ, ಧನುರುವಾತ, ಪಿತ್ತ ಕಾಯಿಲೆಗಳಿಗೆ ಔಷಧಿಯಾಗಿ ಔಡಲ ಬೀಜ, ಜಾಜಿಕಾಯಿ, ಅಜಿವಾನ, ಬಜೆ, ಈ ರೀತಿಯ ರೋಗಗಳಿಗೆ ಔಷಧೋಪಚಾರ ನೀಡುತ್ತಾರೆ. ಬಾಣಂತಿಯರಿಗೆ ಕೀಲು ನೋವು ಬಾರದಂತೆ ಕಷಾಯ ತಯಾರಿಸಿ ಕುಡಿಸುತ್ತಿದ್ದರು. ಸರ್ಪದ ಹುಣ್ಣಿಗೆ ಔಷಧವನ್ನು ತಯಾರಿಸಿ ಕೊಡುವವರೂ ಇದ್ದಾರೆ"[೧೮] ಎಂದು ಹೇಳಿರುವ ಡಾ.ವಾಯ್.ಬಿ.ಹಿಮ್ಮಡಿಯವರ ಮಾತುಗಳು ಚೆನ್ನದಾಸರ ವೈದ್ಯಕೀಯ ಪರಿಣತಿಗೆ ಸಾಕ್ಷಿಯಾಗಿವೆ.

ಜನಪದ ವೈದ್ಯರಲ್ಲಿ ಮುಖ್ಯವಾಗಿ ಎರಡು ರೀತಿಯ ವೈದ್ಯರು ಲಭಿಸುತ್ತಾರೆ. ಒಂದು ಮಾನವ ವೈದ್ಯರು. ಎರಡು ಪಶುವೈದ್ಯರು. ಮನುಷ್ಯರಿಗೆ ಕಾಯಿಲೆಯಾದಾಗ ಉಪಚಾರ ನೀಡುವವರು, ಔಷಧ ಕೊಡುವವರು ಮಾನವ ವೈದ್ಯರಾಗಿದ್ದಾರೆ. ಮುಖ್ಯವಾಗಿ ಕೆಲವು ಕಾಯಿಲೆಗಳಿಗೆ ವಿಶಿಷ್ಟ ಔಷಧ ನೀಡುತ್ತಾರೆ. ಅವು–

ಕಿವಿಬೇನೆ

ಕಿವಿಯಲ್ಲಿ ನೋವಾಗುವುದು, ಕಿವಿಯಿಂದ ಕೀವು ಸೋರುವುದು, ಕಿವಿ ಒಡೆಯುವುದು ಮುಂತಾದ ಕಿವಿಗೆ ಸಂಬಂಧಿಸಿದ ಕಾಯಿಲೆಗಳಿಗೆ ಗಜಗದ ಎಲೆಯನ್ನು ಕುಟ್ಟಿ ಅದರ ರಸವನ್ನು ಕಿವಿಯಲ್ಲಿ ಹಿಂಡುತ್ತಾರೆ. ಕಿವಿ ಸೋರುವುದಕ್ಕೆ, ಕೀವು ಬರುವುದು ಅದರಿಂದ ವಾಸನೆ ಬರುತ್ತಿದ್ದರೆ ಕೋಳಿಯ ಪಿತ್ತರಸ ಹಾಗೂ ಮೊಲದ ಪಿತ್ತರಸ ಬೆರೆಸಿ ಕಿವಿಯಲ್ಲಿ ಹಾಕಿದರೆ ಗುಣವಾಗುತ್ತದೆ.

ಹೊಟ್ಟೆ ಕಡಿತ

ಮನುಷ್ಯನಿಗೆ ನಾನಾರೀತಿಯ ರೋಗರುಜೀನಗಳಿಂದ ಬಳಲುತ್ತಿರುತ್ತಾರೆ. ಅದರಲ್ಲಿ ಹೊಟ್ಟೆ ಕಡಿತವೂ ಒಂದಾಗಿದೆ. ಇದಕ್ಕೆ ಚೆನ್ನದಾಸರ ಸಮುದಾಯದಲ್ಲಿ ಸಾಂಪ್ರದಾಯಕ ವೈಧ್ಯಕೀಯ ಔಷದಿಯನ್ನು ನೀಡುತ್ತಾರೆ. ಅಜವಾನದ ಎಲೆಗಳು ಅಥವಾ ಅಜವಾನದ ಬೀಜ ತಿನ್ನುತ್ತಾರೆ. ಇದರಿಂದ ಬಹು ಬೇಗ ಹೊಟ್ಟೆನೋವು ಕಡಿಮೆಯಾಗುತ್ತದೆ.

ಮಲಬದ್ಧತೆ

ಅಪಚನವಾಗಿ ಅಥವಾ ನೀರು ಬದಲಾಗಿ ಹೊಟ್ಟೆ ಜಾಡಿಸುತ್ತಿದ್ದರೆ(ಬೇದಿ) ಲಿಂಬೆಹಣ್ಣಿನ ರಸ ಮತ್ತು ಉಪ್ಪು ಬೆರಸಿ ಕುಡಿಸುತ್ತಾರೆ. ಅಡಿಗೆಯಲ್ಲಿ ಬಳಸುವ ಸೋಡಾ ಮತ್ತು ಲಿಂಬೆಹಣ್ಣು ಬೆರಸಿ ಕುಡಿದರೆ ಹೊಟ್ಟೆ ಕಡಿತ ನಿಲ್ಲುತ್ತದೆ. ಭಟ್ಟಿ ಸರಿದಿದ್ದರೆ ತಿಕ್ಕಿ ಭಟ್ಟಿ ಸರಿಗೊಳಿಸುತ್ತಾರೆ.

ಕಾಲು ಕೈ ಉಳುಕಿದರೆ

ಕೊಬ್ಬರಿ ಎಣ್ಣೆಯಿಂದ ತಿಕ್ಕಿ ಮಾಲಿಸು ಮಾಡಿ ಬಿಸಿ ನೀರು ಹಾಕಿ ಅವರಿ ತಪ್ಪಲು, ಬಣ ಸೂರಿಗೆ ತಪ್ಪಲು ಹಾಕಿ ಕಟ್ಟುತ್ತಾರೆ.

ಕೆಮ್ಮು

ಹಸಿ ಅಲ್ಲ ಜೇನುತುಪ್ಪದಲ್ಲಿ ಬೆರಸಿ ಕೊಡುವರು. ಅಡಸೊಗೆ ಎಲೆಯನ್ನು ವೀಳ್ಯದೆಲೆಯಂತೆ ಸುಣ್ಣ ಕಾಚು ಬೆರಸಿ ತಿನ್ನಿಸಿದರೆ ಕೆಮ್ಮು ಕಡಿಮೆಯಾಗುವುದು.

ಅಂಗಾಲ ಗಾಯ

ಮುಳ್ಳು ನಟ್ಟು ಅಂಗಾಲಿಗೆ ಗಾಯವಾದರೆ ಮುಳ್ಳು ತೆಗೆಯಲು ಹಡ್ಡಿದಾಗ ಗಾಯವಾಗಿ ನೋವುಂಟಾದರೆ ಬಿಳಿಎಕ್ಕೆ ಹಾಲನ್ನು ಗಾಯದ ಸ್ಥಳದಲ್ಲಿ ಹಚ್ಚುವುದು.

ಗಾಯಗಳು

ಶರೀರದ ಯಾವುದೇ ಭಾಗಕ್ಕೆ ಗಾಯವಾದರೆ ನಲ್ಲ ಕರಿಹಲಬು ಬಳ್ಳಿಯ ರಸವನ್ನು ಗಾಯದ ಮೇಲೆ ದಿನನಿತ್ಯ ಮೂರು ಬಾರಿ ಹಾಕಿದರೆ ಗಾಯ ವಾಸಿಯಾಗುತ್ತದೆ. ಕುರುಪಿ ಕುಡಗೋಲು, ಕೊಡ್ಲಿ, ಬಾಚಿಯಿಂದ ಗಾಯವಾದರೆ ಬಾಳೆ ಗಿಡದ ಹಾಲು ಹಾಕಿ ಪಟ್ಟಿಕಟ್ಟುತ್ತಾರೆ. ದಿನಕ್ಕೆ ಎರಡು ಬಾರಿ ಬಾಳೆಹಾಲು ಹಚ್ಚಿದರೆ ಗಾಯ ಮಾಯವಾಗುತ್ತದೆ.

ಕ್ವಾಡಿಗೆ ಗೆಮ್ಮು

ಕ್ವಾಡಿಗೆ ಕೆಮ್ಮು (ನಾಯಿ ಕೆಮ್ಮು) ಹತ್ತಿದರೆ ಜಾಚಿಲಿಯಿಂದ ಕಿರುನಾಲಿಗೆ ಒತ್ತುತ್ತಾರೆ. ನವಣಿ ಕಾಳಿನಿಂದ ನೆತ್ತಿಗೆ ಒತ್ತುತ್ತಾರೆ. ಇಣಚಿಯ (ಅಳಲಿನ) ರಕ್ತ ಮತ್ತು ಸಕ್ಕರೆ ಬೆರಸಿ ನಾಯಿ ಕೆಮ್ಮು ಇದ್ದವರಿಗೆ ಒಂದು ವಾರದವರೆಗೆ ಖಾಲಿ ಹೊಟ್ಟೆಯಲ್ಲಿ ಕುಡಿಸಿದರೆ ಕಾಯಿಲೆ ದೂರವಾಗುತ್ತದೆ.

ಕಂಠವಾತ

ಕಂಠವಾತಕ್ಕೆ ಏಡಿಯ ಕಷಾಯ ಮಾಡಿ ಕುಡಿಸುತ್ತಾರೆ. ಸಜ್ಜೆ ತಪ್ಪಲನ್ನು ಕಂಠಕ್ಕೆ ಒರೆಸುತ್ತಾರೆ. ಗಂಟಲುಗಳಲ್ಲಿ ಗುಳ್ಳಿಯಾದರೆ, ಗಂಟಲು ಕೆರೆತ, ಉಗುಳು ನುಂಗಲು ಬಾರದಿದ್ದರೆ ಬಿಸಿಬೂದಿಯಿಂದ ಗಂಟಲು ತಿಕ್ಕುತ್ತಾರೆ. ಬಿಸಿ ನೀರಿನಲ್ಲಿ ಉಪ್ಪು ಬೆರಸಿ ಬಾಯಿ ಮುಕ್ಕಳಿಸುತ್ತಾರೆ.

ಮೂಲವ್ಯಾಧಿ

ಚೆನ್ನದಾಸರ ಸಮುದಾಯದವರು ಮೂಲವ್ಯಾದಿಗೆ ತಮ್ಮ ಪರಂಪರಾಗತ ಔಭಷಧವನ್ನು ನೀಡುತ್ತಾರೆ. ಹಾಲಿವಿ ಪ್ರಾಣಿಯ ಚಿಪ್ಪಿನಿಂದ ತಯಾರಿಸಲಾದ ಉಂಗುರವನ್ನು ಮೂಲವ್ಯಾಧಿಯುಳ್ಳ ವ್ಯಕ್ತಿಗೆ ಕೊಟ್ಟು ನಿಯಮಿತವಾಗಿ ಬಳಸಲು ತಿಳಿಸುತ್ತಾರೆ. ಉಪಯೋಗಿಸಲು ಕೆಲವು ವಿಧಿ ವಿಧಾನ ಹೇಳುತ್ತಾರೆ. ಅವರಿ ತಿಳಿಸಿರುವ ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿ ಸಕಾಲಕ್ಕೆ ಔಷಧಿ ಸ್ವೀಕರಿಸಿದರೆ ಮೂಲವ್ಯಾಧಿ ಗುಣವಾಗುತ್ತದೆ. ಇದು ಈ ಸಮುದಾಯದವರು ಮೂಲವ್ಯಾದಿಗೆ ಕಂಡುಕೊಂಡ ಔಷಧವಾಗಿದೆ.

ಕಾಮಣಿ

ಕಾಮಣಿಗೆ ವನಸ್ಪತಿಯೇ ನಿಜವಾದ ಮದ್ದು. ವೈದ್ಯವಿಜ್ಞಾನ ಎಷ್ಟೇ ಬೆಳೆದಿದ್ದರೂ ಇಂದಿಗೂ ಕಾಮಣಿ (ಹೆಪೆಟೈಟಿಸ್) ಗೆ ಪಾರಂಪರಿಕ ವೈದ್ಯ ವಿದ್ಯೆಯು ಪ್ರಯೋಜನಕ್ಕೆ ಬರುತ್ತದೆ. ಉಪ್ಪು ಬಳಸದೆ ಬರಿ ಸಪ್ಪಗಿನ ಆಹಾರದ ಪತ್ಠೆ ಹೇಳುತ್ತಾರೆ. ಇನ್ನೂ ಕೆಲವರು ಬಿಸಿರೊಟ್ಟಿ ಬೆಲ್ಲ ಕಬ್ಬಿನ ಹಾಲಿನ ಪತ್ಠೆ ಹೇಳುತ್ತಾರೆ. ಔಷಧಿ ಕೊಡುವವರ ಮೇಲೆ ಇದು ಅವಲಂಭಿಸಿದೆ.

ಕೀಲುಬೇನೆ– ಸಂಧಿವಾತ

ಮನುಷ್ಯನು ವಯಸ್ಸಾದಾಗ ಅನೇಕ ರೋಗಗಳಿಂದ ಬಳಲುತ್ತಾನೆ. ಅವುಗಳಲ್ಲಿ ಕೀಲುಬೇನೆ–ಸಂಧಿವಾತೂ ಒಂದಾಗಿದೆ. ಈ ರೋಗಕ್ಕೆ ಚೆನ್ನದಾಸರ ಸಮುದಾಯದವರು ಕಾಡು ಹಂದಿಯ ಎಣ್ಣೆ, ಉಡದ ಎಣ್ಣೆಯನ್ನು ತೆಗೆದು ಹಚ್ಚಿದರೆ ಕೀಲು ನೋವು, ಸಂಧಿವಾತ ನಿವಾರಣೆಯಾಗುತ್ತದೆ.

ಅರ್ಧಾಂಗವಾಯು (ಪಾರ್ಶ್ವವಾಯು)

ಪಾರಿವಾಳದ ರಕ್ತ ತೆಗೆದು ಅರ್ಧಾಂಗವಾಯು ಪೀಡಿತರಿಗೆ ಹದಿನೈದು ದಿವಸ ನಿರಂತರವಾಗಿ ಹಚ್ಚಿದರೆ ಗುಣವಾಗುತ್ತಾರೆ.

ನಂಜರೋಗ

ಹುಲಗಲಿ (ಹೊಂಗೆ) ಬೀಜ, ಮುತ್ತಾಲಿ ಬೀಜದ ಪುಡಿಯನ್ನು ಕಚ್ಚಾದ ಗಾಯಕ್ಕೆ ಹಚ್ಚಿದರೆ ನಂಜಾಗುವುದಿಲ್ಲ. ನಂಜಾದ ಗಾಯಕ್ಕೆ ದಿನಾಲೂ ನಿಯಿಮಿತವಾಗಿ ಹಚ್ಚಿದರೆ ಗಾಯ ವಾಸಿಯಾಗಿ ನಂಜು ಮಾಯವಾಗುತ್ತದೆ.

ಹುಚ್ಚು ನಾಯಿ ಕಡಿತ

ಹುಚ್ಚು ನಾಯಿ ಕಡಿತಕ್ಕೆ ಅಡವಿ ಅಕ್ಕರಿಸಿ ತೊಪ್ಪಲ ರಸದಲ್ಲಿ ಮೆಣಸು ಬೆರಸಿ ಹಂದಿರಕ್ತ ಕುಡಿಸಿದರೆ ಬಾಧೆ ತಟ್ಟುವುದಿಲ್ಲ. ಹುಚ್ಚು ನಾಯಿ ಕಡಿತದ ವಿಷ ಹೊರಟು ಹೋಗುತ್ತದೆ.

ಹಾವು ಕಡಿತ

ಹಾವು ಕಡಿತಕ್ಕೆ ದೇಸಿ ವೈದ್ಯರು ವನಸ್ಪತ್ತಿ ಔಷಧ ಕೊಡುತ್ತಾರೆ. ಕೆಲವು ವಿಶಿಷ್ಟ ಬೇರುಗಳನ್ನು ತಿಕ್ಕಿ ಕುದಿಸಿ ಕುಡಿಸುತ್ತಾರೆ. ಕೆಲವರು ಮಂತ್ರ ಹಾಕಿ ವಿಷ ಇಳಿಸುತ್ತಾರೆಂಬ ನಂಬಿಗೆಯಿದೆ.

ಚೇಳು ಕಡಿತ

ಬಜೆಯ ಬೀಜವನ್ನು ನೀರಿಗೆ ಹಾಕಿ ಕಲ್ಲಿನ ಮೇಲೆ ಗಂಧ ಬರುವಂತೆ ತಿಕ್ಕಿ ತೀಡಬೇಕು. ಗಂಧವನ್ನು ಚೇಳು ಕಡಿದ ಸ್ಥಳದಲ್ಲಿ ಹಚ್ಚಿದರೆ ವಿಷ ಇಳಿಯುತ್ತದೆ. ನೋವು

ಕಡಿಮೆಯಾಗುತ್ತದೆ. ಕೆಲವರು ತಿನ್ನುವ ಎಲೆಯಲ್ಲಿ ಕೆಲವು ವಿಶಿಷ್ಟ ಎಲೆಗಳನ್ನು ತಿನ್ನಲು ಕೊಡುತ್ತಾರೆ. ಕೆಲವೆಡೆ ಆಡಿನ ಹಾಲು ಕಲ್ಲು ಸಕ್ಕರೆಬೆರೆಸಿ ಕಾಯಿಸಿ ಕುಡಿಸುತ್ತಾರೆ.

ಕುರುವಿನ ಬೇನೆ

ಕುರುವಿನ ಬೇನೆಯಾಗಿ ಮೈ ಮೇಲೆ ಬೊಕ್ಕೆಗಳಾಗಿ ಕೀವು, ರಕ್ತ ತುಂಬಿದಾಗ ಗುರುಬಸು ಎಲೆಯನ್ನು ಕೊಬ್ಬರಿಯೆಣ್ಣೆಯಲ್ಲಿ ನೆನಸಿ ಕಟ್ಟುತ್ತಾರೆ. ಕೆಲವೆಡೆ ಈರುಳ್ಳಿ ಗಡ್ಡಿಯನ್ನು ಬೆಂಕಿ (ಕೆಂಡ) ಯಲ್ಲಿ ಸುಟ್ಟು ಅದರ ಪದರು ಬಿಡಿಸಿ ಕುರುವಾದ ಸ್ಥಳದಲ್ಲಿ ಕಟ್ಟುತ್ತಾರೆ.

ಹಿಂದಿನ ಕಾಲದಲ್ಲಿ ಹೆರಿಗೆಯನ್ನು ಮನೆ ಮನೆಗಳಲ್ಲಿಯೇ ಮಾಡಿಸುತ್ತಿದ್ದರು. ಇದಕ್ಕಾಗಿಯೇ ನುರಿತ ಸೂಲಗಿತ್ತಿಯರು ಇರುತ್ತಿದ್ದರು. ಚಿಕ್ಕ ಮಕ್ಕಳಿಗೆ ಕಾಯಿಲೆಯಾದರೆ ಪರಂಪರಾಗತವಾದ ಜ್ಞಾನದಿಂದ ಕಷಾಯ ಮಾಡಿ ಕುಡಿಸುತ್ತಿದ್ದರು. ಬುಡಕಟ್ಟು ಜನಾಂಗಗಳು ಅರೆ ಅಲೆಮಾರಿ ತನ್ನದೆ ಆದ ರೀತಿಯಲ್ಲಿ ವಿವಿಧ ರೋಗ ರುಜಿನಗಳಿಗೆ ಗಿಡಮೂಲಿಕೆಗಳಿಂದ ಔಷಧಿ ತಯಾರಿಸುತ್ತಿದ್ದರು.

ಪ್ರಾಣಿ (ಪಶು) ವೈದ್ಯಕೀಯ ಪದ್ಧತಿ

ಪ್ರಾಣಿಗಳು ಮಾನವನ ಒಡನಾಡಿಗಳು, ಬೇಟೆ ಸಂಸ್ಕೃತಿಯ ನಂತರ ಮಾನವ ಕೃಷಿ ಸಂಸ್ಕೃತಿಯನ್ನು ಅವಲಂಭಿಸಿದಾಗ ಪ್ರಾಣಿಗಳು ಅವನ ಒಡನಾಡಿಗಳಾದವು. ಅರೆ ಅಲೆಮಾರಿಗಳಾದ ಚೆನ್ನದಾಸರ ಸಮುದಾಯಕ್ಕೂ ಪ್ರಾಣಿಗಳಿಗೂ ಮೊದಲಿನಿಂದಲೂ ಬಿಡಿಸಲಾಗದ ನಂಟುತನವಿದೆ. ಸಾಕುಪ್ರಾಣಿಗಳಿಗೆ ಕಾಯಿಲೆಯಾದಾಗ ಅವುಗಳನ್ನು ಗುಣಪಡಿಸಲು ಮದ್ದನ್ನು ಕಂಡುಹಿಡಿದರು.

ಎತ್ತು, ಎಮ್ಮೆ, ಹಸು, ಕೋಣ, ಆಡು, ಕುರಿಗಳಿಗೆ ಬಾಯಿ ಬೇನೆ ರೋಗ ಪದೇ ಪದೇ ಕಾಡುವುದುಂಟು. ಬಾಯಿಬೇನೆ ಬಂದಾಗ ಸಣ್ಣ ಸಣ್ಣ ಮೀನುಗಳನ್ನು ಜೀವಂತವಾಗಿ ಹಿಡಿದು ಬಿದಿರಿನ ಗೊಟ್ಟ ಮಾಡಿ; ಗೊಟ್ಟದ ಮೂಲಕ ದನಗಳಿಗೆ ಕುಡಿಸಿದಾಗ ಬಾಯಿ ಬೇನೆ ರೋಗ ವಾಸಿಯಾಗುತ್ತದೆ. ಎತ್ತು, ಎಮ್ಮೆಗಳ ನಾಲಿಗೆಗೆ ಮುಳ್ಳು ಹಿಡಿದು ಮೇವು ತಿನ್ನದಿದ್ದರೆ, ನೀರು ಕುಡಿಯದಿದ್ದರೆ ನಾಲ್ಕು ಜನ ಸೇರಿ ಎತ್ತನ್ನು ಹಿಡಿದು ಮೂಗುದಾರ ಬಿಗಿಗೊಳಿಸಿ ಬಾಯಿ ತೆರೆದಾಗ ಅದರ ನಾಲಿಗೆಯನ್ನು ಹೊರಗೆಳೆದು ಅದಕ್ಕೆ ಉಪ್ಪು ಮತ್ತು ಉಪ್ಪಿನಕಾಯಿಯಿಂದ ಜೋರಾಗಿ

ಉಜ್ಜುತ್ತಾರೆ. ಹೀಗೆ ಮಾಡುವುದರಿಂದ ನಾಲಿಗೆಗೆ ಅಂಟಿದ ರೋಗ ಗುಣವಾಗುತ್ತದೆ. ದನ ಕರುಗಳು ಮೇವು ತಿನ್ನುತ್ತವೆ. ನೀರನ್ನು ಕುಡಿಯಲಾರಂಭಿಸುತ್ತವೆ.

ಆಡು, ಕುರಿ, ಆಕಳು, ಎತ್ತು, ಎಮ್ಮೆ, ಕೋಣಗಳ ಹೊಟ್ಟೆ ಉಬ್ಬಿದರೆ ಉಸಿರಾಟಕ್ಕೆ ತೊಂದರೆಯಾದರೆ, ಅಡುಗೆಯೆಣ್ಣೆ ಮತ್ತು ಸುಣ್ಣ ಬೆರೆಸಿ ಪಾಕ ತಯಾರಿಸಿ ಗೊಟ್ಟ ಹಾಕಿದರೆ (ಬಿದರಿನ ಕೊಳಾಯಿ ಮೂಲಕ ಕುಡಿಸಿದರೆ) ಹೊಟ್ಟೆ ಉಬ್ಬಿದ್ದು ಕಡಿಮೆಯಾಗುತ್ತದೆ. ದನಗಳು ಸರಾಗವಾಗಿ ಉಸಿರಾಡಿಸಲಾರಂಭಿಸುತ್ತವೆ.

ದನಗಳಿಗೆ ಆಹಾರದಲ್ಲಿ ವ್ಯತ್ಯಾಸವಾಗಿ ಬೇಧಿ ಪ್ರಾರಂಭಗೊಂಡರೆ (ಉಚ್ಚಿಸಿಕೊಳ್ಳ ಲಾರಂಭಿಸಿದರೆ) ಬಿದಿರಿನ ತಪ್ಪಲು ತಿನ್ನಿಸುತ್ತಾರೆ. ದೊಡ್ಡ ಲಿಂಬಿಕಾಯಿಯ ಪಾನಕ ಮಾಡಿ ಕುಡಿಸುತ್ತಾರೆ. ಹೂಡುವ ಎತ್ತುಗಳಿಗೆ (ಕೃಷಿ ಚಟುವಟಿಕೆ ಮಾಡುವ) ಹೆಗಲು ಬಂದರೆ (ಹೆಗಲಿಗೆ ನೋವುವಾದರೆ) ಅರಿಷಿಣ ಕುದಿಸಿ ಹಚ್ಚುತ್ತಾರೆ.

ಸಾಕಿದ ನಾಯಿಗಳಿಗೆ ಅಡಪ ಹತ್ತಿದರೆ (ಕೂದಲು ಉದುರವುದು ಚರ್ಮಕ್ಕೆ ಸೊಂಕು ರೋಗ ತಗಲುವುದು) ಮಜ್ಜಿಗೆಯಾಂಬರವನ್ನು ರಟ-ರಟ ಕುದಿಸಿ ಆರಿದ ಮೇಲೆ ನಾಯಿಯ ಬೆನ್ನಿಗೆ ಹಚ್ಚಬೇಕು. ದಿನಾಲು ಎರಡು ಹೊತ್ತು ನಿಯಮಿತವಾಗಿ ಮೂರು ದಿವಸಗಳವರೆಗೆ ಹಚ್ಚಿದರೆ ಅಡಪ ಕಡಿಮೆಯಾಗುತ್ತದೆ. ಉದುರಿದ ಕೂದಲು ಮತ್ತೆ ಬರುತ್ತವೆ.

ಎಮ್ಮೆ, ಆಕಳುಗಳು ಹಿಂಡುವ (ಹಯನು ಕೂಡುವ) ದನಗಳಿಗೆ ತರುವಿನ ತಪ್ಪಲನ್ನು ತಿನ್ನಿಸಿದರೆ ಹಾಲನ್ನು ಹೆಚ್ಚು ಕರೆಯುತ್ತವೆಯಂತೆ. ತರುವಿನ ಬಳ್ಳಿಯನ್ನು ವಿಶೇಷವಾಗಿ ಬೆಳಸಿ ಅದನ್ನೆ ಮೇವನ್ನಾಗಿ ಬಳಸುವ ರೂಢಿಯಿದೆ.

ಈಯುವಾಗ ಕೆಲವೂ ಎಮ್ಮೆಗಳ ಮೈ ಹೊರ ಬೀಳುತ್ತದೆ. ಅದಕ್ಕಾಗಿ ಅಂಥ ಎಮ್ಮೆಗಳನ್ನು ಗುರುತಿಸಿ ವಿಶೇಷ ದಾವಣಿ ತಯಾರಿಸುತ್ತಾರೆ. ಮುಂಗಾಲು ಕಡೆಗೆ ಇಳುಕಲು ಮಾಡಿ ಹಿಂಗಾಲ ಕಡೆಗೆ ಹಿಂಭಾಗದಲ್ಲಿ ನೆಲವನ್ನು ಎತ್ತರ ಮಾಡುತ್ತಾರೆ. ಇಷ್ಟಾದರೂ ಮೈ ಹೊರಬಿದ್ದರೆ ಪರಿಣಿತ ಪಶುವೈದ್ಯರು ಹೊರಬಿದ್ದ ಮೈಯನ್ನು ಸರಿಪಡಿಸುತ್ತಾರೆ. ಗಿಡ–ಮೂಲಿಕೆಗಳಿಂದ ತಯಾರಿಸಿದ ಕಷಾಯವನ್ನು ಕುಡಿಸುತ್ತಾರೆ.

ಸಾಕಿದ ನಾಯಿಗಳಿಗೆ ಉಣ್ಣೆ ಅಥವಾ ತೊನಶಿ ಕಾಟ ಹೆಚ್ಚಾದರೆ ಬಳ್ಳೊಳ್ಳಿಯನ್ನು ಬಟ್ಟೆಯಲ್ಲಿ ಕುಟ್ಟಿ ರಸ ತಯಾರಿಸಿ ಕೊಬ್ಬರಿಯೆಣ್ಣೆ ಬೆರಸಿ ನಾಯಿಗಳಿಗೆ ಹಚ್ಚಿದರೆ ಉಣ್ಣೆ ಮತ್ತು ತೊನಶಿಯ ಉಪಟಳ ಕಡಿಮೆಯಾಗುತ್ತದೆ.

ಸಾಕಿದ ಕೋಳಿಗಳಿಗೆ ಜವಾರಿ ಕೋಳಿಗಳಿಗೆ ಹೇನುಗಳ ಬಾಧೆಯುಂಟಾದಾಗ ಹೇನುಗಳಿಂದ ಕೋಳಿಗಳನ್ನು ಸಂರಕ್ಷಿಸುವದಕ್ಕಾಗಿ ಇವರು ಬಜಿಯನ್ನು ನೀರಿನಲ್ಲಿ ಕುದಿಸಿ ಬೇರು ನೀರಲ್ಲಿ ಕರಗಿದ ಮೇಲೆ ಆರಿದ ನೀರನ್ನು ಕೋಳಿಗಳಿಗೆ ಸಿಂಪಡಿಸಿದರೆ ಹೇನುಗಳು ನಾಶವಾಗುತ್ತವೆ. ಕೋಳಿಗಳು ಸಧೃಢವಾಗಿರುತ್ತವೆ.

ಇಷ್ಟೇ ಅಲ್ಲದೆ ಇನ್ನೂ ಹತ್ತು ಹಲವೂ ರೀತಿಯ ರೋಗ ರುಜೀನಗಳಿಗೆ ಈ ಸಮುದಾಯದಲ್ಲಿ ಔಷಧ ನೀಡುವ ಜನಪದ ವೈದ್ಯರಿದ್ದಾರೆ. ಕೆಮ್ಮು, ನೆಗಡಿ, ವಾತ, ಪಿತ್ತ, ತಲೆ ಸಿಡಿತ, ಕಣ್ಣು ಬೇನೆ, ಗಂಟಲು ಬೇನೆ ಮುಂತಾದವುಗಳಿಗೆ ಮನೆ ಮದ್ದು ಮಾಡುತ್ತಾರೆ. ಸಣ್ಣ ಪುಟ್ಟ ರೋಗಗಳಿಗೆ ಮನೆಯ ಹಿರಿಯರೆ ಮದ್ದನ್ನು ನೀಡುತ್ತಾರೆ. ಹಲವು ರೀತಿಯ ಔಷಧಿಗಳನ್ನು ನೀಡುವ ದೇಶಿ ವೈದ್ಯ ಪದ್ಧತಿ ಈಗಲೂ ಈ ಸಮುದಾಯದಲ್ಲಿದೆ. ಪಾರಂಪರಿಕ ಜ್ಞಾನವನ್ನು ಈ ಜನಾಂಗ ಸಂರಕ್ಷಿಸಿಕೊಂಡು ಬಂದಿದೆ.

ಸಮುದಾಯಗಳ ಮಾಹಿತಿ ಪಡೆಯುವುದು ಅಷ್ಟುಸುಲಭವೂ ಸರಳವೂ ಅಲ್ಲ. ಆಯಾ ಜನಾಂಗದ ವಿಶ್ವಾಸಗಳಿಸಿದ ಮೇಲೆ ಕೆಲವು ವಿಷಯವನ್ನು ಬಿಟ್ಟುಕೊಡುತ್ತಾರೆ. ಮಾಹಿತಿಗಳನ್ನು ಹಂಚಿಕೊಳ್ಳುತ್ತಾರೆ. ಆದರೆ ಜನಪದ ವೈದ್ಯರ ವಿಷಯ ಬಂದಾಗ ಕ್ಷೇತ್ರಕಾರ್ಯ ಕೈಗೊಂಡವರಿಗೆ ಅಗ್ನಿಪರೀಕ್ಷೆ ಎದುರಾಗುತ್ತದೆ. ಜನಪದ ವೈದ್ಯವು ಕೆಲವರ ವೃತ್ತಿಯಾಗಿದ್ದು, ಆದಾಯದ ಮೂಲವಾಗಿರುತ್ತದೆ. ಅವರ ಜೀವನ ನಿರ್ವಹಣೆ, ಸಾಮಾಜಿಕ ಮರ್ಯಾದೆಗಳು ಇದರಲ್ಲಿ ಅಡಕವಾಗಿರುತ್ತವೆ. ಸಂಗ್ರಹದಾರರಿಗೆ ಮಾಹಿತಿಯನ್ನು ಸುಲಭವಾಗಿ ಬಿಟ್ಟುಕೊಡುವುದಿಲ್ಲ. ವೈದ್ಯ ವೃತ್ತಿಯ ಗುಟ್ಟು ಬಿಟ್ಟರೆ ತಮ್ಮ ವೃತ್ತಿಗೆ ಸಂಚಕಾರ ಬರುವುದೆಂಬ ಆತಂಕ ಆವರಿಸಿರುತ್ತದೆ. ಕೆಲವು ಗುಟ್ಟುಗಳನ್ನು ತಮ್ಮಲ್ಲಿಯೆ ಇಟ್ಟುಕೊಳ್ಳುತ್ತಾರೆ. ಗುರುಗಳ ಆಜ್ಞೆಯಾಗಿದೆ. ಈ ವಿಷಯವನ್ನು ಹೇಳುವಂತಿಲ್ಲವೆನ್ನುತ್ತಾರೆ. ಇನ್ನು ಕೆಲವರು ವನಸ್ಪತಿಯ ಹೆಸರು ಒಡೆದರೆ (ಯಾವ ಕಾಯಿಲೆಗೆ ಯಾವ ಗಿಡಮೂಲಿಕೆ ಔಷಧಿಯಾಗುತ್ತೆ ಎಂದು ಬಿಡಿಸಿ ಹೇಳಿದರೆ) ಕೇಳಿದ ಹೇಳಿದ ಇಬ್ಬರಲ್ಲೂ ಔಷಧಿ ಹುಸಿಯಾಗುತ್ತದೆ ಎನ್ನುವ ಮೂಢ ನಂಬಿಕೆಯೂ ಈ ಸಮುದಾಯದಲ್ಲಿದೆ. ಹೀಗಾಗಿ ಎಷ್ಟೋ ಔಷಧಿಯ ಜ್ಞಾನ ಅವರೊಂದಿಗೆ ಹೊರಟು ಹೋಗುತ್ತದೆ. ಈ ಸಮುದಾಯದ ಪರಿಣತವೈದ್ಯಕೀಯ ಜ್ಞಾನ ಎಲ್ಲಕ್ಕಿಂತ ಶ್ರೇಷ್ಠವೆಂದಾಗಲಿ, ಎಲ್ಲರೂ ಬಳಸಬೇಕೆಂದೇನೂ ಇಲ್ಲ. ಆದರೆ

ಕೆಲವು ಸಂಗತಿಗಳಲ್ಲಿ ವೈಜ್ಞಾನಿಕತೆಯಿದೆ. ರೋಗ ಗುಣಪಡಿಸುವ ಶಕ್ತಿಯಿದೆ. ಪರಂಪರಾಗತ ಜ್ಞಾನವನ್ನು ಸುಲಭವಾಗಿ ತಳ್ಳಿ ಹಾಕಲಾಗದು. ಈ ಸಮುದಾಯವು ವೈದ್ಯ ಪದ್ಧತಿಯ ಕುರಿತಾಗಿ ವಿಶೇಷವಾದ ಅಧ್ಯಯನವಾಗಬೇಕಾಗಿದೆ.

೪. ೭. ವೇಷ ಭೂಷಣಗಳು

ಚೆನ್ನದಾಸರ ಸಮುದಾಯವು ಮನೆಯಲ್ಲಿರುವಾಗ ಸಾಮಾನ್ಯವಾದ ಬಟ್ಟೆ ಧರಿಸಿದರೆ, ಭಿಕ್ಷಾಟನೆ ವೃತ್ತಿಯನ್ನು ಕೈಗೊಳ್ಳುವಾಗ ವಿಶೇಷವಾದ ವೇಷ ಭೂಷಣಗಳನ್ನು ಧರಿಸುತ್ತಾರೆ. ಮನೆಯಲ್ಲಿರುವಾಗ ಸ್ತ್ರೀ ಪುರುಷರಿಬ್ಬರೂ ಇತರರಂತೆ ಸರಳ ಸಹಜ ಮತ್ತು ಸಾಮಾನ್ಯ ಉಡುಪುಗಳನ್ನು ತೊಡುತ್ತಾರೆ. ವೃತ್ತಿಕಲೆಯ ಪ್ರದರ್ಶನಕ್ಕೆ ಹೊರಟಾಗ ಇಬ್ಬರ ವೇಷಭೂಷಣ ಗಳಲ್ಲಿ ಆಮೂಲಾಗ್ರವಾದ ಬದಲಾವಣೆಯಾಗಿರುತ್ತದೆ. "ಗಂಡಸರು ಧೋತರ, ನಿಲುವಂಗಿ, ಮೇಲು ಕೋಟು, ತಲೆಗೆ ರುಮಾಲು, ಶಂಖ, ಗಂಟೆ, ಜಾಗಟೆ, ಗರುಡ ಗಂಭಗಳನ್ನು ಒಳಗೊಂಡು ಭಿಕ್ಷಾಟನೆಗೆ ಹೋಗುತ್ತಾರೆ."[೯] ಎಂದು ಡಾ. ಅರ್ಜುನ ಗೊಳಸಂಗಿಯವರು ವಿವರಿಸಿದ್ದಾರೆ. ದಾಸರ ಮಹಿಳೆಯರು ಇನ್ನೂಳಿದ ಹಿಂದೂ ಸ್ತ್ರೀಯರಂತೆ ಬಟ್ಟೆ ತೊಡುತ್ತಾರೆ "ಹಣೆಯ ಮೇಲೆ ಲಂಭವಾಗಿ ಇಲ್ಲವೆ ಅಡ್ಡಡ್ಡವಾಗಿ ಕುಂಕುಮ ಹಚ್ಚಿಕೊಳ್ಳುತ್ತಾರೆ ಕಾಲುಂಗುರು, ಗಾಜಿನ ಬಳೆ ತೊಡುತ್ತಾರೆ. ಮೈಮೇಲೆ ಹಚ್ಚೆ ಬೊಟ್ಟು ಚುಚ್ಚಿಸಿಕೊಳ್ಳುವುದು ಸಾಮಾನ್ಯವಾಗಿದೆ. ನತ್ತು, ಕಾಲ್ಗಡಗ, ಕಾಲುಂಗುರ, ಡಾಬು, ತಾಳಿ, ಮೊದಲಾದ ಆಭರಣಗಳನ್ನು ಧರಿಸುವರು"[೨೦] ಎಂದು ಪ್ರೊ. ಬಿ ವ್ಹಿ. ಗುಂಜೆಟ್ಟಿಯವರು ಪರಿಚಯಿಸಿದ್ದಾರೆ. ಇದು ಸಾಮಾನ್ಯವಾಗಿ ಚೆನ್ನದಾಸರ ಮಹಿಳೆಯರ ವೇಷಭೂಷಣಗಳಾದವು. ಆದರೆ "ದಾಸರಾಟದ ಇಲ್ಲವೆ ಹಾಡುದಾಸರ ಹೆಂಗಸರು ಮಾತ್ರ ಬಲುಜೋರಾಗಿ ಅಲಂಕೃತಗೊಂಡಿರುತ್ತಾರೆ. ದೇವದಾಸಿ ಪದ್ಧತಿ ಇವರಲ್ಲಿ ಯಥೇಚ್ಛವಾಗಿ ನಡೆದು ಬಂದಿರುವುದರಿಂದ ಹಾಡುಗಾರಿಕೆ, ಕುಣಿತಕ್ಕೆ ತಕ್ಕಂತೆ ರಂಭೆಯ ಹಾಗೆ ಶೃಂಗಾರಗೊಳ್ಳಬೇಕಾದದ್ದು ಅನಿವಾರ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ಅವರು ಧರಿಸುವ ಆಭರಣಗಳು ಕೂಡ ವಿಶಿಷ್ಟವಾಗಿರುತ್ತವೆ."[೨೧] ಎಂಬುದು ಗಮನಾರ್ಹವಾಗಿದೆ.

ಶಂಖ, ಜಾಗಟೆ, ಗಂಟೆ, ಭವನಾಗಿ, ಭೋಂಕಿ, ಗರುಡಗಂಭ ಆಂಜನೇಯ ಮೂರ್ತಿ ಇರುವ ಅಂಗೈ ಅಗಲದ ಹಿತ್ತಾಳೆ ವಿಗ್ರಹ, ತಲೆಗೊಂದು ರುಮಾಲು, ಹಣೆಯಲ್ಲಿ ಮೂರು

ಗಜನಾಮಗಳು, ತೋಳಬಂಧಿ, ನವಿಲುಗರಿ, ತುಳಸಿಮಣಿ, ಉದ್ದನೆಯ ಅಂಗಿ, ಬಿಗಿಯಾದ ಧೋತರ ಇವು ಚೆನ್ನದಾಸರ ಸಮುದಾಯದ ಪುರುಷರ ವೇಷಭೂಷಣಗಳಾಗಿವೆ.

ಮಹಿಳೆಯರಿಗೆ ಹಚ್ಚೆಗಳು ಆಭರಣಗಳಂತೆ ಅಲಂಕಾರಿಕ ಸಾಮಗ್ರಿಗಳಾಗಿರುತ್ತವೆ. "ಚುಚ್ಚಿಸಿಕೊಂಡ ವಿನ್ಯಾಸಗಳು ಶಂಕ, ತುಳಸಿ, ಜಗಲಿಗೇರಿದ ಹೂ, ರಥ, ಬಾಳೆಗಿಡ ಮೊದಲಾದ ಅಂಗೈ ಮೇಲ್ಭಾಗ, ಹಣೆ, ತೋಳು, ಗಲ್ಲ ಹಾಗೂ ಗದ್ದ ಮೊದಲಾದ ದೇಹದ ಅಂಗಗಳ ಮೇಲೆ ಹಚ್ಚೆ ಹಾಕಿಸಿಕೊಳ್ಳುವರು." ಮೂಗಬಟ್ಟು, ನತ್ತು, ಓಲೆ, ಕಾಲಂದಿಗೆ, ಸುಮರ್ ಸಿಂಹನ, ಮುರು(ಕಿವಿಯುಂಗುರ) ಕಡಗಾಲು(ಕಾಲ್ಗಡಗ) ಒಡ್ಯಾಣ, ಡಾಬು, ಕಾಲುಂಗುರ, ತೋಡೆ, ರುಳಿ, ಮೊದಲಾದವುಗಳನ್ನು ಸ್ತ್ರೀಯರು ಧರಿಸಿ ಸುಂದರವಾಗಿ ಅಲಂಕೃತಗೊಳ್ಳುತ್ತಾರೆ.

ಚೆನ್ನದಾಸರ ಸಮುದಾಯದ ಸಂಪ್ರದಾಯಗಳಲ್ಲಿ ಜನನ, ನಾಮಕರಣ, ಜವುಳ, ಋತುಮತಿ, ಮದುವೆ, ಸೀಮಂತ, ಮರಣ ಮುಂತಾದ ಸಂಸ್ಕಾರಗಳನ್ನು ಪರಿಚಯಿಸಲಾಗಿದೆ. ಸದರಿ ಸಮುದಾಯದ ಆಚರಣೆಗಳಾದ ನ್ಯಾಯಪದ್ಧತಿ, ಪಂಚಾಯತಿ, ನ್ಯಾಯನಿರ್ಣಯ, ಶಿಕ್ಷೆಯ ವಿಧಿವಿಧಾನ ಮುಂತಾದವುಗಳನ್ನು ವಿವೇಚಿಸಲಾಗಿದೆ. ಚೆನ್ನದಾಸರ ಸಮುದಾಯದಲ್ಲಿ ರುವ ವೈದ್ಯ ಪದ್ಧತಿ, ರೋಗರುಜಿನುಗಳಿಗೆ ನೀಡುವ ಪರಿಹಾರೋಪಾಯಗಳು, ದೇಶಿಯ ವೈದ್ಯಕೀಯ ಜ್ಞಾನ ಇತ್ಯಾದಿಗಳನ್ನು ಕಟ್ಟಿಕೊಡಲಾಗಿದೆ. ಈ ಸಮುದಾಯದ ವೇಷಭೂಷಣ, ಆಹಾರ ಪದ್ಧತಿಗಳನ್ನು ಸಾಂದರ್ಭಿಕವಾಗಿ ವಿಶ್ಲೇಶಿಸಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಚೆನ್ನದಾಸರ ಸಮುದಾಯದ ಸಾಮಾಜಿಕ ಜೀವನ ವಿಧಾನವನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಬಳಸಿಕೊಂಡು ರೂಪಿಸಲಾಗಿದೆ.

ಧೈವಗಳು ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವುಗಳನ್ನು ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ಹಾಗಾಗಿ ಈ ಅಧ್ಯಾಯದಲ್ಲಿ ಅವೆರಡನ್ನು ಜೊತೆ-ಜೊತೆಯಾಗಿಯೇ ಅಧ್ಯಯನಿಸಲಾಗಿದೆ. ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ಧೈವಗಳು ಮತ್ತು ಸಾಮಾಜಿಕ ಹಿನ್ನೆಲೆಯು ತುಂಬಾ ವಿಭಿನ್ನ ಮತ್ತು ವಿಶಿಷ್ಟಮಯವಾಗಿದೆ. ಈ ಸಮುದಾಯದ ದೈವಗಳು, ಹಬ್ಬ ಮತ್ತು ದೈವತಾರಾಧನೆಗಳಲ್ಲಿ ಸಮುದಾಯದ ಅನನ್ಯತೆಯಿರುತ್ತದೆ. ಜನನ, ನಾಮಕರಣ, ಋತುಮತಿ, ಮದುವೆ, ಸೀಮಂತ ಮತ್ತು ಮರಣ ಮುಂತಾದ ಸಂಪ್ರದಾಯಗಳಲ್ಲಿ ಸಾಂಸ್ಕೃತಿಕ ವೈಶಿಷ್ಟ್ಯತೆ ಅಡಗಿದೆ. ಆಚರಣೆಗಳಲ್ಲಿ ಈ ಸಮುದಾಯದ ಅಸ್ಮಿತೆಯು ಎದ್ದು ಕಾಣುತ್ತದೆ. ನ್ಯಾಯ ಪದ್ಧತಿ, ವೈದ್ಯಪದ್ಧತಿಗಳು ವಿಶಿಷ್ಟವಾಗಿದ್ದು, ಚೆನ್ನದಾಸರ ಸಮುದಾಯದ

ಸ್ವಂತಿಕೆಯನ್ನು ಪ್ರತಿಫಲಿಸುತ್ತವೆ. ವೇಷಭೂಷಣಗಳು ಉಳಿದ ಜನಸಮುದಾಯಕ್ಕಿಂತಲೂ ಹೇಗೆ ವಿಭಿನ್ನವಾಗಿದೆಯೆಂಬುದನ್ನು ನಿರೂಪಿಸಲು ಪ್ರಯತ್ನಿಸಲಾಗಿದೆ.

ಬ) ಚೆನ್ನದಾಸರ ಸಮುದಾಯದ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿ

ಆರ್ಥಿಕ ಸ್ಥಿತಿಗತಿ

ಯಾವುದೇ ಒಂದು ದೇಶದ, ಯಾವುದೇ ಜನಾಂಗದ ಶ್ರೇಷ್ಠತೆ ನಿಂತಿರುವುದು ಆರ್ಥಿಕ ವ್ಯವಸ್ಥೆಯ ಮೇಲೆಯೇ. ಅರ್ಥವೇ ಎಲ್ಲದರ ಜೀವಜೀವಾಳವಾಗಿದೆ. ಆರ್ಥಿಕವಾಗಿ ಸಭಲರಾದವರೆ ಬಲಾಢ್ಯರೆನಿಸಿಕೊಳ್ಳುತ್ತಾರೆ. "ದುಡ್ಡೆದೊಡ್ಡಪ್ಪ" ಎಂಬ ಗಾದೆ ಮಾತು ಎಲ್ಲ ಕಾಲಕ್ಕೂ ಸಲ್ಲುತ್ತದೆ. ಯಾವುದೊ ಒಂದು ಪ್ರದೇಶ ಅಥವಾ ನಾಡಿನ ಆರ್ಥಿಕ ಪರಿಸ್ಥಿತಿ ಅಲ್ಲಿನ ಸಂಪನ್ಮೂಲಗಳ ಪ್ರಮಾಣ, ಅವುಗಳ ಗುಣಮಟ್ಟ, ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯ, ಮೂಲಭೂತ ಸೌಕರ್ಯಗಳು ಮತ್ತು ಅಲ್ಲಿನ ಸಮುದಾಯದ ಪರಿಶ್ರಮವನ್ನು ಅವಲಂಬಿಸಿರುತ್ತದೆ. ಈ ವ್ಯವಸ್ಥೆಗನುಗುಣವಾಗಿ ಆ ನಾಡಿನ ಜನರ ಜೀವನ ವಿಧಾನಗಳು ನಿರ್ಧರಿಸಲ್ಪಡುತ್ತವೆ. ನೈಸರ್ಗಿಕ ಕೊಡುಗೆಗಳಾದ ಮಣ್ಣು, ನೀರು, ಗಾಳಿ, ಮಳೆ, ಅರಣ್ಯ, ಖನಿಜ ಸಂಪತ್ತುಗಳೆಲ್ಲವೂ ಸಮಾವೇಶಗೊಳ್ಳುತ್ತವೆ. ಭೂಮಿಯು ಪ್ರಕೃತಿದತ್ತ ಸಂಪನ್ಮೂಲದ ಕೇಂದ್ರವಾಗಿದೆ. ಪ್ರಾಚೀನ ಕಾಲಾವಧಿಯ ಹೊಸ ಗ್ರಾಮಗಳ ಉದಯದೊಂದಿಗೆ ಅದರ ಸುತ್ತಲೂ ವ್ಯವಸಾಯಕ್ಕೆ ಭೂಮಿ ನಿರ್ಮಾಣವಾಗುತ್ತಿತ್ತು. ಪಾಳು ಭೂಮಿಯನ್ನು ಪಶುಪಾಲನೆಯ ಸಲುವಾಗಿ ಹುಲ್ಲುಗಾವಲಾಗಿ ಬಳಸಿಕೊಳ್ಳಲಾಗುತ್ತಿತ್ತು. ಹೀಗಾಗಿಯೆ ಈಗಲೂ ಪ್ರತಿ ಗ್ರಾಮದಲ್ಲಿ ಗೋಮಾಳ ಕಾಯ್ದಿಡುವ ಪದ್ಧತಿ ಇದೆ. ಕೌಟಿಲ್ಯನು ತನ್ನ ಮಹತ್ವಾಕಾಂಕ್ಷೆ ಕೃತಿ ಅರ್ಥಶಾಸ್ತ್ರದಲ್ಲಿ– "ಅರ್ಥ ವ್ಯವಸ್ಥೆ(ಆರ್ಥಿಕ ಪರಿಸ್ಥಿತಿ) ಅಂದರೆ ಆಯಾ ಪ್ರದೇಶದ ಕೃಷಿ, ಪಶುಪಾಲನೆ, ವಾಣಿಜ್ಯ, ಕೈಗಾರಿಕೆ, ರಾಜನೀತಿ, ದಂಡನೀತಿಯಾಗಿದೆ". ಎಂದು ಸೂಚಿಸಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಭಾರತದ ಶ್ರೇಣಿಕೃತ ವ್ಯವಸ್ಥೆಯಲ್ಲಿ ಬುಡಕಟ್ಟು ಮತ್ತು ಆದಿವಾಸಿ ಸಮುದಾಯಗಳಿಗೆ ಯಾವುದೇ ಆರ್ಥಿಕ ಸ್ವಾತಂತ್ರ್ಯವಿರಲಿಲ್ಲ. ಬಹುಸಂಖ್ಯಾತ ದುಡಿಯುವ ತಳವರ್ಗದ ಸಮುದಾಯಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ನಿರಾಕರಿಸುವ ಮೂಲಕ ಪುರೋಹಿತ ವರ್ಗ ಮತ್ತು ಪ್ರಭುತ್ವಗಳು ಶ್ರೇಣಿಕೃತ ಸಮಾಜವನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡವು. ಅಸಮಾನತೆಯನ್ನು ಖಾಯಂಗೊಳಿಸಲು ಶ್ರೇಣಿಕರಣವನ್ನು ಸಮರ್ಥಿಸುವ ಪ್ರಯತ್ನಗಳು ಇಂಡಿಯಾದ ಚರಿತ್ರೆಯಲ್ಲಿ

ನಿರಂತರವಾಗಿ ನಡೆದು ಬಂದಿವೆ. ರಾಜಕೀಯವಾಗಿ, ಆರ್ಥಿಕವಾಗಿ ಬಲವಿಲ್ಲದೆ ಬಸವಳಿದು ಹೋದ ಸಮುದಾಯಗಳು ಆಳುವ ವರ್ಗಕ್ಕೆ ಆಧೀನಗೊಂಡೆ ಇತಿಹಾಸದುದ್ದಕ್ಕೂ ಬಾಳುತ್ತ ಬಂದಿವೆ. ಇದಕ್ಕೆ ಚೆನ್ನದಾಸರ ಸಮುದಾಯವೂ ಕೂಡ ಹೊರತಾಗಿಲ್ಲ.

ಚೆನ್ನದಾಸರ ಸಮುದಾಯದ ಆರ್ಥಿಕ ಸ್ಥಿತಿಗತಿಯು ಅವರ ಮೂಲ ಕುಲಕಸಬುಗಳು, ಪಾರಂಪರಿಕ ವೃತ್ತಿಗಳು, ವೃತ್ತಿ ಕೌಶಲ್ಯ, ಕರಕುಶಲತೆ, ವೈದ್ಯಪದ್ಧತಿ, ಕುಟುಂಬದ ಆರ್ಥಿಕತೆ ಮುಂತಾದವುಗಳನ್ನು ಅವಲಂಬಿಸಿದೆ. ಚೆನ್ನದಾಸರ ಕಸಬುಗಳು ಪ್ರಮುಖವಾಗಿ ಭಿಕ್ಷಾಟನೆ, ಬೇಟೆ, ಕೌದಿಹೊಲಿಯುವುದು, ಕೂಲಿಮಾಡುವುದಾಗಿದೆ. ಉಪಕಸಬುಗಳಾಗಿ ಮಾರಾಟ, ಪಶುಪಾಲನೆ, ಕೃಷಿ ಇತ್ಯಾದಿ. ಇತರ ಕಸಬುಗಳಾಗಿ ಸಾರಾಯಿ ಮಾರಾಟ, ಹೂ ಮಾರಾಟ, ವನಸ್ಪತಿ ಮಾರಾಟ ಇತ್ಯಾದಿ. ಉದ್ಯೋಗ– ಇದರಲ್ಲಿ ನೌಕರಿ, ಸರಕಾರಿ, ಅರೆಸರಕಾರಿ, ಖಾಸಗಿ ಮುಂತಾದವುಗಳು ಇವರ ಆರ್ಥಿಕ ಸ್ಥಿತಿಗತಿಯನ್ನು ನಿರ್ಧರಿಸುತ್ತವೆ.

ಚೆನ್ನದಾಸರ ಸಮುದಾಯದ ಮುಖ್ಯ ವೃತ್ತಿ ಭಿಕ್ಷೆಯಾಗಿದೆ. ಈ ಸಮುದಾಯದ ಕುರಿತಾಗಿ ಅಧ್ಯಯನಗೈದ ವಿದ್ವಾಂಸರೆಲ್ಲರು ಭಿಕ್ಷಾವೃತ್ತಿಯನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ. ಕೆಲವರು ವೈಷ್ಣವ ಭಿಕ್ಷುಕರೆಂದು, ಮತ್ತೆ ಕೆಲವರು ದಾಸರಿ ಭಿಕ್ಷುಕರೆಂದು ವಿವರಿಸಿದ್ದಾರೆ. ಭಿಕ್ಷಾಟನೆಗಾಗಿಯೆ ವಿಭಿನ್ನ ಉಪನಾಮಗಳಿಂದ ಈ ಜನಾಂಗ ಗುರುತಿಸಿಕೊಂಡಿದೆ. ವೃತ್ತಿಯ ಮೇಲೆಯೆ ಈ ಸಮುದಾಯದ ಆರ್ಥಿಕ ಜೀವನ ಅವಲಂಭಿತವಾಗಿರತ್ತದೆ. ಭಿಕ್ಷೆ ಬೇಡುವುದೆ ಮೂಲ ಕಸುಬಾದಾಗ ಇವರ ಆರ್ಥಿಕ ಸ್ಥಿತಿಗತಿಗಳು ಹೇಗಿರಬಹುದು? ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ಪರಿಶೀಲಿಸಲಾಗಿದೆ.

ಈ ಥರ್ಸ್ಟನ್ ಅವರು–"ವಿಷ್ಣುವಿನ ಹಾಡುಗಳನ್ನು ಹೇಳುತ್ತ, ಭಿಕ್ಷೆ ಬೇಡಿ ಬದುಕುವ ಸಮುದಾಯವೆಂದೂ, ಕೆಲವರು 'ಕಳ್ಳತನ ವೃತ್ತಿಯ ದಾಸರು ಇವರೆಂದು" ಹೇಳಿದ್ದಾರೆ.[೨೨] ಅನಂತಕೃಷ್ಣ ಅಯ್ಯರ್ ಅವರು–"ಇವರ ವೃತ್ತಿಯ ಲಕ್ಷಣವೆಂದರೆ ಭಿಕ್ಷೆ ಬೇಡುವುದು. ಕೆಲವು ನಿರ್ದಿಷ್ಟ ಸಮಾರಂಭಗಳಲ್ಲಿ ದೇವತಾರಾಧನೆಯನ್ನು ನಡೆಸುವುದು, ವೈಷ್ಣವ ನಂಬಿಕೆಯುಳ್ಳ ವಿವಿಧ ಜಾತಿಗಳಿಗೆ ಸೇರಿದ ಅನೇಕ ವ್ಯಕ್ತಿಗಳ ಅನುಕೂಲಕ್ಕಾಗಿ ನರ್ತನ ಮಾಡುವುದು, ಕುಟುಂಬದ ಹಿರಿಯ ಮಗ ಈ ವೃತ್ತಿಯನ್ನು ಕೈಗೊಳ್ಳುತ್ತಾನೆ. ಉಳಿದ ಮಕ್ಕಳು ಶೂದ್ರ ವರ್ಗದವರಂತೆ ಕೃಷಿಯನ್ನು ಮಾಡುತ್ತಾರೆ."[೨೩] ಎಂದು ವಿವರಿಸಿದ್ದಾರೆ. ದಾಸ ಸಮುದಾಯದ ವೃತ್ತಿಯ ಕುರಿತಾಗಿ ಮತ್ತೋರ್ವ ಅಧ್ಯಯನಕಾರರಾದ 'ಸಯ್ಯದ್ ಸಿರಾಜ್ ಉಲ್ ಹಸನ್' ಅವರು ಮೀನು, ಪಾರಿವಾಳ ಇತ್ಯಾದಿ ಹಕ್ಕಿಗಳನ್ನು ಹಿಡಿದು ಮಾರುವವರು. ಮತ್ತೆ ಕೆಲವು ಜನರು ಕೃಷಿ ಹಾಗೂ ಪತ್ತೇದಾರಿ ಮಾಡುವವರು."[೨೪]ಎಂದು ಹೇಳಿದ್ದಾರೆ.

ದಾಸರ ಕುರಿತಾಗಿ ಕನ್ನಡದಲ್ಲಿ ಪ್ರಪ್ರಥಮ ಪ್ರಬಂಧ ರಚಿಸಿರುವ ಪ್ರೊ ಬಿ. ವ್ಹಿ. ಗುಂಜೆಟ್ಟಿಯವರು, 'ದಾಸರ ಕಸುಬು' ಎನ್ನುವ ಉಪಶೀರ್ಷಿಕೆಯಲ್ಲಿ ಹೇಳಿದ್ದು ಹೀಗಿದೆ. "ದಾಸರ ಮುಖ್ಯ ಕಸುಬು–ಶಂಖ, ಜಾಗಟೆ, ಗಂಟೆ ಮೊದಲಾದವುಗಳನ್ನು ಹಿಡಿದು ಮನೆ ಮನೆಗೆ ಹೋಗಿ ಭಿಕ್ಷೆ ಬೇಡುವುದಾಗಿದೆ. ದಾಸರಲ್ಲಿ ಕೆಲವರು ದನಗಳ ವ್ಯಾಪಾರ ಮಾಡುವರು. ಕೆಲವರು ತಬಲಾ ಮೊದಲಾದ ವಾದ್ಯಗಳ ರಿಪೇರಿ ಕಾರ್ಯವನ್ನು ಮಾಡುವರು. ಕೆಲವರು ಗಿಡಮೂಲಿಕೆಗಳಿಂದ ಔಷಧಗಳನ್ನು ಕೊಡುವರು. ಹುಲ್ಲಿನಿಂದ ಚಾಪೆ, ಕೋಡುಗಳಿಂದ ಹಣಿಗೆ (ಬಾಚಣಿಕೆ) ಮೊದಲಾದವುಗಳನ್ನು ಮಾಡಿ ಮಾರುವುದುಂಟು. ಕೆಲವರು ಇತ್ತೀಚಿಗೆ ಒಕ್ಕಲುತನಕ್ಕೂ ತೊಡಗಿರುವುದು ಕಂಡು ಬರುತ್ತದೆ. ದಾಸರಾಟವನ್ನು ಮಾಡುವುದು, ಬುಗರಿ ಆಟ, ಜಾದೂ ಆಟಗಳನ್ನು ಮಾಡುವರು. ತುಟಿಯ ಮೇಲೆ, ಮೂಗಿನ ಮೇಲೆ ಬುಗುರಿ ಆಡಿಸುವ ಅವರ ಹವ್ಯಾಸ ಸೋಜಿಗವನ್ನುಂಟು ಮಾಡುತ್ತದೆ. ದಾಸರ ಹೆಣ್ಣು ಮಕ್ಕಳು ಕೂಲಿ ಮಾಡುವರು. ಕೆಲವರು ಕೌದಿ ಮೊದಲಾದವುಗಳನ್ನು ಹೊಲಿಯುವರು. ಕೆಲವರು ಆಗಾಗ ಬರುವ ಆಮಂತ್ರಣಗಳನ್ನು ಸ್ವೀಕರಿಸಿ ಆಟಗಳಲ್ಲಿ ಪಾತ್ರವಹಿಸಿ ಬರುವರು."[೨೫] ಎಂದು ವಿವರಣೆ ನೀಡಿದ್ದಾರೆ.

ಡಾ. ಅರ್ಜುನ ಗೊಳಸಂಗಿಯವರು 'ದಲಿತ ಲೋಕದ ಶೋಧ'ದಲ್ಲಿ 'ಗಂಡಸರು ಭಿಕ್ಷಾಟನೆಗೆ ಹೋಗುತ್ತಾರೆ' ಎಂದು ಒಂದೆಡೆ ಹೇಳಿ ಮತ್ತೊಂದೆಡೆ "ದಾಸರಲ್ಲಿ ಮೂರು ರೀತಿಯ ವೃತ್ತಿಗಳಿರುವುದು ಕಂಡು ಬರುತ್ತವೆ"[೨೬] ಎಂದು ವಿವರಿಸಿದ್ದಾರೆ.

"ಅಲೆಮಾರಿಗಳು ಕಡುಬಡವರು, ಸರಳರು, ಮೋಸದ ವ್ಯವಹಾರ ಅರಿಯರು, ಮೋಸಕ್ಕೆ ಒಳಗಾದವರು ಮತ್ತು ಆಗುತ್ತಲಿದ್ದವರು. ಮಾನವ ಜನಾಂಗದ ಮೂಲಿಗರು ಬೇಟೆ, ಬೆಟ್ಟ ಕಳೆದುಕೊಂಡು ತನ್ನ ಮೂಲವನ್ನು ಮರೆತು ಅತಂತ್ರದಲ್ಲಿ ಇದ್ದವರು. ನಾಳೆಯ ಚಿಂತೆಯಿಲ್ಲ ದವರು, ಯಾರದೋ ಜಾಗದಲ್ಲಿ ಗುಡಾರ, ಗುಡಿಸಲು ಹಾಕಿಕೊಂಡು ಬದುಕುತ್ತಿರುವಾಗ ಜಾಗದ ಮಾಲಿಕ ಹೆದರಿಸಿದೊಡನೆ ಮತ್ತ್ಯಾರದೋ ಜಾಗದಲ್ಲಿ ಗುಡಾರ ಹಾಕಿ ಬದುಕಲು ಗುಳೆ ಹೋಗುವರು. ಈ ಸಮುದಾಯಗಳಿಗೆ ಯಾವುದೇ ಆರ್ಥಿಕ ಭದ್ರತೆಗಳಿಲ್ಲ. ಗುಜರಿ ಆರಿಸಲು, ಬಕೇಟ್ ರಿಪೇರಿ ಮಾಡಲು, ಕಾಟಾ, ಪಿನ್ನು, ಸೂಜಿ, ಜಡಿಘೂಟಿ ಮಾರಲು, ಮೀನು ಹಿಡಿಯಲು, ಕೃಷಿ ಕೂಲಿ ಮಾಡಲು ಪ್ರಯತ್ನಿಸುವವರು. ಇವ್ಯಾವುದರಿಂದಲೂ ಹೊಟ್ಟೆ ತುಂಬಿಸಿ ಕೊಳ್ಳಲು ಸಾಧ್ಯವಾಗದಿದ್ದಾಗ ಭಿಕ್ಷೆ ಬೇಡುವರು, ಸ್ವಾಭಿಮಾನದ ಬದುಕು ಇವರಿಗೆ ಕನಸಾಗಿರುವುದು, ಸಾಮಾಜಿಕ ನ್ಯಾಯ ಕಗ್ಗಂಟಾಗಿರುವುದು."[೨೭] ಎಂಬ ಡಾ. ಕೆ. ಎಂ. ಮೇತ್ರಿಯವರ ಮಾತುಗಳು ಒಟ್ಟು ಅಲೆಮಾರಿ

ಸಮುದಾಯವನ್ನು ಕುರಿತಾಗಿ ಆಡಿದ್ದರೂ, ಪ್ರಸ್ತುತ ಚೆನ್ನದಾಸರ ಸಮುದಾಯಕ್ಕೂ ಅನ್ವಯವಾಗುತ್ತದೆ.

೪.೮. ಕಸುಬುಗಳು

ಮಾನವ ಭೂಮಿಯ ಮೇಲೆ ಬದುಕಿದಾಗಿನಿಂದ ತನ್ನ ಜೀವನೋಪಾಯಕ್ಕಾಗಿ ಒಂದಿಲ್ಲಾ ಒಂದು ಕಸುಬನ್ನು ಅವಲಂಬಿಸಿದ್ದಾನೆ. ಆದಿ ಮಾನವ ಆರಂಭದಲ್ಲಿ ಉದರ ನಿರ್ವಹಣೆಗಾಗಿ ಬೇಟೆಯನ್ನು ಅವಲಂಭಿಸಿದ್ದನು. ಕಾಡಿನ ಗಡ್ಡೆ–ಗೆಣಸುಗಳು ಆಹಾರದ ಸಾಮಗ್ರಿಗಳಾಗಿದ್ದವು. ಅಲೆಮಾರಿ ಜೀವನವನ್ನು ತೊರೆದು ಒಂದೆಡೆ ನೆಲೆನಿಲ್ಲಲು ನೆರವಾದದ್ದು ಕೃಷಿ. ಈ ಹಂತದಲ್ಲಿ ಬೇಟೆಯಿಂದ, ಪಶುಪಾಲನೆ, ನಂತರ ಕೃಷಿಯನ್ನು ಅವಲಂಬಿಸಿದನು. ಬಹುಪಾಲು ಸಮುದಾಯಗಳು ಇದಕ್ಕೆ ಹೊರತಾಗಿಲ್ಲ. ಆದರೆ ಅಲೆಮಾರಿ ಹಾಗೂ ಅರೆ–ಅಲೆಮಾರಿ ಸಮುದಾಯಗಳು ಇದಕ್ಕೆ ಅಪವಾದ. ಈ ಸಮುದಾಯಗಳಿಗೆ ಭೂ–ಒಡೆತನ ದಕ್ಕಲಿಲ್ಲ. ಶ್ರಮಿಕ ಜೀವನವನ್ನೇ ಸಾಗಿಸಬೇಕಾಯಿತು. ಅಂದಿನಿಂದ ಇಂದಿನವರೆಗೂ ದುಡಿಯುವ ವರ್ಗಗಳಿಗೆ ಆರ್ಥಿಕ ಸ್ವಾವಲಂಬನೆಯ ಬದುಕು ಇಲ್ಲವಾಗಿದೆ.

"ಇಂದಿಗೂ ಭಾರತದ ದುಡಿಯುವ ವರ್ಗಗಳಿಗೆ ಆರ್ಥಿಕ ಸ್ವಾವಲಂಬನೆ ಇಲ್ಲ. ಇಲ್ಲಿನ ಕೆಳಜಾತಿಗಳು ತಮ್ಮ ಪಾರಂಪರಿಕ ವೃತ್ತಿಯಲ್ಲಿಯೇ ಬದುಕುವ ಅನಿವಾರ್ಯತೆಯನ್ನು ಅನುಭವಿಸುತ್ತಿವೆ. ಅದರಲ್ಲೂ ಪಾರಂಪರಿಕ ವೃತ್ತಿಗಳಲ್ಲಿ ಬದುಕುತ್ತಿರುವುದು ಹೆಚ್ಚಾಗಿ ಈ ದೇಶದ ಕೆಳಜಾತಿಗಳು. ಅದರಲ್ಲೂ ಅಲೆಮಾರಿ ಹಾಗೂ ಅರೆ–ಅಲೆಮಾರಿ ಸಮುದಾಯಗಳು ಹೆಚ್ಚಾಗಿ ರೂಢಿಗತ ಅರ್ಥ ವ್ಯವಸ್ಥೆಯನ್ನೇ ನೆಚ್ಚಿಕೊಂಡು ಇನ್ನೂ ತಮ್ಮ ಪಾರಂಪರಿಕ ಕಸುಬುಗಳನ್ನು ಬಿಟ್ಟು ಕೊಡಲಾಗದ ಸ್ಥಿತಿಯಲ್ಲಿ ಈ ಸಮುದಾಯಗಳಿವೆ."[೨೮] ಇಂತಹ ಸಮುದಾಯಗಳಲ್ಲಿ ಚೆನ್ನದಾಸರ ಸಮುದಾಯವೂ ಒಂದಾಗಿದೆ. ಈ ಸಮುದಾಯದ ಮುಖ್ಯ ಕಸುಬುಗಳು ಈ ಕೆಳಗಿನಂತಿವೆ.

೧. ಭಿಕ್ಷಾಟನೆ

೨. ಬೇಟೆಯಾಡುವುದು

೩. ಕೌದಿ ಹೊಲಿಯುವುದು

೪. ಕೂಲಿ ಮಾಡುವುದು

ಮುಂತಾದವು ಚೆನ್ನದಾಸರ ಸಮುದಾಯದ ಕಸುಬುಗಳಾಗಿವೆ.

೪.೮.೧. ಭಿಕ್ಷಾಟನೆ

ಚೆನ್ನದಾಸರ ಸಮುದಾಯದ ಮೂಲ ವೃತ್ತಿಯಾಗಿರುವ ಭಿಕ್ಷಾಟನೆಯಲ್ಲಿ ಎರಡು ರೀತಿಯ ವೃತ್ತಿಗಳಿವೆ. ಒಂದು ಗಂಟೆ, ಜಾಗಟೆ, ಭೋಂಕಿ ಮತ್ತು ಶಂಖಗಳನ್ನು ಬಾರಿಸುತ್ತ ಗೋಪಾಳಬುಟ್ಟಿ ಹಿಡಿದು ಭಿಕ್ಷೆ ಬೇಡುವರು. ಇವರು ಕೇವಲ ವಾದ್ಯ ಪರಿಕರಗಳನ್ನು ನುಡಿಸುತ್ತಾರೆ, ಹಾಡುಗಳನ್ನು ಹೇಳುವುದಿಲ್ಲ. "ಶ್ರೀಮದ್ ವೆಂಕಟರಮಣಾ ಗೋವಿಂದss ಗೋವಿಂದss" ಎಂದು ಉಗ್ಗಡಿಸುತ್ತ, ಭಿಕ್ಷಾಟನೆ ಮಾಡುವರು. ಇನ್ನೊಂದು ರೀತಿಯೆಂದರೆ, ಏಕತಾರಿ, ತಂಬೂರಿಗಳನ್ನು ಬಳಸಿ ತತ್ವ ಪದಗಳನ್ನು ಹಾಡುತ್ತ, ಬಯಲಾಟಗಳನ್ನು ಪ್ರದರ್ಶನಗೈಯ್ಯುತ್ತ, ದಮ್ಮಡಿ, ತಾಳ ಬಳಸಿ, ಗಂಗೆ–ಗೌರಿ ಹಾಡುಗಳನ್ನು ಹೇಳುತ್ತ, ದೇಶಿ ಕಲೆಗಳ ಪ್ರದರ್ಶನದೊಂದಿಗೆ ಭಿಕ್ಷೆ ಬೇಡುವರು.

ಪಾರಂಪರಿಕ ರೀತಿಯಲ್ಲಿ ಭಿಕ್ಷೆ ಬೇಡುವವರು ಗೋಪಾಳಬುಟ್ಟಿಯನ್ನು ಒಯ್ಯುತ್ತಾರೆ. ಗೋಪಾಳಬುಟ್ಟಿಯನ್ನು ಒಯ್ಯದವರು ವಿಶೇಷವಾಗಿ ಗಂಗೆ–ಗೌರಿ ಹಾಡು ಹಾಡುವ ಮಹಿಳೆಯರು ಜೋಳಿಗೆಗಳನ್ನು ದವಸ–ಧಾನ್ಯ ಸಂಗ್ರಹಿಸಲು ತೆಗೆದುಕೊಂಡು ಹೋಗುತ್ತಾರೆ. ಇವರು ಬಳಸುವ ಮುಖ್ಯ ವಾದನ ಪರಿಕರಗಳೆಂದರೆ, ಜಾಗಟೆ, ಶಂಖ, ಏಕತಾರಿ ಮತ್ತು ತಂಬೂರಿಗಳಾಗಿವೆ. ಇವುಗಳ ಜೊತೆಯಲ್ಲಿ ಗರುಡಗಂಭ ಅಥವಾ ದೀಪಸ್ಥಂಭವನ್ನು ತಮ್ಮೊಂದಿಗೆ ತೆಗೆದುಕೊಂಡು ತಿರುಗಾಡಿ ಭಿಕ್ಷಾಟನೆ ಮಾಡುತ್ತಾರೆ. ಕಲಾ ಪ್ರದರ್ಶನದ ಮೂಲಕ ಭಿಕ್ಷಾಟನೆ ಮಾಡುವವರು ಊರವರಿಂದ ಮೊದಲೆ ಒಪ್ಪಂದ ಮಾಡಿಕೊಂಡು ಮುಂಗಡ ಹಣ ಪಡೆದು, ಕೆಲವಡೆ ಆಟಕ್ಕಾಗಿ ಎಲೆ ಹಿಡಿದು ಅಥವಾ ಕಾಯಿ ಸ್ವೀಕರಿಸಿ ಸ್ಥಳ ಮತ್ತು ದಿವಸಗಳನ್ನು ಖಚಿತಪಡಿಸಿಕೊಳ್ಳುತ್ತಾರೆ. ನಿಗದಿತ ದಿನಾಂಕದಂದು ತಮ್ಮ ಬಯಲಾಟದ ಕಲಾವಿದರ ಜೊತೆಗೆ ಹೋಗಿ ಆಟವಾಡಿ ಬರುತ್ತಾರೆ. ಹೀಗೆ ಮಾಡುವವರು ಎಲ್ಲೋ ಕೆಲವರು, ಹೆಸರುವಾಸಿಯಾದ ಆಟದ ಮೇಳದವರು ಮಾತ್ರ. ಉಳಿದವರು ಯಾರೂ ಕರೆಯದೆ, ಯಾರಿಂದಲೂ ಆಮಂತ್ರಣವನ್ನೂ ಪಡೆಯದೆ, ಊರೂರು, ಓಣಿ–ಓಣಿಗಳಲ್ಲಿ ತಿರುಗಿ ತಮ್ಮ ಆಟ–ಬಯಲಾಟಗಳನ್ನು ಪ್ರದರ್ಶಿಸುತ್ತ, ಕಾಳು–ಕಡಿ, ಬಟ್ಟೆ ಅಥವಾ ಹಣ ಪಡೆದು ಬರುತ್ತಾರೆ. ಮೊದಲು ದವಸ–ಧಾನ್ಯವನ್ನು ಜನ ನೀಡುತ್ತಿದ್ದರು. ಕಾಳು–ಕಡಿಗಳನ್ನು ಗೋಣಿ ಚೀಲದಲ್ಲಿ ನೀಡಿಸಿಕೊಳ್ಳುತ್ತಿದ್ದರು. ಇತ್ತೀಚಿಗೆ (ಕಳೆದ ಹತ್ತು ವರುಷಗಳಲ್ಲಿ) ಕಾಳು–ನೀಡುವುದು

ಕಡಿಮೆಯಾಗಿ ಹಣವನ್ನು ನೀಡುವುದು ರೂಢಿಯಾಗಿದೆ. ಈ ಸಮುದಾಯದವರಿಗೆ ಇದೀಗ ಹಣವೇ ಮುಖ್ಯ ವಾಗಿದ್ದು, ಅದನ್ನು ಕೇಳಿ ಹಣ ಪಡೆಯಲು ಪ್ರಯತ್ನಿಸುತ್ತಾರೆ. ಕಲಾ ಪ್ರದರ್ಶನಗಳ ಮೂಲಕ ಭಿಕ್ಷಾಟನೆ ಮಾಡುವವರು. ತಬಲ, ಪೇಟೆ, ದಮ್ಮಡಿ ಡಪ್ಪಾ, ವಯೋಲಿನ್, ಕೈತಾಳಗಳನ್ನು ವಾದ್ಯ ಪರಿಕರಗಳನ್ನಾಗಿ ಬಳಸುತ್ತಾರೆ.

ಎರಡೂ ರೀತಿಯ ಭಿಕ್ಷಾಟನೆಯಲ್ಲಿ ಪುರುಷರು ದೋತರ, ಉದ್ದ ನಿಲುವಂಗಿ, ತಲೆಗೆ ರುಮಾಲು, ಮೇಲು ಕೋಟು ಧರಿಸುತ್ತಾರೆ. ಸ್ತ್ರೀಯರು ಗಂಗೆ–ಗೌರಿ ಹಾಡಿನವರು, ದಾಸರಾಟ ಪ್ರದರ್ಶನದ ಸ್ತ್ರೀಯರು ಸಹಜವಾಗಿ ಅಲಂಕಾರ ಮಾಡಿಕೊಳ್ಳುತ್ತಾರೆ. ಒಳ್ಳೆಯ ಬಟ್ಟೆಗಳನ್ನು ತೊಟ್ಟಿರುತ್ತಾರೆ. ಇದು ಚೆನ್ನದಾಸರ ಸಮುದಾಯದ ಪ್ರಮುಖ ಕಸಬು ಭಿಕ್ಷಾಟನೆಯನ್ನು ಮಾಡಿ ಜೀವನ ಸಾಗಿಸುತ್ತಾರೆ.

೪.೮.೨. ಬೇಟೆಯಾಡುವುದು

ಕಾಡುಹಂದಿ, ಮೊಲ, ಕಾಡುಬೆಕ್ಕು ಮುಂತಾದವುಗಳನ್ನು ಹಿಡಿಯುತ್ತಾರೆ. ಇವುಗಳ ಬೇಟೆಗೆ ವಿಶೇಷವಾದ ಬಲೆಗಳನ್ನು ಮತ್ತು ತರಬೇತಿಗೊಳಿಸಿದ ನಾಯಿಗಳನ್ನು ತಮ್ಮೊಡನೆ ಒಯ್ಯು ತ್ತಾರೆ. ಬೇಟೆಗೆ ಭರ್ಚಿ, ಭಲ್ಲೆ, ಬಿದಿರಿನ ಕೋಲುಗಳನ್ನು ಆಯುಧಗಳನ್ನಾಗಿ ಬಳಸುತ್ತಾರೆ. ಮಾಂಸಹಾರಿಗಳಾದ ಇವರು ತಿನ್ನುವುದಕ್ಕಾಗಿ ಬೇಟೆಯಾಡುತ್ತಾರೆ. ಬೇರೆಯವರು ತಿನ್ನುವ ಪ್ರಾಣಿಗಳನ್ನು ಹಿಡಿದು ತಂದು ಮಾರುತ್ತಾರೆ. ಕೆಲವೊಮ್ಮೆ ಬೇರೆಯುವರಿಂದ ಹಣ ಪಡೆದು ಅವರು ಹೇಳಿದ ಪ್ರಾಣಿ–ಪಕ್ಷಿಗಳನ್ನು ಬೇಟೆಯಾಡಿ, ಅವರಿಗೆ ತಂದೊಪ್ಪಿಸುವುದುಂಟು. ಕವುಜಗ ಮತ್ತು ಪಾರಿವಾಳದಂಥ ಪಕ್ಷಿಗಳನ್ನು ಇವರು ಬೇಟೆಯಾಡುತ್ತಾರೆ. ಕವುಜುಗಗಳನ್ನು ಹಿಡಿಯಲು ಕಟ್ಟಿಗೆ ಕಡ್ಡಿಗಳಿಂದ ತಯಾರಿಸಿದ ಸುಮಾರು ಎರಡು ಅಡಿ ಎತ್ತರ ೨೫ ರಿಂದ ೩೦ ಅಡಿ ಉದ್ದದ ಬಲೆಯನ್ನು ತಯಾರಿಸುತ್ತಾರೆ. ಬಾವಿಗಳು, ಹಾಳುಬಾವಿಗಳು, ಪಾಳು ದೇಗುಲಗಳಲ್ಲಿ ಪಾರಿವಾಳಗಳು ಗುಂಪು ಗುಂಪಾಗಿ ವಾಸಿಸುತ್ತವೆ. ಅಂತಹ ಸ್ಥಳಗಳನ್ನು ಗುರುತಿಸಿ ಬಾವಿಯನ್ನು ಮುಚ್ಚುವಷ್ಟು ವಿಶಾಲವಾದ ಬಲೆ ಹಾಕಿ ಪಾರಿವಾಳ ಹಿಡಿಯುತ್ತಾರೆ. ಮೀನು ಹಿಡಿಯಲು ಬಳಸುವ ಬಲೆಗಳನ್ನೇ ಪಾರಿವಾಳ ಮತ್ತು ಅಳಿಲುಗಳನ್ನು ಹಿಡಿಯಲು ಬಳಸುತ್ತಾರೆ.

ಕಾಡು ಹಂದಿಗಳ ಬೇಟೆಯಾಡಿದಾಗ, ಉಡ ಹಿಡಿದಾಗ, ಅವುಗಳ ಎಣ್ಣೆಯನ್ನು ತೆಗೆದು ಕೀಲುನೋವಿಗೆ ಸಂಧಿವಾತಕ್ಕೆ ಬಳಸಲು ಮಾರಾಟ ಮಾಡುತ್ತಾರೆ. ದನಗಳಿಗೆ

ಗಾಯಗಳಾದರೆ, ನೋವು ನಿವಾರಣೆಗಾಗಿ ಈ ಪ್ರಾಣಿಗಳ ತೈಲವನ್ನೆ ಬಳಸುತ್ತಾರೆ. ಹೀಗಾಗಿ ಕಾಡು-ಹಂದಿ, ಉಡದ ಎಣ್ಣೆಗೆ ಬಹಳ ಬೆಲೆ ದೊರೆಯುತ್ತದೆ. ಬೇಡಿಕೆಯು ಹೆಚ್ಚಾಗಿರುತ್ತದೆ. ಇನ್ನೂ ಅರ್ಧಾಂಗವಾಯು (ಪಾರ್ಶ್ವಯಾಯು) ರೋಗಕ್ಕೆ ಪಾರಿವಾಳದ ರಕ್ತ ಅತ್ಯುತ್ತಮ ಔಷಧ. ಇಣಚಿ (ಅಳಿಲು) ರಕ್ತ ನಾಯಿ ಕೆಮ್ಮಿಗೆ ಔಷಧವಾಗಿದೆ. ಇಂತಹ ಪ್ರಾಣಿಗಳನ್ನು ಬೇಟೆಯಾಡಿ ಮಾಂಸ, ರಕ್ತ, ಔಷಧಿಯ ಉಪಯೋಗಕ್ಕಾಗಿ ಮಾರಾಟ ಮಾಡಿ ಬಂದ ಹಣದಿಂದ ಬದುಕನ್ನು ನಡೆಸುತ್ತಾರೆ.

ಆಧುನಿಕ ಯುಗದ ಕಾನೂನಿನಲ್ಲಿ ಬೇಟೆಗೆ ನಿಷೇಧವಿದೆ. ನವಿಲು ಹಿಡಿಯುವುದು, ನವಿಲಿನ ಬೇಟೆಯಾಡಿದರೆ ರಾಷ್ಟ್ರೀಯ ಅಪರಾಧವಾಗಿದೆ. ಚೆನ್ನದಾಸರನ್ನು ದೊಂಬಿದಾಸರೆಂದು (ಅದೊಂದು ಅಪರಾಧಿ ಬುಡಕಟ್ಟಾಗಿರುವದರಿಂದ) ಅನುಮಾನಿಸಿ ಪೋಲಿಸರು ಬಂಧಿಸುವರು. ಗ್ರಾಮೀಣರು ಬೇಟೆಯಾಡುವವರನ್ನು ಕಳ್ಳರೆಂದು ಭಾವಿಸುತ್ತಿರುವುದರಿಂದ ಬೇಟೆಯಿಂದು ಭಾಗಶ; ನಿಂತುಹೋಗಿದೆ. ಕಾನೂನಿನ ದೃಷಿಯಿಂದ ಅಪರಾಧವೆಂದು ಪರಿಗಣಸಿರುವದರಿಂದ ಬೇಟೆಯನ್ನು ಈ ಸಮುದಾಯವೀಗ 'ವೃತ್ತಿ' ಯೆಂದು ಪರಿಗಣಿಸಿಲ್ಲ. ಜಾತ್ರೆ-ಉತ್ಸವ-ಹಬ್ಬಗಳಲ್ಲಿ ಹವ್ಯಾಸಕ್ಕಾಗಿ ಬೇಟೆಯಾಡುವುದು ಕಂಡು ಬರುತ್ತದೆ. ಅಲೆಮಾರಿ ಜನಾಂಗ ಶಿಕ್ಷಣ ಪಡೆದು ಜಾಗೃತರಾಗುತ್ತಿದ್ದರಿಂದ ಬೇಟೆಯಿಂದು ಕಡಿಮೆಯಾಗಿದೆ. ಕಾಡೆಲ್ಲ ಬರಿದಾಗಿ, ಅರಣ್ಯಗಳೆಲ್ಲ ನಾಶವಾಗಿರುವುದರಿಂದ ಬೆಳಗಾವಿ ಜಿಲ್ಲೆಯ ಭೌಗೋಳಿಕ ಪರಿಸರವೂ ಬೇಟೆಗೆ ಪ್ರಶಸ್ತ್ಯವಾಗಿಲ್ಲ. ಇವೆಲ್ಲ ಕಾರಣಗಳಿಂದ ಚೆನ್ನದಾಸರ ಸಮುದಾಯದಲ್ಲಿ ಬೇಟೆ ಇಂದು ವೃತ್ತಿಯಾಗಿ ಉಳಿದಿಲ್ಲ.

೪.೮.೩. ಕೌದಿ ಹೊಲಿಯುವದು

ಮುಖ್ಯ ಕಸುಬುಗಳಿಂದ ಜೀವನ ನಡೆಸುವುದು ಕಷ್ಟಕರವಾಗಿರುವುದರಿಂದ ಜೀವನ ನಿರ್ವಹಣೆ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಈ ಸಮುದಾಯ ಪರ್ಯಾಯ ಕಸುಬುಗಳನ್ನು ರೂಢಿಸಿಕೊಂಡಿದೆ. ಅದರಲ್ಲಿ 'ಕೌದಿ' ಹೊಲೆಯುವುದೂ ಒಂದಾಗಿದೆ. ಬೆಳಗಾವಿ ಜಿಲ್ಲೆಯ ಅಥಣಿಯ ಪರಿಸರದಲ್ಲಿ ದಾಸರನ್ನು 'ಕೌದಿದಾಸ'ರೆಂದೆ ಕರೆಯುತ್ತಾರೆ. ಕೌದಿ ಹೊಲಿಯುವುದರಲ್ಲಿ ಈ ಜನಾಂಗ ವಿಶೇಷವಾದ ಪರಿಣಿತಿಯನ್ನು ಸಾಧಿಸಿದೆ. ಕೌದಿ ಹೊಲಿಯುವದನ್ನು ಮನೆಯ ಹೆಣ್ಣು ಮಕ್ಕಳು ಕಸುಬು ಮಾಡಿಕೊಂಡಿರುತ್ತಾರೆ. ಕುಟುಂಬ ನಿರ್ವಹಣೆಗೆ ಮಹಿಳೆಯರ ಜೊತೆಗೆ ಬಿಡುವಿದ್ದಾಗ ಗಂಡಸರೂ ಇದಕ್ಕೆ ತಮ್ಮ ಸೇವೆ ಸಲ್ಲಿಸುತ್ತಾರೆ.

ಬಳಸಿ ಬೀಸಾಕಿದ, ಬಣ್ಣ ಕಳೆದುಕೊಂಡ, ಗಟ್ಟಿ ಬಟ್ಟೆಗಳನ್ನು ಕೌದಿ ಹೊಲೆಯಲು ಬಳಸಿಕೊಳ್ಳುತ್ತಾರೆ. ಆಟವಾಡುವ ಸಂದರ್ಭದಲ್ಲಿ ಕೊಟ್ಟ ಬಟ್ಟೆಗಳು, ಭಿಕ್ಷಾಟನೆ ಕಾಲಕ್ಕೆ ದೊರೆತ ಬಟ್ಟೆಗಳನ್ನು ಕೌದಿಗೆ ಉಪಯೋಗಿಸುತ್ತಾರೆ. ಸಿರಿವಂತರು ಉಪಯೋಗಿಸಿ ಬೀಸಾಕಿದ, ಗಟ್ಟಿಯಾಗಿರುವ ಬಟ್ಟೆಗಳನ್ನು ದಾಸರಿಗೆ ಕೌದಿ ಹೊಲಿಯುವುದಕ್ಕಾಗಿಯೇ ಕೊಡುತ್ತಾರೆ. ಹಾಗೆ ಪಡೆದ ಬಟ್ಟೆಗಳ ಗಂಟನ್ನು ಪಡೆದು, ನೀರಿನಲ್ಲಿ ಸ್ವಚ್ಛವಾಗಿ ತೊಳೆದು ಬಿಸಿಲಿನಲ್ಲಿ ಖಡಕ್ಕಾಗಿ ಒಣಗಿಸಿ, ಅವುಗಳಿಂದ ಕೌದಿಯನ್ನು ಹೊಲೆಯುತ್ತಾರೆ. ಬಟ್ಟೆ ಕೊಟ್ಟು ಕೌದಿಗಳನ್ನು ಹೊಲಿಸಿಕೊಳ್ಳುವವರು ಇದ್ದಾರೆ. ಹಾಗೆ ಹೊಲಿದು ಕೊಟ್ಟಾಗ ದವಸ-ಧಾನ್ಯ ಅಥವಾ ನೂರು-ಇನ್ನೂರು ರೂಪಾಯಿಗಳನ್ನು ಪಡೆಯುತ್ತಾರೆ. ಜಾತ್ರೆ, ಮದುವೆ, ಹಬ್ಬ, ವಿಶೇಷ ಸಂದರ್ಭದಲ್ಲಿ ಕೌದಿ ಹೊಲಿದು ಕೊಟ್ಟಿರುವ ಮನೆಗಳಿಗೆ ಹೋಗಿ ಸಿಹಿಯೂಟ-ಹಳೆ ಬಟ್ಟೆಗಳನ್ನು ಪಡೆದುಕೊಳ್ಳುತ್ತಾರೆ.

ಕೌದಿ ಹೊಲಿಯುವುದು ವಿಶೇಷ ಕಲೆಯಾಗಿದೆ. ತಳದಲ್ಲಿ ಬಿಳಿ ಧೋತರ, ಹಳೆಯ ಸೀರೆಗಳನ್ನು ಜೋಡಿಸಿ ತಮಗೆ ಬೇಕಾದ ಉದ್ದ, ಅಗಲವಿಟ್ಟು ಮೊದಲು 'ಲ್ಯಾವಿ'ಸಿದ್ಧಗೊಳಿ ಸುತ್ತಾರೆ. ದಪ್ಪ ದಾರದಿಂದ ದೂರ, ದೂರ ದಾರ ಪೋಣಿಸುತ್ತಾರೆ. ದಪ್ಪ ಸೂಜಿಯಿಂದ ದೊಡ್ಡ ದೊಡ್ಡ ಎಳೆಗಳನ್ನು ಚೌಕಾಕಾರದಲ್ಲಿ ಹೊಲಿಗೆ ಹಾಕುತ್ತಾರೆ. ಮೂರು-ನಾಲ್ಕು ಪದರುಗಳಿದ್ದು, ಅವು ಜಾರಿ ಹೋಗದಂತೆ ಮೊದಲು ಹೊಲಿಯುತ್ತಾರೆ. ಆ ಮೇಲೆ ಬಣ್ಣ-ಬಣ್ಣದ ಅರಿವೆಗಳನ್ನು ಹಚ್ಚುತ್ತಾರೆ. ಸೀರೆಯ ದಡಿ, ಕುಬುಸಖಣದ ಝರಿ ಭಾಗ, ಆಕರ್ಷಕವೆನಿಸುವ ಬಟ್ಟೆಯ ತುಂಡುಗಳಿಂದ ಚಿತ್ತಾರ ಬಿಡಿಸುತ್ತಾರೆ. ಬೇರೆ ಬೇರೆ ಬಣ್ಣಗಳಿಂದ ಕೂಡಿದ ಬಟ್ಟೆಗಳನ್ನು ಲ್ಯಾವಿಗೆ ಜೋಡಿಸಿ ಹೊಲಿಯುವಾಗ ಚಿಕ್ಕ ಚಿಕ್ಕ ಎಳೆಗಳಿಂದ ಹೊಲಿಗೆ ಹಾಕುತ್ತಾರೆ. ಕೌದಿ ಹೊಲಿಯಲು ಗಟ್ಟಿಮುಟ್ಟಾದ ದಾರ ಬಳಸುತ್ತಾರೆ.

ಕೌದಿಯಲ್ಲಿ ನಂದಿ, ನವಿಲು, ಸೂರ್ಯ, ಚಂದ್ರ, ಪಗಡಿಪಟ್ಟ, ತುಳಸಿಕಟ್ಟೆ ಮುಂತಾದವುಗಳನ್ನು ಆಕರ್ಷಕವಾಗಿ ರೂಪಿಸುತ್ತಾರೆ. ಕೌದಿ ಮುಗಿದ ಮೇಲೆ ಸುತ್ತು ಕಟ್ಟು ಹೊಲಿದು ಗೋಟು ಕಟ್ಟುತ್ತಾರೆ. ಬಟ್ಟೆ ಬಿಚ್ಚಬಾರದೆಂದು ಕೌದಿಯ ಸುತ್ತಲೂ ದಂಡೆಗೆ (ಬಾರ್ಡರ್‌ಗೆ)ಝಿಗ್-ಝ್ಯಾಗ್ ರೀತಿಯ ಹೊಲಿಗೆ ಹಾಕುತ್ತಾರೆ. ನಟ್ಟ ನಡುವೆ ಚೌಕ ನಿರ್ಮಿಸಿರುವುದರಿಂದ ಪ್ರತಿ ಸ್ತರಕ್ಕೂ ಬಣ್ಣದ ಬಟ್ಟೆಗಳನ್ನು ವಿವಿಧ ವಿನ್ಯಾಸಗಳಲ್ಲಿ ಬಳಸಿರುವುದರಿಂದ ಕೌದಿಗಳು ಆಕರ್ಷಕವಾಗಿರುತ್ತವೆ. ಏಳೆಂಟು ವರುಷ ತಾಳಿಕೆ ಬರುತ್ತವೆ. ನೋಡಲು ಆಕರ್ಷಕ ಮಾತ್ರವಲ್ಲ ಚಳಿಯನ್ನು ತಡೆಗಟ್ಟಲು ಒಳ್ಳೆಯ ಸಾಧನಗಳೂ ಹೌದು. "ತುಂಬಾ ಸುಂದರವಾಗಿ ಕಾಣುವ ಕೌದಿಗಳನ್ನು ಹೊಲಿಯುವ ಈ ಸಮುದಾಯದವರಿಗೆ ಕೌದಿಯ ದಾಸರೆಂತಲೂ ಕರೆಯುತ್ತಾರೆ."[೩೦] ಆಧುನಿಕ ಹೊಡೆತಕ್ಕೆ ಸಿಕ್ಕು,

ಚಾದರ್, ರಗ್ಗಗಳ ಹಾವಳಿಯಲ್ಲಿ ಕೌದಿಗಳು ನಿರ್ಲಕ್ಷ್ಯಕ್ಕೆ ಒಳಗಾಗಿದ್ದವು. ಇದೀಗ ದೇಶೀಯೆಡೆಗೆ ಒಲವು ಹೊರಳಿರುವುದರಿಂದ ಕೌದಿಗಳಿಗೆ ಶುಕ್ರದೆಸೆ ಪ್ರಾಪ್ತವಾಗಿದೆ.ಕೌದಿ ಬೇಕಾದವರಿಂದ ಬಟ್ಟೆಗಳನ್ನು ಪಡೆದು, ಇಂತಿಷ್ಟು ದರ ನಿಗದಿಗೊಳಿಸಿ ಹೊಲಿದು ಕೊಡುತ್ತಾರೆ. ಬೇರೆಯವರಿಂದ ಆರ್ಡರ್ ಪಡೆದು, ಹೊಲಿಸಿ ಕೊಡುವ ಮಧ್ಯಸ್ಥಿಕೆದಾರರು ಕಂಡು ಬರುತ್ತಿದ್ದಾರೆ. ಒಬ್ಬರು ಮೂರು ಅಥವಾ ನಾಲ್ಕು ದಿವಸಕ್ಕೆ ಒಂದು ಕೌದಿ ಹೊಲಿಯುತ್ತಾರೆ. ಇಬ್ಬರು ಸೇರಿ ಹೊಲಿದರೆ ಬೇಗ ಮುಗಿಯುತ್ತದೆ ಎಂಬ ಲೆಕ್ಕಾಚಾರದಿಂದ ಇಬ್ಬಿಬ್ಬರು ಕೂಡಿ ಹೊಲಿಯಲು ಗುತ್ತಿಗೆ ಹಿಡಿಯುತ್ತಾರೆ. ಬೆಳಗಾವಿ ಜಿಲ್ಲೆಯ ಗ್ರಾಮೀಣ ಸ್ತರಗಳಲ್ಲಿ ಕೌದಿ ಹೊಲಿಯುವುದು ಚೆನ್ನದಾಸರ ಸಮುದಾಯದ ಮತ್ತೊಂದು ವೃತ್ತಿಯಾಗಿ ಪರಿಣಮಿಸಿದೆ.

೪.೮. ೪. ಕೂಲಿ

ಆಧುನಿಕ ಯುಗದಲ್ಲಿ ಸರಕಾರ ಬೇಟೆಯಾಡುವುದನ್ನು ನಿಷೇಧಿಸಿರುವುದರಿಂದ, ಭಿಕ್ಷೆಯಿಂದ ಜೀವನ ನಿರ್ವಹಣೆ ಸಾಧ್ಯವಿಲ್ಲ ಎಂಬುದನ್ನು ಮನಗಂಡಿರುವ ಕೆಲವು ಚೆನ್ನದಾಸರು 'ಕೂಲಿ' ಕೆಲಸ ಮಾಡುತ್ತಿದ್ದಾರೆ. ಅರೆ ಅಲೆಮಾರಿ ಬದುಕು ಕಡಿಮೆಯಾಗಿ ಅನುಕೂಲವಾದೆಡೆ ನೆಲೆ ನಿಲ್ಲುತ್ತಿರುವುದರಿಂದ ಸ್ಥಳೀಯ ಕೂಲಿ ಕೈಗೊಳ್ಳುತ್ತಿದ್ದಾರೆ. ಮುಖ್ಯವಾಗಿ ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಕಬ್ಬಿನ ಕಟಾವು ಮಾಡಲು, ಬೆಲ್ಲ ತಯಾರಿಸುವ ಗಾಣದ (ಆಲಿ) ಮನೆಗಳಲ್ಲಿ ಕೂಲಿಗಳಾಗಿ ದುಡಿಯುತ್ತಾರೆ. ಸಂದರ್ಭನುಸಾರವಾಗಿ ಬಾವಿ ತೋಡಲು, ಕಳೆ ಕೀಳಲು, ಸುಗ್ಗಿಯಲ್ಲಿ ಜೋಳ ಕೀಳಲು ಇತ್ಯಾದಿ ಕೃಷಿ ಕೂಲಿಗಳಾಗಿ ಮೈಮುರಿದು ದುಡಿಯುತ್ತಾರೆ. ತಾಲೂಕ, ಜಿಲ್ಲಾ ಕೇಂದ್ರಗಳಲ್ಲಿ ಹಮಾಲಿಗಳಾಗಿ ಬಸ್-ಸ್ಟ್ಯಾಂಡ್, ರೈಲ್ವೆ ನಿಲ್ದಾಣಗಳಲ್ಲಿ ದುಡಿಯುತ್ತಾರೆ. ಕಟ್ಟಡ ಕಟ್ಟುವಲ್ಲಿ ಗೌಂಡಿಗಳ ಕೈಕೆಳಗೆ ಆಳುಗಳಾಗಿ ಸ್ಲ್ಯಾಪ್ ಹಾಕಿಸುವ ಸಂದರ್ಭದಲ್ಲಿ ಕಾಂಟ್ರ್ಯಾಕ್ಟರ್‌ದಾರರ ಗುತ್ತಿಗೆಯ ಆಳುಗಳಾಗಿಯೂ ದುಡಿಯುತ್ತಿದ್ದಾರೆ. ಇನ್ನಿತರ ಕೆಲಸ ಕಾರ್ಯಗಳಲ್ಲಿ ಚೆನ್ನದಾಸರ ಸಮುದಾಯವು ತೊಡಗಿಕೊಂಡು ಸ್ವಾಭಿಮಾನದ ಜೀವನವನ್ನು ಸಾಗಿಸುತ್ತಿದ್ದಾರೆ.

ಹೀಗೆ ಇಂದು ವಿವಿಧ ಕೂಲಿಗಳಲ್ಲಿ ಚೆನ್ನದಾಸರ ಸಮುದಾಯದವರು ತೊಡಗಿಸಿಕೊಳ್ಳುತ್ತಿದ್ದಾರೆ. ಭಿಕ್ಷೆ ಬೇಡುವುದು ಅವಮಾನವೆಂದು ತಿಳಿದು, ಕೂಲಿ ಮಾಡಿ ಸ್ವಾಭಿಮಾನದಿಂದ ಬದುಕಬಹುದೆಂಬುದನ್ನು ರೂಢಿಸಿಕೊಳ್ಳುತ್ತಿದ್ದಾರೆ. ಭಿಕ್ಷಾಟನೆಯನ್ನು ಇಂದು ಈ ಸಮುದಾಯವು ತೊಡೆದುಹಾಕಿದೆ.

೪.೯. ಉಪಕಸುಬುಗಳು

ಚೆನ್ನದಾಸರ ಸಮುದಾಯದ ಪಾರಂಪರಿಕ ಮೂಲ ಕಸುಬಾದ ಭಿಕ್ಷೆ ಮತ್ತು ಬೇಟೆಗೆ ಆಧುನಿಕ ಕಾಲದಲ್ಲಿಂದು ಉತ್ತೇಜನವಿಲ್ಲ. ಬೇಟೆಯಂತೂ ಇಂದು ಕಾನೂನಿಗೆ ವಿರುದ್ಧವಾಗಿದೆ. ಇದರಿಂದ ಕಾಲಮಾನಕ್ಕೆ ಅನುಸಾರವಾಗಿ ಈ ಸಮುದಾಯ ಜೀವನ ನಿರ್ವಹಣೆಗಾಗಿ ಇನ್ನಿತರ ಉಪಕಸುಬುಗಳನ್ನು ಕೈಗೊಂಡಿದೆ. ಅವು ಇಂತಿವೆ.

ಉಪಕಸುಬುಗಳು

೧. ಮಾರಾಟ

೨. ಪಶುಪಾಲನೆ

೩. ಪಶು ಸಲುಹುವ ವಿಧಾನ

೪. ಕೃಷಿ

೪.೯.೧. ಮಾರಾಟ

ಚೆನ್ನದಾಸರ ಸಮುದಾಯದ ಹೆಣ್ಣುಮಕ್ಕಳು ಹಳ್ಳಿ-ಹಳ್ಳಿಗಳಲ್ಲಿ ತಿರುಗಾಡುತ್ತ ಘುಗ್ಗಾ (ಬಲೂನ್), ಹೇರ್‌ಪಿನ್ನು, ರಿಬ್ಬನ್, ಗಂಧದ ಬಾಟ್ಲಿ, ಪೌಡರ್, ಕನ್ನಡಿ ಮುಂತಾದ ಅಲಂಕಾರಿಕ ಸ್ಟೇಷನರಿ ವಸ್ತುಗಳನ್ನು ಬುಟ್ಟಿಯಲ್ಲಿ ತುಂಬಿಕೊಂಡು, ತಲೆಯ ಮೇಲೆ ಹೊತ್ತು ಮಾರುತ್ತಾರೆ. "ವ್ಯಾಪಾರ ಮಾಡುವ ಕಸುಬಿನವರು ಬಂಡವಾಳ ಹೂಡಿ ವ್ಯಾಪಾರ ಮಾಡುವ ಉದ್ದಿಮೆದಾರರಲ್ಲ, ಭಿಕ್ಷೆ ಬೇಡುವ ಉದ್ದೇಶದಿಂದಲೆ ಹೊರಡುವ ಇವರು ಗಾಜಿನ ಸರಗಳು, ಸೂಜಿ, ಪಿನ್ನು, ಡಬ್ಬನ, ಕ್ಯಾರ(ಕೇರ), ದಾರ ಹಾಗೂ ಉಡದಎಣ್ಣೆ ಇತರೆ ವನಸ್ಪತಿಗಳನ್ನು ತೆಗೆದುಕೊಂಡು ಮಾರಾಟ ಮಾಡಿ ಇವರು ಧಾನ್ಯ ಮತ್ತು ಹಣ ಎರಡನ್ನು ಪಡೆಯುತ್ತಾರೆ."[೩೧] ಕೆಲವರು ವಾರದ ಸಂತೆಗಳಲ್ಲಿ ರಸ್ತೆಯ ಬದಿಗೆ ಕುಳಿತು ಈ ಮೇಲೆ ಪ್ರಸ್ತಾಪಿಸಿದ ವಸ್ತುಗಳಲ್ಲದೆ ದೇವರ ಪಟ, ವಿವಿಧ ಕ್ಯಾಲೆಂಡರ್‌ಗಳು, ಕನ್ನಡಿ, ಬ್ಯಾಟರಿ, ಗಿಲಿಟಿನ ವಸ್ತುಗಳ ಮಾರಾಟ ಮಾಡುತ್ತಾರೆ. ಜಾತ್ರೆ ಜರುಗುವ ಪ್ರದೇಶಗಳಲ್ಲಿ ಟೆಂಟು ಹಾಕಿ ಇಂತಹ ವಸ್ತುಗಳನ್ನು ಮಾರಾಟ ಮಾಡುವ ಮೂಲಕ ಜೀವನ ಸಾಗಿಸುತ್ತಾರೆ. ಸಂತೆ ಮತ್ತು ಜಾತ್ರೆಗಳಲ್ಲಿ ಸ್ತ್ರೀ ಪುರುಷರು ಒಗ್ಗೂಡಿ ಮಾರಾಟ ಮಾಡುತ್ತಾರೆ. ಇಂಥಲ್ಲಿ ಈ ಸಮುದಾಯದ ನಾಲ್ಕಾರು ಕುಟುಂಬಗಳು ಒಗ್ಗೂಡಿ ಮಾರಾಟ ಮಾಡಲು ಹೋಗುತ್ತಾರೆ. ಪರಸ್ಪರ ನೆರವು, ಒಬ್ಬರಿಗೊಬ್ಬರು ಆಸರೆಯಾಗುವ ಉದ್ದೇಶ ಇದರ ಹಿಂದಿರುತ್ತದೆ.

೪.೯.೨. ಪಶುಪಾಲನೆ

ಪಶುಪಾಲನೆಯೂ ಉಪಕಸುಬುಗಳಲ್ಲಿ ಒಂದಾಗಿದೆ. ದಾಸರು ಮೂಲತ: ಅಲೆಮಾರಿಗಳಾಗಿದ್ದರಿಂದ ತಮ್ಮ ತಿರುಗಾಟಕ್ಕೆ ಪಶುಗಳನ್ನು ಧಾರಾಳವಾಗಿ ಬಳಸಿಕೊಳ್ಳುತ್ತಿದ್ದರು. ಒಂದೆಡೆಯಿಂದ ಮತ್ತೊಂದೆಡೆ ಸಾಗಲು, ದಿನನಿತ್ಯದ ವಸ್ತುಗಳನ್ನು, ಇನ್ನೂಳಿದ ಅಗತ್ಯ ಪರಿಕರಗಳನ್ನು ಗಂಟು ಕಟ್ಟಿ ಪ್ರಾಣಿಗಳ ಮೇಲೆ ಹೇರುತ್ತಿದ್ದರು. ಚಿಕ್ಕಮಕ್ಕಳನ್ನು, ವಯಸ್ಸಾಗಿ ನಡೆಯಲು ಆಗದವರನ್ನು ಪ್ರಾಣಿಗಳ ಮೇಲೆ ಕುಳ್ಳಿರಿಸಿಕೊಂಡು ಪ್ರಯಾಣ ಬೆಳೆಸುತ್ತಿದ್ದರು. ಆಕಳು, ಎಮ್ಮೆ, ಆಡುಗಳನ್ನು ಮುಖ್ಯವಾಗಿ ಸಾಕುತ್ತಿದ್ದರು. ಇವು ಹಯನಕ್ಕೂ ಬೇಕು. ವಸ್ತುಗಳ ಸಾರಿಗೆ ಮತ್ತು ಸಾಗಾಟಕ್ಕಾಗಿ ಕತ್ತೆ ಮತ್ತು ಕುದುರೆಗಳನ್ನು ಸಾಕುತ್ತಿದ್ದರು. ಕಾವಲಿಗಾಗಿ ನಾಯಿಗಳನ್ನು ಸಾಕುತ್ತಿದ್ದರು. ಆರ್ಥಿಕ ಖರ್ಚು ವೆಚ್ಚಕ್ಕಾಗಿ ಮತ್ತು ಆಹಾರಕ್ಕಾಗಿ ಕೋಳಿಗಳನ್ನು ಸಾಕುತ್ತಿದ್ದರು. ಅಲೆಮಾರಿ ಜೀವನ ಸಾಗಿಸುತ್ತಿರುವಾಗಲೆ ಇವೆಲ್ಲಾ ಪ್ರಾಣಿಗಳನ್ನು ತಮ್ಮೊಂದಿಗೆ ಸಾಕಿ ಕೊಳ್ಳುತ್ತಿದ್ದರು. ನೆಲೆ ನಿಂತ ಮೇಲೆ "ನಗರವಾಸಿಗಳನ್ನು ಹೊರತು ಪಡಿಸಿದರೆ, ಸಮುದಾಯದ ಬಹುತೇಕರ ವೃತ್ತಿ ಪಶುಪಾಲನೆಯಾಗಿದೆ. ಕೃಷಿಕರಾಗಿರುವುದರಿಂದ ಎತ್ತುಗಳನ್ನು ಮತ್ತು ಬೇಟೆಗಾರಿಕೆಯ ಹಿನ್ನೆಲೆಯನ್ನು ಹೊಂದಿರುವುದರಿಂದ ಕೌಜಗಗಳನ್ನು ಸಾಕಿರುವುದನ್ನು ಕಾಣುತ್ತೇವೆ. ಎತ್ತು, ಹೋರಿ, ಆಕಳು, ಕರು, ಎಮ್ಮೆ, ಕೋಣ, ಕುರಿ, ಮೇಕೆ, ಕೋಳಿ ಇತ್ಯಾದಿ ಪಶುಪಾಲನೆಯತ್ತ ಒಲವು ತೋರುತ್ತಿರುವುದನ್ನು ಕಾಣಬಹುದಾಗಿದೆ."[೩೨]

ಬೆಳಗಾವಿ ಜಿಲ್ಲೆಯಲ್ಲಿ ಚೆನ್ನದಾಸರ ಸಮುದಾಯ ಅಧ್ಯಯನಕ್ಕಾಗಿ ಕ್ಷೇತ್ರಕಾರ್ಯ ಕೈಗೊಂಡಾಗ ಲಭಿಸಿದ ಮಾಹಿತಿಯಂತೆ (೨೦೧೦ ರ ಪ್ರಕಾರ) ಎತ್ತು, ಹೋರಿಗಳು ಸೇರಿ ೩೫೫, ಆಕಳು ಮತ್ತು ಕರು ಕೂಡಿ ೩೦೨, ಎಮ್ಮೆ ಮತ್ತು ಕೋಣಗಳು ಒಗ್ಗೂಡಿ ೯೫೮, ಕುರಿ ಮತ್ತು ಟಗರು ಸೇರಿ ೮೭೦, ಆಡು ಹೋತುಗಳು ಕೂಡಿ ೨೦೫೬, ಕೋಳಿ–ಹುಂಜಗಳು ೫೭೧೬, ಕೌಜಗ ೮೨, ಮುಂಗಸಿ, ಉಡ ಮುಂತಾದ ವನ್ಯಜೀವಿಗಳು ಸೇರಿ ೪೧. ಹೀಗೆ ಚೆನ್ನದಾಸರ ಸಮುದಾಯದಲ್ಲಿ ಪಶು ಸಂಪತ್ತಿದೆ. ಈ ಸಮುಯದಾಯದ ಎಲ್ಲ ಪಂಗಡಗ ಳಲ್ಲಿಯೂ ಎತ್ತು, ಎಮ್ಮೆ, ಆಕಳು, ಆಡು, ಕುರಿ, ಕೋಳಿ, ನಾಯಿ ಮತ್ತು ಬೆಕ್ಕುಗಳನ್ನು ಸಾಕುತ್ತಾರೆ. ಬೇರೆ ಜಿಲ್ಲೆಗಳಲ್ಲಿ ದಾಸರು ಹಂದಿಗಳನ್ನು ಸಾಕಿದರೆ, ಬೆಳಗಾವಿ ಜಿಲ್ಲೆಯಲ್ಲಿ ಮಾತ್ರ ವಡ್ಡರು ಹಂದಿ ಸಾಕುವುದರಿಂದ ದಾಸರು ಹಂದಿ ಸಾಕುವುದಿಲ್ಲ. ಸಾಮಾನ್ಯವಾಗಿ ಪಟ್ಟಣ ಪ್ರದೇಶದಲ್ಲಿ ವಾಸಿಸುವವರನ್ನೂ ಬಿಟ್ಟರೆ ಎಲ್ಲ ದಾಸರು ಆಡು, ಕುರಿ, ಕೋಳಿ, ಎಮ್ಮೆ, ನಾಯಿಗಳನ್ನು ಸಾಕಿರುವುದು ಕಂಡು ಬರುತ್ತದೆ.

೪.೯.೩. ಪಶು ಸಲಹುವ ವಿಧಾನ

ಚೆನ್ನದಾಸರಿಗೆ ವಾಸಿಸುವ ಸ್ವಂತ ಸ್ಥಳಗಳು ಎಲ್ಲರಿಗೂ ಇರುವುದಿಲ್ಲ. ಅಂಥವರು ತಾವು ಆಶ್ರಯ ಪಡೆದವರ ಒಪ್ಪಿಗೆ ಪಡೆದು, ಅವರ ಪ್ರದೇಶದಲ್ಲಿ ನೆಲೆಸಿರುತ್ತಾರೆ. ಗುಡಿಸಲುಗಳನ್ನು ಹಾಕಿಕೊಂಡು ಅದರ ಮುಂದೆ ತಾವು ಸಾಕಿದ ಪ್ರಾಣಿಗಳಿಗೆ ಅವಕಾಶ ಕಲ್ಪಿಸಿರುತ್ತಾರೆ. ಭೂಮಿಯಿದ್ದವರು ಎತ್ತು, ಎಮ್ಮೆ, ಆಕಳು, ಆಡು ಕುರಿ, ಕೋಳಿಗಳ ಸಾಕಣೆ ಮಾಡುತ್ತಾರೆ. ಎಮ್ಮೆ ಆಕಳುಗಳನ್ನು ಹೈನು ಮತ್ತು ಹಾಲಿನ ಮಾರಾಟಕ್ಕಾಗಿ ಸಾಕಿದರೆ, ಎತ್ತು ಕೋಣಗಳನ್ನು ವ್ಯವಸಾಯಕ್ಕೆ ಸಾಕುತ್ತಾರೆ. ಎಮ್ಮೆ, ಆಕಳು, ಆಡು, ಕುರಿಗಳ ಕರುಗಳನ್ನು ಕೊಂಡುತಂದು ಚೆನ್ನಾಗಿ ಮೇಯಿಸಿ, ಗರ್ಭಧರಿಸಿದ ಮೇಲೆ, ಅವು ಕರುಗಳನ್ನು ಕೊಡುವ ಸಂದರ್ಭದಲ್ಲಿ ಹೆಚ್ಚು ಬೆಲೆ ಬಾಳುವುದರಿಂದ ಮಾರುತ್ತಾರೆ.

ತಿಪ್ಪೆಗೊಬ್ಬರವನ್ನು ಮಾರುತ್ತಾರೆ. ರಾಸಾಯನಿಕ ಗೊಬ್ಬರಗಳಿಗಿಂತ ಸಾವಯವ ಕೃಷಿಗೆ ಆದ್ಯತೆ ಲಭಿಸುತ್ತಿರುವುದರಿಂದ ದನಕರುಗಳ ತ್ಯಾಜ್ಯದಿಂದ ತಯಾರಿಸಿದ ತಿಪ್ಪೆಗೊಬ್ಬರಿಗೆ ಬೇಡಿಕೆ ಹೆಚ್ಚಾಗುತ್ತಲಿದೆ. 'ಕೋಳಿಸಾಕಣೆ' ಇವರಿಗೆ ಲಾಭದಾಯಕ ವೃತ್ತಿಯಾಗಿದೆ. ಮೊಟ್ಟೆಯಿಡುವ ನಾಟಿ ಕೋಳಿಗಳನ್ನು ಕೊಂಡು ತಂದು ಇಪ್ಪತ್ತರಿಂದ ಮೂವತ್ತು ಮೊಟ್ಟೆಗಳನ್ನು ಸೇರಿಸಿ ದೊಡ್ಡ ಹೆಡಿಗೆಗಳಲ್ಲಿ ಕಬ್ಬಿನ ರೌದಿ, ಭತ್ತದ ಹುಲ್ಲು ಹಾಸಿ ಮೊಟ್ಟೆಗಳನ್ನಿಟ್ಟು ಮರಿ ಮಾಡಿ ಸಾಕುತ್ತಾರೆ. ಮೊಟ್ಟೆಗಳನ್ನು ಕೊಡಲು ಆರಂಭಿಸಿದರೆ ಸಂತೆಯಲ್ಲಿ ಮಾರುತ್ತಾರೆ. ಕೆಲವರು ಹುಂಜಗಳು ಬಹಳವಿದ್ದರೆ ಕೆಲವನ್ನು ಮಾರಾಟ ಮಾಡಿ ದಿನನಿತ್ಯದ ಖರ್ಚು ವೆಚ್ಚಗಳನ್ನು ಸರಿದೂಗಿಸುತ್ತಾರೆ. ಬೀಗರು, ನೆಂಟರು ಬಂದಾಗ ಕೋಳಿ ಅಥವಾ ತತ್ತಿಗಳನ್ನು ಕೊಂಡು ತರುವ ಅವಶ್ಯಕತೆಯಿರದು. ಮನೆಯಲ್ಲಿ ಇರುವುದನ್ನೇ ಬಳಸಿಕೊಳ್ಳುತ್ತಾರೆ.

ಕೆಲವರು ಎಮ್ಮೆ, ಆಕಳು, ಆಡು, ಕುರಿಗಳನ್ನು ಕೊಂಡು ತಂದು ಸಾಕಣೆ ಮಾಡುವಷ್ಟು ಸ್ಥಿತಿವಂತರಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಪ್ರಾಣಿಗಳು ಇದ್ದವರಿಂದ ಸರಗೋಲಿ (ಸರಿಪಾಲಿ) ನಂತೆ ಕಡ ತರುತ್ತಾರೆ. ಮರಿಗಳನ್ನು ಸಾಕಿ, ದೊಡ್ಡದು ಮಾಡಿ, ಅವು ಈಯ್ದ (ಕರುಹಾಕಿದ)ನಂತರ, ಒಪ್ಪಂದದಂತೆ ಎರಡು ಸೂಲು, ಮೂರು ಸೂಲು ಪಡೆದು ತಂದವರಿಗೆ ಮರಳಿ ಒಪ್ಪಿಸುತ್ತಾರೆ. ಅದರಿಂದ ಪಡೆದ ಮರಿಗಳನ್ನು, ಕರುಗಳನ್ನು ಸಾಕಿಕೊಳ್ಳುವ ವಿಧಾನವು ಈ ಸಮುದಾಯದಲ್ಲಿದೆ.

ಸ್ವತಂತ್ರ ಸ್ಥಳವಿಲ್ಲದವರು ಜಾಗವಿರುವ ಮಾಲೀಕರೊಡನೆ ಒಪ್ಪಂದ ಮಾಡಿಕೊಂಡು "ಪಶುಸಾಕಾಣಿಕೆಗೆ ಅವಕಾಶ ನೀಡಿದರೆ, ತಿಪ್ಪೆಯ ಗೊಬ್ಬರ ಕೊಡುವುದಾಗಿ" ಮಾತನಾಡಿ ಅವರಿಂದ ಸ್ಥಳ ಪಡೆದುಕೊಂಡು ಪಶು ಸಂಗೋಪನೆ ಮಾಡುತ್ತಾರೆ.

ನಾಯಿ ಸಾಕಾಣಿಕೆ ಚೆನ್ನದಾಸರ ಸಮುದಾಯಗಳಲ್ಲಿ ತುಂಬ ಸಹಜವೆಂಬಂತೆ ನಡೆದುಕೊಂಡು ಬಂದ ಪ್ರಕ್ರಿಯೆಯಾಗಿದೆ. ಇತರ ಸಮುದಾಯದವರೂ ಸಹ ನಾಯಿಗಳನ್ನು ಸಾಕುತ್ತಾರೆ. ಆದರೆ ಈ ಸಮುದಾಯದವರು ಮನೆಯ ಕಾವಲಿಗಾಗಿ, ಬೇಟೆಗಾಗಿ ನಾಯಿ ಸಾಕುವುದು ಸರ್ವೆಸಾಮಾನ್ಯವಾಗಿದೆ. ನಾಯಿಯಿದ್ದರೆ ಮನೆ ಅಥವಾ ಕಾಳು-ಕಡಿ, ಪಾತ್ರೆ-ಪಗಡೆ, ವಸ್ತು-ಒಡವೆಗಳು ಕಳುವಾಗುವುದಿಲ್ಲ. ರಾತ್ರಿ ಹೊತ್ತು ನಾಯಿಗಳು ಜಾಗರಣವಿದ್ದು, ಕಾವಲುಕಾಯುತ್ತವೆ. ಕೆಲವರು ಉತ್ತಮ ಜಾತಿಯ(ತಳಿಯ)ಹೆಣ್ಣು ನಾಯಿಗಳನ್ನು ಸಾಕಿ, ಅವುಗಳಿಗೆ ಶ್ರೇಷ್ಠ ತಳಿಯ ಗಂಡು ನಾಯಿಯ ಜೊತೆಗೆ ಸಮಾಗಮ ಮಾಡಿಸಿ, ಅದು ಈದ(ಮರಿ ಹಾಕಿದ) ಬಳಿಕ ಮರಿಗಳನ್ನು ಮಾರಾಟ ಮಾಡುತ್ತಾರೆ. ಉತ್ತಮ ತಳಿಯ ಬೇಟೆ ನಾಯಿಗಳಿಗೆ ಬೇಡಿಕೆಯಿದ್ದು, ನಾಯಿ ಸಾಕಾಣಿಕೆಯನ್ನು ಉಪವೃತ್ತಿಯನ್ನಾಗಿ ಮಾಡಿಕೊಂಡವರು ಇದ್ದಾರೆ. ಪಶುಪಾಲನೆ ದಾಸ ಸಮುದಾಯಕ್ಕೆ ಲಾಭದಾಯಕವಾದ ಉಪಕಸುಬಾಗಿದೆ.

೪.೯.೪. ಕೃಷಿ

ಭಾರತ ಕೃಷಿ ಪ್ರಧಾನ ದೇಶ. ಭಾರತದ ಅಧಿಕ ಪ್ರಮಾಣದ ಜನರು ಈ ವೃತ್ತಿಯನ್ನೆ ಆಯ್ದುಕೊಂಡಿದ್ದಾರೆ. ಪ್ರಾರಂಭದಲ್ಲಿ ಅಲೆಮಾರಿಗಳಾಗಿ ಭಿಕ್ಷೆ ಬೇಡಿ ಜೀವನ ಸಾಗಿಸುತ್ತಿದ್ದ ಚೆನ್ನದಾಸರ ಸಮುದಾಯವು ಇಂದು ಕೃಷಿ ಚಟುವಟಿಕೆಗಳಲ್ಲಿಯೂ ತೊಡಗಿದೆ. ಕೆಲವರು ಸ್ವಂತ ಜಮೀನು ಹೊಂದಿದವರು ವ್ಯವಸಾಯ ಮಾಡುತ್ತಾರೆ. ಹೊಲಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕಾಗಿ ಬಾವಿಗಳನ್ನು, ಬೋರ್‌ವೆಲ್‌ಗಳನ್ನು ತೋಡಿಸಿ ಜಮೀನನ್ನು ಸಾಗುವಳಿ ಮಾಡುತ್ತಾರೆ. ಮುಂಗಾರು ಮತ್ತು ಹಿಂಗಾರು ಫಸಲುಗಳನ್ನು ಬೆಳೆಯುತ್ತಾರೆ. ಕಬ್ಬು, ಅರಿಷಿಣ, ಗೊಂಜಾಳ, ಗೋದಿ, ಭತ್ತ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಸ್ವಂತ ಜಮೀನು ಇಲ್ಲದವರು ಗುತ್ತಿಗೆಯ ಆಧಾರದ ಮೇಲೆ ಜಮೀನನ್ನು ಪಡೆದು ಬೇಸಾಯ ಮಾಡುತ್ತಾರೆ. ಒಣ ಬೇಸಾಯವಾದರೆ ಸರಿಪಾಲು, ನೀರಾವರಿ ಬೇಸಾಯವಾದರೆ ನಾಲ್ಕಾಣೆ ಪಾಲಿನಂತೆ ಕರಾರು ಮಾಡಿಕೊಂಡು ಒಕ್ಕಲುತನ ಚಟುವಟಿಕೆಯಲ್ಲಿ ನಿರತರಾಗಿದ್ದಾರೆ. ಅದು ಸಾಧ್ಯವಾಗದವರು ರೈತರಲ್ಲಿ ಅಥವಾ ಜಮೀನ್ದಾರರಲ್ಲಿ ಕೂಲಿಯಾಳುಗಳಾಗಿ ದುಡಿಯುತ್ತಾರೆ.

ದಾಸರು “ಬರಬರುತ್ತಾ ಅಲೆಮಾರಿತನ ಬಿಟ್ಟು, ಅರೆ–ಅಲೆಮಾರಿಗಳಾಗುತ್ತಿದ್ದಂತೆ ಕೂಲಿ ಕೆಲಸಗಳಿಗೆ, ಕೃಷಿ–ಒಕ್ಕಲುತನದ ಚಟುವಟಿಕೆಗಳಿಗೆ ಮುಂದಾಗತೊಡಗಿದರು. ಈ ಸಮುದಾಯದಲ್ಲಿ ನೀರಾವರಿ ಬೆಸಾಯ ಹಾಗೂ ಒಣ ಬೇಸಾಯ ಮಾಡುವ ಜನರಿದ್ದಾರೆ.”[೩೩] ಎಂದು ಡಾ. ವಾಯ್. ಬಿ. ಹಿಮ್ಮಡಿಯವರು ಪ್ರಸ್ತಾಪಿಸಿದ್ದಾರೆ. ಅವರೆ ಮುಂದುವರೆದು ಮತ್ತೊಂದೆಡೆ “ಬೆಳಗಾವಿ ಜಿಲ್ಲೆಯಲ್ಲಿ ಸಣ್ಣ ವ್ಯಾಪಾರ ಮಾಡುವ ಸಮುದಾಯದವರಿದ್ದಾರೆ ಇದರಿಂದ ಬರುವ ಆದಾಯದಿಂದ ಕೆಲವರು ಕೃಷಿಗೆ ಜಮೀನು ಕೊಂಡು ಒಕ್ಕಲುತನಕ್ಕೂ ಇಳಿದಿದ್ದಾರೆ.”[೩೪] ಎಂದು ಸೂಚಿಸಿದ್ದಾರೆ. ಮತ್ತೊಂದೆಡೆ ಇವರೇ ‘ಕೃಷಿ, ಭೂ ಒಡೆತನ’ವೆಂಬ ಕಿರು ಟಿಪ್ಪಣಿಯಾಗಿ “ಈ ಸಮುದಾಯದ ಕೆಲವರು ಕೃಷಿ ವ್ಯವಸಾಯದಲ್ಲಿ ತೊಡಗಿಸಿಕೊಂಡವರು ಇದ್ದಾರೆ. ಪ್ರಾರಂಭದಲ್ಲಿ ಸಾಕುಪ್ರಾಣಿಗಳ ಆದಾಯದಿಂದ ಹಣ ಸಂಗ್ರಹಿಸಿ ಸ್ವಲ್ಪ ಕೃಷಿ ಭೂಮಿ ಕೊಂಡು ಒಕ್ಕಲುತನ ಮಾಡುತ್ತಿದ್ದರೆ, ಮತ್ತೆ ಕೆಲವರು ಬೇರೆಯವರ ಹೊಲಗದ್ದೆಗಳನ್ನು ಸಮಪಾಲು ಆಧಾರದಲ್ಲಿ ವ್ಯವಸಾಯ ಮಾಡಿ ಹಣ ಗಳಿಸಿ ಕೃಷಿ ಭೂಮಿ ಕೊಂಡು ಒಕ್ಕಲುತನ ಮಾಡುವವರೂ ಇದ್ದಾರೆ. ಇನ್ನೂ ಕೆಲವೆಡೆ ಚಿಕ್ಕಪುಟ್ಟ ನೌಕರಿ ಮಾಡುತ್ತ, ಬಂದ ಆದಾಯದಿಂದ ಕೃಷಿ ಜಮೀನು ಕೊಂಡು ಭೂಒಡೆಯರಾಗಿದ್ದಾರೆ. ಆದರೆ ಇಂಥ ಕೃಷಿ ಮತ್ತು ಭೂ ಒಡೆತನದವರ ಸಂಖ್ಯೆ ಕಡಿಮೆಯಿದೆ. ಇಂಥ ಜನ ಬೆಳಗಾವಿ, ಬಾಗಲಕೋಟೆ, ಬಿಜಾಪೂರಗಳಲ್ಲಿ ಕಂಡು ಬರುತ್ತಾರೆ”[೩೫] ಎಂದು ಅಧ್ಯಯನಗಳ ಮೂಲಕ ಫಲಿತಗಳನ್ನು ದಾಖಲಿಸಿದ್ದಾರೆ. ಮೇಲಿನ ಮೂರು ಉಲ್ಲೇಖಗಳಿಂದ ಚೆನ್ನದಾಸರ ಸಮುದಾಯವು ಕೃಷಿಯಲ್ಲಿ ತೊಡಗಿಸಿಕೊಂಡಿರುವುದು ನಿಚ್ಚಳವಾಗಿದೆ.

ಒಕ್ಕಲುತನ ಮಾಡುವವರಲ್ಲಿ ಸಣ್ಣ ಮತ್ತು ಅತಿಸಣ್ಣ ಹಿಡುವಳಿಯ ರೈತಾಪಿ ಜನಾಂಗದ ಸಂಖ್ಯೆಯೆ ಅಧಿಕವಾಗಿದೆ. ಒಕ್ಕಲುತನದಲ್ಲಿ ಅಭಿವೃದ್ಧಿ ಸಾಧಿಸಲು, ಇಲ್ಲವೆ ಬಂಜರು ಭೂಮಿಯನ್ನು ನೀರಾವರಿ ಯೋಗ್ಯ ಜಮೀನನ್ನಾಗಿ ಮಾರ್ಪಡಿಸಲು ಸಾಧ್ಯವಾಗಿಲ್ಲ. ಬಾವಿ ತೋಡಿಸಿ, ಬೋರವೆಲ್ ಹಾಕಿಸಿ ಜಮೀನಿಗೆ ನೀರಾವರಿ ಸೌಕರ್ಯವನ್ನು ಒದಗಿಸಲು ಆರ್ಥಿಕವಾಗಿ ಇನ್ನೂ ಬಲಾಢ್ಯರಾಗಿಲ್ಲ. ಇವರಿಗೆ ಬೇಕಾದಷ್ಟು ಸಾಲವನ್ನು ಬ್ಯಾಂಕ್‌ಗಳು ನೀಡಲು ಹಿಂಜರಿಯುತ್ತಿವೆ. ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು ಸಾಲ ನೀಡಬಹುದಾದರೂ ತಾಂತ್ರಿಕ ಕಾರಣವನ್ನು ಮುಂದಿಟ್ಟುಕೊಂಡು ಸಾಲವನ್ನು ಮಂಜೂರು ಮಾಡುತ್ತಿಲ್ಲ. ಮೇಲಾಗಿ ಭಾರತದ ಕೃಷಿಯೆಂದರೆ ವರುಣನ ಜೊತೆ ಜೂಜಾಟವಾಡಿದಂತೆ. ಒಂದು ವರುಷ ಮಳೆ ಬಂದರೆ ಎರಡು, ಮೂರು ವರುಷ ಚೆನ್ನಾಗಿ ಮಳೆ ಬರುವುದಿಲ್ಲ. ಇನ್ನು ಮಳೆ ಸುರಿದು, ಬೆಳೆಯು ಸಮೃದ್ಧಿಯಾಗಿ ಬಂದರೂ ಪೇಟೆಯಲ್ಲಿ ದಲ್ಲಾಳಿಗಳ ಹಾವಳಿ, ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗದಿರುವುದು ರೈತರನ್ನು ಕಂಗೆಡಿಸಿದೆ. ಈ ಸಮುದಾಯವೂ ಕೃಷಿ ಕ್ಷೇತ್ರದಲ್ಲಿ ಇಂತಹ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ.

ಸರಕಾರದ ಬೆಂಬಲ ಬೆಲೆಯೂ ಇವರ ನೆರವಿಗೆ ಬರುತ್ತಿಲ್ಲ. ಕೃಷಿಯೂ ನಿಶ್ಚಿತ ಆದಾಯ ತಂದು ಕೊಡುವ ವೃತ್ತಿಯಾಗಿ ಉಳಿದಿಲ್ಲ. ಅನಿಶ್ಚಿತತೆಯಲ್ಲಿಯೆ ಈ ಸಮುದಾಯವು ತೊಳಲಾಡುತ್ತಿದೆ.

೪.೧೦. ಇತರ ಕಸುಬುಗಳು

ಚೆನ್ನದಾಸರ ಸಮುದಾಯದವರು ಜೀವನ ನಿರ್ವಹಣೆಗಾಗಿ ಆರಂಭದಲ್ಲಿ ಭಿಕ್ಷಾಟನೆ ಅವಲಂಭಿಸಿದ್ದರು. ಆದರೆ ನಂತರ ಕಾಲದಲ್ಲಿ ಇದರ ಜೊತೆಗೆ ಕೃಷಿ ಕಾರ್ಮಿಕರಾಗಿ, ಕೃಷಿಕರಾಗಿ, ಪಶುಸಂಗೋಪನೆ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಅದರಿಂದ ಬಂದ ಆದಾಯದಿಂದ ಜೀವನ ಸಾಗಿಸುತ್ತಿದ್ದಾರೆ. ಇದರ ಜೊತೆಗೆ ಈ ಸಮುದಾಯ ಜೀವನ ನಿರ್ವಹಣೆಗಾಗಿ ಮಾಡುತ್ತಿರುವ ಇತರೆ ಕಸಬುಗಳು ನಿರ್ವಹಿಸುತ್ತಿದ್ದರು. ಸಾರಾಯಿ ಮಾರುವುದು, ಹೂ ಮಾರುವುದು, ಗಿಡಮೂಲಿಕೆ ವನಸ್ಪತಿ ಸಂಗ್ರಹಣೆ ಮತ್ತು ಮಾರಾಟ ಮಾಡುವುದು, ಕಾಡಿನ ಜೇನು ಸಂಗ್ರಹಿಸಿ ಮಾರುವುದು ಇಂತಹ ಕಸುಬನ್ನು ಮಾಡುತ್ತಾರೆ. ಇವೆಲ್ಲ ಇತರ ಕಸುಬುಗಳಾಗಿವೆ.

೪.೧೦.೧. ಸಾರಾಯಿ ಮಾರಾಟ

ಕಬ್ಬಿನ ಪಡದಲ್ಲಿ ಕೆಲಸಕ್ಕೆ ಹೋಗುವವರು, ಗಾಣದ ಮನೆಯಲ್ಲಿ ಕೂಲಿಗಳಾಗಿ ದುಡಿಯುವವರು ಸಾರಾಯಿ ತಯಾರಿಸುತ್ತಾರೆ. ಕಬ್ಬಿನಿಂದ ಬೆಲ್ಲ ತಯಾರಿಸುವಾಗ ಉಳಿದ ತ್ಯಾಜ್ಯ, ನಿರುಪಯುಕ್ತ ಬೆಲ್ಲ, ಕಾಕಂಬಿ ಸೇರಿಸಿ, ಗಡಿಗೆ, ಮಡಿಕೆಗಳಲ್ಲಿ ತುಂಬಿ ತಿಪ್ಪೆಯಲ್ಲಿ, ಗಾಣದ ಮನೆಯ ಮಳ್ಳಿಯ ಕೆಸರಿನಲ್ಲಿ ಹೂತಿಟ್ಟು ನಿಗದಿತ ಅವಧಿಯಲ್ಲಿ ಹೊರ ತೆಗೆದಾಗ ಅದು ಸಾರಾಯಿಯಾಗುತ್ತದೆ. ಇದನ್ನು 'ಭಟ್ಟಿ ಸಾರಾಯಿ' ಎಂತಲೂ ಕರೆಯುತ್ತಾರೆ. ತೀವ್ರವಾಗಿ ಮತ್ ಭರಿಸುವುದು. ತೀಕ್ಷ್ಣ ನಶೆ ಏರಿಸುವ ಮಾದಕ ದ್ರವ್ಯವಾಗಿರುವುದರಿಂದ ಗ್ರಾಮೀಣ ಭಾಗದಲ್ಲಿ ಕಳ್ಳಭಟ್ಟಿ ಸಾರಾಯಿಗೆ ಬಹಳ ಬೇಡಿಕೆ. ಚೆನ್ನದಾಸರ ಸಮುದಾಯದವರು ಆಲೆಮನೆಗೆ ಕೂಲಿ ಕೆಲಸಕ್ಕೆ ಹೋದವರು ಇದನ್ನು ತಯಾರಿಸಿ ಮಾರುತ್ತಾರೆ. "ಕೆಲವರು ಭಟ್ಟಿ ಸಾರಾಯಿ ತಯಾರಿಸುವ ದಂಧೆಯಲ್ಲಿ ತೊಡಗಿದವರೂ ಇದ್ದಾರೆ. ಕಬ್ಬಿನ ಗಾಣಗಳು ಹೆಚ್ಚಿಗಿರುವ ಕಡೆಗೆ ಈ ದಂಧೆ ನಡೆಯುತ್ತದೆ."[೫೬] ವಾಸ್ತವವಾಗಿ ಸಾರಾಯಿ ತಯಾರಿಸಲು ಸರಕಾರದ ನಿರ್ಬಂಧವಿದೆ. ಕಾಯ್ದೆ, ಕಾನೂನುಗಳು ಬಿಗಿಯಾಗಿದ್ದರೂ ಗ್ರಾಮೀಣ ವಲಯಗಳಲ್ಲಿ ಕಳ್ಳಭಟ್ಟಿಯು ಅವ್ಯಾಹತವಾಗಿ ನಡೆಯುತ್ತದೆ. ಇದಕ್ಕೆ ಬೇಡಿಕೆಯಿರುವುದರಿಂದ, ತಯಾರಕರಿಗೆ ಲಾಭ ತರುವ ಕಸಬಾಗಿರುವುದರಿಂದ

ಸರಕಾರದ ಕಣ್ಣು ತಪ್ಪಿಸಿ ಗೌಪ್ಯವಾಗಿ ಸಾರಾಯಿ ತಯಾರಿಸುವುದು, ಅಷ್ಟೇ ಗೌಪ್ಯವಾಗಿ ಮಾರಾಟವೂ ನಡೆದು ಹೋಗುತ್ತದೆ. ಇದರಿಂದ ಆರ್ಥಿಕವಾಗಿ ಲಾಭವಾದರೂ ಈ ಸಮುದಾಯ ಸರಿಯಾಗಿ ಬಳಸಿಕೊಳ್ಳುವುದಿಲ್ಲ. ಕುಡಿತಕ್ಕಾಗಿ ಉಪಯೋಗಿಸಿಕೊಂಡಿದೆ.

೪.೧೦.೨. ಹೂ ಮಾರುವುದು

ಚೆನ್ನದಾಸರ ಸಮುದಾಯ ತಿರುಗಾಟವನ್ನು ಹೆಚ್ಚಾಗಿ ನಂಬಿಕೊಂಡಿದೆ. ಕಾಡಿನಲ್ಲಿ ತಿರುಗಾಡುವಾಗ, ಹಳ್ಳ ಕೊಳ್ಳದ ದಂಡೆಗಳಲ್ಲಿ ಬೆಳೆದಿರುವ ಕ್ಯಾದಗಿ ಹೊಡೆಗಳನ್ನು ಸಂಗ್ರಹಿಸಿ ಪೇಟೆಗೆ ತಂದು ಮಾರುತ್ತಾರೆ. ಕ್ಯಾದಿಗೆ ಗಿಡವು ಮುಳ್ಳುಗಳಿಂದ ಕೂಡಿದ್ದು ಹಳ್ಳದ ದಂಡೆಗಳಲ್ಲಿರುತ್ತದೆ. ಕ್ಯಾದಗಿ ಗಿಡದ ಮುಳ್ಳಿನ ಗಿಡವೇರಿ ಕ್ಯಾದಗಿ ಹೊಡೆ ಬಿಡಿಸಿಸುವುದು ಸರಳವಲ್ಲ. ಕ್ಯಾದಗಿ ಗಿಡದಲ್ಲಿ ಹಾವುಗಳಿರುವುದರಿಂದ, ಕೆಳಗೆ ಹಳ್ಳ-ಹರಿಯುತ್ತಿರುವುದರಿಂದ ಸುಲಭವಾಗಿಇತರರಿಗೆ ಸಾಧ್ಯವಾಗದು. ಮೂಲತ: ಕಷ್ಟಜೀವಿಗಳಾದ, ಸಂಘರ್ಷದ ಜೀವನ ನಡೆಸುವ ಈ ಸಮುಯದಾಯದವರು ಕಷ್ಟವಾದರೂ ಸರಿ ಕ್ಯಾದಿಗೆ ಹೊಡೆ ಬಿಡಿಸುವಲ್ಲಿ ಸಫಲರಾಗುತ್ತಾರೆ. ಕಾಡಿನಲ್ಲಿ ದೊರೆಯುವ ವಿಶೇಷ ಹೂಗಳನ್ನು ಆಯ್ದುಕೊಳ್ಳುತ್ತಾರೆ. ಕೊಚ್ಚೆ ರಾಡಿಯಲ್ಲಿ, ಗಲೀಜು ನೀರಿನಲ್ಲಿ ಅರಳಿದ ತಾವರೆಗಳನ್ನು, ವಿವಿಧ ಬಣ್ಣದ ಕಮಲಗಳನ್ನು ಕೊಯ್ದು ತರುತ್ತಾರೆ. ಹೀಗೆ ಸಂಗ್ರಹಿಸಿದ ಹೂವುಗಳನ್ನು ಪೇಟೆಯಲ್ಲಿ ಮಾರುತ್ತಾರೆ.

೪.೧೦.೩ ಗಿಡಮೂಲಿಕೆ ವನಸ್ಪತಿ ಸಂಗ್ರಹ

ಕಾಡಿನಲ್ಲಿ ದೊರೆಯುವ ಅಂಟು, ಮರದ ತೊಗಟೆ, ವನಸ್ಪತಿಗಾಗಿ ವಿಶೇಷ ಬೇರು, ಗಡ್ಡೆಗಳನ್ನು ಅಗೆದು ತಂದು ಮಾರುತ್ತಾರೆ. ಆಯುರ್ವೇದ ಔಷಧಿಗಳಿಗಾಗಿ ಗಿಡಮೂಲಿಕೆಗಳು ಅವಶ್ಯಕವಾಗಿ ಬೇಕಾಗುತ್ತವೆ. ಈ ಸಮುದಾಯದವರು ಸಂಗ್ರಹಿಸಿ ಬೇರು, ಗಡ್ಡೆ. ವಿಶಿಷ್ಟ ಔಷಧಿಯುಕ್ತ ಬಳ್ಳಿಗಳಿಗೆ ಬೇಡಿಕೆಯಿದೆ. ಚೆನ್ನದಾಸರ ಸಮುದಾಯದಲ್ಲಿ ಕೆಲವರು, ಗಿಡ-ಬಳ್ಳಿಗಳ ಜ್ಞಾನವುಳ್ಳವರು ಇದನ್ನು ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಮತ್ತೆ ಕೆಲವರು ಜೇನು ಸಂಗ್ರಹಿಸಿ ಪೇಟೆಯಲ್ಲಿ ಮಾರಾಟ ಮಾಡಿ ಉಪಜೀವನ ಸಾಗಿಸುತ್ತಾರೆ.

ಈ ಸಮುದಾಯದ 'ಆರ್ಥಿಕ ಪರಿಸ್ಥಿತಿ'ಯು ಅಷ್ಟು ಸದೃಢವಾಗಿಲ್ಲ. ಮೂಲ ಕಸುಬು (ಭಿಕ್ಷಾಟನೆ) ಈ ಸಮುದಾಯಕ್ಕೆ ಜೀವನಾಧಾರವಾಗಿ ಉಳಿದಿಲ್ಲ. ಆಧುನಿಕ ಕಾಲದಲ್ಲಿ ಯಾವ ಭದ್ರತೆಯೂ ಇಲ್ಲ. ಜೀವನ ನಿರ್ವಹಣೆ ದುಸ್ತರವಾಗಿದೆ. ಕೆಲಸ ಹುಡುಕಿ ಗುಳೆ

ಹೋಗುವುದು, ಕೂಲಿ ಮಾಡುವುದು, ಸ್ವಲ್ಪ ಜನ ಒಕ್ಕಲುತನ ಮಾಡುವುದು, ಬೆರಳೆಣಿಕೆಯಷ್ಟು ಜನರು ವ್ಯಾಪಾರ ಮಾಡುವುದು. ಹೀಗೆ ಕುಟುಂಬ ನಿರ್ವಹಣೆಗಾಗಿ ಏನೆಲ್ಲಾ ಕಸುಬುಗಳನ್ನು ಮಾಡುತ್ತಾರೆ. ಚೆನ್ನದಾಸರ ಸಮುದಾಯದವರಿಗೆ ನಿಶ್ಚಿತವಾದ ವೃತ್ತಿಯಿಲ್ಲ.

"ಈ ಸಮುದಾಯದ ಇನ್ನಿತರ ಕಸುಬುಗಳೆಂದರೆ, ದನಗಳ ಸಂತೆಯಲ್ಲಿ, ದನಗಳ ವ್ಯಾಪಾರದಲ್ಲಿ ದಲ್ಲಾಳಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಇನ್ನು ಕೆಲವರು ಭಟ್ಟಿ ಸಾರಾಯಿ ತಯಾರಿಸುವ ದಂಧೆಯಲ್ಲಿ ತೊಡಗಿದ್ದಾರೆ. ಕೆಲವು ಕಡೆ ಕಬ್ಬನ್ನು ಫ್ಯಾಕ್ಟರಿಗೆ ಇಲ್ಲವೆ ಗಾಣಕ್ಕಾಗಿ ಕಟಾವು ಮಾಡುವ ತಂಡ (ಗ್ಯಾಂಗ್)ಗಳಾಗಿ ಬೇರೆ ಬೇರೆ ಜಿಲ್ಲೆಯಲ್ಲಿ ಕೆಲಸ ಮಾಡುತ್ತಾರೆ. ಕೆಲವರು ಕೂಲಿಯವರನ್ನು ಪೂರೈಸುವ, ಕೂಲಿ ತಂಡಗಳಾಗಿ ದುಡಿಯುತ್ತಾರೆ. ಇದೆಲ್ಲವೂ ಈ ಸಮುದಾಯದ ಆರ್ಥಿಕ ಜೀವನವಾಗಿದೆ.[೩೭] ಈ ಸಮುದಾಯವು ಆರ್ಥಿಕವಾಗಿ ಸಭಲವಾಗಿಲ್ಲ. ಆದರೆ ಜೀವನ ನಿರ್ವಹಣೆಗೆ ಬೇಕಾದ ಹಣದ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಕುಟುಂಬದ ಎಲ್ಲ ಸದಸ್ಯರು ಹಣ ಸಂಪಾದಿಸುವ ಉದ್ಯೋಗವನ್ನು ಮಾಡುತ್ತ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದಾರೆ. ಇವರ ಕಷ್ಟ ಜೀವನವು ಇವರ ಜೀವನ ವಿಧಾನವನ್ನು ರೂಪಿಸಿದೆ. ಈ ಜೀವನ ಇವರನ್ನು ಸದೃಡರನ್ನಾಗಿಸಿದೆ.

೪.೧೧. ಉದ್ಯೋಗ

ಚೆನ್ನದಾಸರ ಸಮುದಾಯದವರು ತಮ್ಮ ಹಿಂದಿನ ಅಲೆಮಾರಿ ಮತ್ತು ಅರೆ–ಅಲೆಮಾರಿ ಜೀವನವನ್ನು ತ್ಯಜಿಸಿದ್ದಾರೆ. ಆಧುನಿಕ ಕಾಲದಲ್ಲಿ ಅವರು ಒಂದೆಡೆ ನೆಲೆ ನಿಂತಿರುವುದರಿಂದ ಮೂಲ ಕಸುಬು ಭಿಕ್ಷೆಯಿಂದ ಬದುಕಿನ ಬಂಡಿ ಸಾಗಿಸಲು ಅಸಾಧ್ಯವಾಗಿರುವುದರಿಂದ, ಜೀವನ ನಿರ್ವಹಣೆಗಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. "ಚಿಕ್ಕ ಪುಟ್ಟ ಅಂಗಡಿಗಳನ್ನಿಟ್ಟುಕೊಂಡು ಕಿರಾಣಿ ವ್ಯಾಪಾರ ಮಾಡುವವರು ಇದ್ದಾರೆ. ಶಿಕ್ಷಣದ ಸವಲತ್ತು ಮೀಸಲಾತಿಯ ಲಾಭದಿಂದ ಸರಕಾರದ ಬೇರೆ ಬೇರೆ ಇಲಾಖೆ ಗಳಲ್ಲಿ ಖಾಸಗಿ ಉದ್ದಿಮೆಗಳಲ್ಲಿ, ಶಿಕ್ಷಣ–ಸಂಸ್ಥೆಗಳಲ್ಲಿ ಅನೇಕ ನೌಕರರು ಇಂದು ವೃತ್ತಿ ಜೀವನಕ್ಕೆ ಇಳಿದಿದ್ದಾರೆ, ಭಿಕ್ಷಾಟನೆ ಪೂರ್ತಿಯಾಗಿ ಮರೆಯಾಗಿಲ್ಲದಿದ್ದರು ಬಹುತೇಕರು ಅದರಿಂದ ವಿಮುಖರಾಗಿದ್ದಾರೆ. ಕೂಲಿ, ಕೃಷಿ, ಶಿಕ್ಷಣ ಮತ್ತು ಉದ್ದೋಗ ಇಂದು ಈ ಸಮುದಾಯದ ಕಸುಬಿನ ಬದಲಾವಣೆಯಾಗಿದೆ."[೩೮] ಈ ಮಾತುಗಳು ಮೂಲ ವೃತ್ತಿಯಲ್ಲಾದ ಪಲ್ಲಟವನ್ನು ವಿವರಿಸುತ್ತವೆ.

ಚೆನ್ನದಾಸರ ಸಮುದಾಯದವರು ಇಂದು ಸರಕಾರಿ, ಅರೆ–ಸರಕಾರಿ, ವ್ಯಾಪಾರ, ಗುತ್ತಿಗೆ ಇತರ ಉದ್ಯೋಗಗಳತ್ತ ಗಮನ ಹರಿಸಿದೆ. ಇದು ಅವರನ್ನು ಆಧುನಿಕ ಯುಗಕ್ಕೆ ಕಾಲಿಡುವಂತೆ ಮಾಡಿದೆ. ಪ್ರಸ್ತುತ ಅಧ್ಯಯನದ ಕಾರ್ಯಕ್ಷೇತ್ರ ಬೆಳಗಾವಿ ಜಿಲ್ಲೆಯಲ್ಲಿ ಕ್ಷೇತ್ರಕಾರ್ಯಕೈಗೊಂಡು ಆರ್ಥಿಕ ಸಮೀಕ್ಷೆಗೆ ಒಳಪಡಿಸಿದಾಗ, ಅದರಲ್ಲಿ ವಿವಿಧ ಉದ್ಯೋಗಗಳಿರುವ ಸಂಖ್ಯೆನ್ನು ಕೆಳಕಂಡ ಕೋಷ್ಟಕದ ಮೂಲಕ ಚೆನ್ನದಾಸರ ಸಮುದಾಯದವರ ಉದ್ಯೋಗ ಸ್ಥಿತಿಗತಿಗಳನ್ನು ಅವಲೋಕಿಸಲಾಗಿದೆ. ಅದು ಅವರ ಆರ್ಥಿಕ ಪರಿಸ್ಥಿತಿಯನ್ನು ಕಟ್ಟಿಕೊಡಲು ಸಹಾಯಕವಾಗಿದೆ. ಸದರಿ ಸಮುದಾಯದ ಉದ್ಯೋಗದ ಅಂಕಿ–ಅಂಶಗಳು ಹೀಗಿದೆ.

ಕೋಷ್ಟಕ–ಮೂರು
ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ಉದ್ಯೋಗದ ಮಾಹಿತಿ ವಿವರ

ಕೃಷಿ			ಕೃಷಿ ಕಾರ್ಮಿಕರು			ಸರಕಾರಿ ಸೇವೆ			ಅರೆಸರಕಾರಿ ಸೇವೆ			ವ್ಯಾಪಾರ			ಇತರೆ		
ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ	ಗಂ	ಹೆ	ಒ
೬೧	೩೩	೯೪	೩೯	೨೧	೬೦	೧೪	೦೫	೧೯	೨೭	೧೩	೪೦	೮	೩	೧೧	೬೮೭	೨೨೮	೯೧೫

ಮೇಲಿನ ಕೋಷ್ಟಕದಲ್ಲಿ ನಮೂದಿಸಿದಂತೆ, ಕೃಷಿಯಲ್ಲಿ (೬೧ ಗಂಡು, ೩೩ ಹೆಣ್ಣು) ೯೪ ಜನರು, ಕೃಷಿ ಕಾರ್ಮಿಕರಾಗಿ (೩೯ ಗಂಡು, ೨೧ ಹೆಣ್ಣು) ೬೦ ಜನರು, ಸರಕಾರಿ ಸೇವೆಯಲ್ಲಿ (೧೪ ಪುರುಷರು, ೫ ಮಹಿಳೆಯರು) ೧೯ ಜನರು, ಅರೆ ಸರಕಾರಿಯಲ್ಲಿ (೨೭ ಗಂಡು, ೧೩ ಹೆಣ್ಣು) ೪೦ ಜನರು, ವ್ಯಾಪಾರದಲ್ಲಿ (೦೮ ಗಂಡು, ೦೩ ಹೆಣ್ಣು) ಒಟ್ಟು ೧೧ ಜನರು, ಇತರೆ ಉದ್ಯೋಗಗಳಲ್ಲಿ (೬೮೭ ಪುರುಷರು, ೨೨೮ ಜನ ಸ್ತ್ರೀಯರು) ಒಟ್ಟು ೯೧೫ ಜನರು ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ಬೆಳಗಾವಿ, ಬೈಲಹೊಂಗಲ, ಅಥಣಿ, ರಾಮದುರ್ಗ, ಚಿಕ್ಕೋಡಿ, ರಾಯಬಾಗ ಮತ್ತು ಸವದತ್ತಿ ಹೀಗೆ ಒಟ್ಟು ಎಂಟು ತಾಲೂಕುಗಳಲ್ಲಿ ಕೈಕೊಂಡ ಸಮೀಕ್ಷೆಯಿದು. ಒಂದೊಂದು ತಾಲೂಕಿನಲ್ಲಿ ಪ್ರಾತಿನಿಧಿಕವಾಗಿ ತಲಾ ಹತ್ತು ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು.

ಮೇಲಿನ ಕೋಷ್ಟಕ ತೋರಿಸಿರುವಂತೆ, ಚೆನ್ನದಾಸರ ಸಮುದಾಯದ ಜನರು ಹೆಚ್ಚಾಗಿ ಇತರೆ ವೃತ್ತಿಯನ್ನೆ ಅವಲಂಭಿಸಿದ್ದಾರೆ. ಸಾರಾಯಿ ಮಾರಾಟ, ಹೂ–ಮಾರಾಟ, ಗಿಡಮೂಲಿಕೆಗಳು, ವನಸ್ಪತಿ ಹಾಗೂ ಕಾಡು ಜೇನು ಸಂಗ್ರಹ ಮತ್ತು ಮಾರಾಟ ಇವು ಚೆನ್ನದಾಸರ ಸಮುದಾಯದ ಕುಲಕಸಬುಗಳಾಗಿವೆ. ಇವುಗಳಲ್ಲಿಯೇ ಬಹುಪಾಲು ಜನರು ತೊಡಗಿಕೊಂಡಿದ್ದಾರೆ. ಸರಕಾರಿ ಹಾಗೂ ಅರೆ–ಸರಕಾರಿ ಸೇವೆಯಲ್ಲಿ ತೀರಾ ಕ್ವಚಿತ್ತಾಗಿ ಈ ಸಮುದಾಯದವರು ಪಾಲ್ಗೊಂಡಿದ್ದಾರೆ. ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಉದಪುಡಿ ಗ್ರಾಮದಲ್ಲಿ ಒಬ್ಬರು ಗ್ರಂಥಪಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.[೩೯] ಅದೇ ಮನೆತನದ ಮಾರುತಿ ಕೃಷ್ಣಪ್ಪ ದಾಸರ ಅವರು ಎಂ.ಎ. ಪದವಿ ಪೂರೈಸಿದ್ದು, ಖಾಸಗಿ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅದೇ ತಾಲೂಕಿನ ಕರಡಿಗುಡ್ಡದ ಕೃಷ್ಣ ದಾಸರ ಎಸ್.ಎಸ್.ಎಲ್.ಸಿ. ಮುಗಿಸಿದ್ದು, ಬಿ.ಎಸ್. ಎನ್.ಎಲ್.ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. (ಸಮೀಕ್ಷೆ ಮಾಡುವಾಗ ೩೯ ವರ್ಷ ವಯಸ್ಸಾಗಿತ್ತು) ಈ ಮನೆತನದಲ್ಲಿ ಮೂರು ಜನ ಎಸ್.ಎಸ್.ಎಲ್.ಸಿ. ಪಾಸು ಮಾಡಿದ್ದಾರೆ. ೪೨ ವರ್ಷ ವಯಸ್ಸಿನ ಲಕ್ಷ್ಮಣ ದಾಸರ ಮಿಲಿಟರಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಒಬ್ಬರು ಬಿ.ಎ.ಪದವಿ ಪಡೆದುಕೊಂಡಿದ್ದಾರೆ. ೨೨ ವರುಷದ ಶ್ರೀನಿವಾಸ ಮತ್ತು ೨೦ ವರುಷದ ಶ್ರೀಧರ ಇಬ್ಬರು ಇಂಜಿನಿಯರಿಂಗ್ (ಬಿ.ಇ) ಶಿಕ್ಷಣ ಪಡೆಯುತ್ತಿದ್ದಾರೆ. ತಂದೆ ಸುಶಿಕ್ಷಿತನಾಗಿದ್ದು, ಶಿಕ್ಷಣದ ಮಹತ್ವ ಅರಿತಿರುವುದರಿಂದ ಮಕ್ಕಳಿಗೆ ಶಿಕ್ಷಣ ಕೊಡಿಸಿದ್ದಾರೆ. ಬನ್ನೂರ ಗ್ರಾಮದ ‘ದಂಡಿಗಿ’ ಮನೆತನದ ಯಜಮಾನ ಎಸ್.ಎಸ್.ಎಲ್.ಸಿ. ಮುಗಿಸಿದ್ದು ಪೋಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಮಗ ಪ್ರಹ್ಲಾದ ದಂಡಗಿ ಬಿ.ಇ. ಮುಗಿಸಿಕೊಂಡಿದ್ದಾರೆ. ಮಗಳು ಮಂಜುಳಾ ಪಿ.ಯು.ಸಿ ಪಾಸು ಮಾಡಿದ್ದಾಳೆ.

ರಾಯಬಾಗ ತಾಲೂಕಿನ ಇಟ್ನಾಳ ಗ್ರಾಮದ ‘ಅಕ್ಕೆನ್ನವರ’ ಮನೆತನದಲ್ಲಿ ಮಾರುತಿ (೬೮ ವರುಷ) ಮತ್ತು ಯಲ್ಲಪ್ಪ (೩೯ ವರುಷ) ಇಬ್ಬರೂ ಟಿ.ಸಿ.ಎಚ್. ಮುಗಿಸಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಾಯಬಾಗ ತಾಲೂಕಿನ ಹಿಡಕಲ್ ಗ್ರಾಮದ ‘ಹಿಮ್ಮಡಿ’ಯವರು ಎಂ.ಎ. ಪಿ.ಎಚ್.ಡಿ. ಪದವಿ ಪೂರೈಸಿ, ಪದವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ”.[೪೦] ಮಾರುತಿ ಸಣ್ಣಪ್ಪ ಅಕ್ಕೆನವರ ಬೆಳಗಾವಿಯಲ್ಲಿ ‘ನ್ಯೂ ಇಂಡಿಯಾ ಅಸ್ಸುರನ್ಸ್’ದ ನೌಕರರಾಗಿದ್ದಾರೆ. ರಾಮಚಂದ್ರಪ್ಪ ಅಪ್ಪಯ್ಯ ಗಾಣಿಗೇರ ಅವರು ಘಟಪ್ರಭಾದಲ್ಲಿ ಅಭಿಯಂತರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕೆಲವರು ಅಲ್ಲಲ್ಲಿ ಅರೆಕಾಲಿಕ ಶಿಕ್ಷಕರಾಗಿ, ಸರಕಾರಿ ಇಲಾಖೆಯಲ್ಲಿ ಸಿಪಾಯಿಗಳಾಗಿ, ರಾತ್ರಿ ಕಾವಲುಗಾರರಾಗಿ ಉದ್ಯೋಗ ಮಾಡುತ್ತಿದ್ದಾರೆ. ಕಳೆದ ಇಪ್ಪತ್ತೈದು ವರುಷಗಳಿಂದೀಚೆಗೆ

ಮಕ್ಕಳ ವಿದ್ಯಾಭ್ಯಾಸಕ್ಕೆ ಗಮನ ಕೊಟ್ಟಿರುವುದು ಗೋಚರವಾಗುತ್ತದೆ. ಹೊಸ ಜನಾಂಗ ಮೀಸಲಾತಿಯ ಸೌಲಭ್ಯ ಪಡೆದು ಶಿಕ್ಷಣ ಪಡೆಯುತ್ತಿದ್ದಾರೆ. ಶಿಕ್ಷಣದ ಮಹತ್ವ ಗೊತ್ತಾಗಿ, ಜನಾಂಗದಲ್ಲಿ ಜಾಗೃತಿಯುಂಟಾಗಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.

ಈ ಸಮುದಾಯಕ್ಕೆ ತನ್ನದೇ ಆದ ಸ್ವಂತ ಭೂಮಿ ಇಲ್ಲ. ಇದ್ದರೂ ಅದು ಅತ್ಯಲ್ಪ. ಹೀಗಾಗಿ ಕೃಷಿಯಲ್ಲಿ ತುಂಬ ಗೌಣ ಎನ್ನಬಹುದಾದ ಸಂಖ್ಯೆಯಲ್ಲಿ ಜನರು ತೊಡಗಿಕೊಂಡಿದ್ದಾರೆ. ಇನ್ನೂ ಬೇರೆಯವರ ಜಮೀನುಗಳಲ್ಲಿ ಕೃಷಿ ಕೂಲಿಗಳಾಗಿದ್ದಾರೆ. ಅಂದರೆ ಕಬ್ಬು ಕಟಾವು, ಆಲೆಮನೆಗಳಿಗೆ ಕಬ್ಬು ಪೂರೈಸುವುದು, ಆಲೆಮನೆ ಹಾಗೂ ಕಾರ್ಖಾನೆಗಳಿಗೆ ಕಬ್ಬು ಪೂರೈಸಲು ಕಟಾವು ಮಾಡುವ ಗ್ಯಾಂಗಿನ(ತಂಡದ)ಲ್ಲಿ ಕೆಲಸ ಮಾಡುತ್ತಾರೆ. ಕೆಲವರು ಈ ಗ್ಯಾಂಗ್‌ಗಳನ್ನು ಪೂರೈಸುವ ಕೆಲಸದಲ್ಲಿ ತೊಡಗಿಕೊಂಡಿದ್ದಾರೆ. ಈ ಸಮುದಾಯದವರು ವ್ಯಾಪಾರದಲ್ಲಿ ತೊಡಗಿ ಕೊಂಡಿರುವುದು ತೀರಾ ಕಡಿಮೆ. ಗೆಡ್ಡೆಗೆಣಸುಗಳನ್ನು, ಕಾಡಿನಿಂದ ಸಂಗ್ರಹಿಸಿದ ಜೇನುತುಪ್ಪ, ಅಂಟು, ಮರದ ತೊಗಟೆ, ವನಸ್ಪತಿ, ವಿಶೇಷ ಬೇರು ಮುಂತಾದವುಗಳನ್ನು ತಂದು ಮಾರಾಟ ಮಾಡುವ ಪುರುಷರಿದ್ದಾರೆ. ಮಹಿಳೆಯರು ಕ್ಯಾರ, ಹೆರಪಿನ್ನು, ಬಲೂನು, ಚಿಕ್ಕಮಕ್ಕಳ ಆಟಿಕೆ ಸಾಮಾನು ಮುಂತಾದ ಸಾಮಗ್ರಿಗಳನ್ನು ಹೊತ್ತುಕೊಂಡು ಗ್ರಾಮೀಣ ಪ್ರದೇಶದಲ್ಲಿ ತಿರುಗಾಡಿ ಮಾರುವ ವೃತ್ತಿಯಲ್ಲಿದ್ದಾರೆ.

ಒಟ್ಟಾರೆ ಈ ಅಧ್ಯಯನದಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಆಧುನಿಕ ಭರಾಟೆಗೆ ಸಿಲುಕಿದ ಚೆನ್ನದಾಸರ ಸಮುದಾಯದ ಆರ್ಥಿಕ ಸ್ಥಿತಿಗತಿ ಶೋಚನೀಯವಾಗಿದೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳಿಂದಾಗಿ ಸದರಿ ಸಮುದಾಯದ ಪರಂಪರಾಗತ ಕುಲ ಕಸಬುಗಳು ಮೂಲೆಗುಂಪಾಗಿವೆ. ಕೇವಲ ಭಿಕ್ಷಾಟನೆಯಿಂದ ಬದುಕನ್ನು ಕಟ್ಟಿಕೊಳ್ಳಲಾಗುವುದಿಲ್ಲ. ಬೇಟೆಯಂತೂ ನಿಷೇಧಿಸಲ್ಪಟ್ಟಿದ್ದು, ಬೇಟೆಯಾಡುವುದು ಅಪರಾಧವಾಗಿದೆ. ಕೌದಿ ಇಂದು ಅಪ್ರಸ್ತುತವಾಗಿದೆ. ಅತ್ಯಾಧುನಿಕ ಸಾಮಗ್ರಿಗಳ ಸೆಳತಕ್ಕೆ ಸಿಕ್ಕು ಜನರು ಗುಡಿ ಕೈಗಾರಿಕೆಗಳ ಉತ್ಪನ್ನಗಳನ್ನು ಬಳಸುತ್ತಿಲ್ಲ. ಅವರ ತಿರುಗಾಟದ ಮೂಲಕ ಮಾಡುತ್ತಿದ್ದ ವ್ಯಾಪಾರ ಇಂದು ಇಲ್ಲವಾಗಿದೆ. ಆಧುನಿಕ ಮನರಂಜನ ಸಾಧನಗಳಾದ ಚಲನಚಿತ್ರ, ದೂರದರ್ಶನದ ನೂರಾರು ಚಾನಲ್‌ಗಳು, ರಿಯಾಲಿಟಿ ಶೋಗಳ ಹಾವಳಿಗಳಿಂದಾಗಿ ಪರಂಪರಾಗತವಾದ ಚೆನ್ನದಾಸರ ಆಟ, ಬಯಲಾಟ, ಸಣ್ಣಾಟ, ನಾಟಕ ಮುಂತಾದ ರಂಗಭೂಮಿಯ ಕಲಾ ಪ್ರಕಾರಗಳಿಂದು ಅವಸಾನದ ಅಂಚನ್ನು ತಲುಪಿವೆ.

ಇವರ ಆರ್ಥಿಕ ಮೂಲಗಳೆನಿಸಿಕೊಂಡಿದ್ದ ಇತರ ಕುಲಕಸಬುಗಳಾದ ಕಳ್ಳಬಟ್ಟಿ ತಯಾರಿಕೆ, ಸಾರಾಯಿ ಮಾರಾಟ ಇಂದು ಕಾನೂನು ಬಾಹೀರ ಚಟುವಟಿಕೆಗಳಾಗಿ ನಿಷೇದಿಸಲ್ಪಟ್ಟಿವೆ. ವನಸ್ಪತಿ ಔಷಧಗಳಿಗೆ ಆಧುನಿಕ ವೈದ್ಯ ಪದ್ಧತಿಯಲ್ಲಿ ಪುರಸ್ಕಾರವಿಲ್ಲ. ಪಾರಂಪರಿಕ ವೈದ್ಯ ಪದ್ಧತಿ ಇಂದು ಅಪಹಾಸ್ಯಕ್ಕೆ ಈಡಾಗಿದೆ. ಹೀಗಾಗಿ ಚೆನ್ನದಾಸರ ಸಮುದಾಯದ ಆರ್ಥಿಕ ಮೂಲಗಳ ಬಾಗಿಲುಗಳೆಲ್ಲ ಮುಚ್ಚಿಕೊಂಡಂತಾಗಿವೆ. ಶಿಕ್ಷಣ ಆಧುನಿಕ ವೃತ್ತಿಗಳನ್ನು ಕೈಕೊಳ್ಳವುದರ ಮೂಲಕ ಸದರಿ ಸಮುದಾಯ ಆರ್ಥಿಕವಾಗಿ ಪುನರುತ್ಥಾನಗೊಳ್ಳಬೇಕಿದೆ. ಸಂಘರ್ಷಮಯ ಸಮಾಜ ಸವಾಲಿನ ಸಂದರ್ಭದಲ್ಲಿ ಈ ಸಮುದಾಯ ಸ್ಪರ್ಧಿಸಿ ಗೆಲ್ಲಬೇಕಾದ ಅನಿವಾರ್ಯತೆ ಇದೆ.

೪.೧೨. ರಾಜಕೀಯ

ರಾಜಕೀಯ ಮತ್ತು ರಾಜಕಾರಣ ಬಹಳ ಪ್ರಭಲ ಅಸ್ತ್ರ. ಎಲ್ಲ ಪ್ರಮುಖ ನಿರ್ಣಯಗಳು ರಾಜಕೀಯದ ಮೇಲೆಯೆ ಅವಲಂಭಿತವಾಗಿರುತ್ತವೆ. ರಾಜಕೀಯ ಶಕ್ತಿ ಅಗ್ರಗಾಮಿ, ಉಳಿದೆಲ್ಲವು ಅನುಗಾಮಿ. ರಾಜಕೀಯವಿಲ್ಲದ ಸಮುದಾಯ ಏಳಿಗೆಯಾಗುವುದಿಲ್ಲ. ರಾಜಕೀಯ ಶಕ್ತಿಯಿದ್ದರೆ ಅಸಾಧ್ಯವೆಂಬುದೆ ಇಲ್ಲ. ಇತಿಹಾಸವನ್ನು ಅವಲೋಕಿಸಿದಾಗ ರಾಜಕೀಯ ಬಲದಿಂದಲೆ ಧರ್ಮ, ಸಮಾಜ ಉತ್ತುಂಗ ಶಿಖರವನ್ನು ತಲುಪಿವೆ. ರಾಜಕೀಯ ಶಕ್ತಿ ಇಲ್ಲದಾಗ ಅಧಪತನಗೊಂಡಿರುವುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಯಾವ ಸಮುದಾಯಕ್ಕೆ ಅಧಿಕಾರ ಲಭಿಸುತ್ತದೆಯೋ, ಆ ಸಮುದಾಯ ಸಮಸ್ತ ಸಮಾಜವನ್ನು ಮುನ್ನಡೆಸುವ ಚಾಲಕನ ಸ್ಥಾನದಲ್ಲಿ ನಿಲ್ಲುತ್ತದೆ. ಸಮಾಜದ ಎಲ್ಲ ಏರಿಳಿತಕ್ಕೂ ರಾಜಕೀಯ ಅಧಿಕಾರ ಕಾರಣವಾಗಿ ಪರಿಗಣಿಸುತ್ತದೆ. ಶ್ರೇಣಿಕೃತ ವರ್ಣವ್ಯವಸ್ಥೆಯೂ ಭಾರತೀಯ ಸಮಾಜದಲ್ಲಿ ಬುಡಕಟ್ಟು ಮತ್ತು ಆದಿವಾಸಿ ಸಮುದಾಯಗಳನ್ನು ಸಮಾಜದ ಹೊರಗಿರಿಸಿತು. ಈ ಸಮುದಾಯಗಳಿಂದ ಎಲ್ಲ ಅವಕಾಶಗಳನ್ನು ಕಿತ್ತುಕೊಳ್ಳಲಾಯಿತು. ಸ್ವಾಭಿಮಾನದಿಂದ ತಲೆಎತ್ತಿ ಬಾಳುವ ಅವಕಾಶವೂ ಇಲ್ಲವಾಯಿತು. ಇಂಥ ದಮನಿತ ಸಮುದಾಯಗಳು ಯಾವುದೇ ರಾಜಕೀಯ ಆಶ್ರಯವಿಲ್ಲದೆ ಬಳಲುವಂತಾದವು. ಈ ಸಮುದಾಯಗಳು ಏಳಿಗೆ ಆಗದಿರುವುದಕ್ಕೆ ರಾಜಕೀಯ ಅವಕಾಶ ವಂಚಿತವಾಗಿರುವುದೆ ನೇರ ಕಾರಣವಾಗಿದೆ. ಅಲೆಮಾರಿ ಸಮುದಾಯಗಳು ಒಂದೆಡೆ ನೆಲೆನಿಲ್ಲದೆ ಇರುವುದರಿಂದ ತಮ್ಮದೇ ಆದ ರಾಜಕೀಯ ಇಚ್ಛಾ ಶಕ್ತಿಯನ್ನು ಹುಟ್ಟುಹಾಕಲು ಸಾಧ್ಯವಾಗಲಿಲ್ಲ. ಆಳರಸರ ದಾಳವಾಗಿಯೇ ಬದುಕಬೇಕಾಯಿತು. ರಾಜಕೀಯವಾಗಿ ಸೋತ ಸದರಿ ಸಮುದಾಯಗಳು ಅಧೀನ ಅರಸರ ಆಜ್ಞಾನುವರ್ತಿಗಳಾಗಿ ಬಾಳಿದವು. ಹೀಗಾಗಿಯೇ ಇವರಿಗೆ ಯಾವ ರಾಜಕೀಯ ಶಕ್ತಿಯು ಸಂಚಯವಾಗಲಿಲ್ಲ.

ರಾಜಕೀಯವಾಗಿ ಅವಕಾಶವಂಚಿತವಾದ ಈ ಸಮುದಾಯ ತನ್ನಲ್ಲಿಯೇ ಒಂದು ವ್ಯವಸ್ಥೆಯನ್ನು ರೂಪಿಸಿಕೊಂಡಿತ್ತು."ಪ್ರತಿಯೊಂದು ಸಮುದಾಯವು ತನ್ನದೆ ಆದ ಸಾಂಪ್ರದಾಯಿಕ ಆಡಳಿತ ಕ್ರಮವನ್ನು ಹೊಂದಿರುತ್ತದೆ. ಆಧುನಿಕ ಅರ್ಥದಲ್ಲಿ ಆದಿವಾಸಿಗಳು ತಮ್ಮದೆ ಆದ ಸರ್ಕಾರವನ್ನು ಹೊಂದಿರುವರು. ನಾಯಕನ ನಿಯುಕ್ತಿಯು ಆನುವಂಶೀಯವಾಗಿ ಇಲ್ಲವೆ ಚುನಾವಣೆಯ ಮೂಲಕ ನಡೆಯುತ್ತದೆ. ನಾಯಕನು ಗೌರವಾದರಗಳಿಗೆ ಪಾತ್ರವಾಗಿರುವ ವ್ಯಕ್ತಿಯಾಗಿದ್ದು, ಸಮೂಹದ ಕಲ್ಯಾಣದ ಹೊಣೆ ಹೊತ್ತಿರುವವನಾಗಿರುತ್ತಾನೆ"[೪೧] ಎಂದು ಖ್ಯಾತ ಸಮಾಜಶಾಸ್ತ್ರಜ್ಞರಾದ ಚ.ನ. ಶಂಕರರಾವ್ ಅವರು ಅಭಿಪ್ರಾಯ ಪಡುತ್ತಾರೆ. ಆದಿವಾಸಿಗಳ 'ರಾಜಕೀಯ ವ್ಯವಸ್ಥೆ'ಯ ಕುರಿತಾಗಿ ವಿವರಿಸಿದ ಈ ಮಾತು ಚೆನ್ನದಾಸರ ಸಮುದಾಯಕ್ಕೂ ಅನ್ವಯವಾಗುತ್ತದೆ.

ಕ್ರಿ.ಶ. ೨೦೧೦-೧೧ರ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಸುಮಾರು ಅರವತ್ತು ಸಾವಿರ ಜನಂಖ್ಯೆಯನ್ನು ಹೊಂದಿರುವ ತೀರಾ ಹಿಂದುಳಿದ ವರ್ಗದ ಸಮುದಾಯವಿದು. ಬೆಳಗಾವಿ ಜಿಲ್ಲೆಯಲ್ಲಿ ೧೭೭೯ ಕುಟುಂಬಗಳಿದ್ದು ಅದರಲ್ಲಿ ೪೭೯೧ ಪುರುಷರು, ೪೨೨೩ ಮಹಿಳೆಯರು ಸೇರಿ ಒಟ್ಟು ೯೦೧೪ ಜನರು ನೆಲೆಸಿದ್ದಾರೆ. ಇವರೆಲ್ಲರೂ ಒಂದೆಡೆಯಿಲ್ಲ. ಅಥಣಿ, ಬೆಳಗಾವಿ, ಚಿಕ್ಕೋಡಿ, ಗೋಕಾಕ, ಹುಕ್ಕೇರಿ, ರಾಯಬಾಗ, ರಾಮದುರ್ಗ ತಾಲೂಕುಗಳ ಶಿಲ ಹಳ್ಳಿಗಳಲ್ಲಿ ಚೆದುರಿ ಹೋಗಿದ್ದಾರೆ.

೪.೧೨.೧. ಮತದಾರರಾಗಿ ಬಲವರ್ಧನೆ

ರಾಜಕೀಯ ಚುಕ್ಕಾಣಿಯನ್ನು ಹಿಡಿಯುವ ಪೈಪೋಟಿಯಲ್ಲಿ ಬಲಿಷ್ಠ ಜಾತಿಗಳು, ಮುಂದುವರೆದ ಸಮುದಾಯಗಳು ಸಂಘಟನೆಗಳಾಗುತ್ತವೆ. ಆ ಮೂಲಕ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸೌಲಭ್ಯಗಳನ್ನು ಕೊಳ್ಳೆಹೊಡೆಯುತ್ತವೆ. ಶಿಕ್ಷಣ, ಉದ್ಯೋಗ ರಾಜಕೀಯ ಅಧಿಕಾರ ವೆಂಬುದು ಬಲಾಢ್ಯರ ಶಕ್ತಿಯಾಗಿ ಧೃವೀಕರಣಗೊಳ್ಳುತ್ತಿದೆ. ಶಿಕ್ಷಣ ಸಂಘಟನೆ, ಉದ್ಯೋಗ, ಅಧಿಕಾರ ಪಡೆಯಬೇಕಾಗಿರುವ ಅಲೆಮಾರಿ ಸಮುದಾಯಗಳು ಗಾವುದ-ಗಾವುದ ದೂರವುಳಿದಿವೆ. ಸಂಘಟನೆಯ ಮಹತ್ವ ಶಿಕ್ಷಣದ ಪ್ರಾಥಮಿಕ ಜ್ಞಾನವಿಲ್ಲ. ಸಮುದಾಯಗಳು ತಮ್ಮ ಹಕ್ಕಿನ ಭಾಗಗಳನ್ನು ಶಕ್ತಿವಂತರು ಕಿತ್ತುಕೊಂಡಿರುವುದನ್ನು ಪ್ರತಿಭಟಿಸದೆ ಸೋತು ಹೋಗಿವೆ. ಇಂತಹ ವಿಸಂಗತಿಗಳ ನಡುವೆಯೂ ಅಲೆಮಾರಿ ಸಮುದಾಯದ ಪ್ರಜ್ಞಾವಂತ ಯುವಕರು ಸಂಘಟನೆಗೆ ಮುಂದಾಗಿರುವುದು ಆಶಾದಾಯಕವಾಗಿದೆ.

“ಇಂದು ಬಲಿಷ್ಠ ಜಾತಿಗಳ ಧೃವೀಕರಣಕ್ಕೆ ಕಲೆ, ಸಂಸ್ಕೃತಿ, ಧರ್ಮ, ಕಾಯಕ ಇತ್ಯಾದಿಗಳು ಮುಖವಾಡಗಳಾಗಿ ಬಳಕೆಯಾಗುತ್ತಿವೆ. ತಮ್ಮ ಜೀವನ ನಿರ್ವಹಣೆಗೆ ಅಗತ್ಯವಾದ ತಮ್ಮ ಪಾಲಿನ ಹಕ್ಕಿಗಾಗಿ ಹೋರಾಡಲು ಸಂಘಟಿತವಾಗಿ ಕಳವರ್ಗದ ಸಮುದಾಯಗಳು ಶಕ್ತಿರಾಜಕಾರಣದ ದಾಳಗಳಾಗಿ ಇಂದು ಬಳಕೆಯಾಗುತ್ತಿವೆ. ಬುಡಕಟ್ಟು ಸಮುದಾಯಗಳು ಇಂದು ದಿನದಿಂದ ದಿನಕ್ಕೆ ಒಳಪಂಗಡಗಳ ಹೆಸರಿನಲ್ಲಿ ಛಿದ್ರಗೊಳ್ಳುತ್ತಿವೆ. ಇದನ್ನು ತಪ್ಪಿಸುವುದು ಇಂದಿನ ಸಾಮಾಜಿಕ ಹೊಣೆಯಾಗಿದೆ.”[೪೨] ಎಂಬ ಮಾತುಗಳು ಚೆನ್ನದಾಸರ ಸಮುದಾಯ ಅಸಂಘಟನೆ, ಅದಕ್ಕಿರುವ ಕಾರಣಗಳನ್ನು ವಿವರಿಸುತ್ತದೆ.

ಚೆನ್ನದಾಸರ ಸಮುದಾಯದಲ್ಲಿ ಸಂಘಟನೆ ಕನ್ನಡಿಗಂಟಾಗಿದೆ. ‘ದಾಸ ಕೂಡಿ ಕೆಟ್ಟ’ ಎಂಬ ಗಾದೆ ಮಾತಿನಂತೆ ಈ ಜನಾಂಗ ಒಗ್ಗೂಡುವುದು ತೀರಾ ಕಡಿಮೆ. “ಅಸಂಘಟಿತರಾದ ಇವರಲ್ಲಿ ಸಂಘಟನೆ ಸಾಧ್ಯವಿಲ್ಲ. ಇವರು ಕೂಡಿದರೆ ಜಗಳವಾಡುವುದು ನಿಶ್ಚಿತ ಎಂದೇ ಅರ್ಥ. ಈ ಮಾತು ಸತ್ಯವೂ ಇದೆ.”[೪೩] ಈ ಸಮುದಾಯ ಕೂಡುವುದೆ ಅಪರೂಪವೆಂದಾಗ ಸಂಘಟನೆ ರೂಪುಗೊಳ್ಳುವುದಾದರೂ ಹೇಗೆ?

ಚುನಾವಣೆಯ ಸಮಯದಲ್ಲಿ ವಿವಿಧ ರಾಜಕೀಯ ಪಕ್ಷಗಳು ವೈವಿಧ್ಯಮಯ ಆಮಿಷಗಳನ್ನು ಒಡ್ಡುತ್ತವೆ. ಆದರೆ ಇವರಿಗೆ ಪಕ್ಷಗಳು ಮುಖ್ಯವಾಗುವುದಿಲ್ಲ. ಪಾರ್ಟಿಗಳ ಪ್ರಣಾಳಿಕೆಗಳ ಪ್ರಜ್ಞೆಯು ಇವರಿಗಿಲ್ಲ. ತಾವು ನೆಲೆ ನಿಂತ, ತಮಗೆ ಆಶ್ರಯ ನೀಡಿದವರು ಯಾರಿಗೆ ಹೇಳುತ್ತಾರೊ ಅವರಿಗೆ ತಮ್ಮ ಮತ ಚಲಾವಣೆ ಮಾಡುತ್ತಾರೆ. ಆದರೆ ಕ್ರಿ.ಶ. ೨೦೦೦ ರಿಂದೀಚೆಗೆ ಕೊಂಚ ಬದಲಾವಣೆ ಕಂಡು ಬರುತ್ತಲಿದೆ. ಮೊದಲಿನಂತೆ ಸಾರಸಗಟಾಗಿ ವೋಟು ಹಾಕುವುದಿಲ್ಲ. ಯಾವುದೇ ಪಕ್ಷದ ಮುಖಂಡರು ಬಂದರೂ ಇಲ್ಲವೆಂದು ಹೇಳುವುದಿಲ್ಲ. ಪ್ರಾದೇಶಿಕ ಪಕ್ಷಗಳು, ರಾಷ್ಟ್ರೀಯ ಪಕ್ಷಗಳು, ಸ್ವತಂತ್ರ ಅಭ್ಯರ್ಥಿಗಳು ನೀಡುವುದನ್ನು ಪಡೆಯುತ್ತಾರೆ.

ಚುನಾವಣೆಯ ಮುನ್ನಾ ದಿನ ಚೆನ್ನದಾಸರು ನೆಲೆಸಿರುವ ಪ್ರದೇಶಗಳಲ್ಲಿ ಹೆಂಡದ ಹೊಳೆ ಹರಿಯುತ್ತದೆ. ರಾತ್ರಿ ಬಾಡದ ಊಟವೂ ಯಥೇಚ್ಛವಾಗಿರುತ್ತದೆ. ದುಡ್ಡು ಮತ್ತು ವಸ್ತುವಿನ ರೂಪದ ಕಾಣಿಕೆಯನ್ನು ಸ್ವೀಕರಿಸುತ್ತಾರೆ. ಆದರೆ ಮತದಾನದ ಗುಟ್ಟನ್ನು ಬಿಟ್ಟುಕೊಡುವುದಿಲ್ಲ. ಮೋಜಿನ ಸಂಗತಿಯೆಂದರೆ, ಮತದಾನದ ದಿವಸ ತಮ್ಮ ಪ್ರದೇಶದಿಂದ ಮತಗಟ್ಟೆಯ ಸ್ಥಳದವರೆಗೆ ಕರೆದೊಯ್ಯಲು ಯಾರು ಟ್ರ್ಯಾಕ್ಟರ್, ಜೀಪ್, ಟ್ಯಾಕ್ಸಿ, ಮೆಟಡೋರ್ ಮುಂತಾದ ವಾಹನಗಳನ್ನು ಕಳುಹಿಸುತ್ತಾರೊ ಅವರಿಗೆ ವೋಟು ಸಿಕ್ಕುತ್ತದೆ. ಮೊದಲು ಯಾವ ಪಕ್ಷದವರು ಸಾರಿಗೆ ಸೌಕರ್ಯವನ್ನು ಕಲ್ಪಿಸುತ್ತಾರೆಯೊ ಅವರಿಗೆ ಇವರ ‘ವೋಟು ಗ್ಯಾರಂಟಿ’ ಎಂದು ಸಮೀಕ್ಷೆಯ ಸಂದರ್ಭದಲ್ಲಿ ತಿಳಿದುಬಂದ ಅಂಶವಾಗಿದೆ.

ಕಳೆದ ಚುನಾವಣೆಯಿಂದ ಯುವಕರಲ್ಲಿ ಜಾಗೃತಿ ಮೂಡುತ್ತಿದೆ. ಮತದಾನದಲ್ಲಿ ಭಾಗವಹಿಸುವುದು ಹೆಚ್ಚಾಗಿದೆ. ಬೆಳಗಾವಿ ಜಿಲ್ಲೆಯಲ್ಲಿರುವ ಸುಮಾರು ಎಂಟು ಸಾವಿರ ಜನರಲ್ಲಿ ಐದು ಸಾವಿರ ಜನರು ಮತದಾನದ ಹಕ್ಕನ್ನು ಪಡೆದಿದ್ದಾರೆ. ಇದರಲ್ಲಿ ಸುಮಾರು ೨೮೦೦ ಜನ ಪುರುಷರು ಹಾಗೂ ೨೨೦೦ ಜನ ಮಹಿಳಾ ಮತದಾರರಿದ್ದಾರೆ. ತಮ್ಮ ಸಾರ್ವಭೌಮದ ಸಂಕೇತವಾಗಿರುವ ಮತವನ್ನು ತಮ್ಮ ಹಿತಕಾಪಾಡುವ ಪಕ್ಷಗಳಿಗೆ ಕೊಡಬೇಕು. ತಮಗೆ ನೀಡಿದ ಭರವಸೆಗಳನ್ನು ಈಡೇರಿಸುವ ನಾಯಕರಿಗೆ ಮತ ಚಲಾಯಿಸುತ್ತಾರೆ. ಮತದಾರರಾಗಿ ಬಲವರ್ಧನೆಗೊಳ್ಳುತ್ತಿದ್ದರೂ ಈ ಸಮುದಾಯ ಪಕ್ಷವಾಗಿ ಇನ್ನೂ ಬಲವರ್ಧನೆಗೊಂಡಿಲ್ಲ. ಸಂಘಟನೆಯಾಗದೆ ಇರುವುದರಿಂದ ರಾಜಕೀಯ ಶಕ್ತಿಯಾಗಿ ರೂಪುಗೊಂಡಿಲ್ಲ.

೪.೧೨.೨. ಪ್ರಜ್ಞೆ ಮತ್ತು ಪ್ರಯತ್ನ

ಬಲಾಢ್ಯರು, ಉಳ್ಳವರನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ತಮಗೆ ದಕ್ಕಬೇಕಾದ ಮೀಸಲಾತಿಯನ್ನು ಯಾರೊ ಹೊಡೆದುಕೊಳ್ಳುತ್ತಿದ್ದಾರೆ ಎಂಬ ಎಚ್ಚರವೂ ಸಮುದಾಯದಲ್ಲಿ ಮೂಡುತ್ತಿದೆ. "ಅಲೆಮಾರಿ ಸಮುದಾಯಗಳ ಪ್ರಜ್ಞಾವಂತ ಯುವಕರು ತಮ್ಮ ಬದುಕಿನ ಆತ್ಮಾವಲೋಕನ ಮಾಡಿಕೊಂಡಂತೆ ಸಂಘಟನೆಯಲ್ಲಿ ತೊಡಗಿಕೊಂಡಿದ್ದಾರೆ. ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರ್ಯಾರು? ಇಂಥ ಪ್ರಶ್ನೆಯನ್ನೇ ಮತ್ತೆ ಪ್ರಶ್ನಿಸುವ ಹೊಸ ಎಚ್ಚರ ಇಂದು ನಮ್ಮ ನಡುವೆ ಸಾಧ್ಯವಾಗಬೇಕಾಗಿದೆ. ಬೆಕ್ಕಿಗೆ ಬಲಿಯಾಗದಂತೆ ಉಳಿಯುವ, ಬೆಳೆಯುವ ಅರಿವಿನ ಎಚ್ಚರಿಕೆಯ ಸಂಘಟನೆಯಾದರೆ ಒಗ್ಗಟ್ಟಿನ ಬಲದಲ್ಲಿ ಗಂಟೆ ಕಟ್ಟುವ ಅಗತ್ಯವೆ ಬೀಳುವುದಿಲ್ಲ. ದುರಂತವೆಂದರೆ, ಇಂಥ ಎಚ್ಚರದ ಮನಸ್ಸುಗಳು ಸ್ವಾರ್ಥಕ್ಕೆ ಸಮುದಾಯಗಳ ಹಿತವನ್ನು ಬಲಿಗೊಡುವ ದಂಧೆಗಿಳಿದಿರುವುದು ಕಳೆದ ಮೂವತ್ತು ವರ್ಷಗಳ ಈ ಎಲ್ಲ ವಿದ್ಯಮಾನಗಳನ್ನು ಮನಸ್ಸಿನಾಳಕ್ಕೆ ತಂದುಕೊಂಡಂತೆ ಅಲೆಮಾರಿ ಸಮುದಾಯಗಳ ಮೂಲದಿಂದ ಬಂದ ಯುವ ಕರು ಒಕ್ಕೂಟ ರಚನೆಯಲ್ಲಿ ಆಸಕ್ತಿವಹಿಸಿ, ಸಂಕಲ್ಪಬದ್ಧಭಾವದಲ್ಲಿ ಸಂಘಟಿತರಾಗುತ್ತಿದ್ದಾರೆ."[೪೪] ಎಂಬ ಪ್ರೊ. ಎಸ್. ಜಿ. ಸಿದ್ದರಾಮಯ್ಯನವರ ಮಾತುಗಳು ಕರ್ನಾಟಕದ ಅಲೆಮಾರಿ ಸಮುದಾಯಗಳನ್ನು ಕುರಿತಾಗಿ ಹೇಳಿದ್ದರೂ, ಪ್ರಸ್ತುತ ಚೆನ್ನದಾಸರ ಸಮುದಾಯಕ್ಕೂ ಅನ್ವಯವಾಗುತ್ತವೆ. ಸಂಘಟನೆ, ಸಂಘಟನೆಯ ತೊಡಕಿನ ಮೇಲೆ ಬೆಳಕು ಚೆಲ್ಲುತ್ತವೆ.

'ಪ್ರಜ್ಞೆ ಮತ್ತು ಪ್ರಯತ್ನ'ದ ಕುರಿತಾಗಿ ಹೇಳುವುದಾದರೆ, "ಸಾಮಾಜಿಕವಾಗಿ ಅಸಮಾನತೆಯ ಬೇಗುದಿಯಲ್ಲಿ ಬೇಯುತ್ತಿರುವ ಈ ಸಮುದಾಯ ತನ್ನ ಶೋಷಣೆಯನ್ನು ನೀಗಲು ದಲಿತ ಸಂಘಟನೆಗಳ ಹೋರಾಟದಲ್ಲಿ ತೊಡಗಿಸಿಕೊಂಡಿದೆ. ಸಮುದಾಯ ಮಟ್ಟದಲ್ಲಿ ಹಿಂದೆ

ಸಂಘಟನೆಗಳು ಇರಲಿಲ್ಲ. ತಾವು ಅಲ್ಪಸಂಖ್ಯಾತರೆಂಬ ಭಾವನೆ ಹಾಗೂ ಸಂಘಟಿತರಾ ದರೆ ಮೇಲ್ಜಾತಿಯವರು ತಮ್ಮನ್ನು ಇನ್ನಷ್ಟು ಕೆಟ್ಟ ದೃಷ್ಟಿಯಿಂದ ನೋಡಿಕೊಳ್ಳಬಹುದೆಂಬ ಭಯ ಇವರದಾಗಿತ್ತು. ಈಗ್ಗೆ ಕೆಲವು ವರ್ಷಗಳಿಂದ ಸಂಘಟನೆಯ ಕುರಿತು ಅರಿವು ಮೂಡುತ್ತಿದೆ. ಯುವ ಸಮುದಾಯ ತಾವಷ್ಟೇ ಸಂಘಟಿತರಾದರೆ ಹೋರಾಟಕ್ಕೆ ಬಲ ಬರುವುದಿಲ್ಲವೆಂದು ಭಾವಿಸಿ ವಿವಿಧ ದಲಿತ ಸಂಘಟನೆಗಳೊಂದಿಗೆ ಒಂದಾಗುತ್ತಿದ್ದಾರೆ. ಆ ಮುಖೇನ ಸಾಮಾಜಿಕ ಎಚ್ಚರ ಹಾಗೂ ಶೈಕ್ಷಣಿಕ ಆದ್ಯತೆಗೆ ಗಮನ ಕೊಡುತ್ತಿದೆ.”[೪೫] ಎಂಬ ಮಾತುಗಳು ಪ್ರಜ್ಞೆ ಮತ್ತು ಪ್ರಯತ್ನಕ್ಕೆ ಸಾಕ್ಷಿಗಳಾಗುತ್ತವೆ.

ಸಮುದಾಯಗಳು ಜಾಗೃತಗೊಂಡಿವೆ. ಇದಕ್ಕೆ ಚೆನ್ನದಾಸರ ಸಮುದಾಯವೂ ಹೊರತಾಗಿಲ್ಲ. ಇನ್ನುಳಿದ ಸಂಘಟನೆಗಳು ಚೆನ್ನದಾಸರ ಸಮುದಾಯದ ಸಹಭಾಗಿತ್ವ ಪಡೆಯುತ್ತ ತಾವು ಬಲಿಷ್ಠಗೊಳ್ಳುತ್ತ, ಅವರನ್ನು ಪ್ರಗತಿಯತ್ತ ಮುನ್ನಡೆಸಲು ಸಹಕರಿಸುತ್ತಿರುವುದೇ ಸಮುದಾಯಕ್ಕೆ ಪ್ರಜ್ಞೆ ಮೂಡಲು ಕಾರಣವಾಗಿದೆ. ಚೆನ್ನದಾಸರ ಸಮುದಾಯದ ಯುವಕರು, ಅಕ್ಷರದೀಕ್ಷೆ ಪಡೆದವರು, ಪ್ರಜ್ಞಾವಂತರು ಮತ್ತು ಪ್ರತಿಭಾವಂತರು ಸಂಘಟನೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡರೆ, ಸಂಘಟನೆ ಶಕ್ತಿಯಾಗಿ, ಅದೇ ಮುಂದೆ ರಾಜಕೀಯ ಶಕ್ತಿಯಾಗಿ ರೂಪುಗೊಳ್ಳಬಹುದು. ಹೊರಗಿನವರು ಬಂದು ಎಚ್ಚರಿಸಲು ಸಾಧ್ಯವಿಲ್ಲ. ತಾನೆ ಜಾಗೃತವಾಗಬೇಕು. ಸಂಘಟನೆಯ ಮಹತ್ವವನ್ನು ತಿಳಿಯಬೇಕು. ಅಜ್ಞಾನ, ಅನಕ್ಷರತೆ, ಅಂಧಾನುಕರಣೆಗಳಿಂದ ಸಮುದಾಯ ಹೊರಬರಬೇಕು. ಇದಕ್ಕೆ ಶಿಕ್ಷಣವೆ ಮದ್ದು. ಪ್ರಗತಿಪರವಾಗಿ ಆಲೋಚಿಸಲು, ವೈಚಾರಿಕವಾಗಿ ಚಿಂತಿಸಲು ಪ್ರಾಶಸ್ತ್ಯವನ್ನು ನೀಡಬೇಕು. ಈ ಸಮುದಾಯದಲ್ಲಿ ಒಬ್ಬ ಸಮರ್ಥನಾದ ನಾಯಕ ಮೂಡಿ ಬರಬೇಕು, ಪರಿಸ್ಥಿತಿಯೇ ವ್ಯಕ್ತಿಯನ್ನು ನಿರ್ಮಿಸುತ್ತದೆ. ತನಗೆ ಬೇಕಾದಂತೆ ಪರಿವರ್ತಿಸಿಕೊಳ್ಳುತ್ತದೆ. ಹೀಗಾಗಿ ವಿದ್ಯಾವಂತರು ಪ್ರಗತಿಪರ ವಿಚಾರಧಾರೆಯ ಯುವಕರು ಮುಂದೆ ಬಂದು, ಸಂಘಟನೆಗೆ ಶ್ರೀಕಾರ ಹಾಕಬೇಕು. ಹಿರಿಯರು ಸಂಘಟನೆಯನ್ನು ಬೆಂಬಲಿಸಬೇಕು. ಸಮುದಾಯದ ಸಂಘಟನೆ ಬಲಾಢ್ಯವಾದರೆ ರಾಜಕೀಯ ಪಕ್ಷಗಳು ಎಚ್ಚೆತ್ತುಕೊಳ್ಳುತ್ತವೆ. ಸಮುದಾಯದ ಹಿತಾಸಕ್ತಿ ಕಾಪಾಡಲು ಮುಂದಾಗುತ್ತಿವೆ. ಈಗ ಯುವ ಜನಾಂಗ ಜಾಗೃತಗೊಂಡಿರುವುದನ್ನು ನೋಡಿದರೆ ಭವಿಷ್ಯ ಆಶಾದಾಯಕವಾಗಿದೆ.

ಚೆನ್ನದಾಸರ ಸಮುದಾಯವು ಚೆದುರಿ ಹೋಗಿರುವ ಕಡಿಮೆ ಜನಸಂಖ್ಯೆಯನ್ನು ಹೊಂದಿದ ಸಮುದಾಯವಾಗಿದೆ. ನಿರುದ್ಯೋಗ, ಬಡತನಗಳಿಂದಾಗಿ ಸಂಘಟನೆಯಾಗಿ ಬೆಳೆದು ಬಲಾಢ್ಯವಾಗಿಲ್ಲ. ಸಮಾಜದಲ್ಲಿ ಒಂದು ರಾಜಕೀಯ ಶಕ್ತಿಯಾಗಿ ತನ್ನನ್ನು ಗುರುತಿಸಿಕೊಂಡಿಲ್ಲ. ದೈನಂದಿನ ಬದುಕಿಗಾಗಿ ಪರದಾಡುವ, ನಿಲ್ಲಲು ಸೂರಿಲ್ಲದ ಜನಾಂಗವಿದು. ಹೊಟ್ಟೆಪಾಡಿಗಾಗಿ ಪರದಾಡುವಾಗ ರಾಜಕೀಯ ಸಂಘಟನೆ ತುಂಬ ದುಸ್ತರವಾಗುತ್ತದೆ. ಚೆಲ್ಲಾಪಿಲ್ಲಿಯಾಗಿರುವ

ಜನಸಮುದಾಯದಲ್ಲಿ ನಿಕಟ ಸಂಪರ್ಕವೂ ಇಲ್ಲ. ಒಂದು ಸಂಘಟನೆಯಾಗಿ ನಿಂತು, ರಾಜಕೀಯವಾಗಿ ಬಲಾಢ್ಯ ಶಕ್ತಿಯಾಗಿ ಬೆಳೆಯಲು ಸಾಧ್ಯವಾಗಿಲ್ಲ. ಇತ್ತೀಚೆಗೆ ಈ ಸಮುದಾಯದಲ್ಲಿ ರಾಜಕೀಯ ಮಹತ್ವದ ತಿಳವಳಿಕೆ ಬರುತ್ತಿದೆ. ತಾವು ಒಂದು ಶಕ್ತಿಯಾಗಿ ರೂಪುಗೊಳ್ಳಬೇಕೆಂಬ ಹಂಬಲ ಬಲವತ್ತರವಾಗಿದೆ.

*****

ಕೊನೆ ಟಿಪ್ಪಣೆಗಳು :

----

೧. ಜವರೇಗೌಡ. ದೇ.– 'ಜಾನಪದ ಅಧ್ಯಯನ, ಹಬ್ಬಗಳು', ಪುಟ–೩೯೩, ೧೯೮೬

೨. ಹಿಮ್ಮಡಿ ಯಲ್ಲಪ್ಪ.–'ಚೆನ್ನದಾಸರ', ಪುಟ–೯೮, ೨೦೦೮

೩. ಜವರೇಗೌಡ ದೇ.–ಜಾನಪದ ಅಧ್ಯಯನ, ಪುಟ–೩೯೮, ೧೯೮೬

೪. ಅದೇ, ಪುಟ–೨೬೮

೫. ಅದೇ, ಪುಟ–೩೭೦

೬. ಗುಂಜೆಟ್ಟಿ ಬಿ.ವ್ಹಿ.– 'ಜಾನಪದ ಸಾಹಿತ್ಯ ದರ್ಶನ', ಪುಟ–೯೨, ೧೯೮೬

೭. ಭೈರಪ್ಪ. ಕೆ.–'ಸಮಗ್ರ ಭಾರತೀಯ ಸಮಾಜ', ಪುಟ–೩೦೨, ೨೦೧೦

೮. ಅದೇ, ಪುಟ–೩೦೩

೯. ಅದೇ, ಪುಟ–೩೨೭

೧೦. ಗುಂಜೆಟ್ಟಿ ಬಿ.ವಿ.– 'ಜಾನಪದ ಸಾಹಿತ್ಯ ದರ್ಶನ', ಭಾಗ–೬, ಪುಟ–೯೪, ೧೯೮೬

೧೧. ಅಯ್ಯರ್ ಅನಂತಕೃಷ್ಣ.–'ದಿ ಮೈಸೂರ್ ಟ್ರೈಬ್ಸ್ ಆ್ಯಂಡ್ ಕಾಸ್ಟ್ಸ್',
(ಮೈಸೂರು ವಿಶ್ವವಿದ್ಯಾಲಯ), ಸಂ–೫ ೧೯೯೮

೧೨. ಸಿಂಗ್ ಕೆ.ಎಸ್.– 'ದಿ ಶೆಡ್ಯೂಲ್ಡ್ ಕಾಸ್ಟ್', ಪೀಪಲ್ ಆಫ್ ಇಂಡಿಯಾ ನ್ಯಾಷನಲ್
ಸೀರಿಜ್, ಸಂ–೨, ೧೯೯೩

೧೩. ಗುಂಜೆಟ್ಟಿ ಬಿ.ವ್ಹಿ.– 'ಜಾನಪದ ಸಾಹಿತ್ಯ ದರ್ಶನ', ಭಾಗ–೬, ಪುಟ–೯೩, ೧೯೮೬

೧೪. ಹಿಮ್ಮಡಿ ಯಲ್ಲಪ್ಪ.– 'ಚೆನ್ನದಾಸರ', ಪುಟ–೧೦೬, ೨೦೦೮

೧೫. ಅದೇ, ಪುಟ–೧೦೯

೧೬. ಅದೇ, ಪುಟ–೧೦೯

೧೭. ಲಕ್ಕಪಗೌಡ 'ಜಾನಪದ ಕೈಪಿಡಿ, ಪುಟ–೪೯೦, ೧೯೯೭

೧೮. ಹಿಮ್ಮಡಿ ಯಲ್ಲಪ್ಪ.– 'ಚೆನ್ನದಾಸರ', ಪುಟ–೯೮, ೨೦೦೮

೧೯. ಗೊಳಸಂಗಿ ಅರ್ಜುನ.– 'ದಲಿತ ಲೋಕದ ಶೊಧ: ಜಾನಪದೀಯ ಅಧ್ಯಯನ',

ಪುಟ–೩೭. ೧೯೯೮

೨೦. ಗುಂಜೆಟ್ಟಿ ಬಿ.ಫ್ಹಿ.– 'ಜಾನಪದ ಸಾಹಿತ್ಯ ದರ್ಶನ', ಪುಟ:೯೫, ೧೯೮೬

೨೧. ಗೊಳಸಂಗಿ ಅರ್ಜುನ.– 'ದಲಿತ ಲೋಕದ ಶೋಧ : ಜಾನಪದೀಯ ಅಧ್ಯಯನ'

ಪುಟ–೩೭, ೧೯೯೮

೨೧. ಗುಂಜೆಟ್ಟಿ ಬಿ.ಫ್ಹಿ.– 'ಜಾನಪದ ಸಾಹಿತ್ಯ ದರ್ಶನ', ಭಾಗ ; ೬, ಪುಟ–೯೬, ೧೯೮೬

೨೨. ಥರ್ಸ್ಟನ್–'ಎಥ್ನೋಗ್ರಾಫಿಕ್ ನೋಟ್ಸ್ ಆನ್ ಸೌಥರ್ನ ಇಂಡಿಯಾ, ಕಾಸ್ಟ್ಸ್ ಆ್ಯಂಡ್
ಟ್ರೈಬ್ಸ್ ಆಫ್ ಸೌದರ್ನ್ ಇಂಡಿಯಾ', ಸಂ–೦೩, ೧೯೦೬

೨೩. ಅಯ್ಯರ್ ಅನಂತಕೃಷ್ಣ.–'ದಿ ಮೈಸೂರ್ ಟ್ರೈಬ್ಸ್ ಆ್ಯಂಡ್ ಕಾಸ್ಟ್ಸ್', ಸಂ–೦೫, ೧೯೯೮

೨೪. ಹಸನ್ ಸಯ್ಯದ ಸಿರಾಜ್ ಉಲ್.– 'ದಿ ಕಾಸ್ಟ್ಸ್ ಆ್ಯಂಡ್ ಟ್ರೈಬ್ಸ್ ಆಫ್

ಎಚ್.ಇ.ಎಚ್. ನಿಜಾಮ್ಸ್ ಡೊಮಿನಿಯನ್ಸ್', ೧೯೯೮

೨೫. ಗುಂಜೆಟ್ಟಿ ಬಿ.ಫ್ಹಿ.– 'ಜಾನಪದ ಸಾಹಿತ್ಯ ದರ್ಶನ', ಭಾಗ–೬, ಪುಟ–೯೬,೧೯೮೬

೨೬. ಗೊಳಸಂಗಿ ಅರ್ಜುನ.–'ದಲಿತ ಲೋಕದ ಶೋಧ; ಜಾನಪದೀಯ ಅಧ್ಯಯನ',

ಪುಟ–೩೮, ೧೯೯೮

೨೭. ಪ್ರಭಾಕರ ಎ.ಎಸ್. ಹೆಳವರು, ಪುಟ–೩, ೨೦೧೦

೨೮. ಮೇತ್ರಿ ಕೆ. ಎಂ.–'ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯ ಸಂಪಾದಕರಾಗಿ

ಬರೆದ 'ಪ್ರಸ್ತಾವನೆ'ಯಲ್ಲಿ, ಪುಟ–೨೨, ೨೦೦೦

೨೯. ಹಿಮ್ಮಡಿ ಯಲ್ಲಪ್ಪ, 'ಚೆನ್ನದಾಸರ', ಪುಟ–೧೧೨, ೨೦೦೮

೩೦. ಅದೇ, ಪುಟ–೧೨೫

೩೧. ಅದೇ, ಪುಟ–೧೧೩

೩೨. ಅದೇ, ಪುಟ–೧೧೬

೩೩. ಅದೇ, ಪುಟ–೧೧೨

೩೪. ಅದೇ. ಪುಟ–೧೧೫

೩೫. ಅದೇ. ಪುಟ–೧೧೬

೩೬. ಅದೇ, ಪುಟ–೧೧೨

೩೭. ಅದೇ, ಪುಟ–೧೨೬

೩೮. ಅದೇ, ಪುಟ–೧೧

೩೯. ಸುಭಾಸ ಕೃಷ್ಣಪ್ಪ ದಾಸರ–ವಯಸ್ಸು–೩೦, ಬಿ.ಎ. ಪದವಿ ಪಡೆದಿದ್ದಾರೆ

೪೦. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ರಾಯಬಾಗನಲ್ಲಿದ್ದಾರೆ

೪೧. ಶಂಕರರಾವ್ ಚ.ನ.– 'ಭಾರತೀಯ ಸಮಾಜ', ಪುಟ–೩೮೫ ೧೯೯೭

೪೨. ಸಿದ್ಧರಾಮಯ್ಯ ಎಸ್.ಜಿ.– 'ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯ 'ಅಧ್ಯಕ್ಷರ ಮಾತು'ಗಳಲ್ಲಿವೆ, ೨೦೦೪

೪೩. ಹಿಮ್ಮಡಿ ಯಲ್ಲಪ್ಪ– ಚೆನ್ನದಾಸರ, ಪುಟ–೧೩೦, ೨೦೦೮

೪೪. ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆಯ 'ಅಧ್ಯಕ್ಷರ ಮಾತು'ಗಳಲ್ಲಿ ಪ್ರಸ್ತಾಪಿಸಲಾಗಿದೆ. ೨೦೦೪

೪೫. ಹಿಮ್ಮಡಿ ಯಲ್ಲಪ್ಪ– 'ಚೆನ್ನದಾಸರ', ಪುಟ–೭೩, ೨೦೦೮

ಅಧ್ಯಾಯ-ಐದು

ಪ್ರಚಲಿತ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು

೫.೦. ಜಾತಿ ಪ್ರಮಾಣ ಪತ್ರ

೫.೧. ನಾಗರಿಕ ಸೌಲಭ್ಯಗಳು

೫.೨. ಶೈಕ್ಷಣಿಕ ಸೌಲಭ್ಯಗಳು

೫.೩. ವಿಶೇಷ ಸಾಲ ಸೌಲಭ್ಯಗಳು

೫.೪. ಕೃಷಿಗಾಗಿ ಭೂಮಿ ಮತ್ತು ಕೂಲಿಗೆ ತಕ್ಕ ಸಂಬಳ

೫.೫. ಮಹಿಳೆಯರಿಗೆ, ಯುವಕರಿಗೆ ವಿವಿಧ ರೀತಿಯ ಉದ್ಯೋಗ ತರಬೇತಿ

೫.೬. ಸಂಘಟನೆ ರಾಜಕೀಯ ಅರಿವು ಮತ್ತು ಪ್ರತ್ಯೇಕ ಮೀಸಲಾತಿ

೫.೭. ಪರಿಹಾರೋಪಾಯಗಳು

ಅಧ್ಯಾಯ–ಐದು

ಪ್ರಚಲಿತ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು

ಅಲೆಮಾರಿ ಸಮುದಾಯಗಳು ತಮ್ಮ ಅಲೆಮಾರಿತನದ ಕಾರಣಕ್ಕಾಗಿ ನಿಶ್ಚಿತ ನೆಲೆಯನ್ನು ಕಂಡುಕೊಂಡಿಲ್ಲ. ಪರಂಪರಾಗತವಾಗಿ ಬಂದ ಅಲೆಮಾರಿ ಬದುಕೇ ಇವರ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ತಿರುಗಾಟದಿಂದಾಗಿ ಶಿಕ್ಷಣದಿಂದ ವಂಚಿತರಾದರು. ಅನಕ್ಷರತೆ ಪ್ರಗತಿಪರ ನಿಲುವನ್ನು ಹೊಂದಲು ಸಾಧ್ಯವಾಗಲಿಲ್ಲ. ನಿರಕ್ಷರಿಗಳಿಗೆ ಉದ್ಯೋಗಾವಕಾಶಗಳು ಲಭ್ಯವಾಗುವುದಿಲ್ಲ. ಒಂದೆಡೆ ನೆಲೆಸದಿರುವುದರಿಂದ, ನಿಶ್ಚಿತ ಸ್ಥಳವಿಲ್ಲದಿರುವುದರಿಂದ ನಾಗರಿಕ ಸೌಲಭ್ಯಗಳು ಲಭಿಸಲಿಲ್ಲ. ಅಕ್ಷರ ವಂಚಿತರಾಗಿರುವುದರಿಂದ ಸರಕಾರಿ ಸೌಲಭ್ಯಗಳ ತಿಳುವಳಿಕೆ ಇಲ್ಲವಾಗಿದೆ. ಹೀಗಾಗಿ ಹತ್ತು ಹಲವು ಸಮಸ್ಯೆಗಳಿಗೆ ಆ ಸಮುದಾಯವೇ ನೇರ ಕಾರಣವಾದರೆ, ಇನ್ನೊಂದೆಡೆ ಅವರ ಮುಗ್ಧತೆಯನ್ನು ದುರುಪಯೋಗಪಡಿಸಿಕೊಂಡ ಇತರ ಸಮುದಾಯಗಳು ಅಷ್ಟೇ ಹೊಣೆಯಾಗಿವೆ. ಚಾತುರ್ ವರ್ಣ ವ್ಯವಸ್ಥೆ ಈ ಸಮುದಾಯಗಳ ಸಮಸ್ಯೆಗಳ ಉಲ್ಬಣಕ್ಕೆ ತನ್ನದೆಯಾದ ಕೊಡುಗೆ ನೀಡಿದೆ. ಇಂಥ ಸಮಸ್ಯೆಗಳ ಸುಳಿಗೆ ಸಿಲುಕಿರುವ ಹಲವು ಸಮುದಾಯಗಳಲ್ಲಿ ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯವೂ ಒಂದಾಗಿದೆ.

ಚೆನ್ನದಾಸರ ಸಮುದಾಯವು ಅಲೆಮಾರಿತನದಿಂದ ಅರೆ ಅಲೆಮಾರಿಯಾಗಿ ಮುಂದೆ ನಿಶ್ಚಿತ ನೆಲೆಗಳಲ್ಲಿ ವಾಸಿಸುತ್ತಿದ್ದಂತೆ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಯ್ತು. ಶೈಕ್ಷಣಿಕ ತಿಳುವಳಿಕೆ ಮೂಡುತ್ತಿದ್ದಂತೆ ಜ್ವಲಂತ ಸಮಸ್ಯೆಗಳು ಸಮುದಾಯವನ್ನು ಕಾಡಿದವು. ತಾಂತ್ರಿಕ ಸಮಸ್ಯೆಗಳು ಅಭಿವೃದ್ಧಿಯನ್ನು ತಡೆಗಟ್ಟಿದವು. ಅವುಗಳನ್ನು ಒಂದೊಂದಾಗಿ ಪರಿಶೀಲಿಸಬಹುದು.

೫.೦. ಜಾತಿ ಪ್ರಮಾಣ ಪತ್ರ

ವಿದ್ಯಾರ್ಥಿ ವೇತನ ಮತ್ತು ಉದ್ಯೋಗವಕಾಶಕ್ಕೆ ಜಾತಿಯನ್ನು ಸರಿಯಾಗಿ ದಾಖಲಿಸದಿರುವುದು ಪ್ರಮುಖ ಸಮಸ್ಯೆಯಾಗಿದೆ. ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದಾಗಿ ಮತ್ತು

ಜೀವನ ನಿರ್ವಹಣೆಗಾಗಿ ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡಿರುವ ಪರಿಣಾಮವಾಗಿ ಈ ಜಾತಿಯ ಹೆಸರು ಏಕರೀತಿಯಾಗಿಲ್ಲ. ಶಾಲೆಯ ದಾಖಲೆಗಳಲ್ಲಿಯೂ ಕುಟುಂಬದ ಹಿರಿಯರು ಖುದ್ದಾಗಿ ಹೋಗಿ ದಾಖಲಿಸಿಲ್ಲ. ಶಿಕ್ಷಕರು ಹುಡುಗರು ಹೇಳಿದಂತೆ ಬರೆದುಕೊಂಡರು. ಗಣತಿ ಸಂದರ್ಭದಲ್ಲಿಯೂ ಜನಗಣತಿಯವರು ಬೇರೆಯವರು ಹೇಳಿದ್ದನ್ನು ಕೇಳಿ ಬರೆದುಕೊಂಡರು. ಒಂದೇ ಸಮುದಾಯದವರಾದರೂ ವಿಭಿನ್ನ ವೃತ್ತಿಯ ಪರ್ಯಾಯ ನಾಮಗಳನ್ನು ಬೇರೆ ಬೇರೆ ಜಾತಿಗಳೆಂದು ತಪ್ಪು ತಿಳುವಳಿಕೆಯುಂಟಾಗಿ ಸೌಲಭ್ಯಗಳಿಂದ ವಂಚಿತಗೊಳ್ಳಬೇಕಾಯಿತು. ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಟ್ಟಿದ್ದರೂ, ಅವರ ಬಳಿಗಳಲ್ಲಿ (ಬೆಡಗು) ಸಾಮ್ಯತೆಯಿದೆ. ಜನಾಂಗಿಯ ಅಧ್ಯಯನದ ವಿಧಾನದಿಂದಲೂ ಇವರೆಲ್ಲ ಒಂದೇ ಎಂಬುದು ಸಾಬೀತಾಗುತ್ತದೆ.

ಹೀಗಿದ್ದರೂ, ಇಂದು ಈ ಸಮುದಾಯವನ್ನು ದೊಂಬಿದಾಸರ, ದಂಗದಾಸರ, ದಂಡಿಗೆದಾಸರ, ಚಕ್ರವಾದ್ಯದಾಸರ, ಗೊಲ್ಲದಾಸರ, ದಾಸರು, ದಾಸರಿ, ದಾಸ, ದಾಸಯ್ಯ ಎಂದು ಕರೆಯಲಾಗುತ್ತದೆ. ಇದರಿಂದಾಗಿ ಮೀಸಲಾತಿ ಸೌಲಭ್ಯ ಇವರಿಗೆ ಸಿಗುತ್ತಿಲ್ಲ. ಪರಿಶಿಷ್ಟ ಜಾತಿಯ ಸವಲತ್ತುಗಳನ್ನು ಹಲವೆಡೆ ತಿರಸ್ಕರಿಸಲಾರಂಭಿಸಿರುವುದರಿಂದ ಸಮುದಾಯದ ಅಭಿವೃದ್ಧಿಗೆ ಹಿನ್ನೆಡೆಯುಂಟಾಗಿದೆ. ಇದನ್ನು ಸರಿಪಡಿಸುವ ಏಕಮಾತ್ರ ದಾರಿಯೆಂದರೆ; ಬೇರೆ ಬೇರೆ ಹೆಸರುಗಳನ್ನು ಕರೆಯುತ್ತಿರುವ ಇವರಲ್ಲಿ ಪ್ರತ್ಯೇಕ ಜಾತಿಗಳಿರದೆ, ಚೆನ್ನದಾಸರ ಸಮುದಾಯದ ಪರ್ಯಾಯ ನಾಮಗಳಾಗಿವೆಯೆಂದು ತಿದ್ದುಪಡಿ ಮಾಡಿ, ಸರಕಾರ, ಸಮಾಜ ಕಲ್ಯಾಣ ಇಲಾಖೆ ಆಜ್ಞೆ ಜಾರಿಗೊಳಿಸಬೇಕು. ಹೀಗೆ ಮಾಡಿದರೆ ಶೋಷಿತ ಸಮುದಾಯಕ್ಕೆ ಸಿಗಬೇಕಾದ ನ್ಯಾಯವಾಗಿ ಸಲ್ಲುವ ಅವಕಾಶಗಳು ಲಭಿಸುತ್ತವೆ. ಜನಾಂಗ ಅಭಿವೃದ್ಧಿಯಾಗಲು, ಮುಖ್ಯ ಪ್ರವಾಹದಲ್ಲಿ ಸೇರ್ಪಡೆಗೊಳ್ಳಲು ಸಾಧ್ಯವಾಗುತ್ತದೆ.

"ಅಲೆಮಾರಿಗಳ ಗುರುತಿಸುವಿಕೆಯ ಕಗ್ಗಂಟನ್ನು ಬಿಡಿಸಿ ಈ ಸಮುದಾಯಗಳಿಗೆ ಸಂವಿಧಾನಬದ್ಧ ನ್ಯಾಯ ಒದಗಿಸುವ ಕಾರ್ಯ ಸರಕಾರದಿಂದ ಇದುವರೆಗೂ ನಡೆಯದೆ ಇರುವುದು ವಿಪರ್ಯಾಸವೇ ಸರಿ. ಈ ಕುರಿತು ನ್ಯಾಯ ಒದಗಿಸಬೇಕಾದ ಸರಕಾರಗಳು, ಆಯೋಗಗಳು, ಸಮುದಾಯಗಳ ಸಂಘಟನೆಗಳು, ಸಂಶೋಧನಾ ಸಂಸ್ಥೆಗಳು ಮಾತಾಡದೆ, ಕುರುಡಾಗದೆ, ಕಿವುಡಾಗದೆ, ಜಾತಿ ಆಧಾರಿತ ಮೀಸಲಾತಿ ಅನುಸರಿಸುವ ಭಾರತ ಸರಕಾರ ಮತ್ತು ರಾಜ್ಯ ಸರಕಾರಗಳು ನಿರ್ಲಕ್ಷಿತ ಅಲೆಮಾರಿ ಸಮುದಾಯಗಳಿಗೆ ಕಡ್ಡಾಯವಾಗಿ ಮೀಸಲಾತಿ ಪಟ್ಟಿಯಲ್ಲಿ ಸ್ಥಾನ ಕಲ್ಪಿಸಬೇಕು. ಇದು ಸಾಧ್ಯವಾಗದೆ ಇದ್ದಲ್ಲಿ ಇಂದಿನ ಜಾತಿ ಆಧಾರಿತ ಮೀಸಲಾತಿಯನ್ನು ತಕ್ಷಣವೇ ಕೈಬಿಟ್ಟು ಭಾರತದ ಅಲೆಮಾರಿಗಳ ಅಭಿವೃದ್ಧಿಗಾಗಿ ಬೇರೆ ಕಾರ್ಯ ಯೋಜನೆಗಳನ್ನು

ಮತ್ತು ಮಾರ್ಗಗಳನ್ನು ಅನುಸರಿಸುವುದು ಸೂಕ್ತ. ಇಂದಿನ ಪರಿಶಿಷ್ಟ ಮತ್ತು ಹಿಂದುಳಿದವರ ಮೀಸಲಾತಿಯ ಪಟ್ಟಿಯು ಅಸಮಾನತೆಯಿಂದ ಕೂಡಿರುವುದು. ಹೀಗಾಗಿ ಮೀಸಲಾತಿಯು ಆಯಾಪಟ್ಟಿಯಲ್ಲಿರುವ ಬಲಿಷ್ಠರ ಪಾಲಾಗಿ, ಬಲಹೀನರು ಅಂಚಿಗೆ ತಳ್ಳಲ್ಪಟ್ಟಿರುವರು, ಪ್ರತಿನಿತ್ಯ ಸುನಾಮಿಗೂ ಮಿಗಿಲಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ."[7] ಎಂಬ ಡಾ. ಕೆ.ಎಂ. ಮೇತ್ರಿಯವರ ಮಾತುಗಳು ಮೌಲಿಕವಾಗಿವೆ. ಸರಕಾರ ಸಕಾಲಕ್ಕೆ ಎಚ್ಚೆತ್ತುಕೊಂಡು ಎಲ್ಲ ಗೊಂದಲಗಳಿಗೆ ಸೂಕ್ತ ಪರಿಹಾರ ಒದಗಿಸಬೇಕು. ಚೆನ್ನದಾಸರ ಸಮುದಾಯಕ್ಕೆ ಮೀಸಲಾತಿ ಸೌಲಭ್ಯ ಸಲ್ಲುವಂತಾಗಬೇಕು. ಇದರಿಂದ ಸಮುದಾಯದ ಪ್ರಗತಿಯಾಗುತ್ತದೆ.

ವಿಧವಾ ವೇತನ, ವೃದ್ಧಾಪ್ಯವೇತನ ಮತ್ತು ಕಲಾವಿದರ ಮಾಸಾಶನಗಳಂತಹ ಸರಕಾರಿ ಸೌಲಭ್ಯಗಳಿದ್ದರೂ ಚೆನ್ನದಾಸರ ಸಮುದಾಯಕ್ಕೆ ಅವುಗಳ ಪರಿಚಯವಿಲ್ಲ. ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ, ಸರಕಾರಿ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಸಮಾಜಕಲ್ಯಾಣ ಇಲಾಖೆ, ತಹಶೀಲ್ದಾರರ ಕಾರ್ಯಾಲಯ, ಅಂಚೆಕಛೇರಿ ಮೊದಲಾದ ಸಂಬಂಧಿಸಿದ ಇಲಾಖೆಗಳಿಗೆ ಅಲೆದಾಡಿ, ಅವರು ಕೇಳುವ ಅಗತ್ಯವಾದ ದಾಖಲೆ ಪತ್ರಗಳನ್ನು ಒದಗಿಸಲು ಈ ಸಮುದಾಯಕ್ಕೆ ಸಾಧ್ಯವಾಗುತ್ತಿಲ್ಲ. ತಮ್ಮ ದೈನಂದಿನ ಬದುಕನ್ನು ಕಟ್ಟಿಕೊಳ್ಳುವ ಹೋರಾಟದಲ್ಲಿ ಬಸವಳಿದು ಹೋಗುತ್ತಾರೆ. ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನ ಇತ್ಯಾದಿ ಸರಕಾರಿ ಸವಲತ್ತು ಎರಡು ವಾರಗಳಲ್ಲಿ ಅಥವಾ ತಿಂಗಳೊಪ್ಪತ್ತಿನಲ್ಲಿ ಲಭ್ಯವಾಗುವುದಿಲ್ಲ. ಮೂರ್ನಾಲ್ಕು ತಿಂಗಳು ಅಥವಾ ಆರಾರು ತಿಂಗಳು ಕಾಯುವ ತಾಳ್ಮೆ ಈ ಜನಾಂಗಕ್ಕಿಲ್ಲ. ಅಗತ್ಯ ದಾಖಲೆ ಸಂಗ್ರಹದಲ್ಲಿ ಹೈರಾಣಾಗಿ ಹೋದ ಇವರು ಮುಂದಿನ ಹಂತದ ಫೀ ಕಟ್ಟುವುದು, ಝೆರಾಕ್ಸ್ ಮಾಡಿಸುವುದು ಇತ್ಯಾದಿ ಸಣ್ಣ-ಪುಟ್ಟ ಖರ್ಚುಗಳು ಇವರಿಗೆ ಭಾರವೆನಿಸುತ್ತವೆ. ಆರಂಭದ ಉತ್ಸಾಹ ಕೊನೆಯವರೆಗೆ ಉಳಿಯುವುದಿಲ್ಲ. ಕಛೇರಿಯಿಂದ ಕಛೇರಿಗಳಿಗೆ ತಿರುಗಾಡುವುದು ಇವರಿಗೆ ಸಾಧ್ಯವಾಗುತ್ತಿಲ್ಲ.

'ಕಲಾವಿದರ ಮಾಸಾಶನ'ದಲ್ಲಿಯೂ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮಾಸಾಶನಕ್ಕಾಗಿ ಅರ್ಜಿ ಸಲ್ಲಿಸಿದವರನ್ನು ಮಾತ್ರ ಪರಿಗಣಿಸಲಾಗುತ್ತದೆ. ಇಂತಹ ಇಲಾಖೆಯಿದೆ, ಅದು ಕಲಾವಿದರಿಗೆ ಮಾಸಾಶನ ನೀಡುತ್ತದೆಯೆಂಬುದೆ ಈ ಸಮುದಾಯಕ್ಕೆ ತಿಳಿದಿಲ್ಲ. ಚೆನ್ನದಾಸರ ಸಮುದಾಯದಲ್ಲಿ ಕಲಾವಿದರಿದ್ದರೂ, ಮಾಸಾಶನ ಪಡೆಯುವ ಅರ್ಹತೆಗಳಿದ್ದಾಗ್ಯೂ ಇವರಿಗೆ ಸೌಲಭ್ಯ ದೊರೆತಿಲ್ಲ. ಇದಕ್ಕೆ ಪರಿಹಾರವೆಂದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ತನ್ನ ಕಾರ್ಯಾಲಯಕ್ಕೆ ಬಂದು ಅರ್ಜಿ ಸಲ್ಲಿಸುವ ವಿಧಾನವನ್ನು ಬದಲಿಸಿ, ತಾವೇ ಕಲಾವಿದರ ಸಮೀಕ್ಷೆ ಕೈಗೊಂಡು ಅವರ ಕಲೆಯ ಪ್ರದರ್ಶನಗಳನ್ನು ಖುದ್ದಾಗಿ ಕಂಡು, ಅರ್ಹ

ಕಲಾವಿದರಿಂದ ಅರ್ಜಿ ಸ್ವೀಕರಿಸಿ, ಇಲಾಖೆಯ ಎಲ್ಲ ನಿಯಮಗಳ ಪಾಲನೆ ಮಾಡಿ ಇಂತಹ ಸೌಲಭ್ಯ ವಂಚಿತ ಅರ್ಹ ಕಲಾವಿದರ ಶೋಷಣೆ ನಿಲ್ಲಿಸಿ, ಯೋಗ್ಯರಿಗೆ ಮಾಸಾಶನ ಲಭಿಸುವಂತೆ ಮಾಡಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಸಕ್ತಿ ವಹಿಸಿ, ಪ್ರಾಮಾಣಿಕವಾಗಿ ಪ್ರಯತ್ನಿಸಿದರೆ ಖಂಡಿತವಾಗಿಯೂ ಸಮಸ್ಯೆ ನಿವಾರಣೆಯಾಗುತ್ತದೆ.

೫.೧. ನಾಗರಿಕ ಸೌಲಭ್ಯಗಳು

ದೇಶಕ್ಕೆ ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದಿದ್ದರೂ ಈವರೆಗೆ ಮೂಲಭೂತ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಲು ಸಾಧ್ಯವಾಗಿಲ್ಲ. ಬೆಳಗಾವಿ ಜಿಲ್ಲೆಯಲ್ಲಿಯೂ ಈ ಕೊರತೆಗಳಿವೆ. ರಸ್ತೆ, ಕುಡಿಯುವ ನೀರು, ವಿದ್ಯುತ್ ಸರಬರಾಜು ಇತ್ಯಾದಿ ಅನಾನುಕೂಲತೆಗಳಿವೆ. ಕೇಂದ್ರ ಸರಕಾರ, ರಾಜ್ಯ ಸರಕಾರಗಳು, ಹತ್ತಾರು ಯೋಜನೆಗಳನ್ನು ಹಮ್ಮಿಕೊಂಡಿವೆ. ನಿರ್ಮಲ ಗ್ರಾಮ ಯೋಜನೆ, ಪ್ರಧಾನಿ ರೋಜಗಾರ್ ಯೋಜನೆ, ಭಾಗ್ಯಜ್ಯೋತಿ ಯೋಜನೆ, ಕುಟೀರ ಯೋಜನೆ, ಅಂತ್ಯೋದಯ ಯೋಜನೆ, ಸ್ವರ್ಣ ಗ್ರಾಮ ಯೋಜನೆ ಮುಂತಾದ ಹಲವಾರು ಯೋಜನೆಗಳಿವೆ. ಸರಕಾರದ ಸಂಕಲ್ಪಗಳು ಮಹೋನ್ನತವಾಗಿದ್ದರೂ ಅವುಗಳ ಅನುಷ್ಠಾನ ಸಮರ್ಪಕವಾಗಿಲ್ಲ. ಅಧಿಕಾರಿಗಳಲ್ಲಿ ಜಡತ್ವ ಮನೆ ಮಾಡಿದೆ. ಹೀಗಾಗಿ ಅಲೆಮಾರಿ ಸಮುದಾಯಕ್ಕೆ ನಾಗರಿಕ ಸೌಲಭ್ಯಗಳು ಸರಿಯಾಗಿ ದೊರೆಯುತ್ತಿಲ್ಲ.

ಹಿಂದುಳಿದ ಸಮುದಾಯಕ್ಕೆ ಪ್ರತ್ಯೇಕ ಸ್ಮಶಾನಭೂಮಿ ಒದಗಿಸಬೇಕು. ಕುಡಿಯುವ ನೀರಿನ ಪೂರೈಕೆ ಮಾಡಬೇಕು. ಜನಾಂಗವು ಒಂದೆಡೆ ಸೇರಲು ಸಮುದಾಯ ಭವನ ನಿರ್ಮಿಸಬೇಕು. ಪ್ರತ್ಯೇಕ ಸಮುದಾಯ ಭವನವಾದರೆ ಈ ಜನಾಂಗದ ಧಾರ್ಮಿಕ, ಸಾಮಾಜಿಕ ಚಟುವಟಿಕೆ ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ. ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸಬೇಕು. ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಅಕ್ಷರಬಲ್ಲವರಿಗೆ ಗ್ರಂಥಾಲಯಗಳು ಜ್ಞಾನಪ್ರಸಾರದ ಕೇಂದ್ರಗಳಾಗಿ ಕಾರ್ಯನಿರ್ವಹಿಸಬಹುದು.

೫.೨. ಶೈಕ್ಷಣಿಕ ಸೌಲಭ್ಯಗಳು

ಈ ಸಮುದಾಯ ಅಸಂಘಟಿತವಾಗಿರುವುದರಿಂದ ಶಿಕ್ಷಣದ ಮಹತ್ವ ತಿಳಿದಿಲ್ಲ. ಶೈಕ್ಷಣಿಕ ತಿಳುವಳಿಕೆ ಇಲ್ಲದಿರುವುದರಿಂದ ಅದನ್ನು ಜಾಗೃತಿಗೊಳಿಸಬೇಕಿದೆ. ಬೆಳಗಾವಿ ಜಿಲ್ಲೆಯಲ್ಲಿ

ವಾಸಿಸುತ್ತಿರುವ ಚೆನ್ನದಾಸರ ೪ರಿಂದ ೫ ವರ್ಷದ ಒಳಗಿರುವ ವಯೋಮಾನದ ಮಕ್ಕಳು ಶೇಕಡಾ ೮.೭೦ರಷ್ಟು ಇದ್ದಾರೆ. ಈ ಶೇ.೮.೭೧ರಷ್ಟು ಮಕ್ಕಳನ್ನು ಬಿಟ್ಟರೆ ಶೇಕಡಾ ೯೧.೨೯ರಷ್ಟು ಮಕ್ಕಳು ಶಿಕ್ಷಣ ಪಡೆಯಲು ಯೋಗ್ಯರಾಗಿದ್ದಾರೆ. ಆದರೆ ಇವರಲ್ಲಿ ಶಾಲೆ ಕಲಿತವರ ಸಂಖ್ಯೆ ಕೇವಲ ಶೇ.೨೫.೨೩ರಷ್ಟು ಎಂಬುದು ಗಮನಾರ್ಹ. ಸಾಕ್ಷರತೆ ಪ್ರಮಾಣದಲ್ಲಿ ಕೇವಲ ಶೇ.೧೪.೨೩ರಷ್ಟು ಜನ ಎಸ್.ಎಸ್.ಎಲ್.ಸಿ. ನಂತರದ ಶಿಕ್ಷಣ ಪಡೆದಿದ್ದಾರೆ. ಅದರಲ್ಲಿ ಪುರುಷರೆ ಅಧಿಕವಾಗಿದ್ದು ಸ್ತ್ರೀಯರ ಸಾಕ್ಷರತೆ ಪ್ರಮಾಣ ತುಂಬ ಕಡಿಮೆಯಾಗಿದೆ. ರಾಜ್ಯದ ಸರಾಸರಿ ಶಿಕ್ಷಣ ಪ್ರಮಾಣಕ್ಕಿಂತಲೂ ಚೆನ್ನದಾಸರ ಸಮುದಾಯದ ಶಿಕ್ಷಣ ಮಟ್ಟ ತುಂಬ ಕೆಳಗೆ ಕುಸಿದುಹೋಗಿದೆ.

ಕಳೆದ ಹತ್ತು ವರುಷಗಳಿಗೆ ಹೋಲಿಸಿದರೆ ಈ ಸಮುದಾಯದ ಸಾಕ್ಷರತೆ ಪ್ರಮಾಣದಲ್ಲಿ ಸುಧಾರಣೆಯಾಗಿದೆ. ಮೆಟ್ರಿಕ್ ಪೂರ್ವದ ಸಾಕ್ಷರತಾ ಪ್ರಮಾಣ ಭರವಸೆದಾಯಕ ಆಗಿದ್ದರೂ ಮೆಟ್ರಿಕ್ ನಂತರದ ಪ್ರಮಾಣ ತೀರಾ ನಿರಾಶಾಜನಕವಾಗಿದೆ. ಚೆನ್ನದಾಸರ ಜಾತಿಪ್ರಮಾಣ ಪತ್ರದ ತೊಂದರೆಯಿಂದಾಗಿ ಶಾಲೆ–ಕಾಲೇಜುಗಳ ಶುಲ್ಕ ತುಂಬಲು ಸಾಧ್ಯವಾಗದೆ, ಶಿಕ್ಷಣವನ್ನು ಅರ್ಧಕ್ಕೆ ಸ್ಥಗಿತಗೊಳಿಸಿದವರ ಸಂಖ್ಯೆಯು ಅಧಿಕವಾಗಿದೆ. ಹೀಗಾಗಿ ಪದವಿಪೂರ್ವ ಶಿಕ್ಷಣದ (ಪಿ.ಯು.ಸಿ.) ನಂತರದ ವೃತ್ತಿಪರ ಕೋರ್ಸುಗಳಿಗೆ ಹೋಗಲು ಈ ಸಮುದಾಯದ ಮಕ್ಕಳಿಗೆ ಅಸಾಧ್ಯವಾಗಿ ಪರಿಣಮಿಸಿದೆ.

"ಸಮುದಾಯ ತನ್ನ ಪಾಲಿನ ಮೀಸಲಾತಿ ಸೌಲಭ್ಯಗಳನ್ನು ಪಡೆದು ವಿದ್ಯಾಭ್ಯಾಸ ನಡೆಸುವುದು ಅಸಾಧ್ಯದ ಮಾತಾಗಿದೆ. ಓದುವ ಆಸಕ್ತಿಯಿಂದ ಶಾಲಾ ಕಾಲೇಜು ಮತ್ತು ಸರಕಾರ ನಡೆಸುವ ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯಬೇಕಾದರೆ ಹೆಚ್ಚಿನ ಅಂಕಗಳನ್ನು ಪಡೆದು ಬಹುಸಂಖ್ಯಾತ ವಿದ್ಯಾರ್ಥಿಗಳ ಜೊತೆ ಸ್ಪರ್ಧೆಗೆ ಇಳಿದು ಸೀಟು ಗಿಟ್ಟಿಸಿಕೊಳ್ಳಬೇಕಾಗುತ್ತದೆ. ಇದು ಈ ಸಮುದಾಯದ ಮಕ್ಕಳಿಗೆ ಸಾಧ್ಯವೆ? ಬಹುಸಂಖ್ಯಾತ ಮತ್ತು ನೆಲೆ ನಿಂತಿರುವ ಪ್ರಬಲ ಕೋಮುಗಳ ನಡುವೆ ಇವರು ತಮ್ಮ ಸಾಮರ್ಥ್ಯ ಮತ್ತು ಪ್ರತಿಭೆಯನ್ನು ಪ್ರದರ್ಶಿಸಿ ಶಿಕ್ಷಣ ಪಡೆಯುವುದು ಕನಸಿನ ಮಾತಾಗಿದೆ. ಈ ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಪೂರಕವಾದ ವಿಶೇಷ ಅವಕಾಶಗಳು ಇಲ್ಲದ ಕಾರಣ ಶೈಕ್ಷಣಿಕವಾಗಿ ಹಿಂದುಳಿದಿದೆ"[1] ಎಂಬ ಮಾತು ಸಮಸ್ಯೆಯ ಮೇಲೆ ಬೆಳಕು ಚಲ್ಲುತ್ತದೆ.

ಶೈಕ್ಷಣಿಕ ಸೌಲಭ್ಯಗಳ ಕೊರತೆ ನೀಗಿಸಲೇಬೇಕೆಂದರೆ, ಚೆನ್ನದಾಸರ ಜನವಸತಿ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ಸ್ಥಾಪಿಸಬೇಕು. ಪೂರ್ವಪ್ರಾಥಮಿಕ ಮತ್ತು ಪ್ರಾಥಮಿಕ ಶಾಲೆಗಳನ್ನು ಆರಂಭಿಸಿ ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗಬೇಕು. ಚಿಕ್ಕಮಕ್ಕಳು ಭಿಕ್ಷಾಟನೆ ಇಲ್ಲವೆ ಕೂಲಿಕೆಲಸಕ್ಕೆ ಹೋಗುತ್ತವೆ. ಆದ್ದರಿಂದ ಶಿಕ್ಷಣದಿಂದ ವಂಚಿತಗೊಳ್ಳುತ್ತಿವೆ. ಬಾಲಕಾರ್ಮಿಕ

ಪದ್ಧತಿ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ದೊಡ್ಡವರಿಗೆ ಮತ್ತು ಶಾಲೆ ಕಲಿಯದಿರುವ ವಯಸ್ಕರಿಗಾಗಿ ರಾತ್ರಿ ಶಾಲೆಗಳನ್ನು ಸ್ಥಾಪಿಸಬೇಕು. ವಯಸ್ಕರಿಗೆ ಶಿಕ್ಷಣವನ್ನು ಕಲ್ಪಿಸುವುದರ ಮೂಲಕ ಸಾಕ್ಷರತೆ ಮೂಡಿಸಬೇಕಾಗಿದೆ. ಮೀಸಲಾತಿಯ ತೊಡಕನ್ನು ಸರಿಪಡಿಸಿದರೆ, ಅರ್ಧದಷ್ಟು ಸಮಸ್ಯೆಗಳಿಗೆ ಪರಿಹಾರ ಲಭಿಸುತ್ತದೆ.

೫.೩. ವಿಶೇಷ ಸಾಲ ಸೌಲಭ್ಯಗಳು

ಚೆನ್ನದಾಸರ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ, ಕೃಷಿ, ವ್ಯಾಪಾರ, ಗುತ್ತಿಗೆ, ವಾಣಿಜ್ಯ ಕ್ಷೇತ್ರದಲ್ಲಿ ಭಾಗವಹಿಸಬೇಕು. ಇದಕ್ಕೆ ತೊಡಗಿಸಲು ಬಂಡವಾಳ ಬೇಕು. ಈ ಸಮುದಾಯದ ಆರ್ಥಿಕ ಸ್ಥಿತಿಗತಿ ತೀರ ಶೋಚನಿಯವಾಗಿದೆ. ಕೃಷಿಗಾಗಿ ಕೃಷಿಪತ್ತಿನ ಸಹಕಾರಿ ಬ್ಯಾಂಕ್‌ಗಳು, ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಬೆಳೆಸಾಲದ ಸೌಲಭ್ಯ ದೊರೆಯಬೇಕು. ನೀರಾವರಿ ಸೌಕರ್ಯಗಳಾಗಿ ಬಾವಿ ತೋಡಿಸಲು, ಬೋರವೆಲ್ ಕೊರೆಸಲು, ಹೊಳೆಗಳಿಂದ ನೀರೆತ್ತಿ ತಮ್ಮ ಹೊಲಕ್ಕೆ ಸಾಗಿಸುವ ಪೈಪ್‌ಲೈನ್‌ಕ್ಕಾಗಿ ಬ್ಯಾಂಕ್‌ಗಳು ಸಾಲ ಕೊಡಬೇಕು. ಆದರೆ ರಹವಾಸಿ ಪ್ರಮಾಣ ಪತ್ರದ ಕೊರತೆ, ಪಡಿತರ ಚೀಟಿ ಸೌಲಭ್ಯಗಳಿಲ್ಲದೆ, ಸಕಾಲಕ್ಕೆ ಜಾಮೀನುದಾರರು ಸಿಗದೆ ವಿಶೇಷ ಸಾಲಗಳು ಲಭಿಸುತ್ತಿಲ್ಲ. ಬ್ಯಾಂಕಿನವರು ತಾಂತ್ರಿಕ ಕಾರಣಗಳನ್ನು ಮುಂದೆ ಮಾಡಿ ಈ ಜನಾಂಗಕ್ಕೆ ಸಾಲದ ಸೌಲಭ್ಯಗಳನ್ನು ನಿರಾಕರಿಸಿದ್ದಾರೆ. ಈ ತಾರತಮ್ಯ ತೊಲಗಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳಿರಲಿ, ಸಹಕಾರಿ ವಲಯದ ಬ್ಯಾಂಕ್‌ಗಳಿರಲಿ, ರಾಜ್ಯಸರಕಾರದ ಗ್ರಾಮೀಣ ಬ್ಯಾಂಕ್‌ಗಳಿರಲಿ, ಈ ಸಮುದಾಯಕ್ಕೆ ವಿಶೇಷ ಸಾಲ ಸೌಲಭ್ಯದ ಅನುಕೂಲತೆಗಳನ್ನು ಕಲ್ಪಿಸಿ ಆರ್ಥಿಕ ಪ್ರಗತಿಗೆ ಪೂರಕವಾಗಿ ಸ್ಪಂದಿಸಬೇಕು. ಶಹರಿ ರೋಜ್‌ಗಾರ್ ಯೋಜನೆ, ಪ್ರಧಾನಿ ರೋಜ್‌ಗಾರ್ ಯೋಜನೆ, ನೆಹರು ರೋಜ್‌ಗಾರ್ ಯೋಜನೆಗಳ ಅಡಿಯಲ್ಲಿ ರೂಪಿಸಿದ ಸೌಲಭ್ಯಗಳು ಚೆನ್ನದಾಸರ ಸಮುದಾಯಕ್ಕೆ ದೊರೆಯಬೇಕು.

೫.೪. ಕೃಷಿಗಾಗಿ ಭೂಮಿ ಮತ್ತು ಕೂಲಿಗೆ ತಕ್ಕ ಸಂಬಳ

ಭಿಕ್ಷಾವೃತ್ತಿಯಿಂದ ಕುಟುಂಬದ ನಿರ್ವಹಣೆ ಸಾಧ್ಯವಿಲ್ಲವೆಂಬುದನ್ನು ಮನಗಂಡಿರುವ ಚೆನ್ನದಾಸರ ಸಮುದಾಯವು ಕೂಲಿ, ಕೃಷಿಕೂಲಿ, ಕೃಷಿ ಚಟುವಟಿಕೆಗಳತ್ತ ಹೊರಳಿದೆ. ಕೂಲಿಯಿರಲಿ, ಕೃಷಿ ಕೂಲಿಯಿರಲಿ ತಕ್ಕ ಸಂಬಳ ಸಲ್ಲಬೇಕು. ದಲಿತ ಮತ್ತು ಕೆಳವರ್ಗದ ಈ ಸಮುದಾಯಕ್ಕೆ

ಕೂಲಿಯಲ್ಲೂ ಶೋಷಣೆಯಾಗುತ್ತದೆ. ಕೆಲಸಕ್ಕೆ ತಕ್ಕ ಸಂಬಳ ಲಭಿಸುತ್ತಿಲ್ಲ. ಜನಸಮುದಾಯ ಅಸಂಘಟಿತರಾಗಿರುವುದರಿಂದ ಪ್ರತಿಭಟಿಸುವುದಿಲ್ಲ. ಯಾರೊ ಒಬ್ಬಿಬ್ಬರು ತಾರತಮ್ಯವನ್ನು ಪ್ರಶ್ನಿಸಿದರೆ ಅವರು ಕೆಲಸ ಕಳೆದುಕೊಳ್ಳಬೇಕಾದ ಅಪಾಯವಿರುತ್ತದೆ. ಗುತ್ತಿಗೆದಾರರಲ್ಲಿ, ಫ್ಯಾಕ್ಟರಿಗಳಲ್ಲಿ, ಜಮೀನುಗಳಲ್ಲಿ ಕೆಲಸ ಮಾಡುವವರಿಗೆ ಈ ಬಿಸಿತಾಗಿದೆ. ಇದನ್ನು ಸರಿಪಡಿಸಬೇಕಾಗಿದೆ. ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಜಾರಿಗೊಳಿಸಬೇಕು.

೫.೫. ಮಹಿಳೆಯರಿಗೆ, ಯುವಕರಿಗೆ ವಿವಿಧ ರೀತಿಯ ಉದ್ಯೋಗ ತರಬೇತಿ

ಪುರುಷರು ಮಾತ್ರ ದುಡಿದರೆ ಸಂಸಾರ ಸರಾಗವಾಗಿ ಸಾಗುವುದಿಲ್ಲ. ಸ್ತ್ರೀ–ಪುರುಷರಿಬ್ಬರೂ ಸಮಾನವಾಗಿ ದುಡಿಯಬೇಕಾದ ಅನಿವಾರ್ಯತೆಯಿದೆ. ಮಹಿಳೆಯಿರಲಿ, ಪುರುಷನಿರಲಿ ಯಾವುದಾದರೂ ಕಾರ್ಯ ಮಾಡಬೇಕು.

ಆಧುನಿಕ ಜಗತ್ತಿನಲ್ಲಿ ಅನುಭವಕ್ಕೆ ಆದ್ಯತೆಯಿದೆ. ಚೆನ್ನದಾಸರ ಸಮುದಾಯಕ್ಕೆ ವಿವಿಧ ಉದ್ಯೋಗಗಳ ಪರಿಣಿತಿ ಇಲ್ಲ. ಪರಿಣಿತಿಯಿಲ್ಲದಿರುವುದರಿಂದ ಉದ್ಯೋಗಾವಕಾಶಗಳು ಲಭಿಸು ತ್ತಿಲ್ಲ. ಉದ್ಯೋಗವಿಲ್ಲದಿರುವುದರಿಂದ ಆರ್ಥಿಕ ಭದ್ರತೆಯಿಲ್ಲ. ಈ ವರ್ತುಲದಲ್ಲಿ ಸಮುದಾಯದ ಯುವಕ ಯುವತಿಯರ ಬದುಕು ಸುತ್ತುತ್ತಲಿದೆ. ಇದಕ್ಕಾಗಿ ಸೂಕ್ತ ಪರಿಹಾರವೆಂದರೆ, ಚೆನ್ನದಾಸರ ಸಮುದಾಯದ ಮಹಿಳೆಯರಿಗಾಗಿ ಮತ್ತು ಆಸಕ್ತ ಯುವಕರಿಗಾಗಿ ವಿವಿಧ ರೀತಿಯ ಉದ್ಯೋಗ ಕೇಂದ್ರಗಳನ್ನು ಸರಕಾರ ಪ್ರಾರಂಭಿಸಿ, ಉಚಿತ ತರಬೇತಿ ನೀಡಬೇಕು.

೫.೬. ಸಂಘಟನೆ ರಾಜಕೀಯ ಅರಿವು ಮತ್ತು ಪ್ರತ್ಯೇಕ ಮೀಸಲಾತಿ

ಈ ಸಮುದಾಯದಲ್ಲಿ ಮುಂಚೆನಿಂದಲೂ ಸಂಘಟನೆಯಿಲ್ಲ. ಇದೀಗ ಜಾಗೃತಗೊಂಡ ಯುವಕರು ಸಂಘಟನೆಗೆ ಮುಂದಾಗಿದ್ದಾರೆ. ಸಂಘಟನೆಗಳು ಬಲಗೊಳ್ಳಬೇಕು. ಸೂಕ್ತ ನಾಯಕತ್ವದಲ್ಲಿ ಸಮುದಾಯ ಒಗ್ಗೂಡಬೇಕು. ಸಂಘಟನೆಯಲ್ಲಿ ಶಕ್ತಿಯಿದೆ. ಶಕ್ತಿಯಲ್ಲಿ ಕಾರ್ಯ ಸಾಧ್ಯವಾಗುತ್ತದೆಯೆಂಬ ಸತ್ಯ ತಿಳಿಯಬೇಕು. ಸಂಘಟನೆಯು ಶಕ್ತಿಯಾಗಿ ಕಾರ್ಯರೂಪ ತಾಳುವುದು ರಾಜಕೀಯ ಅರಿವಿನಲ್ಲಿ ರಾಜಕೀಯವಾಗಿ ಬಲಾಢ್ಯವಾದರೆ, ಎಲ್ಲ ಕಾರ್ಯಗಳೂ ಕೈಗೂಡುತ್ತವೆ. ಜನಾಂಗ ಎಚ್ಚೆತ್ತುಕೊಂಡು ತನ್ನ ಶಕ್ತಿಯನ್ನು ಕ್ರೋಢೀಕರಿಸಿ ರಾಜಕೀಯ ಶಕ್ತಿಯಾಗಿ ರೂಪುಗೊಳ್ಳಬೇಕಿದೆ.

ರಾಜಕೀಯವಾಗಿ ಪ್ರತ್ಯೇಕ ಒಳಮೀಸಲಾತಿ ಸೌಲಭ್ಯ ಲಭಿಸಬೇಕು. ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಅವಕಾಶ ಕಲ್ಪಿಸಬೇಕು. ಸಮುದಾಯದ ಹಿತಾಸಕ್ತಿಯುಳ್ಳವರು, ದೂರದೃಷ್ಟಿಯುಳ್ಳ ಧುರೀಣರು ಮುಂದೆ ಬಂದು ಚೆನ್ನದಾಸರ ಸಮುದಾಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕಾಗಿದೆ. ನಿಜವಾದ ಸವಾಲಿರುವುದು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೊಂಡು ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸುವ ಮೂಲಕ ರಚನಾತ್ಮಕ ಬದಲಾವಣೆಗೆ ಕಾರಣವಾಗಬೇಕಾಗಿದೆ.

ಚೆನ್ನದಾಸರ ಸಮುದಾಯಕ್ಕೆ ಸಮಾಜಕಲ್ಯಾಣ ಇಲಾಖೆಯಿಂದ ಜಾತಿ ಪ್ರಮಾಣ ಪತ್ರ ಲಭಿಸದಿರುವುದರಿಂದ ಸರಕಾರಿ ಸೌಲಭ್ಯಗಳು ದೊರಕುತ್ತಿಲ್ಲ. ರಾಜಕೀಯ ನಾಯಕರ ಇಚ್ಛಾಶಕ್ತಿ ಹಾಗೂ ಸಮುದಾಯದ ಜನರಲ್ಲಿರುವ ತಿಳುವಳಿಕೆಯ ಕೊರತೆಯಿಂದಾಗಿ ದೇಶವಾಸಿಗಳಿಗೆ ನಾಗರಿಕ ಸೌಲಭ್ಯಗಳು ಗ್ರಾಮೀಣ ಪ್ರದೇಶದಲ್ಲಿ ಲಭಿಸುತ್ತಿಲ್ಲ. ಅಲೆಮಾರಿಗಳಿಗಂತೂ ಇವು ಕನಸಿನ ಮಾತಾಗಿವೆ. ಶಿಕ್ಷಣದ ಮಹತ್ವ ತಿಳಿಯದಿರುವುದರಿಂದ ಸರಕಾರವು ಕೊಡಮಾಡುವ ಶೈಕ್ಷಣಿಕ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ. ಬ್ಯಾಂಕಿನ ವಿಶೇಷ ಸಾಲ ಸೌಲಭ್ಯಗಳೂ ಕೂಡಾ ಇವರ ನೆರವಿಗೆ ಬರುತ್ತಿಲ್ಲ. ಕೃಷಿ ಚಟುವಟಿಕೆ ಕೈಕೊಳ್ಳಲು ಸ್ವಂತ ಭೂಮಿ ಇಲ್ಲವಾಗಿದೆ. ಇವರ ಕೂಲಿ ಕೆಲಸಕ್ಕೆ ಯೋಗ್ಯ ಸಂಬಳ ಲಭಿಸುತ್ತಿಲ್ಲ. ಮಹಿಳೆ ಮತ್ತು ಯುವಕರಿಗೆ ವಿವಿಧ ಕ್ಷೇತ್ರಗಳ ಉದ್ಯೋಗ ತರಬೇತಿ ಕೇಂದ್ರಗಳಿಲ್ಲ. ಸದರಿ ಸಮುದಾಯಕ್ಕೆ ತನ್ನದೆ ಆದ ಸಂಘಟನೆಯ ಕೊರತೆಯಿದೆ. ರಾಜಕೀಯ ಶಕ್ತಿಯಿಲ್ಲ. ಪ್ರತ್ಯೇಕವಾದ ಮೀಸಲಾತಿ ಇಲ್ಲದಿರುವುದು. ಇವೆಲ್ಲ ಪ್ರಸ್ತುತ ಸಮುದಾಯವು ಎದುರಿಸುತ್ತಿರುವ ಸಮಸ್ಯೆಗಳೆಂಬುದು ಈ ಅಧ್ಯಯನದಿಂದ ಕಂಡು ಬಂದಿದೆ.

೫.೭. ಪರಿಹಾರೋಪಾಯಗಳು

ಚೆನ್ನದಾಸರ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳು, ಮತ್ತು ಕಾರಣಗಳನ್ನು ಪ್ರಸ್ತುತ ಸಮುದಾಯದ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಆ ಸಮಸ್ಯೆಗಳನ್ನು ಅವಲೋಕಿಸಿ, ಅವುಗಳಿಗೆ ಸಮಂಜಸವೆನಿಸುವ ಪರಿಹಾರೋಪಾಯಗಳನ್ನು ಸೂಚಿಸಲಾಗಿದೆ.

- ಈ ಸಮುದಾಯವು ಇತರ ಸಮುದಾಯಗಳಂತೆ ಒಂದೆಡೆ ನೆಲೆ ನಿಂತು ಜೀವನ ಸಾಗಿಸಲು ಸರಕಾರ ಕ್ರಮ ಕೈಕೊಳ್ಳಬೇಕು. ಇದಕ್ಕೆ ಸರಕಾರವು ಇವರಿಗೆ ಸ್ವಂತ ನಿವೇಶನ, ಮನೆಗಳನ್ನು ಒದಗಿಸಕೊಡಬೇಕು. ಇದರ ಜೊತೆಗೆ ಸರಕಾರವು ಭೂಹೀನರನ್ನು ಗುರುತಿಸಿ, ಅವರಿಗೆ ಪ್ರತಿ

ಕುಟುಂಬಕ್ಕೆ ಕನಿಷ್ಠ ಎರಡು ಎಕರೆ ಜಮೀನನ್ನು ನೀಡಬೇಕು. ಅಂದಾಗ ಮಾತ್ರ ಪ್ರಸ್ತುತ ಸಮುದಾಯವು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ. ಈ ಸಮುದಾಯಕ್ಕೆ ತನಗೂ ಭೂ–ಒಡೆತನದ ಹಕ್ಕು ಇದೆ ಎಂಬ ಆತ್ಮ ವಿಶ್ವಾಸ ಬೆಳೆಯುತ್ತದೆ.

- ಪ್ರಸ್ತುತ ಸಮುದಾಯಕ್ಕೆ ತನ್ನದೆ ಆದ ಕೃಷಿ ಜಮೀನು ಇಲ್ಲ. ಜೀವನೋಪಾಯಕ್ಕಾಗಿ ಭಿಕ್ಷಾಟನೆ, ಕೃಷಿ ಕಾರ್ಮಿಕರಾಗಿ ಇನ್ನೊಬ್ಬರನ್ನು ಅವಲಂಭಿಸಿದೆ. ಆರ್ಥಿಕವಾಗಿ ಸದೃಢವಾಗಿಸಬೇಕಾದರೆ ಅವಶ್ಯಕ ಮೂಲಭೂತ ಸೌಕರ್ಯಗಳನ್ನು ಸರಕಾರ ನೀಡಬೇಕು.

- ಆರ್ಥಿಕವಾಗಿ ಹಿಂದುಳಿದ ಸಮುದಾಯದ ಮೇಲೆ ಬಲಿಷ್ಠರು ನಡೆಸುವ ದೌರ್ಜನ್ಯಗಳನ್ನು ತಡೆಗಟ್ಟಲು ಸರಕಾರಿ ಕಾನೂನುಗಳನ್ನು ರೂಪಿಸಬೇಕು. ಇವರನ್ನು ಬಲಿಷ್ಠರಿಂದ ರಕ್ಷಿಸಲು ಕಾನೂನುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು.

- ಈ ಸಮುದಾಯದವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವುದಕ್ಕಾಗಿ ಸ್ವ–ಉದ್ಯೋಗಗಳನ್ನು ಪ್ರಾರಂಭಿಸಲು ಅನುಕೂಲವಾಗುವಂತೆ ಸರಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಹಾಗೂ ಕಾರ್ಪೊರೇಶನ್‌ಗಳ ಮೂಲಕ ಕಡಿಮೆ ಬಡ್ಡಿ ದರದಲ್ಲಿ ಸರಳವಾಗಿ ಸಾಲ–ಸೌಲಭ್ಯಗಳು ದೊರೆಯುವಂತೆ ಮಾಡಬೇಕು.

- ಆರಂಭದಿಂದಲೂ ಶಿಕ್ಷಣದಿಂದ ವಂಚಿತವಾದ ಪ್ರಸ್ತುತ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೂ ಯಾವುದೆ ನಿರ್ಬಂಧವಿಲ್ಲದೆ ಉಚಿತ ವಿದ್ಯಾಭ್ಯಾಸ ದೊರೆಯಬೇಕು. ಶಿಕ್ಷಣವನ್ನು ಪ್ರೋತ್ಸಾಹಿಸುವುದಕ್ಕಾಗಿ ಹೋಬಳಿ, ತಾಲೂಕು, ಜಿಲ್ಲಾ ಸ್ಥಳಗಳಲ್ಲಿ ಉಚಿತ ವಸತಿನಿಲಯ ಮತ್ತು ವಸತಿಶಾಲೆ ಆರಂಭಿಸಬೇಕು.

- ಈ ಸಮುದಾಯ ಪ್ರಸ್ತುತವಾಗಿ ಪರಿಶಿಷ್ಟ ಜಾತಿಯ ವರ್ಗಕ್ಕೆ ಸೇರುತ್ತದೆ. ಈ ವರ್ಗದಲ್ಲಿ ಅನೇಕ ಪಂಗಡಗಳು ಇವೆ. ಆ ಎಲ್ಲ ಪಂಗಡಗಳಿಗೆ ಕೂಡಿ ಒಂದೇ ಮೀಸಲಾತಿಯಿದೆ. ಈ ಸಮುದಾಯ ಮೀಸಲಾತಿಯ ಪ್ರಯೋಜನ ಪಡೆಯಲು ಸಾಧ್ಯವಾಗುತ್ತಿಲ್ಲ. ಕೇಂದ್ರ ಸರಕಾರ ಪರಿಶಿಷ್ಟ ಜಾತಿಯ ಸೌಲಭ್ಯಗಳನ್ನು ನೇರವಾಗಿ ಸಮುದಾಯಕ್ಕೆ ಕಲ್ಪಿಸಲು ಒಳಮೀಸಲಾತಿ ಜಾರಿಗೆ ತರಬೇಕು. ಅಂದಾಗ ಮಾತ್ರ ಈ ಸಮುದಾಯದಲ್ಲಿ ಚೇತರಿಕೆ ಕಂಡುಬರಲು ಸಾಧ್ಯವಾಗುತ್ತದೆ.

- ಈ ಸಮುದಾಯ ಊರ ಹೊರಗೆ ವಾಸಿಸುತ್ತಿದ್ದು, ಸರಕಾರ ಒದಗಿಸುವ ಸವಲತ್ತುಗಳು ಇವರ ಗಮನಕ್ಕೆ ಬರುವುದಿಲ್ಲ. ಅವುಗಳಲ್ಲಿ ಮತದಾರರ ಪಟ್ಟಿಯಲ್ಲಿ ಹದಿನೆಂಟು ವರ್ಷ ಪೂರೈಸಿದ ಪ್ರತಿಯೊಬ್ಬರ ಹೆಸರನ್ನು ಸೇರ್ಪಡೆಗೊಳಿಸಿ ಅವರಿಗೆ ತಮ್ಮ ಪರಮಾಧಿಕಾರದ ಹಕ್ಕನ್ನು ನೀಡಬೇಕು. ಗುರುತಿನ ಚೀಟಿ ವಿತರಣೆಯಾಗಬೇಕು. ಬಿ.ಪಿ.ಎಲ್ ಕಾರ್ಡ್‌ಗಳಿಂದ ಸಿಗುವ ಎಲ್ಲ ಸೌಲಭ್ಯಗಳು ಅವರಿಗೆ ದೊರೆಯುವಂತಾಗಬೇಕು. ಸರಕಾರದ ಗುರುತಿನ ಪತ್ರ, ಆಧಾರ್ ಕಾರ್ಡ್‌ಗಳನ್ನು ಸರಿಯಾಗಿ ವಿತರಿಸಬೇಕು.

- ಈ ಸಮುದಾಯ ವಾಸಿಸುವ ಪ್ರದೇಶಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿವೆ. ಈ ಸಮುದಾಯವು ಸರಕಾರಿ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲವಾಗಿದೆ. ಸರಕಾರವೇ ನೇರವಾಗಿ ಸಮುದಾಯ ವಾಸಿಸುವ ಪ್ರದೇಶಗಳನ್ನು ನವಗ್ರಾಮಗಳ ಮಾದರಿಯಲ್ಲಿ ಅಭಿವೃದ್ಧಿ ಪಡಿಸಿ ವಾಸಿಸಲು ಯೋಗ್ಯ ವಾತಾವರಣ ನಿರ್ಮಿಸಬೇಕು.

- ಈ ಸಮುದಾಯದಲ್ಲಿ ಇಂದು ಸಾಕ್ಷರತೆ ಪ್ರಮಾಣ ಸ್ವಲ್ಪಮಟ್ಟಿಗೆ ಏರಿಕೆಯಾಗಿದೆ. ಶಿಕ್ಷಣವನ್ನು ಪಡೆದ ಈ ಜನಾಂಗದ ಯುವಕ ಯುವತಿಯರಿಗೆ ಸ್ವ-ಉದ್ಯೋಗ ಮತ್ತು ಜಾಗತೀಕರಣದಿಂದ ಸೃಷ್ಟಿಯಾಗುತ್ತಿರುವ ಉದ್ಯೋಗಗಳ ಕುರಿತು ಮಾಹಿತಿ ನೀಡುವುದು, ಉದ್ಯೋಗಕ್ಕೆ ತಕ್ಕಂತೆ ಉಚಿತ ತರಬೇತಿ ನೀಡಿ ಇವರಿಗೆ ಉದ್ಯೋಗ ಒದಗಿಸಬೇಕು. ಜೀವನ ಮಟ್ಟ ಏರಿಕೆಯಾಗುವಂತೆ ಸರಕಾರವೇ ಕ್ರಮ ಕೈಗೊಳ್ಳಬೇಕು.

- ಚೆನ್ನದಾಸರ ಸಮುದಾಯದ ಅಭಿವೃದ್ಧಿಗಾಗಿ ವಿಶೇಷ ಪ್ಯಾಕೇಜ್ ಘೋಷಣೆಯಾಗಿ, ಅದನ್ನು ಸರಿಯಾಗಿ ಅನುಷ್ಠಾನಗೊಳಿಸಬೇಕು. ಈ ಸಮುದಾಯದ ಜನರಿಗೆ ಸಮರ್ಪಕವಾಗಿ ಆ ಪ್ಯಾಕೇಜಿನ ಎಲ್ಲ ಸೌಲಭ್ಯಗಳು ನೇರವಾಗಿ ಪೂರೈಕೆಯಾಗಬೇಕು.

- ಲ್ಯಾಂಪ್ ಸೊಸಾಯಿಟಿ ಮಾದರಿಯಲ್ಲಿ ಈ ಸಮುದಾಯದ ಅಭಿವೃದ್ಧಿಗಾಗಿ ಸರಕಾರ ಸಹಕಾರ ಸಂಘಗಳನ್ನು ಸ್ಥಾಪಿಸಿ, ಅವುಗಳ ಮೂಲಕ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಕ್ರಮಕೈಕೊಳ್ಳಬೇಕು.

- ಅವಸಾನದ ಅಂಚಿನಲ್ಲಿರುವ ಪಾರಂಪರಿಕ ಕಲೆಗಳಾದ ಹಾಡುಗಾರಿಕೆ, ಬಯಲಾಟ, ಏಕತಾರಿ, ಗೀಗೀ ಪದ ಮುಂತಾದ ಅಭಿಜಾತ ಕಲೆಗಳನ್ನು ಪ್ರಸ್ತುತ ತಲೆಮಾರಿನ ಯುವಕ,

ಯುವತಿಯರಲ್ಲಿ ಇದರ ಕುರಿತು ಅರಿವು ಮೂಡಿಸಲು ಗುರುಶಿಷ್ಯ ಪರಂಪರೆಯ ಕಲಿಕಾ ಕೇಂದ್ರಗಳನ್ನು ಪ್ರಾರಂಭಿಸಿ, ಪರಂಪರಾಗತ ಕಲೆಗಳನ್ನು ಉಳಿಸಬೇಕು. ರಾಜ್ಯದ ವಿವಿಧ ಅಕಾಡೆಮಿಗಳಿಗೆ ಈ ಸಮುದಾಯದ ಕಲಾವಿದರನ್ನು ಸದಸ್ಯರನ್ನಾಗಿ ನೇಮಕ ಮಾಡಬೇಕು.

- ಈ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರಕಾರ ಗ್ರಾಮ, ತಾಲೂಕು, ಜಿಲ್ಲೆ, ರಾಜ್ಯ ಮಟ್ಟದ ಸಹಕಾರಿ ಬ್ಯಾಂಕ್‌ಗಳು, ವ್ಯವಸಾಯ ಸಹಕಾರ ಸಂಘಗಳು, ಟಿ.ಎ.ಪಿ.ಸಿ.ಎಂ.ಎಸ್.ನಂತಹ ಸಹಕಾರ ಬ್ಯಾಂಕ್‌ಗಳಲ್ಲಿ ಇವರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಬೇಕು.

- ಈ ಸಮುದಾಯದ ಜನರು ಆರ್ಥಿಕವಾಗಿ ಅಷ್ಟೊಂದು ಸಬಲರಾಗಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮೀಸಲಾತಿ ಇದ್ದರೂ ಸಹ ಇವರು ನೇರವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸುವುದು ಸಾಧ್ಯವಿಲ್ಲ. ಆದ್ದರಿಂದ ಈ ಸಮುದಾಯದವರನ್ನು ಸಂಘ–ಸಂಸ್ಥೆಗಳನ್ನೊಳಗೊಂಡಂತೆ, ಗ್ರಾಮ ಪಂಚಾಯತ, ತಾಲೂಕ ಪಂಚಾಯತ, ಜಿಲ್ಲಾ ಪಂಚಾಯತ, ವಿಧಾನಸಭೆ, ವಿಧಾನ ಪರಿಷತ್ತು, ಲೋಕಸಭೆ, ರಾಜ್ಯಸಭೆ ಹಾಗೂ ನಿಗಮ–ಮಂಡಳಿಗಳು ಮುಂತಾದ ಸಾಂಸ್ಥಿಕ ಸಂಸ್ಥೆಗಳಿಗೆ ಸರಕಾರ ನಾಮನಿರ್ದೇಶನ ಮಾಡಿ ಇವರನ್ನೂ ಪ್ರಜಾಪ್ರಭುತ್ವದಲ್ಲಿ ಪಾಲುದಾರರನ್ನಾಗಿಸಿಕೊಂಡು ಸಮುದಾಯದ ಏಳಿಗೆಗೆ ಶ್ರಮಿಸಬೇಕು.

- ಈ ಸಮುದಾಯದ ಸರ್ವತೋಮುಖ ಏಳಿಗೆಗೆ ಸರಕಾರ ಪ್ರತ್ಯೇಕವಾದ ನಿಗಮ ಸ್ಥಾಪನೆ ಮಾಡಿ ಅದಕ್ಕೆ ಈ ಸಮುದಾಯದವರನ್ನೆ ಅಧ್ಯಕ್ಷ ಮತ್ತು ನಿರ್ದೇಶಕರನ್ನು ನೇಮಿಸಬೇಕು.

ಒಟ್ಟಾರೆ, ಈ ಸಮುದಾಯದ ಏಳಿಗೆಗೆ ಸರಕಾರ ಮತ್ತು ಸಮಾಜ ಶ್ರಮಿಸಬೇಕು. ಈಗಿರುವ ಮಿಸಲಾತಿಯಿಂದ ಇವರಿಗೆ ಯಾವುದೇ ಪ್ರಯೋಜನವಿಲ್ಲ. ಈ ಸಮುದಾಯ ಅಶಕ್ತವಾಗಿದೆ. ಬಲಿಷ್ಠ ಪ್ರಾಣಿ ಅಶಕ್ತ ಪ್ರಾಣಿಯನ್ನು ತಿಂದು ಹಾಕುವಂತೆ ಈ ಸಮುದಾಯಕ್ಕೆ ದಕ್ಕಬೇಕಾದ ಸೌಲಭ್ಯಗಳನ್ನು ಬಲಿಷ್ಠ ವರ್ಗದವರು ತಿಂದು ಹಾಕುತ್ತಿದ್ದಾರೆ. ಇದರಿಂದ ಇವರು ಯಾವುದೆ ಸೌಲಭ್ಯಗಳನ್ನು ಪಡೆಯದೆ ನಾಗರಿಕ ಸಮಾಜದಲ್ಲಿಯೂ ಅನಾಗರಿಕತೆಯಿಂದ ಜೀವನ ನಡೆಸುತ್ತಿರುವುದು ವಿಷಾದನೀಯವಾಗಿದೆ.

*****

ಕೊನೆ ಟಿಪ್ಪಣಿಗಳು

----

೧. ಮೇತ್ರಿ ಕೆ. ಎಮ್.– 'ಅಲೆಮಾರಿ ಸಮುದಾಯಗಳ ಅಧ್ಯಯನಮಾಲೆ 'ಪ್ರಸ್ತಾವನೆ'ಯಲ್ಲಿ , ೨೦೦೭

೨. ಹಿಮ್ಮಡಿ ಯಲ್ಲಪ್ಪ– 'ಚೆನ್ನದಾಸರ', ಪುಟ–೧೨೭, ೨೦೦೮

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಆಂಧ್ರಪ್ರದೇಶವು ಚೆನ್ನದಾಸರ ಸಮುದಾಯದ ಮೂಲ ನೆಲೆಯಾಗಿದೆ. ಚನ್ನಯ್ಯದಾಸು ಮತ್ತು ಮಾಲದಾಸರಿ ಎಂಬುವವರು ಈ ಸಮುದಾಯದ ಮೂಲಪುರುಷರು. ಆಂಧ್ರಪ್ರದೇಶದ ಮದನಪಲ್ಲಿ, ಹನುಮಪಲ್ಲಿ, ಗದ್ವಾಲ್ ಮತ್ತು ಕರ್ನೂಲ್ ಭಾಗಗಳಿಂದ ಈ ಸಮುದಾಯದವರು ವಲಸೆ ಬಂದಿದ್ದಾರೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ 'ಅರ್ಜುನವಾಡ' ಗ್ರಾಮಕ್ಕೆ ಕ್ರಿ.ಶ. ೧೫೧೬ರಲ್ಲಿ ಆಂಧ್ರಪ್ರದೇಶದ 'ಮದನಪಲ್ಲಿ'ಯಿಂದ ವಲಸೆ ಬಂದಿರುವ ದಾಖಲೆಯು ಹೆಳವರಿಂದ ಲಭಿಸುತ್ತದೆ. ಅರ್ಜುನವಾಡದಿಂದ ಕೊಟಬಾಗಿಗೆ ಅಲ್ಲಿಂದ ಗೋಕಾಕ ತಾಲೂಕಿನ ಕಲ್ಲೋಳಿಗೆ ಈ ಸಮುದಾಯವು ಪ್ರಯಾಣ ಬೆಳೆಸಿದೆ. ಕಾಲಾನಂತರದಲ್ಲಿ ಬೆಳಗಾವಿ ಜಿಲ್ಲೆಯ ತುಂಬ ಚೆನ್ನದಾಸರ ಸಮುದಾಯ ಪಸರಿಸಿದೆ. ಚೆನ್ನದಾಸರ ಮಾತೃಭಾಷೆ ತೆಲುಗು. ಕನ್ನಡವು ಪರಿಸರದ ಭಾಷೆಯಾಗಿದೆ. ಇವರು ಕನ್ನಡವನ್ನು ವ್ಯವಹಾರಿಕ ಭಾಷೆಯನ್ನಾಗಿ ಬಳಸುತ್ತಾರೆ. ಚೆನ್ನದಾಸರು ಅಲೆಮಾರಿ ಅರೆ ಅಲೆಮಾರಿ ಸಮುದಾಯಗಳಲ್ಲಿ ಒಂದಾಗಿದ್ದು, ಪರಿಶಿಷ್ಟ ಜಾತಿಗೆ ಸೇರಿದ ಜನಾಂಗವಾಗಿದೆ. ಅಸಂಘಟಿತವಾದ, ಮೂಲಭೂತ ಸೌಕರ್ಯಗಳಿಂದ ವಂಚಿತವಾದ, ನಾಗರಿಕ ಸೌಲಭ್ಯಗಳಿಲ್ಲದ, ಶಿಕ್ಷಣ ಹೊಂದಿರದ, ಸಾಮಾಜಿಕ ನ್ಯಾಯ ಪಡೆಯದ ತೀರ ಹಿಂದುಳಿದ ಸಮುದಾಯವಾಗಿದೆ.

ದಾಸರಲ್ಲಿ ವೃತ್ತಿ ಮತ್ತು ವೃತ್ತಿ ಲಾಂಛನಗಳಿಂದ ಬೇರೆ ಬೇರೆ ಹೆಸರುಗಳಿವೆ. ಚೆನ್ನದಾಸರು, ಆಟದದಾಸರು, ಗೊಲ್ಲದಾಸರು, ಶಂಖದಾಸರು, ಗೋಪಾಳಬುಟ್ಟಿದಾಸರು, ತಿರುಮಲದಾಸರು, ಹೆಣ್ಣುದಾಸರು, ದೊಂಬಿದಾಸರು, ಚಕ್ರವಾದ್ಯದಾಸರು ಮುಂತಾದ ಬೇರೆ ಬೇರೆ ಹೆಸರುಗಳಿದ್ದರೂ ಇವು ಜಾತಿಗಳಲ್ಲ, ಉಪಜಾತಿಗಳೂ ಅಲ್ಲ. ಇವುಗಳು ದಾಸ ಸಮುದಾಯದ ಪರ್ಯಾಯ ನಾಮಗಳಾಗಿವೆ. ಇವುಗಳನ್ನು ಉಪನಾಮಗಳೆಂದು ಕರೆಯುತ್ತಾರೆ. ಚೆನ್ನದಾಸರ ಸಮುದಾಯದಲ್ಲಿ ಮನೆದೇವರು ಮತ್ತು ಕುಲದೇವರು ಎಂದು ಎರಡು ರೀತಿಯ ದೈವಾರಾಧನೆ ಗಳಿವೆ. ಮಾತೃದೇವತೆಗಳಾದ ಯಲ್ಲಮ್ಮ, ದುರಗಮ್ಮ, ಮಾರಮ್ಮ, ಉದ್ದಮ್ಮ, ಲಕ್ಕಮ್ಮ, ದ್ಯಾಮವ್ವ ಮೊದಲಾದ ಶಕ್ತಿದೇವತೆಗಳನ್ನು ಆರಾಧಿಸುತ್ತಾರೆ. ವಿಶೇಷವಾಗಿ ಗೌರಿಹುಣ್ಣಿಮೆ, ಹೊಸ್ತಲ ಹುಣ್ಣಿಮೆ, ಭಾರತ ಹುಣ್ಣಿಮೆಗಳಲ್ಲಿ ದೇವಿಯ ಜಾತ್ರೆಗಳು ಬಹು ದೊಡ್ಡ ಪ್ರಮಾಣದಲ್ಲಿ ಜರುಗುತ್ತವೆ. ಈ ಸಮುದಾಯವು ತಿರುಪತಿ ತಿಮ್ಮಪ್ಪನನ್ನು ಕುಲದೇವರನ್ನಾಗಿ ಆರಾಧಿಸುತ್ತಾರೆ. ಕಾರ್ತೀಕ ಮಾಸದಲ್ಲಿ

ಕುಲದೇವರಿಗೆ ಹೊತ್ತ ಹರಕೆಯನ್ನು ತೀರಿಸುತ್ತಾರೆ. ತಿರುಪತಿಗೆ ಹೋಗಲು ಸಾಧ್ಯವಾಗದವರು ಹನುಮಪ್ಪನಿಗೆ ಭಕ್ತಿ ಶೃದ್ದೆಯಿಂದ ನಡೆದುಕೊಳ್ಳುತ್ತಾರೆ. ಆಂಜನೇಯ ಸ್ವಾಮಿಯನ್ನು ತಿರುಪತಿ ವೆಂಕಟರಮಣನ ಅವತಾರವೆಂದು ಭಾವಿಸುತ್ತಾರೆ. ಶನಿವಾರ ವ್ರತ ಆಚರಿಸುತ್ತಾರೆ. ತಿರುಪತಿ ತಿಮ್ಮಪ್ಪನ ಬೆಟ್ಟ ಚೆನ್ನದಾಸರ ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಬೆಳಗಾವಿ ಜಿಲ್ಲೆಯ ಚೆನ್ನದಾಸರು ಕಲ್ಲೋಳಿ ಹನುಮಂತನನ್ನು ತಮ್ಮ ಪ್ರಮುಖ ದೇವರನ್ನಾಗಿ ಸ್ವೀಕರಿಸಿದ್ದಾರೆ. ಜಾತ್ರೆ ಉತ್ಸವಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ವೈಶಿಷ್ಟ್ಯತೆಗಳನ್ನು ವಿವರಿಸುತ್ತ ಭೌಗೋಳಿಕ ವ್ಯಾಪ್ತಿ, ಪ್ರಸಾರದ ನೆಲೆಗಳು, ಜನಸಂಖ್ಯೆ, ಸಾಕ್ಷರತೆ ಪ್ರಮಾಣ, ಬಳಿ ಅಥವಾ ಬೆಡಗು ಇತ್ಯಾದಿಗಳನ್ನು ದಾಖಲಿಸಲಾಗಿದೆ. ಅಥಣಿ, ಚಿಕ್ಕೋಡಿ, ಗೋಕಾಕ, ರಾಮದುರ್ಗ, ರಾಯಬಾಗ, ಹುಕ್ಕೇರಿ, ಬೆಳಗಾವಿ ಹೀಗೆ ಒಟ್ಟು ಎಂಟು ತಾಲೂಕುಗಳಲ್ಲಿ ಒಟ್ಟು ಒಂಬತ್ತು ಸಾವಿರದ ಹದಿನಾಲ್ಕು ಜನರು ವಾಸಿಸುತ್ತಿದ್ದಾರೆ. ಇದರ ಜೊತೆಗೆ ಸಾಕ್ಷರತಾ ಪ್ರಮಾಣವನ್ನು ಸಮೀಕ್ಷಿಸಲಾಗಿದೆ.

ಚೆನ್ನದಾಸರ 'ಸಾಹಿತ್ಯ' ಸಮೃದ್ಧವಾಗಿದೆ. ಈ ಜನಾಂಗದ ಭಾಷೆ, ಕಥೆ, ಹಾಡು, ಗಾದೆಮಾತು, ನಂಬಿಕೆಗಳು, ಹಚ್ಚೆ, ರಂಗಭೂಮಿ, ವಾದ್ಯಗಳು, ವಾದ್ಯಪರಿಕರಗಳು ಮೊದಲಾದ ಅಂಶಗಳನ್ನು ವಿವೇಚಿಸಲಾಗಿದೆ. ಚೆನ್ನದಾಸರ 'ಮರಗುಭಾಷೆ'ಯು ವೈಶಿಷ್ಟ್ಯವಾಗಿದೆ. ಅದನ್ನು ಚರ್ಚಿಸಲಾಗಿದೆ. ಈ ಸಮುದಾಯದ ಗಾಯಕರು, ತತ್ವಪದಕಾರರು ಸುಪ್ರಸಿದ್ದರಾಗಿದ್ದಾರೆ. ವರಕವಿ ಬೇಂದ್ರೆಯವರನ್ನು ಪ್ರಭಾವಗೊಳಿಸಿ 'ಹಕ್ಕಿ ಹಾರುತಿದೆ ನೋಡಿದಿರಾ' ಪದ್ಯ ರಚನೆಗೆ ಪ್ರೇರಕನಾದ 'ಉದ್ದಪ್ಪ ಚಿಂತಾಮಣಿ ದಾಸರ' ಎಂಬ ತತ್ವಪದಕಾರ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಉದಗಟ್ಟಿಯವನು. ರಂಗಭೂಮಿಯಲ್ಲಿ ಹೆಸರು ಮಾಡಿದ ಕಲಾವಿದೆ 'ಯಲ್ಲೂಬಾಯಿ ದಾಸರ' ಗೋಕಾಕ ತಾಲೂಕಿನ ಕೊಣ್ಣೂರ ಕಂಪನಿಯಲ್ಲಿ ಸುಧೀರ್ಘ ಸೇವೆ ಸಲ್ಲಿಸಿದವಳು. ಅವಳ ಸಾಕುಮಗಳಾದ 'ಗಂಗೂಬಾಯಿ'ಯು ಬಾಲಕಿಯಾಗಿದ್ದಾಗಲೇ ಕೊಣ್ಣೂರು ಕಂಪನಿಯ ಹರಿಶ್ಚಂದ್ರ ನಾಟಕದಲ್ಲಿ ಲೋಹಿತಾಶ್ವನ ಪಾತ್ರ ನಿರ್ವಹಿಸುವ ಮೂಲಕ ರಂಗಭೂಮಿಗೆ ಪಾದಾರ್ಪಣೆ ಮಾಡಿದವಳು. ಒಳ್ಳೆಯ ನಟಿಯಾಗಿ, ಚತುರ ಸಂಘಟಕಳಾಗಿ, ಕಂಪನಿ ಮಾಲಿಕಳಾಗಿದ್ದು ಚಾರಿತ್ರಿಕ ಸಂಗತಿಯಾಗಿದೆ. ರಂಗಭೂಮಿ ಮತ್ತು ರಂಗಭೂಮಿಯ ವಿಶೇಷತೆಗಳನ್ನು ಪರಿಚಯಿಸಲಾಗಿದೆ.

ದಾಸರಾಟ, ಬಯಲಾಟ, ಶ್ರೀಕೃಷ್ಣ ಪಾರಿಜಾತ ಮುಂತಾದ ಉತ್ತರ ಕರ್ನಾಟಕದ ರಂಗಭೂಮಿ ಮತ್ತು ಕಂಪನಿ ನಾಟಕಗಳಿಗೆ ದಾಸ ಸಮುದಾಯದವರು ಸಲ್ಲಿಸಿದ ಸೇವೆಯನ್ನು

ಗುರುತಿಸಲಾಗಿದೆ. ಹಾರೂಗೇರಿ, ಸಂಕೋನಟ್ಟಿ, ಉದಗಟ್ಟಿ, ಕೌಜಲಗಿ, ಕಲ್ಲೋಳಿ, ಖಣದಾಳ ಮತ್ತು ಜಾಲಿಕಟ್ಟಿ ಮುಂತಾದ ಗ್ರಾಮಗಳಲ್ಲಿ ದಾಸರಾಟದ ಮೇಳಗಳಿರುವುದನ್ನು ಗುರುತಿಸಲಾಗಿದೆ.

ಈ ಸಮುದಾಯದ ಪರಂಪರಾಗತ ಹಬ್ಬಗಳಾದ ಯುಗಾದಿ, ನಾಗರಪಂಚಮಿ, ವಿಜಯದಶಮಿ, ಮಸುಬಾ, ಹಿರಿಯರ ಹಬ್ಬ, ದೀಪಾವಳಿ ಮುಂತಾದ ಹಬ್ಬಗಳ ವಿಶೇಷತೆಗಳನ್ನು ಕಂಡುಕೊಳ್ಳಲಾಗಿದೆ. ಈ ಸಮುದಾಯವು ನಾಗರಪಂಚಮಿಯನ್ನು ಬಹು ವಿಶಿಷ್ಟವಾಗಿ ಪ್ರಾದೇಶಿಕ ಅನ್ಯೋನ್ಯತೆಗಳೊಂದಿಗೆ ಆಚರಿಸುವುದನ್ನು ದಾಖಲಿಸಲಾಗಿದೆ. 'ಹಿರಿಯರ ಹಬ್ಬ' ಚೆನ್ನದಾಸರ ಸಮುದಾಯದ ಅಸ್ಮಿತೆಯನ್ನು ಬಿಂಬಿಸುವ ಹಬ್ಬವಾಗಿದೆ. ಇವೆರಡರ ಕುರಿತಾಗಿ ವಿಸ್ತೃತವಾಗಿ ಚರ್ಚಿಸಲಾಗಿದೆ.

ಚೆನ್ನದಾಸರ ಸಮುದಾಯದಲ್ಲಿ 'ನ್ಯಾಯಪದ್ಧತಿ'ಯು ಇತರ ಜನಾಂಗಗಳಿಗಿಂತ ವಿಭಿನ್ನವಾಗಿದೆ. ನ್ಯಾಯ ಪಂಚಾಯತಿ, ಅದರ ಮುಖ್ಯಸ್ಥನನ್ನು "ಗುಡೇಗಾಡು ಕಟ್ಟೆಮನೆ" ಎಂದು ಕರೆಯುತ್ತಾರೆ. ನ್ಯಾಯ ಪಂಚಾಯತಿಯ ಹೊಣೆಗಾರಿಕೆ, ನ್ಯಾಯ ನಿರ್ಣಯಗಳು, ತೀರ್ಪು ಇತ್ಯರ್ಥವಾಗದಾಗ 'ಕಡ್ಡಿ ಮುರಿದು' ತೀರ್ಪು ಪ್ರಕಟಿಸುವ ವಿಧಾನ, ಶಿಕ್ಷೆಯ ಪ್ರಮಾಣಗಳು, ದಂಡ ಹಾಕುವ ರೀತಿ, ಮೂಲ ನ್ಯಾಯಸ್ಥಾನದೊಂದಿಗೆ ಸಂಪರ್ಕ ಇವೆಲ್ಲ ವಿಶಿಷ್ಟವಾಗಿವೆ. ಚೆನ್ನದಾಸರು ಕೋರ್ಟು ಕಛೇರಿಗಳಗೆ ಹೋಗುವುದಿಲ್ಲ. ಪರಂಪರಾಗತ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟು 'ವ್ಯಾಜ್ಯ'ವನ್ನು ತಮ್ಮದೆ ಆದ ರೀತಿಯಲ್ಲಿ ಬಗೆಹರಿಸಿಕೊಳ್ಳುತ್ತಾರೆ.

ವೈದ್ಯಕೀಯ ಜ್ಞಾನ ಈ ಸಮುದಾಯದಲ್ಲಿ ಪರಂಪರಾಗತವಾಗಿ ಬಂದಿದೆ. ಜನಪದ ವೈದ್ಯದಲ್ಲಿ ಮಾನವ ವೈದ್ಯ ಮತ್ತು ಪಶುವೈದ್ಯವೆಂಬ ಎರಡು ರೀತಿಯಲ್ಲಿ ಔಷಧೋಪಚಾರ ಮಾಡುತ್ತಾರೆ. ಗಿಡಮೂಲಿಕೆ, ಪ್ರಾಣಿಗಳ ರಕ್ತ, ವಿಶೇಷ ತಪ್ಪಲು, ನಾರು, ಬೇರುಗಳ ಮೂಲಕ ರೋಗಕ್ಕೆ ಮದ್ದು ನೀಡುತ್ತಾರೆ. ಪ್ರಕೃತಿಯಲ್ಲಿ ಬೆಳೆಯುವ ನಿಸರ್ಗದತ್ತವಾದ ಗಿಡಮೂಲಿಕೆಗಳಿಂದ ವನಸ್ಪತಿ ತಯಾರಿಸಿ, ರೋಗಗಳನ್ನು ಗುಣಪಡಿಸುವ ಕ್ರಿಯೆ ಆಧುನಿಕ ವೈದ್ಯ ಪದ್ಧತಿಗೆ ಸವಾಲಾಗಿದೆ. ತಲೆಮಾರಿನಿಂದ ತಲೆಮಾರಿಗೆ ಈ ವೈದ್ಯಜ್ಞಾನ ಮುಂದುವರಿದಿದೆ.

ಚೆನ್ನದಾಸರ ಸಮುದಾಯದ ಸಂಪ್ರದಾಯಗಳು, ಆಚರಣೆಗಳು, ನ್ಯಾಯಪದ್ದತಿ, ವೇಷಭೂಷಣ, ಜಾತ್ರೆ–ಉತ್ಸವಗಳ ಮೂಲಕ ಜನಾಂಗಿಕ ಜೀವನ ವಿಧಾನವನ್ನು ಕಟ್ಟಿ ಕೊಡಲಾಗಿದೆ.

ಚೆನ್ನದಾಸರ ಸಮುದಾಯದ ಆರ್ಥಿಕ ಸ್ಥಿತಿಗತಿ, ಕಸುಬುಗಳು, ಉಪಕಸುಬುಗಳು, ಇತರ ಕಸುಬುಗಳು, ಸರಕಾರಿ, ಅರೆಸರಕಾರಿ ಹಾಗೂ ಖಾಸಗಿ ಉದ್ಯೋಗಗಳ ಕುರಿತಾಗಿ

ಚರ್ಚಿಸಲಾಗಿದೆ. 'ಕೌದಿ ಹೊಲಿಯುವುದು' ಚೆನ್ನದಾಸರ ವಿಶೇಷತೆಗಳಲ್ಲೊಂದು. ಇವರನ್ನು 'ಕೌದಿ ದಾಸರು' ಎಂದು ಕರೆಯುವಷ್ಟು ಈ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ. ಕೌದಿ ತಯಾರಿಕೆ, ಅದರ ವಿಧಾನಗಳನ್ನು ಪರಿಚಯಿಸಲಾಗಿದೆ.

ಫಲಿತಗಳು

ಪ್ರಸ್ತುತ ಅಧ್ಯಯನವು ಚೆನ್ನದಾಸರ ಸಮುದಾಯದ ಜೀವನ ವ್ಯವಸ್ಥೆಯನ್ನು ಕುರಿತಾದ ಬದುಕನ್ನು ಕಟ್ಟಿಕೊಡುವ ಪ್ರಯತ್ನವಾಗಿದೆ. ಈ ಅಧ್ಯಯನದಿಂದ ಕೆಳಕಂಡ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

- ಈವರೆಗೂ ಯಾರೂ ಗುರುತಿಸದ ಸವದತ್ತಿ ತಾಲೂಕಿನಲ್ಲಿ ನೆಲೆ ನಿಂತ ಚೆನ್ನದಾಸರ ಸಮುದಾಯವನ್ನು ಕ್ಷೇತ್ರಕಾರ್ಯದ ಮೂಲಕ ಗುರುತಿಸಲಾಗಿದೆ.
- ಬೆಳಗಾವಿ ಜಿಲ್ಲೆಯಲ್ಲಿ ನೆಲೆ ನಿಂತಿರುವ ಚೆನ್ನದಾಸರ ಸಮುದಾಯದ ಒಟ್ಟು ಜನಸಂಖ್ಯೆ, ಅದರ ಲಿಂಗಾನುಪಾತ, ಸಾಕ್ಷರತಾ ಪ್ರಮಾಣ ಮುಂತಾದವುಗಳನ್ನು ಕಂಡುಕೊಳ್ಳಲಾಗಿದೆ.
- ಇವರ ಪಾರಂಪರಿಕ ಉದ್ಯೋಗ ಬೇಟೆಯಾಡುವುದು ಇಂದು ಕಾನೂನು ಬಾಹೀರ ಚಟುವಟಿಕೆಯಾಗಿದ್ದು, ಇದರಿಂದ ಸದರಿ ಸಮುದಾಯ ಹಿಂದೆ ಸರಿದು, ಜೀವನೋಪಾಯಕ್ಕಾಗಿ ಇನ್ನಿತರ ಉದ್ಯೋಗಗಳನ್ನು ಅರಸಿಕೊಂಡಿದ್ದನ್ನು ಗುರುತಿಸಲಾಗಿದೆ.
- ಇವರ ಪ್ರಮುಖ ಧಾರ್ಮಿಕ ವಿಧಿ ಮಸೂಬಾದ ಆಚರಣೆಯನ್ನು ಪ್ರಥಮ ಬಾರಿಗೆ ಈ ಅಧ್ಯಯನದಲ್ಲಿ ಬೆಳಕು ಬೀರಲಾಗಿದೆ. ಸದರಿ ಸಮುದಾಯದ ಮನೆದೇವರು ಮತ್ತು ಕುಲದೇವರನ್ನು ಹಾಗೂ ಹಿರಿಯರ ಹಬ್ಬದ ಆಚರಣೆಯನ್ನು ಗುರುತಿಸಲಾಗಿದೆ.
- ಸದರಿ ಸಮುದಾಯದ ಪಾರಂಪರಿಕ ವೈಧ್ಯ ಪದ್ಧತಿ, ಔಷದೋಪಚಾರ, ರೋಗಗಳಿಗೆ ಔಷಧಿ ನೀಡಿ ಗುಣಪಡಿಸುವದನ್ನು ಗುರುತಿಸಲಾಗಿದೆ.
- ನ್ಯಾಯಪದ್ಧತಿಯು ಇತರ ಸಮುದಾಯಗಳಿಂಗಿಂತ ಹೇಗೆ ಭಿನ್ನವಾಗಿದೆ ಎಂಬುದರ ವೈಶಿಷ್ಠ್ಯತೆಗಳನ್ನು, ನ್ಯಾಯಪಂಚಾಯತಿ ಹಾಗೂ ಅದರ ಮುಖ್ಯಸ್ಥ, ನ್ಯಾಯ ತೀರ್ಪುಗಳು ಗುರುತಿಸಲಾಗಿದೆ.

- ಈ ಸಮುದಾಯದ ವೈಶಿಷ್ಟ್ಯತೆಗಳನ್ನು ಗುರುತಿಸುತ್ತಾ, ಇವರ ಭೌಗೋಳಿಕ ವ್ಯಾಪ್ತಿ, ಇವರ ಪ್ರಸ್ತುತ ನೆಲೆಗಳು ಮತ್ತು ಬಳಿ ಅಥವಾ ಬೆಡಗು ಇತ್ಯಾದಿಗಳನ್ನು ದಾಖಲಿಸಲಾಗಿದೆ.

- ಇವರ ಸಾಹಿತ್ಯ, ಗಾಯಕರು, ತತ್ವಪದಕಾರರು, ರಂಗಭೂಮಿ ಕಲಾವಿದರು ಮುಂತಾದವುಗಳನ್ನು ಅವಲೋಕಿಸಲಾಗಿದೆ.

ಚೆನ್ನದಾಸರ ಸಮುದಾಯ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳು, ಅವುಗಳಿಗೆ ವಾಸ್ತವಿಕ ನೆಲೆಯಲ್ಲಿ ಒದಗಿಸಬಹುದಾದ ಸೂಕ್ತ ಪರಿಹಾರಗಳನ್ನು ಸೂಚಿಸಲಾಗಿದೆ. ಈ ಸಮುದಾಯವು ಇದೀಗ ಜಾಗೃತಗೊಳ್ಳುತ್ತಿದೆ. ದಲಿತ ಸಂಘಟನೆಗಳು, ಕೆಳವರ್ಗದ ಸಂಘಟನೆಗಳು ಚೆನ್ನದಾಸರ ಸಮುದಾಯದ ಸಹಭಾಗಿತ್ವ ಪಡೆಯುತ್ತ ತಾವು ಬಲಿಷ್ಠಗೊಳ್ಳುತ್ತ, ಅವರನ್ನು ಪ್ರಗತಿ ಪಥದತ್ತ ಮುನ್ನಡೆಸಲು ಸಹಕರಿಸುತ್ತಿವೆ. ಈ ಸಮುದಾಯದ ಯುವಕರು, ಅಕ್ಷರದೀಕ್ಷೆ ಪಡೆದವರು, ಪ್ರಜ್ಞಾವಂತರು ಸಂಘಟನೆಗಳಲ್ಲಿ ಸಕ್ರೀಯವಾಗಿ ಪಾಲುಗೊಂಡರೆ ಸಂಘಟನೆಯ ಶಕ್ತಿಯಾಗಿ ರೂಪುಗೊಳ್ಳುತ್ತದೆ. ಅಜ್ಞಾನ, ಅನಕ್ಷರತೆ, ಅಂಧಾನುಕರಣೆಗಳಿಂದ ಈ ಸಮುದಾಯ ಹೊರಬರಬೇಕಾಗಿದೆ. ಇದಕ್ಕೆ ಶಿಕ್ಷಣವೇ ಮದ್ದಾಗಿದೆ. ಪ್ರಗತಿಪರವಾಗಿ ಆಲೋಚಿಸಲು ವೈಚಾರಿಕವಾಗಿ ಚಿಂತಿಸಲು ಪ್ರಾಶಸ್ತ್ಯ ನೀಡಬೇಕಾಗಿದೆ. ಸರಕಾರಿ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ಮೀಸಲಾತಿಯನ್ನು ಉಪಯೋಗಿಸಿಕೊಂಡು ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಗತಿ ಸಾಧಿಸಬೇಕು. ಯುವಜನಾಂಗ ಜಾಗೃತಗೊಂಡಿರುವುದು ಈ ಸಮುದಾಯಕ್ಕೆ ಆಶಾದಾಯಕ ಬೆಳವಣಿಗೆಯಾದೆ.

*****

ಅನುಬಂಧಗಳು

ಗ್ರಂಥ ಋಣ

ಮಾಹಿತಿದಾರರ ಸೂಚಿ

೧. ಬೆಳಗಾವಿ ಜಿಲ್ಲೆಯ ಚೆನ್ನದಾಸರ ಒಂದು ಕುಟುಂಬದ ವಂಶಾವಳಿ
ಹೆಳವರ ದಾಖಲೆ

೨. ಕ್ಷೇತ್ರಕಾರ್ಯಕ್ಕೆ ಬಳಸಿದ ಪ್ರಶ್ನಾವಳಿ ನಮೂನೆ

೩. ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ನೆಲೆವಾರು ಮತ್ತು
ಜನಸಂಖ್ಯೆ

೪. ಛಾಯಾ ಚಿತ್ರಗಳು.

ಗ್ರಂಥ ಸೂಚಿ

ಕನ್ನಡ

೧. ಅಕ್ಕೂರಮಠ ಷಣ್ಮುಖಯ್ಯ, **'ಭಾರತೀಯ ಭಕ್ತಿ ಚಳುವಳಿ'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೦

೨. ಇಟ್ಟಣ್ಣವರ ಶ್ರೀರಾಮ, **'ಪಾರಿಜಾತ : ಒಂದು ಅಧ್ಯಯನ'**, ಮಿನಿ ಪ್ರಕಾಶನ, ಬೆಂಗಳೂರು. ೧೯೯೧

೩. ಇಮ್ರಾಪೂರ ಸೋಮಶೇಖರ, **'ಜನಪದ ಒಗಟುಗಳು'**, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೭

೪. ಉಡುಪ ಯಜ್ಞನಾರಾಯಣ, **'ಪುರಾಣ ಭಾರತ ಕೋಶ'**, ಗೀತಾ ಬುಕ್ ಹೌಸ್, ಮೈಸೂರು. ೧೯೯೫

೫. ಕಟ್ಟಿ ವೆಂಕಟ ರಂಗೋ(ಅನು), **'ಕರ್ನಾಟಕ ಗೆಝೇಟೀಯರ್'**, ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು: ಧಾರವಾಡ/ಬೆಳಗಾವಿ/ಬಿಜಾಪುರ/ಕೆನರಾ ನಾಲ್ಕು ಜಿಲ್ಲೆಗೆ ಸಂಬಂಧಿಸಿದ್ದು ಏಷಿಯನ್ ಏಜುಕೇಶನಲ್ ಸರ್ವಿಸಿಸ್, ಹೊಸದೆಹಲಿ. ೧೯೮೪

೬. ಕಂಬಾರ ಚಂದ್ರಶೇಖರ, **'ದೇಶಿಯ ಚಿಂತನ'**, ವಿಮೋಚನಾ ಪ್ರಕಾಶನ, ಬೆಂಗಳೂರು. ೨೦೦೪
'ಕನ್ನಡ ಜಾನಪದ ವಿಶ್ವಕೋಶ', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೫

೭. ಕರಿಶೆಟ್ಟಿ ರುದ್ರಪ್ಪ, **'ಮ್ಯಾಸ ನಾಯಕರು : ಒಂದು ಜನಾಂಗಿಕ ಅಧ್ಯಯನ'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೯೫

೮. ಕಲಬುರ್ಗಿ ಎಮ್.ಎಮ್.. **'ಕರ್ನಾಟಕದ ಕೈಫಿಯತ್ತುಗಳು'**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ೧೯೯೪

೯. ಕಿಕ್ಕೇರಿ ನಾರಾಯಣ, **'ಬುಡಕಟ್ಟು ಸಂಸ್ಕೃತಿ'**, ಅರುಹು–ಕುರುಹು, ಮೈಸೂರು. ೨೦೧೧

೧೦. ಕುಮಾರ ಕಕ್ಕಯ್ಯ ಪೋಳ. **'ಚಾತುರ್ವರ್ಣ ಧರ್ಮದರ್ಶನ'**, ಲೋಹಿಯಾ ಪ್ರಕಾಶನ, ಬಳ್ಳಾರಿ. ೧೯೯೭

೧೧. ಕುಪ್ಪೆ ನಾಗರಾಜ(ಸಂ), **'ಏಕತಾರಿ'**, ದೊಂಬಿದಾಸರ ಕ್ಷೇಮಾಭಿವೃದ್ದಿ ಸಂಘ, ಮೈಸೂರು. ೨೦೦೩

'ದೊಂಬಿದಾಸ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೮

೧೨. ಕೊಟಗಾನಹಳ್ಳಿ ರಾಮಯ್ಯ, **'ಸಿಂಧ ಮಾದಿಗರ ಸಂಸ್ಕೃತಿ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೩

೧೩. ಗುಂಜಟ್ಟಿ ಬಿ.ವಿ., **'ಜನಪದ ಸಾಹಿತ್ಯ ದರ್ಶನ'**, ಸಂ–೭, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ , ಧಾರವಾಡ. ೧೯೮೬

೧೪. ಗೊಳಸಂಗಿ ಅರ್ಜುನ, **'ದಲಿತರ ಬದುಕು ಮತ್ತು ಸಂಸ್ಕೃತಿ'**, ವಿಮೋಚನಾ ಪ್ರಕಾಶನ, ಅಥಣಿ. ೨೦೦೦

'ದಲಿತ ಲೋಕದ ಶೋಧ : ಜಾನಪದೀಯ ಅಧ್ಯಯನ', ದಲಿತ ಸಾಹಿತ್ಯ ಪರಿಷತ್ತು, ಗದಗ. ೧೯೯೮

೧೫. ಚಂದ್ರಹಾಸ ಗುಪ್ತ(ಪ್ರಸಂ), **'ಭಾರತದ ಗೆಝೇಟಿಯರ್'**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ೧೯೯೧

೧೬. ಜವರೇಗೌಡ ದೇ., **'ಜನಪದ ಅಧ್ಯಯನ'**, ವಿಶ್ವ ಮಾನವ ಪ್ರಕಾಶನ, ಮೈಸೂರು. ೧೯೮೬

೧೭. ತರಿಕೇರಿ ರಹಮತ್, **'ಪ್ರತಿಸಂಸ್ಕೃತಿ'**, ಅಭಿನವ ಪ್ರಕಾಶನ, ಬೆಂಗಳೂರು. ೧೯೯೨

೧೮. ತಾರಿಹಳ್ಳಿ ಹನುಮಂತಪ್ಪ(ಸಂ), **'ಕರ್ನಾಟಕದ ಬುಡಕಟ್ಟು ಸಮುದಾಯಗಳು'**, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೦

೧೯. ದಾಸನೂರು ಕೂಸಣ್ಣ, **'ಶೋಷಿತ ಜಂಗಮರ ಮೀಸಲಾತಿ'**, ಮಾತಂಗ ಪ್ರಕಾಶನ, ಮೈಸೂರು. ೧೯೯೮

೨೦. ಧರ್ಮಾನಂದ ಕೋಸಂಬಿ, ಆದ್ಯ ರಂಗಾಚಾರ್ಯ (ಅನು), **'ಭಗವಾನ್ ಬುದ್ದ'**, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ. ೧೯೯೮

೨೧. ಧೂಪದ, ಎಂ.ಟಿ., **'ಕರ್ನಾಟಕ ಜಾನಪದ ರಂಗಭೂಮಿ'**, ಹಂಸಧ್ವನಿ ಪ್ರಕಾಶನ, ಬೆಂಗಳೂರು. ೧೯೭೧

೨೨. ನಂಜೇಗೌಡ ಎಚ್.(ಸಂ), **'ಕನ್ನಡ ಜಾನಪದ ಕೋಶ'**, ತನುಮನ ಪ್ರಕಾಶನ, ಮೈಸೂರು. ೨೦೦೨

೨೩. ನರೋಡೆ ಅಶೋಕ, **'ಜನಪದ ವಸುಧಾವಲಯಂ'**, ಸಚಿನ್ ಪಬ್ಲಿಷರ್ಸ್, ಬೆಂಗಳೂರು. ೨೦೧೦

೨೪. ನಾಗೇಗೌಡ ಎಚ್.ಎಲ್.(ಸಂ), **'ಕನ್ನಡ ಜಾನಪದ ಕೋಶ'**, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು. ೧೯೯೮

೨೫. ನಿರುಪಮಾ, **'ಲಲಿತ ಶಾಸ್ತ್ರ– ದಾಸ ಪರಂಪರೆ'**, ಆರತಿ ಪಬ್ಲಿಕೇಷನ್, ಬೆಂಗಳೂರು. ೧೯೯೧

೨೬. ಪರಮಶಿವಯ್ಯ ಜೀ ಶಂ., **'ದೊಂಬಿದಾಸರು'**, ಆಯ್.ಬಿ.ಎಚ್. ಪ್ರಕಾಶನ, ಬೆಂಗಳೂರು. ೧೯೮೦

'ದೊಂಬಿದಾಸರ ಲಾವಣಿಗಳು', ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧

೨೭. ಪವಾರ ಹರಿಲಾಲ ಕೆ. , **'ಕರ್ನಾಟಕದ ಹೆಳವರು–ಜಾನಪದೀಯ ಅಧ್ಯಯನ'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೯೨

೨೮. ಪಂಡಿತ ಜೆ.ಎ. ಕವಲಿ.(ಸಂ), **'ಕನ್ನಡ–ಕನ್ನಡ ಕಸ್ತೂರಿ ಕೋಶ'**, ರಾಮಾಶ್ರಯ ಬುಕ್‌ಡಿಪೋ, ಧಾರವಾಡ. ೧೯೮೯

೨೯. ಪುಟ್ಟಪ್ಪ ಕೆ.ವಿ.(ಸಂ),' **ಭಾರತದ ಭೂ ವಿಜ್ಞಾನ'**, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೬೪

೩೦. ಭಗವತ್‌ಶರಣ ಉಪಾಧ್ಯಾಯ.(ಅನು), ಪ್ರಧಾನ ಗುರುದತ್ತ, **‘ಭಾರತೀಯ ಸಾಮಾಜಿಕ, ಐತಿಹಾಸಿಕ ವಿಶ್ಲೇಷಣೆ’**, ಕರ್ನಾಟಕ ಪ್ರಕಾಶನ, ಬೆಂಗಳೂರು. ೧೯೮೬

೩೧. ಪ್ರಭಾಕರ್ ಎ. ಎಸ್., ‘ಹೆಳವರು, ಅಲೆಮಾರಿ ಮತ್ತು ಅರೆ ಅಲೆಮಾರಿ’ ಕನ್ನಡ ವಿಶ್ವವಿದಾಲಯ, ಹಂಪಿ ೨೦೧೦

೩೩. ಪ್ರಶಾಂತ ಎಚ್.ಡಿ., **‘ಜನಸಮುದಾಯ ಸಂಪುಟ’**, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

೩೪. ಭರಣಿ ಸುಭಾಷ್, **‘ಧರೆಗೆ ದೊಡ್ಡವರು’**, ದ್ರಾವಿಡ ಪಬ್ಲಿಕೇಷನ್, ಮೈಸೂರು. ೨೦೦೫

೩೫. ಬಿಳಿಮಲೆ ಪುರುಷೋತ್ತಮ, **‘ದಲಿತ ಜಗತ್ತು’**, ಹೊಸ ದಿಕ್ಕು ಪ್ರಕಾಶನ, ಬೆಂಗಳೂರು. ೧೯೮೮

೩೬. ಬೀಚನಹಳ್ಳಿ ಕರಿಗೌಡ(ಸಂ), **‘ಕರಕುಶಲ ಕಲೆಗಳು’**, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೦

(ಸಂ) **‘ಬುಡಕಟ್ಟು ಅಧ್ಯಯನ’** ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೫

೩೭. ಬೆಟಗೇರಿ ಕೃಷ್ಣಶರ್ಮ, **‘ಕನ್ನಡ ಜಾನಪದ ಸಾಹಿತ್ಯ’**, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.೧೯೭೬

೩೮. ಬೈರಪ್ಪ ಕೆ., **“ಸಮಗ್ರ ಭಾರತೀಯ ಸಮಾಜ”**, ಸಪ್ನ ಬುಕ್ ಹೌಸ್, ಬೆಂಗಳೂರು,೨೦೧೦

೩೯. ಬೋರಲಿಂಗಯ್ಯ ಹೀ.ಚಿ., **‘ದಾಸಪ್ಪ-ಜೋಗಪ್ಪ’**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೪

೪೦. ಮಲಶೆಟ್ಟಿ ಬಸವರಾಜ, **‘ಉತ್ತರ ಕರ್ನಾಟಕದ ಬಯಲಾಟಗಳು’**, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨

೪೧. ಮಹಿಶವಾಡಿ ಬಿ.ಬಿ., **“ಕನ್ನಡ ಜನಪದ ಸಾಹಿತ್ಯ”**, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

೪೨. ಮಾಲಗತ್ತಿ ಅರವಿಂದ.(ಸಂ), **‘ದಲಿತ ಮಾರ್ಗ’**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೨

‘ಕನ್ನಡ ವಿಷಯ ವಿಶ್ವಕೋಶ’, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೨೦೦೫

೪೩. ಮೇತ್ರಿ ಕೆ. ಎಮ್.,**’ಮರಗು ಭಾಷೆ’**, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೧೨

೪೪. **‘ಬುಡಕಟ್ಟು ಕುಲ ಕಸುಬುಗಳು’**, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೨

“ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ”, ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೦

೪೫. ಮೈಲಹಳ್ಳಿ ರೇವಣ್ಣ, **‘ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ’**, ರಾಜ್ ಪ್ರಕಾಶನ, ಮೈಸೂರು. ೨೦೦೪

೪೬. ರಂಗನಾಥ ಕೆ.ಎಚ್., “ಕನ್ನಡ ನಾಟಕ ಕಲೆ” ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೧೯೮೧

೪೭. ರಾಜಶೇಖರಯ್ಯ ಎಂ. ಎಂ., **‘ಡಾ.ಬಾಬಾಸಾಹೇಬ ಅಂಬೇಡ್ಕರ್ ಭಾಷಣಗಳು’**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ೧೯೯೧

‘ಡಾ. ಬಾಬಾಸಾಹೇಬ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು’, ಸಂಪುಟ–೧೦ (ಭಾಗ:೧–೨), ಭಾಗ–೩, ಸಂಪುಟ–೧೧(ಭಾಗ–೨),ಸಂಪುಟ–೧೪, (ಭಾಗ–೧, ಬಿ ವಿಭಾಗ–೧ರಿಂದ ೩),ಸಂಪುಟ–೧೪ ಭಾಗ–೧(ಅ) ಭಾಗ– ೩, ಒಟ್ಟು ಸಂಪುಟಗಳು– ಐದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ೧೯೯೯

೪೮. ರಾಜೂರು ವೀರಣ್ಣ.(ಸಂ), **‘ಜಾನಪದ ಸಾಹಿತ್ಯ ದರ್ಶನ’**, ಸಂ–೧೪, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೯೨

೪೯. ರಾಮಚಂದ್ರಗೌಡ ಹಿ.ಶಿ., **‘ವಿಚಾರ ಸಾಹಿತ್ಯ’**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೬

೫೦. ರಾಮಚಂದ್ರರಾವ್, ಸಾ.ಕೃ., **'ದಾಸ ಸಾಹಿತ್ಯ ಮತ್ತು ಸಂಸ್ಕೃತಿ'**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೩

೫೧. ರಾಮಾನುಜಮಂ ಪಿ.ಎಸ್., **'ಕರ್ನಾಟಕದ ಪರಂಪರೆ'**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ೧೯೯೨

೫೨. ರೈ ಸುಬ್ಬಣ್ಣ ಎ., **'ದ್ರಾವಿಡ ನಿಘಂಟು'**, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೧

೫೩. ಲಕ್ಕಪ್ಪಗೌಡ,ಜೆ.ಎಚ್(ಪ್ರ.ಸಂ), **'ಜಾನಪದ ಕೈಪಿಡಿ'**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೧೯೯೭

'ಕರ್ನಾಟಕದ ಬುಡಕಟ್ಟುಗಳು', ಸಂಪುಟ–೨, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿ, ಬೆಂಗಳೂರು.೨೦೦೦

೫೪. ವೀರಭದ್ರಪ್ಪ ಬಿ.ವ್ಹಿ., **'ವೇದಗಳಲ್ಲಿ ಜನಸಾಮಾನ್ಯರು'**, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೧

೫೫. ಶರ್ಮಾ ಆರ್.ಎಸ್.(ಅನು), **'ಪ್ರಾಚೀನ ಭಾರತದಲ್ಲಿ ಶೂದ್ರರು'**, ವಕರ್ನಾಟಕ ಪ್ರಕಾಶನ, ಬೆಂಗಳೂರು. ೨೦೦೫

೫೬. ಶಂಕರರಾವ್ ಚ.ನ., **'ಭಾರತೀಯ ಸಮಾಜ ಅಧ್ಯಯನ'**, ಜೈ ಭಾರತ ಪ್ರಕಾಶನ ಮಂಗಳೂರು, ೨೦೦೭

೫೭. ಶ್ರೀಮತಿ.ಎಚ್.ಎಸ್.(ಅನು), **'ಪ್ರಾಚೀನ ಭಾರತದ ಚರಿತ್ರೆ'**, ಬೆಳ್ಳಿಚುಕ್ಕಿ ಬುಕ್ ಬಾಲಗೋಪಾನ್ ಟ್ರಸ್ಟ್, ಬೆಂಗಳೂರು. ೧೯೯೮

೫೮. ಸಣ್ಣಕ್ಕಿ ನಿಂಗಣ್ಣ, **'ಜಾನಪದ ವೈಭವ'**, ಪೂರ್ಣಿಮಾ ಪ್ರಕಾಶನ, ಗೋಕಾಕ. ೧೯೯೧

೫೯. ಸಿಂಗೆ, ಎಸ್.ಆರ್., **'ಹೊಲೆಯರು: ಒಂದು ಅಧ್ಯಯನ'**, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿ.ಎಚ್.ಡಿ.ಮಹಾಪ್ರಬಂಧ, ಧಾರವಾಡ. ೧೯೯೧

೬೦. ಸಿದ್ಧರಾಮಯ್ಯ ಜಿ.ಎಸ್., "ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ", ಜನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, ೨೦೦೪

೬೧. ಸುಂಕಾಪುರ ಎಂ.ಎಸ್.,**'ಕನ್ನಡ ಬಯಲಾಟ'**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೭೨

'ಜಾನಪದ ಸಾಹಿತ್ಯ ದರ್ಶನ–೩' (ಸಂ)

'ಜಾನಪದ ಸಾಹಿತ್ಯ ದರ್ಶನ–೪' (ಸಂ)

'ಜಾನಪದ ಸಾಹಿತ್ಯ ದರ್ಶನ–೬' (ಸಂ)

ಪ್ರಸಾರಂಗ ಕರ್ನಾಟಕವಿಶ್ವವಿದ್ಯಾಲಯ, ಧಾರವಾಡ. ೧೯೭೮–೧೯೮೦

೬೧. ಸೂರ್ಯಕಾಂತ ಸುಜಾತ.(ಅನು), **'ಗುಲಾಮಗಿರಿ'**, ಸುಮೇಧ ಪ್ರಕಾಶನ ಮಹಾತ್ಮಾ ಜ್ಯೋತಿಬಾ ಪುಲೆ, ಗುಲ್ಬರ್ಗಾ. ೨೦೦೯

೬೨. ಭಗವಾನ್ ಕೆ.ಎಸ್.(ಅನು), **'ಹಿಂದೂ ಸಾಮ್ರಾಜ್ಯ ಶಾಹಿಯ ಇತಿಹಾಸ'**, ಸ್ವಾಮಿಧರ್ಮ ತೀರ್ಥ ಮಹಿಮ ಪ್ರಕಾಶನ, ಬೆಂಗಳೂರು. ೨೦೦೩

೬೩. ಹಕಾರಿ ದೇವೇಂದ್ರಕುಮಾರ, "ಜನಪದ ಸಾಹಿತ್ಯ ದರ್ಶನ", ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೬

೬೪. ಹಿಮ್ಮಡಿ ಯಲ್ಲಪ್ಪ, **'ಚೆನ್ನದಾಸರ'**, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ೨೦೦೮

೬೫. ಹೊಸೂರು ಮುನಿಶಾಮಪ್ಪ, **'ನಟುವರ ಸಂಸ್ಕೃತಿ'**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೨

పత్రికెగళు

೧. ಬುಡಕಟ್ಟು ಅಧ್ಯಯನ –೦೨ (ಸಂ) ಬೋರಲಿಂಗಯ್ಯ ಹಿ.ಚಿ ಮತ್ತು ಪ್ರಭಾಕರ ಎ.ಎಸ್.

೨. ಬುಡಕಟ್ಟು ಅಧ್ಯಯನ– ೦೪ (ಸಂ) ಬೋರಲಿಂಗಯ್ಯ ಹಿ.ಚಿ ಮತ್ತು ಪ್ರಭಾಕರ ಎ.ಎಸ್.

೩. ಬುಡಕಟ್ಟು ಅಧ್ಯಯನ ಸಂ–೨, (ಸಂ) – ೦೧ (ಜನೇವರಿ– ಜೂನ್)– ೨೦೦೬

(ಸಂ) ಮೇತ್ರಿ, ಕೆ.ಎಂ. ಮತ್ತು ಚೆಲುವರಾಜು.

೪. ಬುಡಕಟ್ಟು ಅಧ್ಯಯನ ಸಂ–೦೩, (ಸಂ)– ೨ (ಜುಲೈ – ಡಿಸೆಂಬರ್)– ೨೦೦೬

(ಸಂ) ಮೇತ್ರಿ ಕೆ ಎಂ. ಮತ್ತು ಚೆಲುವರಾಜು.

೫. ಬುಡಕಟ್ಟು ಅಧ್ಯಯನ ಸಂ–೪, (ಸಂ)–೧, (ಜನೇವರಿ–ಜೂನ್)–೨೦೦೭

(ಸಂ) ಮೇತ್ರಿ ಕೆ.ಎಂ. ಮತ್ತು ಚೆಲುವರಾಜು.

೬. ಬುಡಕಟ್ಟು ಅಧ್ಯಯನ ಸಂ–೪, (ಸಂ)–೨, (ಜುಲೈ– ಡಿಸೆಂಬರ್)–೨೦೦೭

(ಸಂ) ಮೇತ್ರಿ ಕೆ.ಎಂ. ಮತ್ತು ಚೆಲುವರಾಜು.

ಇಂಗ್ಲೀಷ್ ಗ್ರಂಥಗಳು

1. Ananthakrishna Iyer L. K., **'The Mysore Tribes and Castes',** Mysore The Mysore University, 1930, rpt. 1998, New Delhi. Mittal Publications. 5 Vols.
2. Devy G. N.(chairman), **'Technical Advisory Group on Denotified Nomadic and Semi-nomadic Tribes Report, 2006,** New Delhi: Ministry of social justice and Empowerment, Government of India.
3. Enthoven R. E., **'The Tribes and Castes of Bombay',** Bombay: Government Central Press, 1922, rpt.1975 Delhi: Cosmo Publications, 3 Vols.
4. Eustace J. Kitts, **'A Compendium of the Castes and Tribes found in India: Census of India 1881',** Byculla: Education Society Press, 1885: rpt.1982, Gurgaon: The Academic Press, Gurgaon.
5. Hassan S. S., **'The Castes and Tribes of H.E.H Nizam's Dominions',** Bombay; Government Central Press, Rpt1989, New Delhi: Asian Educational Services. 1920
6. Havanur L. G., **'Karnataka Backward Classes commission Report',** Bangalore: Government Press, 5 Vols. 1975
7. Misra P. K. Rajalakshmi, & C. R., Verghese I., **'Nomads in the Mysore City',** Calcutta: Anthropological Survey of India. 1971

8) Nagan Gowda R. (Chaiman) **'Mysore Backward Classes Committee Report',** Bangalore Government Press.1979

9. Nanduram & Nanjundayya H. V., **'Encyclopaedia of Scheduled Castes in india'**, New Delhi,The ethnographic Survey of Mysore. Bangalore Governmnet Press. 1906

10. Ravivarma Kumar(Chairman). **'The Karnataka State Commission for Backward Classes Special Report-2000'**, Bangalore Government Press.2000

11. Reddy O. Chinnappa(Chairman)., **'Report of Karnataka Third Back ward Classes Commission. Bangalore'**, Government Press. 1990, 2 Vols.

12. Risley H .H., **'The Caste and Tribes of Bengal'**, Calcutta,Bengal m Secretariat Press, 1891,rpt.1981, Calcutt. Firma Mukhopadhyay, Vols

13. Russell R. V. and Hiralal, **'The Tribes and Castes of the Central Provinces of India'**, London: Macmillan and Co. 1916, rpt. 1975 New Delhi, Cosmo Publications, vols

14. Shashi S. S., **'The World of Nomads,** New Delhi: Lotus Press, 2006

15. Singh K. S., **'The Scheduled Castes'**, Delhi:Oxford University, Press, 1993) People of India National Series, vol. 2

16. Thurrston E., **'Ethnographic Notes on Southern India'**, Madras; Government Press, 1906

17. Usha Rani N., **'Folk Media for Development'**, A Study of Karnatak's Traditional Media, Bangalore

18. Venkataswamy T., **'Report of the Karnataka Second Backward Classes Commission'**, Bangalore:Government Press, 1986, 3 Vols.

Reports

1. Brochure on Reservation for Scheduled Castes, Scheduled Tribes and other Categories of Backward Classes in Services and Posts, Bangalore,Government Press. 1987
2. Brochure on Reservation and Concessions for Scheduled Castes Scheduled Tribles and other Backward Classes, New Delhi, A Nabhi Publicatons. 2004
3. Joint Committee on the Scheduled castes and Scheduled Tribers Orders, Amendmant Bill 1967, Published by Govt. of India.
4. The Scheduled Tribes, Delhi: Oxford University, Press, 1994 People of India National Series, vol.3 India's Communities Delhi: Oxford University, Press,1998 People of India National Series, vol.4-6.General Editor. People of India: Karnataka (NewDelhi: Anthro pological Survey of India, 2003 Volume XXVI.
5. The Annual Administation Report on the Working of the Criminal Tribes Act in the BombayPresidency Part-I Bombay:Govt.Central Press, 1936
6. The New Encyclopaedia Britannica The University of Chicago,1992

7. The Scheduled Castes and Scheduled Tribes Orders Amendament Bill, 1967, No.119-B of 1967, Published by Govt. of India.

8. Castes and Tribes of Southern India Madras: Government Press, 1906

9. Castes and Tribes of Southern India Madras: Government Press, 1909, rpt 1975, Delhi. Cosmo Publications, 7 Vols.

10. Karnataka Book Publishers, Mico Layout, Arakere, Bangalore: Karnataka Book Publishers, Mico Layout, Arkere, Bannergatta Road,1996

ಮಾಹಿತಿದಾರರ ಸೂಚಿ

ಕ್ರ.ಸಂ	ಹೆಸರು	ಊರು	ತಾಲೂಕು	ವಯಸ್ಸು	ಹುದ್ದೆ
೦೧	ಶಿವಾಜಿ ವೆ. ನಂದಿವಾಲೆ	ಸಂಕೋನಟ್ಟಿ	ಅಥಣಿ	೪೫	ಕೂಲಿ
೦೨	ರಾಜಾರಾಮ ಬಾ. ಚೆನ್ನದಾಸರ	ಸಂಕೋನಟ್ಟಿ	ಅಥಣಿ	೬೦	ಕೂಲಿ
೦೩	ಉದ್ದಪ್ಪ ದುರಗಪ್ಪ ಗುಡದಾರ	ಉದಗಟ್ಟಿ	ಗೋಕಾಕ	೫೬	ಕೂಲಿ
೦೪	ಚೆನ್ನಬಸು ಹನುಮಂತಪ್ಪ ಗುಡದಾರ	ಉದಗಟ್ಟಿ	ಗೋಕಾಕ	೫೭	ಕೂಲಿ
೦೫	ಯಮನಪ್ಪ ಹ. ದಾಸರ	ಕಲ್ಲೋಳಿ	ಗೋಕಾಕ	೨೩	ಶಿಕ್ಷಣ
೦೬	ಹಣಮಂತ ಲಕ್ಷ್ಮಣ ಗಾಣಿಗೇರ	ಮಸಗುಪ್ಪಿ	ಗೋಕಾಕ	೨೯	ಕೂಲಿ
೦೭	ಶ್ರೀಶೈಲ ಅ. ಚೆನ್ನದಾಸರ	ಮೂಡಲಗಿ	ಗೋಕಾಕ	೪೩	ವ್ಯವಹಾರ

೦೮	ನರಸಪ್ಪ ಶೆಟ್ಟೆಪ್ಪ ದಾಸರ	ಹಿರೇಕೋಡಿ	ಚಿಕ್ಕೋಡಿ	೩೨	ಕೃಷಿ
೦೯	ಬಾಮು ಅ. ದಾಸರ	ಹಿರೇಕೋಡಿ	ಚಿಕ್ಕೋಡಿ	೪೫	ಕೂಲಿ
೧೦	ರಕ್ಷಪ್ಪ ಯಲ್ಲಪ್ಪ ದಾಸರ	ಹಿರೇಕೋಡಿ	ಚಿಕ್ಕೋಡಿ	೩೭	ಮೀನುಗಾರಿಕೆ
೧೧	ಸುರೇಶ ಯ. ನಂದಿವಾಲೆ	ಎಂಬಾಳ	ಬೆಳಗಾವಿ	೪೫	ಕೂಲಿ
೧೨	ರಾಮು ಚ. ದಾಸರ	ಕಣಬರ್ಗಿ	ಬೆಳಗಾವಿ	೬೦	ಕೂಲಿ
೧೩	ರಾಮಚಂದ್ರಪ್ಪ ಅ. ಅಕ್ಕೆನ್ನವರ	ಬೆಳಗಾವಿ	ಬೆಳಗಾವಿ	೫೧	ನೌಕರ,
೧೪	ಕೃಷ್ಣಪ್ಪ ಹ. ದಾಸರ	ಉದಪುಡಿ	ರಾಮದುರ್ಗ	೬೮	ಚಾಕರಿ
೧೫	ಕೃಷ್ಣ ಹ ದಾಸರ	ಕರಡಿಗುಡ್ಡ	ರಾಮದುರ್ಗ	೫೯	ನೌಕರ


೧೬	ಭೀಮಪ್ಪ ಗಿ. ದಾಸರ	ಚಿಕ್ಕತಡಸಿ	ರಾಮದುರ್ಗ	೬೫	ಕೂಲಿ
೧೭	ರಂಗನಾಥ ದಂಡಗಿ	ಬನ್ನೂರ	ರಾಮದುರ್ಗ	೭೦	ಕೂಲಿ.
೧೮	ಕಮಲಾಕ್ಷಿ ಹ. ದಾಸರ	ರಾಮದುರ್ಗ	ರಾಮದುರ್ಗ	೩೮	ಕೂಲಿ
೧೯	ಜಕ್ಕಪ್ಪ ಅಕ್ಕೆನ್ನವರ	ಇಟನಾಳ	ರಾಯಬಾಗ	೬೨	ಕೂಲಿ
೨೦	ಶ್ರೀಕಾಂತ ಅಕ್ಕೆನ್ನವರ	ಇಟನಾಳ	ರಾಯಬಾಗ	೪೦	ವ್ಯಾಪಾರ
೨೧	ಮಹಾದೇವ ಸಿದ್ದಪ್ಪ ಹೆಳವರ	ಮಂಟೂರ	ರಾಯಬಾಗ	೫೩	ಅಲೆಮಾರಿ ಹೆಳವ
೨೨	ದುರ್ಗಪ್ಪ ದಾಸರ	ಸವಸುದ್ದಿ	ರಾಯಬಾಗ	೬೫	ಕೂಲಿ
೨೩	ಯಲ್ಲಪ್ಪ ಚೆನ್ನದಾಸರ	ಸವಸುದ್ದಿ	ರಾಯಬಾಗ	೬೨	ಕೂಲಿ
೨೪	ತಾಯಪ್ಪ ತಾತಪ್ಪ ಸಣ್ಣಕ್ಕಿನವರ	ಹಿಡಕಲ್	ರಾಯಬಾಗ	೬೬	ಕೃಷಿಕ

೨೫	ಡಾ.ಯಲ್ಲಪ್ಪ ಬಿ. ಹಿಮ್ಮಡಿ	ಹಿಡಕಲ್	ರಾಯಬಾಗ	೫೦	ಪ್ರಾಧ್ಯಾಪಕರು
೨೬	ಯಲ್ಲಪ್ಪ ಮಾರುತಿ ಸಣ್ಣಕ್ಕಿನವರ	ಹಿಡಕಲ್	ರಾಯಬಾಗ	೩೫	ಕೃಷಿಕ
೨೭	ರಾಮಪ್ಪ ತಮ್ಮಣ್ಣಾ ಹುಲ್ಲೆನ್ನವರ	ಹಿಡಕಲ್	ರಾಯಬಾಗ	೩೦	ಕೃಷಿ ಕಾರ್ಮಿಕ
೨೮	ರಾಮಪ್ಪ ಯಂಕಪ್ಪ ಹುಲ್ಲೆನ್ನವರ	ಹಿಡಕಲ್	ರಾಯಬಾಗ	೪೨	ನೌಕರ
೨೯	ಹಣಮಂತ ಸಣ್ಣಕ್ಕಿನ್ನವರ	ಹಿಡಕಲ್	ರಾಯಬಾಗ	೪೦	ಪತ್ರಕರ್ತ
೩೦	ಶರಣಪ್ಪ ಯಂಕಪ್ಪ ದಾಸರ	ಹಂಚನಾಳ	ಸವದತ್ತಿ	೪೮	ಕೂಲಿ
೩೧	ಹಣಮಂತ ಶೇಷಪ್ಪ ಚನ್ನದಾಸರ	ಹಂಚನಾಳ	ಸವದತ್ತಿ	೭೯	ಕೂಲಿ
೩೨	ತಾಯಪ್ಪ ಯಂಕಪ್ಪ ಹುಲ್ಲೆನ್ನವರ	ಅರ್ಜುನವಾಡ	ಹುಕ್ಕೇರಿ	೭೦	ಕೂಲಿ

೩೩	ಯಲ್ಲಪ್ಪ ಹಣಮಂತ ಹುಲ್ಲೆನ್ನವರ	ಅರ್ಜುನವಾಡ	ಹುಕ್ಕೇರಿ	೭೪	ಕೂಲಿ
೩೪	ಹಣಮಂತ ಯಲ್ಲಪ್ಪ ದಾಸರ	ಗುಡಸ್	ಹುಕ್ಕೇರಿ	೪೫	ಮೀನುಗಾರಿ ಕೆ


ಅನುಬಂಧ- ಒಂದು :


ಬೆಳಗಾವಿ ಜಿಲ್ಲೆಯ ಚೆನ್ನದಾಸರ ಒಂದು ಕುಟುಂಬದ 16ನೆಯ ಶತಮಾನದ ವಂಶಾವಳಿ (ಹೆಳವರ ದಾಖಲೆ)





ಅನುಬಂಧ- ಒಂದು :

ಬೆಳಗಾವಿ ಜಿಲ್ಲೆಯ ಚೆನ್ನದಾಸರ ಒಂದು ಕುಟುಂಬದ 16ನೆಯ ಶತಮಾನದ ವಂಶಾವಳಿ (ಹೆಳವರ ದಾಖಲೆ)









ಪರಶುರಾಮ ಕಲ್ಲಪ್ಪ ಹುಲ್ಲಿನ್ನವರ

ಅನುಬಂಧ– ಎರಡು :

ಕ್ಷೇತ್ರಕಾರ್ಯಕ್ಕೆ ಬಳಸಿದ ಪ್ರಶ್ನಾವಳಿ ನಮೂನೆ.

"ಬೆಳಗಾವಿ ಜಿಲ್ಲೆಯ ಚೆನ್ನದಾಸರು : ಸಮುದಾಯದ ಸಮೀಕ್ಷೆ"

(ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಸಂಶೋಧನಾ ಅಧ್ಯಯನಕ್ಕಾಗಿ)

ಸಂಶೋಧಕರು: ಶ್ರೀ. ಆಯ್.ಆರ್.ಕೊಕಟನೂರ.

ಸಮಾಜಶಾಸ್ತ್ರ ಅಧ್ಯಾಪಕರು. ಎಸ್.ವಿ.ಈ.ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ

ಹಾರೂಗೇರಿ. ತಾ: ರಾಯಬಾಗ .ಜಿ: ಬೆಳಗಾವಿ. ಮೋ.ನಂ–೯೪೪೮೧೬೩೧೧೯

೧. ಸಾಮಾನ್ಯ ಮಾಹಿತಿ. **೨ ವೈಯಕ್ತಿಕ ಮಾಹಿತಿ.**

A)ಸಮುದಾಯ :

B)ಮಾತೃ ಭಾಷೆ :

C)ಮನೆ ದೇವರು

D)ಕುಲದೇವರು :

ಸಂಬಂದಿಸಿದ ಇತರೆ ದೇವರು. :

F) ಗೋತ್ರ/ಬೆಡಗು/ಬಳಿ :

G) ಮನೆತನದ ಹೆಸರ :

H ಮನೆ ಸಂಖ್ಯೆ :

I) ವಾಸಸ್ಥಾನ :

J) ವಾರ್ಡ :

K) ಪಟ್ಟಣ ಪಂಚಾಯತಿ/ನಗರ ಸಭೆ: :

L) ಗ್ರಾಮ ಪಂಚಾಯತ :

M) ತಾಲೂಕು :

N) ಜಿಲ್ಲೆ :

O) ಈ ಸ್ಥಳದಲ್ಲಿ ವಾಸದ ಅವದಿ :

P) ಎಲ್ಲಿಂದ ಈ ಸ್ಥಳಕ್ಕೆ ವಲಸೆ ಮತ್ತು ಯಾವಾಗ :

Q)ವಾಸ ಸ್ಥಳ ಯಾರದ್ದು :

R) ನಿವೇಶನ.ಮನೆ ಇಲ್ಲ

S) ನಿವೇಶನ ಇದೆ.ಮನೆ ಇಲ್ಲ

T)ನಿವೇಶನ ೧.ಸ್ವಂತದ್ದು ೨.ಸರಕಾರದ್ದು.

U)ಮನೆ ವಿವರ: ೧. ಗುಡಾರ. ೨.ಗುಡಿಸಲು. ೩. ಟಿನ್ ಮನೆ. ೪. ಧಾಬಾ/ಮಾಳಿಗೆ.
5. ಆರ್‌ಸಿಸಿ ಮನೆ. ೬ ಹಂಚಿ ಮನೆ. ೭.ಆಶ್ರಯ ಮನೆ. ೮. ಬಾಡಿಗೆ ಮನೆ.

V) ಭೂಹಿಡುವಳಿ (ಎಕರೆಗಳಲ್ಲಿ)

W) ಪಶು ಸಂಪತ್ತು: ೧.ಎತ್ತು, ಹೋರಿ ೨.ಆಕಳು,ಕರು. ೩.ಎಮ್ಮೆ, ಕೋಣ.
೪. ಕುರಿ, .ಮೇಕೆ. ೫.ಕೋಳಿ.ಹಂದಿ.

X) ಇತರೆ ಸೌಲಭ್ಯಗಳು. ೧.ಪಡಿತರ ಚೀಟಿ. ೨.ವಿದ್ಯುತ್ ಸಂಪರ್ಕ. ೩.ಭಾಗ್ಯ/ಕುಟೀರಜ್ಯೋತಿ.
೪.ಗ್ಯಾಸ್. ೫.ನಲ್ಲಿ. ೬.ಶೌಚಾಲಯ. ೭..ಸ್ನಾನ ಗೃಹ. E:)ಮನೆತನಕ್ಕೆ
೮.ಸೈಕಲ್. ೯.ರೇಡಿಯೋ. ೧೦. ಟೇಪ್ ೧೧..ಟಿವಿ
೧೨.ದೂರವಾಣಿ ಸಂಖ್ಯೆ.

ಕ್ರ ಸಂ	ಕುಟುಂಬದ ಸದಸ್ಯರ ಹೆಸರು	ಸಂಬಂಧ	ಲಿಂಗ	ವಯಸ್ಸು	ಶಿಕ್ಷಣ	ವೈವಾಹಿಕ ಸ್ಥಾನಮಾನ	ಕಸಬು	ಅಂಗ ವೈಕಲ್ಯ	ಸರಕಾರಿ ಸೌಲಭ್ಯಗಳು(ಮಾಸಾಶನ, ವೇತನ, ಇತ್ಯಾದಿ)					
									ಓಟಿನ ಕಾರ್ಡ	ವಿಧವಾ	ಅಂಗವಿಕಲ	ಕಲಾವಿಧರ	ವೃದ್ದಾಪ್ಯ	ಶಿಷ್ಯವೇತನ
I	II	III	IV	V	VI	VII	VIII	IX	X	XI	XII	XIII	XIV	XV
		ಮುಖ್ಯಸ್ಥ/ಸ್ಥೆ												

ಸಮೀಕ್ಷೆಯ ದಿನಾಂಕ : ಸಮೀಕ್ಷೆದಾರರು : ಸಮೀಕ್ಷೆದಾರರು ಮೋ.ನಂ :

ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾದರಿಯನ್ನು ಅನುಸರಿಸಲಾಗಿದೆ.

ಅನುಬಂಧ : ಮೂರು

ಬೆಳಗಾವಿ ಜಿಲ್ಲೆಯ ಚೆನ್ನದಾಸರ ಸಮುದಾಯದ ನೆಲೆವಾರು ಮತ್ತು ಜನಸಂಖ್ಯೆ

ಕ್ರ.ಸಂ	ತಾಲೂಕು	ಊರು	ಕುಟುಂಬ	ಗಂಡು	ಹೆಣ್ಣು	ಒಟ್ಟು
೦೧	ಅಥಣಿ	ಬಡಚಿ	೧೫	೩೭	೩೫	೭೨
		ಸಂಕೋನಟ್ಟಿ	೧೦	೨೫	೨೩	೪೮
		ಒಟ್ಟು	**೨೫**	**೬೨**	**೫೮**	**೧೨೦**
೦೨	ಗೋಕಾಕ	ಉದಗಟ್ಟಿ	೮೨	೧೮೪	೧೮೨	೩೬೬
		ಕಲ್ಲೋಳಿ	೪೨	೧೧೫	೧೦೦	೨೧೫
		ಕೌಜಲಗಿ	೦೭	೧೮	೧೫	೩೩
		ಮಸಗುಪ್ಪಿ	೧೬	೫೬	೫೯	೧೧೫
		ರಂಗಾಪೂರ	೨೬	೭೪	೬೫	೧೩೯
		ಲೋಳಸುರ	೧೧	೨೮	೨೪	೫೨
		ಹೊಸಟ್ಟಿ	೩೦	೭೮	೭೧	೧೪೯
		ಒಟ್ಟು	**೨೧೪**	**೫೫೩**	**೫೧೬**	**೧೦೬೯**
೦೩	ಚಿಕ್ಕೋಡಿ	ಹಿರೇಕೋಡಿ	೫೨	೧೪೧	೧೧೧	೨೫೨
		ಒಟ್ಟು	**೫೨**	**೧೪೧**	**೧೧೧**	**೨೫೨**
೦೪	ಬೆಳಗಾವಿ	ಎಂಬಾಳ	೦೫	೧೩	೧೨	೨೫
		ಕಣಬರ್ಗಿ	೦೨	೦೬	೦೪	೧೦
		ಬೆಳಗಾವಿ	೦೮	೨೦	೧೮	೩೮
			೭೧	೧೫೬	೧೨೫	೨೮೧

		ಹೊನಗಾ				
ಒಟ್ಟು			೮೬	೧೯೫	೧೫೯	೩೬೪
೦೫	ರಾಮದುರ್ಗ	ಕಲಿಮಾಡ	೦೫	೧೪	೧೩	೨೭
		ಗೊಣ್ಣಾಗರ	೦೮	೨೨	೨೦	೪೨
		ಜಾಜಿಕೊಪ್ಪ	೦೩	೧೨	೧೧	೨೩
		ಜಾಲಿಕಟ್ಟಿ	೦೪	೧೨	೧೦	೨೨
		ಬೆಡಕಿ	೦೪	೧೨	೧೦	೨೨
		ಬಟಕುರ್ಕಿ	೦೫	೧೫	೧೫	೩೦
		ಮುದೇನೂರು	೦೧	೦೩	೦೨	೦೫
		ಮುಳ್ಳೂರು	೦೫	೧೮	೧೬	೩೪
		ರಾಮದುರ್ಗ	೨೫	೬೮	೬೨	೧೩೦
		ಸಾಲಹಳ್ಳಿ	೧೦	೨೮	೨೫	೫೩
		ಸುರೇಬಾನ/ಮಣಿಹಾಳ	೧೫	೩೯	೩೭	೭೬
		ಹುಣಶ್ಯಾಳ	೦೫	೧೪	೧೩	೨೭
		ಹುಲಕುಂದ	೧೫	೪೧	೩೯	೮೦
		ಚಿಕ್ಕನರಗುಂದ	೦೬	೧೦	೦೮	೧೮
		ಹಲಗತ್ತಿ	೦೫	೦೮	೦೬	೧೪
ಒಟ್ಟು			೧೧೬	೩೧೬	೨೮೭	೬೦೩
೦೬	ರಾಯಬಾಗ	ಅಲಖನೂರ	೨೩	೫೪	೩೬	೧೧೦
		ಐಬರಟ್ಟಿ	೪೦	೧೧೦	೯೧	೨೦೧
			೧೭	೫೨	೫೦	೧೦೨

		ಕಂಕಣವಾಡಿ				
		ಕುಡಚಿ	೪೬	೧೬೨	೧೫೫	೩೧೫
		ಖಣದಾಳ	೧೦	೨೮	೨೫	೫೩
		ಖೇಮಲಾಪೂರ	೭೪	೧೭೨	೧೬೨	೩೩೪
		ಚಿಂಚಲಿ	೬೮	೨೦೮	೧೬೨	೩೭೦
		ಜಲಾಲಪೂರ	೪೫	೧೨೧	೯೯	೨೨೦
		ದಾಸರವಾಡಿ (ಸವದತ್ತಿ)	೭೫	೧೯೮	೧೭೨	೩೭೦
		ನಿಲಜಿ	೭೧	೧೬೪	೧೩೧	೨೯೫
		ಪರಮಾನಂದವಾಡಿ	೧೦	೨೮	೨೫	೫೩
		ಬ್ಯಾಕುಡ	೦೮	೨೦	೧೮	೩೮
		ಮುಗಳಖೋಡ	೧೧೧	೨೯೧	೨೫೮	೫೪೯
		ಮೇಖಳಿ	೨೧	೭೬	೮೨	೧೫೭
		ಯಲ್ಪಾರಟ್ಟಿ	೨೭	೫೮	೫೪	೧೧೨
		ರಾಯಬಾಗ	೧೨	೩೨	೩೦	೬೨
		ಸವಸುದ್ದಿ	೩೯	೯೪	೮೫	೧೭೯
		ಸಿದ್ದಾಪೂರ	೭೪	೧೭೦	೧೬೦	೩೩೦
		ಹಾರೂಗೇರಿ	೧೮೦	೫೩೬	೪೬೧	೯೯೭
		ಹಿಡಕಲ್	೧೬೧	೩೯೧	೩೫೯	೭೫೦
ಒಟ್ಟು			**೧೧೧೨**	**೨೯೬೫**	**೨೬೧೫**	**೫೫೯೭**
೦೮	ಸವದತ್ತಿ	ಕಾಗದಾಳ	೦೪	೧೦	೦೯	೧೯

		ಸವದತ್ತಿ	೧೦	೭೦	೫೦	೧೨೦
		ಹಂಚಿನಾಳ	೦೭	೩೦	೨೭	೫೭
		ಹನುಮಸಾಗರ	೦೭	೧೮	೧೫	೩೩
		ಹಿರೇಕುಂಬಿ	೦೬	೨೫	೨೦	೪೫
ಒಟ್ಟು			೩೪	೧೫೩	೧೨೧	೨೭೪
೦೭	ಹುಕ್ಕೇರಿ	ಅರ್ಜುನವಾಡ	೩೮	೧೩೩	೯೯	೨೩೨
		ಕುರಣಿ	೫೧	೧೨೫	೧೧೬	೨೪೧
		ಕೊಟಬಾಗಿ	೪೭	೧೩೯	೧೩೧	೨೭೦
		ಗುಡಸ್	೦೪	೦೯	೧೦	೧೯
ಒಟ್ಟು			೧೪೦	೪೦೬	೩೫೬	೭೬೨
ಒಟ್ಟು			**೧೭೭೯**	**೪೭೯೧**	**೪೨೨೩**	**೯೦೪೧**

ಅನುಬಂಧ ನಾಲ್ಕು

ಛಾಯಾ ಚಿತ್ರಗಳು



ಕಲ್ಲೋಳಿಯ ಹನುಮಂತ ದೇವರ ಮೂರ್ತಿ



ಚೆನ್ನದಾಸರು ಆಚರಿಸುವ ಮಸುಬಾ ಹಬ್ಬದ ನೋಟ







ಹುಕ್ಕೇರಿ ತಾಲೂಕಿನ ಕೋಟಬಾಗಿಯುಯ ದುರುಗಮ್ಮ ದೇವಿಯ ಮೂರ್ತಿ



ಗೋಕಾಕ ತಾಲೂಕಿನ ಉದಗಟ್ಟಿಯ ಉದ್ದಮ್ಮ ದೇವರ ಮೂರ್ತಿ







ದೇವರಿಗೆ ಹುಟಗಿ ಉಡುತ್ತಿರುವ ಚೆನ್ನದಾಸರು



ದೇವಸ್ಥಾನದಲ್ಲಿ ಗೋಪಾಳಬುಟ್ಟಿ ತುಂಬುವುದು







ಕೌದಿ ಹೊಲಿಯುತ್ತಿರುವ ಚೆನ್ನದಾಸರ ಮಹಿಳೆ



ಪೂರ್ಣಗೊಂಡ ಕೌದಿ







ಚೆನ್ನದಾಸರ ವಾಸಸ್ಥಾನದ ತಾತ್ಕಾಲಿಕ ಜೋಪಡಿಗಳು



ಮದುವೆಯ ಮುನ್ನಾದಿನದ ದೇವತಾ ಕಾರ್ಯ







ಮಕ್ಕಳಿಗೆ ಮುಂಜಿ ಸಂಸ್ಕಾರ ಮಾಡುತ್ತಿರುವುದು



ಮದುವೆಯಲ್ಲಿ ನೂಲುಸುತ್ತುತ್ತಿರುವುದು



ಮದುವೆಯಲ್ಲಿ ಸುರಗಿಕೊಡುತ್ತಿರುವದು








ಯಲ್ಲಪ್ಪ ಹಲ್ಲಿನ್ನವರ ಮತ್ತು ನರಸಪ್ಪ ಮರೆನ್ನವರ ಇವರು ತತ್ವಪದ ಹಾಡುವ ದೃಶ್ಯ









ಜೋಕಾಲಿ ಆಡುತ್ತಿರುವ ಮಹಿಳೆ



ಮದುವೆಯ ಮುಂಚೆ ಬೀಸುವ ಕಲ್ಲಿನ ಪೂಜೆ



ಸವದತ್ತಿ ತಾಲೂಕಿನ ಹಂಚಿನಾಳ ಗ್ರಾಮದ ಚಿಟಿಕಿ ಮೇಳದ ಕಲಾವಿದರಾದ ಹನುಮಪ್ಪ ಲೇ ಚೆನ್ನದಾಸರ ಮತ್ತು ಗೋವಿಂದಪ್ಪ ಕಲ್ಲಪ್ಪ ಚೆನ್ನದಾಸರ

